ಸಂವಾದ

ಫೆಬ್ರವರಿ ೨೦೦೭ ರೂ. ೨೦

ಸಂಸ್ಕೃತ ಲಾಬಿ

ಆಕಾಶರಾಯರ ಒಡ್ಡೋಲಗ

ಕೇಕೆ ಹಾಕುತ್ತಿದೆ ಕೇಸರಿ ಪಡೆ!

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೪
ಫೆಬ್ರವರಿ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧
& ೨೩೨೮೭೯೪೩/೯೪೪೮೦ ೪೮೩೦೬
ಇ–ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
& 080-23287943, 94480 48306
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೩
❑ ಅಂತರಂಗ ೫
❑ ಆಕಾಶರಾಯರ ಒಡ್ಡೋಲಗ ೬
○ ಎನ್.ಎಸ್. ಶಂಕರ್
❑ ಜಾಗತೀಕರಣದ ಕರಾಳ
ಮುಖ ದರ್ಶನ ೮
○ ಡಾ॥ ಸಣ್ಣರಾಮ
❑ ಪುಸ್ತಕ ಅವಲೋಕನ ೧೧
○ ಜೆ.ಆರ್ ತಿಪ್ಪೇಸ್ವಾಮಿ





❑ ಸಂಪರ್ಕ ಭಾಷೆ: ಸಂಸ್ಕೃತ ಲಾಬಿ ೧೨
○ ಟಿ.ಕೆ. ತ್ಯಾಗರಾಜ್
❑ ಸಕಾರಾತ್ಮಕ ಕ್ರಿಯಾಯೋಜನೆ ೧೬
○ ಸತ್ಯಪ್ರಕಾಶ್ ಎಂ.ಆರ್.
❑ ಬಡತನ, ಅಸ್ಪಶ್ಯತೆ, ಧರ್ಮಾಂತರ ೧೮
○ ಚಿಕ್ಕಮಗಳೂರು ಗಣೇಶ್
❑ ಕಂಬಾಲಪಲ್ಲಿ: ನೆನೆದವರ ಮನದಲ್ಲಿ ೨೦
○ ಡಿ.ಎಂ. ಚಿಣ್ಣಪ್ಪ, ಸೋಮವಾರಪೇಟೆ
❑ ಸ್ಪರ್ಧಾತ್ಮಕತೆ, ಸಾಮಾಜಿಕ ನ್ಯಾಯ ೨೨
○ ರಂಗನಾಥ ಕಂಟನಕುಂಟೆ
❑ ಡಾ॥ ಎಲ್. ಬಸವರಾಜು
ಮತ್ತು ಪಠ್ಯವಿಮರ್ಶೆ ೨೮
○ ರಾಮಲಿಂಗಪ್ಪ ಟಿ. ಬೇಗೂರು
❑ ಮಹಾರಾಷ್ಟ್ರ: ಭಯೋತ್ಪಾದಕ ಕಥೆಗಳು ೩೧
○ ರಾಮ್ ಪುನಿಯಾನಿ
❑ ಬ್ರಾಹ್ಮಣ ಧರ್ಮ & ಮತಾಂತರ ೩೪
○ ಡಾ॥ ಲಕ್ಷ್ಮೀಪತಿ ಸಿ.ಜಿ.
❑ ನೊಯ್ಡಾ: ಕಾಡಿದ ನರಭಕ್ಷಕ ೩೬
○ ಡಾ॥ ಜೆ. ರಾಜು ಗುಂಡಾಪುರ
❑ ದಲಿತ್ ಡೈರಿ ೩೮
○ ಚಂದ್ರ ಭಾನ್ ಪ್ರಸಾದ್
❑ ಬುದ್ಧಾಯಣ ೪೨
○ ಸಿ. ಎಚ್. ರಾಜಶೇಖರ್

ಕವನಗಳು : ❑ ಮತ್ತೆ ಮತ್ತೆ ೨೭ ❑ ಹನಿಗವನ ೧೫

ಮುಖಪುಟ ಕಲೆ: ಚೀನಾ ದೇಶದ ಮಣ್ಣು ಶಿಲ್ಪ, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)



ಕೆರಳಿದ ದಲಿತ ಸ್ವಾಭಿಮಾನ

ಮಾನ್ಯ ಸಂಪಾದಕರೇ,

ಭಾರತಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾಗಿವೆ. ಆದರೂ ಅಂಬೇಡ್ಕರರ ಪ್ರತಿಮೆಯನ್ನು ವಿರೂಪ ಗೊಳಿಸುವ ಘಟನೆಗಳು ಅನೇಕ ಬಾರಿ ನಡೆಯುತ್ತಲೇ ಇವೆ. ಅಲ್ಲದೆ ಮೇಲ್ಜಾತಿ ಯವರ ದೌರ್ಜನ್ಯ ಹಾಗೂ ದಲಿತ ವಿರೋಧಿ ಭಾವನೆಯನ್ನು ಇನ್ನೂ ಸಹಾ ಅಳಿಸಲು ಸಾಧ್ಯವಾಗಿಲ್ಲ. ಹಾಗೂ ಇಂಥ ಕೆಟ್ಟ ಘಟನೆಗಳನ್ನು ತಡೆಗಟ್ಟುವಲ್ಲಿ ಹಾಗೂ ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಸರ್ಕಾರ ಕೂಡಾ ವಿಫಲವಾಗಿದೆ. ಇಂತಹ ಘಟನೆಗಳು ಪ್ರತಿ ದಿನ ದೇಶದ ಯಾವುದಾದರೂ ಒಂದು ಮೂಲೆಯಲ್ಲಿ ಜರುಗುತ್ತಿರುವುದನ್ನು ನಾವು ಕಾಣಬಹು ದಾರೂ ಅಂತಹ ಘಟನೆಗಳನ್ನು ಮುಚ್ಚಿ ಹಾಕುವಲ್ಲಿ ಈ ಅಧಿಕಾರಾರೂಢರೂ ಯಶಸ್ವಿಯಾಗಿದ್ದಾರೆ.

ಅಂತಹ ಒಂದು ಪ್ರಕರಣಕ್ಕೆ ಒಳ್ಳೆಯ ನಿದರ್ಶನವೆಂದರೆ, ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯಲ್ಲಿ ನಾಗಪುರದಿಂದ ನೂರು ಕಿಲೋಮೀಟರ್ ದೂರದಲ್ಲಿರುವ ಗ್ರಾಮ ಖೈರಲಾಂಜಿಯಲ್ಲಿ ನಡೆದ ಘಟನೆ. ಸವರ್ಣೀಯರು ದಲಿತ ಮಹಿಳೆ ಹಾಗೂ ಅವಳ ಮೂರು ಮಕ್ಕಳನ್ನು ಹತ್ಯೆ ಮಾಡಿದ ಘಟನೆಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಪೋಲೀಸರು ತೋರಿ ಸಿದ ನಿರ್ಲಕ್ಷ ಇದಕ್ಕೊಂದು ನಿದರ್ಶನ.

ಇಂಥ ಘಟನೆಗಳಿಂದ ದಲಿತರು ಹತಾಶರಾಗಿದ್ದಾರೆ. ಕೊನೆಗೆ ತಮ್ಮ ಕೋಪವನ್ನು ತೋರಿಸಿದ್ದಾರೆ. ಅಂಬೇಡ್ಕರ್ ಎಲ್ಲ ಶೋಷಿತರ ಪರವಾಗಿ ಹೋರಾಡಿದ ನಾಯಕರು. ಅವರನ್ನು ಕೇವಲ ದಲಿತ ನಾಯಕರೆಂದು ತಿಳಿದಿರುವುದು ದುರ ದೃಷ್ಟಕರ. ಸಂವಿಧಾನದ ಶಿಲ್ಪಿ ಎನ್ನಿಸಿ ಕೊಂಡರು ಸಹಾ ಆಗಿಂದಾಗ್ಗೆ ಅವಮಾನ ಆಗುತ್ತಿರುವುದು ಕೆಟ್ಟ ಜನರು ಬಲವಾಗು ತ್ತಿರುವುದರ ದ್ಯೋತಕ.

ಎಲ್ಲ ವರ್ಗದ ಜನರಲ್ಲಿ ದಲಿತರ ಬಗ್ಗೆ ನಿಜವಾದ ಕಾಳಜಿ ವ್ಯಕ್ತವಾಗದ ಹೊರತು ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ. ಇಂತಹ ವಿಚಾರದಲ್ಲಿ ಸರ್ಕಾರ ಯಾವುದೇ ರಿಯಾಯಿತಿ ತೋರಿಸದೇ, ಇಂತಹ ಘಟನೆಗಳನ್ನು ತಡೆಯಬೇಕು ಮತ್ತು ಘಟನೆಗಳಿಗೆ ಕಾರಣರಾದ ಜನ ರನ್ನು ಶಿಕ್ಷಿಸಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ.

ಟಿ.ಕೆ. ಹರೀಶ್,
ಬೆಂಗಳೂರು

ಮಠ; ರಾಜಕೀಯ ಅಡ್ಡೆ

ಮಾನ್ಯ ಹೊನ್ನಾಪುರ ಅವರೇ,

'ಸುತ್ತೂರು ಮಠಕ್ಕೆ ಕೋಮುವಾದಿ ರಾಜಕಾರಣ ಅನಿವಾರ್ಯವೇ' ಎಂಬ ಲೇಖನ ಓದಿ ಪ್ರತಿಕ್ರಿಯಿಸಬೇಕಾಯಿತು.

ಕೋಮುವಾದ-ಜಾತಿವಾದಗಳಿಂದ ಹೊರತಾದ ಯಾವುದೇ ಮಠಗಳು ನಮ್ಮ ಲ್ಲಿಲ್ಲ. ಕೆಲವು ಮಠಗಳು ರಾಜಕೀಯವನ್ನು ಪರೋಕ್ಷವಾಗಿ ಮಾಡಿದರೆ ಸುತ್ತೂರು ಮಠ ನೇರವಾಗಿಯೇ ಮಾಡುತ್ತದೆ. ಹಾಗೆ ನೋಡಿದರೆ ರಾಜಕೀಯದಿಂದ ದೂರ ವಾಗೇ ಉಳಿದಿದ್ದ ತುಮಕೂರಿನ ಸಿದ್ಧ ಗಂಗಾ ಮಠ ಕೂಡ ಈಗ ರಾಜಕಾರಣಿ ಗಳ ಅಡ್ಡೆಯಾಗಿ ಪರಿಣಮಿಸಿದೆ.

ಆದರೆ ಈ ವೀರಶೈವ ಮಠಗಳು ಯಾವ ಪುರೋಹಿತ ಶಾಹಿಯ ವಿರುದ್ಧ ಹುಟ್ಟಿದವೋ ಅದೇ ಪುರೋಹಿತ ಶಾಹಿಯ ಪೋಷಣೆ ಮಾಡುತ್ತಿರುವುದು ಮಾತ್ರ ವಿಷಾದನೀಯ. ಇತ್ತೀಚೆಗೆ ನಡೆ ಯುತ್ತಿರುವ ವಿರಾಟ್ ಹಿಂದೂ ಸಮಾ ವೇಶಗಳಲ್ಲಿ ಬಹುತೇಕ ಎಲ್ಲ ವೀರಶೈವ ಮಠಾಧೀಶರು ಭಾಗವಹಿಸುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಇವರೆಲ್ಲ ಬಸವಣ್ಣನವರ ಅನುಯಾಯಿ ಗಳೇ ಅಥವಾ ಗೋಲ್ವಾಲ್ಕರ್ ಅವರ ಅನುಯಾಯಿಗಳೋ ಅರ್ಥವಾಗುತ್ತಿಲ್ಲ.

ಎಂ. ಬಸವರಾಜು, ಹುಣಸೂರು

ಪತ್ರಾಗಾರ

ಕ್ಯಾಸ್ಟ್ ಕೆಮಿಸ್ಟ್ರಿ; ಅಧ್ಯಯನ ಬೇಕು

ಪ್ರಿಯ ಇಂದೂಧರ್

ಹಿರಿಯ ಗಾಂಧಿವಾದಿ ಎಚ್.ಎಸ್. ದೊರೆಸ್ವಾಮಿ ಅವರು 'ಕ್ಯಾಸ್ಟ್ ಕೆಮಿಸ್ಟ್ರಿ'ಯ ಬ್ರಾಹ್ಮಿನ್ ಫೋಬಿಯಾ ಬಗೆಗೆ ಪ್ರತಿಕ್ರಿಯಿಸಿ ರುವುದು ಸರಿಯಾಗಿಯೇ ಇದೆ. ಆದರೆ ಅದು ಸರಣಿ ಲೇಖನವಾದುದುರಿಂದ ಮುಂದಿನ ಲೇಖನಗಳಿಗಾಗಿ ಅವರು ಕಾದು ನಂತರ ಪ್ರತಿಕ್ರಿಯಿಸಬೇಕಾಗಿತ್ತು.

ಲೇಖಕರು ಅಧ್ಯಯನ, ಪಾಂಡಿತ್ಯ ಮತ್ತು ಸಮರ್ಥ ದಾಖಲೆಗಳೊಂದಿಗೆ ವಿಶ್ಲೇಷಣೆ ಮಾಡಿದರೆ ಅದರ ಘನತೆ ಹೆಚ್ಚುತ್ತದೆ. ಆದರೆ ಲಕ್ಷ್ಮಿಪತಿಯವರ ಲೇಖನದಲ್ಲಿ ಅದು ಅಷ್ಟಾಗಿ ಕಾಣಿಸುತ್ತಿಲ್ಲ. ಹಾಗೆ ಆಗದಿದ್ದರೆ ಅದು ಕೇವಲ ದೂಷಣೆ ಮಾತ್ರ ಆಗುತ್ತದೆ.

ತೋರಣ ಸುಬ್ರಹ್ಮಣ್ಯ, ಬೆಂಗಳೂರು

ಸಧ್ಯದ ಆಶಾಕಿರಣ 'ಸಂವಾದ'

ಪ್ರೀತಿಯ ಇಂದೂಧರ್ ಸಾರ್,

ಮೊದಲನೆಯಾದಾಗಿ ನಿಮಗೆ ಮತ್ತು ಸ್ಫೂರ್ತಿಧಾಮಕ್ಕೆ ಅಭಿನಂದನೆಗಳು. ಕನ್ನಡದಲ್ಲೇ ಏಕೆ, ಇಡೀ ಭಾರತದಲ್ಲೇ ಅದ್ಭುತ ಎನ್ನಬಹುದಾದ ಪತ್ರಿಕೆಯನ್ನ ಹೊರತರುತ್ತಿದ್ದೀರಿ. 'ಸಂವಾದ' ನಮ್ಮ ಕಾಲ ಮಾನದ ಅತ್ಯುತ್ತಮ ಪತ್ರಿಕೆ ಎಂದರೆ ದಯವಿಟ್ಟು ಹೊಗಳಿಕೆ ಅಂದುಕೊಳ್ಳಬೇಡಿ.

ನಾನು ಕಳೆದ ಎರಡು ವರ್ಷ ಗಳಿಂದ 'ಸಂವಾದ' ಓದುತ್ತಿದ್ದೇನೆ. ಆ ಓದಿನೊಂದಿಗೇ ಬೆಳೆಯುತ್ತಿದ್ದೇನೆ. ಅದು ಹುಟ್ಟಿ ಹಾಕುತ್ತಿರುವ ಚರ್ಚೆ ಆರೋಗ್ಯ ಕರವಾಗಿದೆ. ಸಂದರ್ಭೋಚಿತವಾಗಿದೆ. ಯಾವ ಪೂರ್ವಗ್ರಹಗಳೂ ಇಲ್ಲದೆ ಅತ್ಯಂತ ಜಾಗರೂಕತೆಯಿಂದ ಲೇಖನ ಗಳನ್ನು ಆಯ್ಕೆ ಮಾಡುತ್ತಿದ್ದೀರಿ.

ಎಲ್ಲ ಪ್ರಗತಿಪರ ಚಳವಳಿ, ದಲಿತ ಚಳವಳಿ, ರೈತ ಚಳವಳಿಗಳ ಒಳಗಿದ್ದೂ, ಅವುಗಳ ಹುಳುಕುಗಳನ್ನು ಎತ್ತಿ ತೋರಿಸು ತ್ತಿದ್ದೀರಿ. ಎಲ್ಲದರೊಳಗಿದ್ದೂ ಎಲ್ಲದರಂತಾ ಗದ ಪ್ರಾಮಾಣಿಕ ವೃತ್ತಿನಿಷ್ಠೆ, ಬದ್ಧತೆ 'ಸಂವಾದ'ದಲ್ಲಿ ಎದ್ದು ಕಾಣುತ್ತಿದೆ. ನಿಮ್ಮ ಸಂಪಾದಕೀಯಗಳಂತೂ ಎಂಥವರೂ ಮುಟ್ಟಿ ನೋಡಿಕೊಳ್ಳಬೇಕಾಗಿ ಚಾಟಿ ಏಟು ಗಳಂತಿವೆ.

ಜನವರಿ ೦೭ ರ ಸಂಚಿಕೆಯಲ್ಲಿನ ಪಿ.ಸಾಯಿನಾಥ್ ಅವರ 'ಉಳ್ಳವರನ್ನು ಕಾಡುತ್ತಿರುವ ಪ್ರಜಾಪ್ರಭುತ್ವದ ಭೀತಿ' ಈಚೆಗೆ ನಾನು ಓದಿದ ಅದ್ಭುತ ಲೇಖನ. ಭಾರತೀಯ ಮನಸ್ಸು ಅದರಲ್ಲೂ ಮಾಧ್ಯಮದ ಮನಸ್ಸು ಎಷ್ಟೊಂದು ಹುಳು ಹಿಡಿದು ಹೋಗಿದೆ ಅನ್ನವುದನ್ನು ಅತ್ಯಂತ ಸಮರ್ಥವಾಗಿ ಲೇಖನ ಚಿತ್ರಿಸುತ್ತದೆ. ಒಂದೆಡೆ ದಲಿತ ಚಳವಳಿಗಳು ವಿನಾಶದ ಹಾದಿ ಹಿಡಿಯುತ್ತಿದ್ದರೆ, ಸಾಮಾನ್ಯ ದಲಿತರಲ್ಲಿ ಸ್ವಾಭಿಮಾನ ಮೂಡುತ್ತಿರುವ ದನ್ನು ಲೇಖನ ವಿವರವಾಗಿ ಚರ್ಚಿಸಿದೆ.

ಢೋಂಗಿ ಸಮಾಜ ಸುಧಾಕರ, ಕಳ್ಳ ಸಾಧುಗಳ, ವಂಚಕ ಮಠಾಧೀಶರು ಗಳ ಕಾರ್ಯಕ್ರಮಗಳನ್ನು ಹಾಡಿ ಹೊಗಳಿ ಬರೆಯುವ ಪತ್ರಿಕೆಗಳು, ಅಂಬೇಡ್ಕರ್ ಅವರ ಪುಣ್ಯತಿಥಿಗೆ ಬರುವ ಲಕ್ಷಾಂತರ ದಲಿತ ಬಾಂಧವರ ಬಗ್ಗೆ ಹೀನಾಯವಾಗಿ ಬರೆಯುತ್ತಿರುವುದನ್ನು ನೋಡಿದರೆ ಈ ದೇಶಕ್ಕೆ ಮುಕ್ತಿಯೇ ಇಲ್ಲವೇನೋ ಅನ್ನಿಸು ತ್ತದೆ. ಇಂಥ ಸಂದರ್ಭದಲ್ಲಿ ನಿಮ್ಮಂಥವರು ಮುಖ್ಯವಾಹಿನಿಯ ಪತ್ರಿಕೋದ್ಯಮದಲ್ಲಿ ಇಲ್ಲವಲ್ಲ ಎಂಬ ನೋವು ಉಂಟಾಗುತ್ತದೆ.

ಅದೇನೇ ಇರಲಿ. 'ಸಂವಾದ' ನನ್ನಂಥವರಿಗೆ ಸಧ್ಯದ ಆಶಾಕಿರಣವಾಗಿದೆ. ಪ್ರತಿಯೊಬ್ಬ ಪ್ರಜ್ಞಾವಂತ ಕನ್ನಡಿಗನ ಮನೆ-ಮನದಲ್ಲಿ 'ಸಂವಾದ' ತುಂಬಿರಲಿ ಎಂದು ಆಶಿಸುತ್ತೇನೆ.

ಕೆ.ವಿ. ಶರತ್ ಚಂದ್ರ, ದಾವಣಗೆರೆ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೭೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ಪ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕೀಯ

ಅಂತರಂಗ

ಕೇಕೆ ಹಾಕುತ್ತಿದೆ ಕೇಸರಿ

ಕರ್ನಾಟಕದಾದ್ಯಂತ ಕೇಸರಿ ಧ್ವಜ ಹಾರಾಡುತ್ತಿವೆ. ಯಾವ ರಸ್ತೆಯಲ್ಲಿ ನೋಡಿದರೂ, ಕೇಸರಿ ಧ್ವಜ, ಬ್ಯಾನರ್‌ಗಳು, ಕಟೌಟ್‌ಗಳು! ಅದರಲ್ಲೂ ಅಲ್ಪ ಸಂಖ್ಯಾತರು ವಾಸಿಸುವ ಪ್ರದೇಶಗಳಂತೂ ಸಂಪೂರ್ಣ ಕೇಸರಿಮಯ! ಒಂದು ಕಡೆ ಆರೆಸ್ಸೆಸ್ ಮಾತೆ (ಅವರು ಹೇಳುವುದು ಭಾರತ ಮಾತೆ) ಮತ್ತೊಂದು ಕಡೆ ಗೋಲ್ವಲ್ಕರ್. ಸುತ್ತ ಬುದ್ಧ, ಬಸವ ಅಂಬೇಡ್ಕರ್, ವಿವೇಕಾನಂದ ಇತ್ಯಾದಿ ಇತ್ಯಾದಿ. ಇವು ಏಕ ಪ್ರಕಾರವಾಗಿ ರಾಜ್ಯದಾದ್ಯಂತ ರಾರಾಜಿಸುತ್ತಿದ್ದರೆ, ಪ್ರದೇಶವಾರು ಪ್ರಾತಿನಿಧ್ಯ ಅಲ್ಲಿನ ಮಠಾಧಿಪತಿಗಳಿಗೆ. ಅವರವರ ಪ್ರಭಾವಕ್ಕನುಗುಣವಾಗಿ ಅವರಿಗೆ ಅಲ್ಲಲ್ಲಿ ಸ್ಥಾನ! ತುಮಕೂರಿನಲ್ಲಿ ಸಿದ್ಧಗಂಗಾ ಮಠಾಧೀಶರದ್ದಾದರೆ, ಮೈಸೂರಿನಲ್ಲಿ ಶಿವರಾತ್ರೀಶ್ವರ ಸ್ವಾಮಿ. ಮಂಡ್ಯಕ್ಕೆ ಬಂದರೆ ಬಾಲಗಂಗಾಧರನಾಥ ಸ್ವಾಮಿ. ಕಟೌಟ್‌ನ ಮುಕ್ಕಾಲು ಭಾಗ ಗೋಲ್ವಲ್ಕರ್ ಹಾಗೂ ಆರೆಸ್ಸೆಸ್ ಮಾತೆ ಇದ್ದರೆ ಉಳಿದ ಕಾಲುಭಾಗದಲ್ಲಿ ಇತರೆ ಎಲ್ಲರಿಗೂ ಜಾಗ!

ಇದು ಕಳೆದ ಒಂದು ತಿಂಗಳಿನಿಂದ ರಾಜ್ಯದಾದ್ಯಂತ ಕಂಡು ಬರುತ್ತಿರುವ ನೋಟ. 'ವಿರಾಟ್ ಹಿಂದೂ ಸಮಾಜೋತ್ಸವ' ಎಂಬ ಹೆಸರಿನ ಈ ದೇಶ ದ್ರೋಹಿ ಕಾರ್ಯಕ್ರಮದಲ್ಲಿ ಬಹುತೇಕ ಎಲ್ಲ ಜಾತಿಯ ಧರ್ಮಗುರುಗಳು ಭಾಗವಹಿಸುತ್ತಿದ್ದಾರೆ. ವ್ಯಾಪಾರಿಗಳಿಂದ-ಬಂಡವಾಳಗಾರರಿಂದ ನಿರಂತರವಾಗಿ ಹಣದ ಸುಲಿಗೆ ನಡೆಯುತ್ತಿದೆ. ಅದರಲ್ಲೂ 'ಕೇಡಿ ರಂಗ' (KDF) ಸರ್ಕಾರದ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲವೂ ಈ ಪಡೆಗೆ ಇರುವುದರಿಂದ ಅವರ ಆಟಾಟೋಪ ಮಿತಿ ಮೀರಿದೆ.

ಈ ಆರೆಸ್ಸೆಸ್ ಅಥವಾ ಸಂಘ ಪರಿವಾರ ಎಂದಾದರೂ ಸಮಾಜದ ಆಗು ಹೋಗುಗಳಿಗೆ ತಲೆ ಕೆಡಿಸಿಕೊಂಡಿದೆಯೇ ಎಂದು ಚಿಂತಿಸಿ ನೋಡಿ. ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾಗುತ್ತಿದ್ದರೂ ಇನ್ನೂ ಭಾರತದಲ್ಲಿ ಹಸಿವಿದೆ. ಮಾನವೀಯತೆಯೇ ನಾಚುವಂತ ಅಸ್ಪೃಶ್ಯತೆ ಇದೆ. ನಿರುದ್ಯೋಗ, ಭ್ರಷ್ಟಾಚಾರಗಳಂತೂ ತಾಂಡವವಾಡುತ್ತಿವೆ. ಕನಿಷ್ಟ ಕುಡಿಯುವ ನೀರಿಗೂ ಗತಿ ಇಲ್ಲದ ಲಕ್ಷಾಂತರ ಹಳ್ಳಿಗಳಿವೆ. ಅಷ್ಟೇ ಏಕೆ ನಗರ ಪ್ರದೇಶಗಳ ನರಕಗಳಾಗಿರುವ ಕೊಳೆಗೇರಿಗಳಲ್ಲಿ ಮನುಷ್ಯ ಮಾತ್ರದವರು ಬದುಕಲಾರದಂತ ಸ್ಥಿತಿ ಇದೆ. ಆದರೆ ಸಂಘ ಪರಿವಾರಕ್ಕೆ ಈ ಯಾವುದೂ ಕಾಣುವುದಿಲ್ಲ. ಅವರ ಕಾರ್ಯಕ್ರಮ ಪಟ್ಟಿಯಲ್ಲಿ ಈ ಯಾವುವೂ ಸೇರುವುದಿಲ್ಲ.

ಯಾಕೆ?

ಯಾಕೆಂದರೆ ಸಂಘ ಪರಿವಾರದ ಈ ಚೆಡ್ಡಿವೀರರಿಗೆ ಈ ಯಾವುದೂ ಸಮಸ್ಯೆಯಲ್ಲ. ಅವರ ದೊಡ್ಡ ಸಮಸ್ಯೆ ಇರುವುದು ಮನು ಧರ್ಮ ಶಾಸ್ತ್ರವನ್ನು ಜಾರಿಗೆ ತರುವುದರಲ್ಲಿ ಮಾತ್ರ! ಮನುಧರ್ಮ ಶಾಸ್ತ್ರವನ್ನು ಜಾರಿಗೆ ತರುವುದರ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ನಿಷ್ಕ್ರಿಯಗೊಳಿಸುವುದು ಅವರ ಪ್ರಮುಖ ಧ್ಯೇಯ. ಮನುಧರ್ಮ ಶಾಸ್ತ್ರಕ್ಕೆ ಬಲವಾದ ಪೆಟ್ಟುಕೊಟ್ಟಿದ್ದೇ ಪ್ರಜಾಪ್ರಭುತ್ವದ ಕಲ್ಪನೆ ಮತ್ತು ಸಂವಿಧಾನ. ಸಂವಿಧಾನದ ಪ್ರಕಾರ ಒಬ್ಬ ವ್ಯಕ್ತಿಗೆ ಒಂದು ಓಟು. ಮನು ಧರ್ಮಶಾಸ್ತ್ರದ ಪ್ರಕಾರ ಒಬ್ಬನಿಗೆ ಹತ್ತು ಓಟು. ಮತ್ತೊಬ್ಬನಿಗೆ ಒಂದೂ ಇಲ್ಲ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಓಟಿನ ಕಲ್ಪನೆಗೆ ಅಲ್ಲಿ ಸ್ಥಳವೇ ಇಲ್ಲ.

ಅಸಮಾನತೆಯೇ ಮೂಲ ಮಂತ್ರವಾಗಿರುವ ಮನುಧರ್ಮ ಶಾಸ್ತ್ರವನ್ನು ಜಾರಿಗೆ ತರುವ ಮೂಲಕ ದೇಶವನ್ನು ಶಿಲಾಯುಗಕ್ಕೆ ಕೊಂಡೊಯ್ಯುವ ಎಲ್ಲ ತಂತ್ರಗಾರಿಕೆಯನ್ನು ಸಂಘ ಪರಿವಾರ ವ್ಯವಸ್ಥಿತವಾಗಿ ಮಾಡುತ್ತಿದೆ. ಅದಕ್ಕಾಗಿ ಅದು ಎಂಥ ತ್ಯಾಗಕ್ಕೂ ಸಿದ್ಧ. ಅಸಮಾನತೆಯನ್ನೇ ಪರಮ ಸತ್ಯ ಮತ್ತು ಸತ್ವ ಎಂದು ಬೋಧಿಸುವ ಗೋಲ್ವಲ್ಕರ್ ಸಂಘ ಪರಿವಾರದ ಗುರು ಮತ್ತು ಆದರ್ಶ. ಇಂಥ ಶಿಲಾಯುಗದ ಹಿಟ್ಲರ್‌ನೊಂದಿಗೆ, ಜಗತ್ತಿಗೆ ಬೆಳಕಾದ ಬುದ್ಧ ಬಸವ ಅಂಬೇಡ್ಕರ್ ಅವರನ್ನು ಕೂರಿಸಿ ಜನರ ಕಣ್ಣಿಗೆ ಮಣ್ಣೆರಚುವ ಕೆಲಸವನ್ನು ಸಂಘಿಗಳು ಯಾವ ನಾಚಿಕೆಯೂ ಇಲ್ಲದೆ ಮಾಡುತ್ತಿದ್ದಾರೆ.

ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಪ್ರಥಮ ಪ್ರತಿಪಾದಕನಾದ ಬುದ್ಧ, ಪುರೋಹಿತ ಶಾಹಿಯ ವಿರುದ್ಧ ಬಂಡೆದ್ದ ಮಹಾ ದಾರ್ಶನಿಕ. ದೇವರು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಎಲ್ಲ ಮೋಸಗಳನ್ನು ಬಯಲು ಮಾಡಿ ಪ್ರೀತಿ, ಕರುಣೆಗಳ ಮೂಲಕ ಜನ ಜಾಗೃತಿ ಉಂಟು ಮಾಡಿದ ಮಹಾಚೇತನ. ಗೋಲ್ವಲ್ಕರ್‌ನಂತ ಒಬ್ಬ ಸಮಾಜ ದ್ರೋಹಿಯ ಜತೆ ಬುದ್ಧನ ಭಾವಚಿತ್ರ ಹಾಕಿಕೊಂಡು ತಮ್ಮ ಗೌಪ್ಯ ಅಜೆಂಡಾವನ್ನು ಕಾರ್ಯಗತಗೊಳಿಸಲು ಹೊರಟಿರುವ ಈ ಕೇಸರಿ ಪಡೆಗಳಿಗೆ ಏನೆನ್ನಬೇಕು?

ಬಸವ-ಅಂಬೇಡ್ಕರ್ ಅವರನ್ನೇ ತೆಗೆದುಕೊಳ್ಳಿ. ಜಾತಿ-ವರ್ಣಾಶ್ರಮಧರ್ಮಗಳನ್ನೆಲ್ಲ ಕಿತ್ತೆಸೆದು ಹೊಸ ಶ್ರಮ ಸಂಸ್ಕೃತಿಯನ್ನು ಹುಟ್ಟಿಹಾಕಿದ ಬಸವಣ್ಣನೆಲ್ಲಿ? ಈ ಗೋಲ್ವಲ್ಕರ್ ಎಲ್ಲಿ? ಕಾಯಕವೇ ಕೈಲಾಸ ಎಂದ ಬಸವಣ್ಣನನ್ನು, ಜನರ ಸುಲಿಗೆಯನ್ನೇ ಬಂಡವಾಳ ಮಾಡಿಕೊಂಡ ಜನವರ್ಗವನ್ನು ಪ್ರತಿನಿಧಿಸುವ ಗೋಲ್ವಲ್ಕರ್ ಜತೆ ನಿಲ್ಲಿಸುವುದು ಎಂಥ ದ್ರೋಹ? ಇದೇನು ಕಾಣದವರೆಂತೆ ಬಸವಣ್ಣನ ಅನುಯಾಯಿಗಳಾದ ಲಿಂಗಾಯಿತ ಸ್ವಾಮೀಜಿಗಳು ವಿರಾಟ್ ಹಿಂದೂ ಸಮಾವೇಶದಲ್ಲಿ ಭಾಗವಹಿಸುವುದು ಎಂಥ ಆತ್ಮವಂಚನೆ! ಮೂರ್ಖತನ! ಇವರನ್ನು ನಿಜವಾದ ಬಸವ ದ್ರೋಹಿಗಳೆನ್ನದೆ ಬೇರಾವ ಮಾತಿನಿಂದ ಕರೆಯಬೇಕು?

ಇನ್ನು ಅಂಬೇಡ್ಕರ್ ಅವರನ್ನೇ ತೆಗೆದುಕೊಳ್ಳಿ. 'ಹಿಂದುವಾಗಿ ಹುಟ್ಟಿದ್ದೇನೆ. ಆದರೆ ಹಿಂದುವಾಗಿ ಸಾಯಲಾರೆ. ಹುಟ್ಟು ಆಕಸ್ಮಿಕ ಆದರೆ ಬದುಕು ನನ್ನ ಆಯ್ಕೆ' ಎಂದು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸಿದ ಅಂಬೇಡ್ಕರ್ ಬಾವಚಿತ್ರವನ್ನು ಜನ ದ್ರೋಹಿ ಗೋಲ್ವಲ್ಕರ್ ಚಿತ್ರದೊಂದಿಗೆ ಪ್ರದರ್ಶಿಸುವುದು ಎಂಥಾ ತಾಯ್ಗಂಡತನ! ಜನಾಂಗವಾದದ ಮೂಲಕ ಭಾರತ ದೇಶವನ್ನು ಜಗತ್ತಿನಲ್ಲಿ ತಲೆ ಎತ್ತದಂತೆ ಮಾಡಿರುವ ಸಂಘ ಪರಿವಾರ ಎಂಥಾ ನೀಚತನಕ್ಕೂ ಇಳಿಯಬಲ್ಲದು ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ? ತನ್ನ ಜೀವನದ ಅಂತಿಮ ಕ್ಷಣದವರೆಗೂ ಆರೆಸ್ಸೆಸ್ ಮತ್ತು ಹಿಂದೂ ಧರ್ಮದ ವಿರುದ್ಧ ಹೋರಾಟ ಮಾಡಿ, ಅವರ ಕಪಿಮುಷ್ಟಿಯಿಂದ ದಲಿತರನ್ನು ಪಾರು ಮಾಡಲು ಶ್ರಮಿಸಿದ ಅಂಬೇಡ್ಕರ್‌ರನ್ನು ಯಾವ ಮುಖ ಹೊತ್ತು ಈ ಕೋಮುವಾದಿ ಭಂಡರು ತಮ್ಮ ಕಾರ್ಯಕ್ರಮಕ್ಕೆ ಬಳಸಿಕೊಳ್ಳುತ್ತಾರೆ?

ಅಷ್ಟೇ ಏಕೆ ಇವರೆಲ್ಲ 'ಹಿಂದೂ ಸನ್ಯಾಸಿ' ಎಂದು ಬೀಗುವ ಸ್ವಾಮಿ ವಿವೇಕಾನಂದರು ಇದೇ ಪುರೋಹಿತರ ಬಗ್ಗೆ ಏನು ಹೇಳಿದ್ದಾರೆಂದು ಇವರು ಓದಿದ್ದಾರೆಯೆ? ಓದಿರುವುದನ್ನು ಜನರಿಗೆ ಹೇಳಲು ಸಿದ್ಧರಿದ್ದಾರೆಯೆ? ನಿರಂತರ ಮೋಸ ಮಾಡುವುದನ್ನೇ ತಮ್ಮ ಜೀವನದ ಧ್ಯೇಯ ಮಾಡಿಕೊಂಡಿರುವ ಈ ಪರಿವಾರ ಎಲ್ಲವನ್ನು ತನಗೆ ಬೇಕಾದಂತೆ ವ್ಯಾಖ್ಯಾನಿಸಿಕೊಳ್ಳುವ ಧೂರ್ತತನವನ್ನು

ಪಡೆ!

ತೋರುತ್ತಿದೆ. 'ನೀಚ ಪುರೋಹಿತರು ಮತ್ತು ಬ್ರಾಹ್ಮಣರ ಹಿಡಿತದಿಂದ ಭಾರತವನ್ನು ರಕ್ಷಿಸಬೇಕಾಗಿದೆ' ಎಂದು ವಿವೇಕಾನಂದರು ಸಾರಿ ಸಾರಿ ಹೇಳಿದ್ದಾರೆ. 'ಏಳು ಎದ್ದೇಳು ನಿಲ್ಲಬೇಡ. ಗುರಿ ಮುಟ್ಟುವ ವರೆಗೆ ಹೋರಾಡು' ಎಂದು ನಾಡಿನ ಶೂದ್ರರಿಗೆ ದಲಿತರಿಗೆ ವಿವೇಕಾನಂದರು ಕರೆ ನೀಡಿದರೆ, ಅದನ್ನು ಹಿಂದೂ ಧರ್ಮ ಉಳಿಸಲು ಪುರೋಹಿತರಿಗೆ ನೀಡಿದ ಕರೆ ಎಂದು ಬೊಗಳೆ ಬಿಡುವ ಈ ಚೆಡ್ಡಿವೀರರಿಗೆ ಏನೆನ್ನಬೇಕು. ಇಂಥ ಆತ್ಮವಂಚಕರು ಜಗತ್ತಿನಲ್ಲಿ ಬೇರೆ ಯಾರಾದರೂ ಇರುವರೇ?

ಇಷ್ಟಕ್ಕೂ ಹಿಂದೂ ಧರ್ಮ ಎನ್ನವುದು ಏನು? ನಾನಂತೂ ಹಿಂದೂ ಧರ್ಮದ ಬಗೆಗೆ ತಿಳಿದುಕೊಳ್ಳಲು ಬಹಳ ತಿಣುಕಿದ್ದೇನೆ. ವಿತಂಡವಾದಿಗಳ ವಿಶ್ಲೇಷಣೆ ಬಿಟ್ಟರೆ ನಿಜವಾದ ಹಿಂದೂ ಧರ್ಮ ಎಂದರೆ ಏನೆಂಬುದು ಇಂದೂ ಯಾರಿಗೂ ಗೊತ್ತಿಲ್ಲ. ಯಾಕೆಂದರೆ 'ಹಿಂದೂ' ಎಂಬ ಧರ್ಮ ಅಸ್ತಿತ್ವದಲ್ಲಿದ್ದ ಬಗ್ಗೆ ಇತಿಹಾಸದಲ್ಲೆಲ್ಲೂ ದಾಖಲೆ ಇಲ್ಲ. ಸಿಂದೂ ನದಿಯ ದಂಡೆಯಲ್ಲಿದ್ದ ಪ್ರದೇಶವಾದ್ದರಿಂದ ಭಾರತಕ್ಕೆ ದಂಡೆತ್ತಿ ಬಂದ ಪರ್ಷಿಯನ್ನರು ಭಾರತ ಭೂ ಭಾಗವನ್ನು 'ಹಿಂದೂಸ್ಥಾನ' ಎಂದು ಕರೆದರೆಂಬ ಬಗ್ಗೆ ಉಲ್ಲೇಖಗಳಿವೆ. ಅದನ್ನು ಹೊರತು ಪಡಿಸಿದರೆ ಭಾರತದ ಭೂಭಾಗದಲ್ಲಿ ವಾಸಿಸುವ ಜನರಿಗೆ 'ಹಿಂದೂ'ಗಳೆಂದು ಕರೆದ ಬಗ್ಗೆ ಯಾವ ದಾಖಲೆಗಳೂ ಇಲ್ಲ. ಹಿಂದೂ ಧಾರ್ಮಿಕ ಗ್ರಂಥಗಳೆಂದು ಕರೆಯುವ ರಾಮಾಯಣ, ಮಹಾಭಾರತ, ಭಗವದ್ಗೀತೆಗಳಲ್ಲೆಲ್ಲೂ ಹಿಂದೂ ಪದದ ಬಳಕೆ ಇಲ್ಲ. ಉಪನಿಷತ್ತುಗಳಲ್ಲೂ ಅದು ಕಾಣುವುದಿಲ್ಲ. ಆದುದರಿಂದ 'ಹಿಂದೂ ಧರ್ಮ' ಎನ್ನುವುದು ಪುರೋಹಿತ ಧರ್ಮದ ಆಧುನಿಕ ರೂಪ ಮಾತ್ರ.

ಈ ಹಿಂದೂ ಧರ್ಮ ಪ್ರತಿಪಾದಿಸುತ್ತಿರುವುದಾದರೂ ಏನನ್ನು? 'ಹಿಂದೂ ನಾವೆಲ್ಲ ಒಂದು' ಎಂದು ಘೋಷಿಸುವ ಸಂಘ ಪರಿವಾರವಾಗಲಿ, ಅವರನ್ನು ಪೋಷಿಸುತ್ತಿರುವ ಮಠಾಧಿಪತಿಗಳಾಗಲಿ, ಯಾವಾಗಲಾದರೂ ಈ 'ಒಂದು' ಎಂಬ ಪದಕ್ಕೆ ಪೂರಕವಾಗಿ ಕೆಲಸ ಮಾಡಿದ್ದಾರೆಯೆ? ಯೋಚಿಸಿ ನೋಡಿ. ಪ್ರತಿದಿನ ದೇಶದ ಯಾವುದಾದರೊಂದು ಕಡೆ ಜಾತಿ ಕಾರಣಕ್ಕೆ ದಲಿತರ ಮೇಲೆ ಹಲ್ಲೆ ನಡೆಯುತ್ತಿದೆ. ಕೊಲೆ ನಡೆಯುತ್ತದೆ. ದಲಿತ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತದೆ. ಈ ಎಲ್ಲವನ್ನು 'ಹಿಂದೂ'ಗಳೇ ಮಾಡುತ್ತಾರೆ. ಆದರೆ ಈ ಸಂಘ ಪರಿವಾರವಾಗಲಿ, ಮಠಾಧೀಶರುಗಳಾಗಲಿ ಇದರ ವಿರುದ್ಧ ಧನಿ ಎತ್ತಿದ್ದಾರೆಯೆ? ಎಲ್ಲೋ ಒಂದು ಕಡೆ ಗೋಹತ್ಯೆಯಾದರೆ ಇಡೀ ಭೂಮಂಡಲವೆಲ್ಲಾ ಛೀಳೀಡುವಂತೆ ಅರಚಾಡುವ ಈ ಕೇಸರಿ ಪಡೆ ನಿತ್ಯ ಸಾಯುತ್ತಿರುವ ದಲಿತರ ಬಗ್ಗೆ ಯಾಕೆ ಮಾತಾಡುವುದಿಲ್ಲ? ತನ್ನನ್ನು ತಾನೆ ಜನಪರ ಕಾಳಜಿಯ ಸ್ವಾಮೀಜಿ ಎಂದು ಬಿಂಬಿಸಿಕೊಳ್ಳುವ ವಿಶ್ವೇಶ್ವರ ತೀರ್ಥ ಸ್ವಾಮೀಜಿ ಯಾಕೆ ಕಂಡರೂ ಕಾಣದಂತೆ ಇರುತ್ತಾರೆ?

ಇವರೆಲ್ಲ ಎಷ್ಟು ಸುಳ್ಳು ಬುರುಕರು ಅನ್ನುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ? ಮಹಾರಾಷ್ಟ್ರದ ಖೈರ್ಲಾಂಜಿ ಹತ್ಯಾಕಾಂಡಕ್ಕೆ ಇವರಾರು ಪ್ರತಿಕ್ರಿಯಿಸಲಿಲ್ಲ. ಕಂಬಾಲಪಲ್ಲಿಯಲ್ಲಿ ಎಲ್ಲರ ಕಣ್ಣೆದುರೇ ಎಂಟು ಜನ ದಲಿತರನ್ನು ಸುಟ್ಟು ಹಾಕಿದರೂ ಇವರು ಮಾತಾಡಲಿಲ್ಲ. ಹೀಗೆ ಸುಟ್ಟು ಹಾಕಿದ 'ಹಿಂದೂ'ಗಳನ್ನು ನಿರಪರಾಧಿಗಳೆಂದು ನ್ಯಾಯಾಲಯ ಬಿಡುಗಡೆ ಮಾಡಿದಾಗ 'ಹಿಂದೂ ಒಂದು' ಎನ್ನುವ ಇವರೆಲ್ಲ ಯಾವ ಗುಹೆಯಲ್ಲಿ ಅಡಗಿ ತಪಸ್ಸು ಮಾಡುತ್ತಿದ್ದರು.? 'ಒಂದು' ಅನ್ನುವುದಕ್ಕೆ ಸಂಘ ಪರಿವಾರದ ನಿಘಂಟಿನಲ್ಲಿ ಇರುವ ಅರ್ಥವಾದರೂ ಏನು?

ಈ ಎಲ್ಲಾ ಪ್ರಶ್ನೆಗಳನ್ನು ಮುಗ್ಧತೆಯಿಂದ ಕೇಳುತ್ತಿಲ್ಲ. ಸಂಘ ಪರಿವಾರ ಎಂಥ ಧೂರ್ತರ ಕೂಟ ಎಂಬುದನ್ನು ಅರ್ಥಮಾಡಿಸುವ ಸಲುವಾಗಿ ಇಷ್ಟೆಲ್ಲ ಪ್ರಶ್ನೆಗಳು. 'ಹಿಂದೂ ನಾವೆಲ್ಲ ಒಂದು' ಎಂದು ಇವರೆಷ್ಟೇ ಬಡಬಡಿಸಿದರೂ ಅದರ ಹಿಂದಿನ ಕುತಂತ್ರ, ಕಾರ್ಯಕ್ರಮ ಈಗ ಗುಪ್ತವಾಗೇನೂ ಉಳಿದಿಲ್ಲ. ಆದರೆ ಆಡಿದ ಸುಳ್ಳನ್ನೇ ಪದೇ ಪದೇ ಆಡುತ್ತಿದ್ದರೆ ಅದು ನಿಜವಾಗುತ್ತದೆ ಎಂಬ ಗಾದೆ ಇದೆಯಲ್ಲ! ಅದರ ಲಾಭ ಪಡೆಯಲು ಇವರು ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತಾರೆ. ವಸ್ತುನಿಷ್ಠವಾಗಿ ಚಿಂತಿಸಿದರೆ 'ಹಿಂದು ಧರ್ಮ' ಎಂಬ ಧರ್ಮವೇ ಇಲ್ಲ. ಸಂಘ ಪರಿವಾರದವರ ಹಿಂದೂ ಧರ್ಮ ವರ್ಣಾಶ್ರಮ ಧರ್ಮವನ್ನು ಆಧರಿಸಿದುದು. ವರ್ಣಾಶ್ರಮ ಧರ್ಮ ಜಾತಿಗಳನ್ನು ಆಧರಿಸಿದ್ದು, ಜಾತಿ ಅಂದರೆ ಅಸಮಾನತೆ. ಜಾತಿ ಇಲ್ಲದೆ ವರ್ಣಾಶ್ರಮ ಧರ್ಮ ಇಲ್ಲ. ವರ್ಣಾಶ್ರಮ ಧರ್ಮ ಇಲ್ಲದೆ ಹಿಂದೂ ಧರ್ಮ ಇಲ್ಲ ಇನ್ನು 'ಹಿಂದೂ ಒಂದು' ಅನ್ನುವುದಕ್ಕೆ ಏನು ಅರ್ಥ ಇದೆ? ದಲಿತರಂತೂ ಯಾವ ದೃಷ್ಟಿಯಿಂದ ನೋಡಿದರೂ 'ಹಿಂದೂ ಧರ್ಮದ' ವ್ಯಾಪ್ತಿಯಲ್ಲಿ ಬರುವುದೇ ಇಲ್ಲ. ಹಿಂದೂ ಪಂಡಿತರೇ ಹೇಳುವಂತೆ ಹಿಂದೂ ಧರ್ಮದಲ್ಲಿ ನಾಲ್ಕು ವರ್ಣಗಳಿವೆ. ದಲಿತರು ಈ ನಾಲ್ಕು ವರ್ಣದ ವ್ಯಾಪ್ತಿಯಲ್ಲಿ ಬರುವವರಲ್ಲವೇ ಅಲ್ಲ. ಅವರೆಲ್ಲಾ ಬೌದ್ಧರು. ಅಂಬೇಡ್ಕರ್ ಅವರು ಈಗಾಗಲೇ ಇದನ್ನು ಯಾವುದೇ ಸಂಶಯಕ್ಕೆಡೆ ಇಲ್ಲದಂತೆ ಸಾಬೀತು ಪಡಿಸಿದ್ದಾರೆ.

ನನ್ನ ಪ್ರಶ್ನೆ ಇರುವುದು ಇಂಥ ಜನವಿರೋಧಿ ಮತ್ತು ಸಮಾಜ ವಿರೋಧಿಗಳಿಗೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರ ನೀಡುತ್ತಿರುವ ಬೆಂಬಲ. 'ಕೇಡಿ ರಂಗ' ಸರ್ಕಾರದ ಅಂಗಪಕ್ಷವಾದ ಬಿಜೆಪಿ ತನ್ನೆಲ್ಲ ತನು ಮನ ಧನವನ್ನು ಈ ಕೇಸರಿ ಪಡೆಗೆ ಮುಡಿಪಾಗಿಟ್ಟಿದ್ದರೆ, ಅದರ ಪಕ್ಷವಾದ ಜೆಡಿಎಸ್ ಮೌನ ಸಹಕಾರ ನೀಡುತ್ತಿದೆ. ಮೊನ್ನೆಯ ಬೆಂಗಳೂರು ಕೋಮು ಗಲಭೆಗೆ ಸರ್ಕಾರ ಹಾಗೂ ಪೊಲೀಸರು ಪರೋಕ್ಷ ಸಹಕಾರ ನೀಡಿದ್ದು ಸೂರ್ಯ ಪ್ರಕಾಶದಷ್ಟು ನಿಚ್ಚಳವಾಗಿತ್ತು. ವಿರಾಟ್ ಹಿಂದೂ ಸಮವೇಶದ ಮೆರವಣಿಗೆಯ ಮೇಲೆ ಕನಿಷ್ಟ ನಿರ್ಬಂಧ ಹೇರಿದ್ದರೂ ಈ ಅನಾಹುತ ನಡೆಯುತ್ತಿರಲಿಲ್ಲ. ಇಡೀ ಪ್ರಕರಣದಲ್ಲಿ ಸರ್ಕಾರ ಕೋಮುವಾದಿಗಳ ಏಜೆಂಟನಂತೆ ವರ್ತಿಸಿತೇ ಹೊರತು ಗಲಭೆಕೋರರನ್ನು ನಿಯಂತ್ರಿಸಲು ಪ್ರಯತ್ನಿಸಲಿಲ್ಲ. ಜನತೆ ನೀಡಿದ ಅಧಿಕಾರವನ್ನು ಸಂಘ ಪರಿವಾರದ ಕೈಗೆ ಒಪ್ಪಿಸುವ ಮೂಲಕ ಸರ್ಕಾರ ತನ್ನ ಅಯೋಗ್ಯತೆಯನ್ನು ತೋರಿಸಿ ಕೊಟ್ಟಿತು.

ಕರ್ನಾಟಕದಲ್ಲಂತೂ 'ಕೇಡಿ ರಂಗ'ದ ಸರ್ಕಾರ ಬಂದ ಮೇಲಂತೂ ಕೇಸರಿ ಪಡೆ ಕೇಕೆ ಹಾಕ ತೊಡಗಿದೆ. ಹಣಕಾಸಿನ ವ್ಯವಹಾರದಲ್ಲಿ ಆರೋಪಿಯಾಗಿರುವ ಕೇಸರಿ ಪಡೆಯ ದಂಡನಾಯಕ ಪೇಜಾವರರಿಗೆ ಉಪಮುಖ್ಯಮಂತ್ರಿ ಯಡಿಯೂರಪ್ಪ ಬಹಿರಂಗ ಬೆಂಬಲ ಘೋಷಿಸಿದ್ದಾರೆ. ತಾನೊಬ್ಬ ಸರ್ಕಾರದ ಪ್ರತಿನಿಧಿ ಎನ್ನುವ ಕನಿಷ್ಟ ಪ್ರಜ್ಞೆಯೂ ಆ ಮನುಷ್ಯನಿಗೆ ಇದ್ದಂತಿಲ್ಲ. ಈ ನಾಡಿನ ಕಾನೂನು-ನ್ಯಾಯಾಲಯಗಳ ಮೇಲೆ ಅವರಿಗೆ ನಂಬಿಕೆಯಾಗಲಿ, ಗೌರವವಾಗಲಿ ಇಲ್ಲ. ಶಾಲಾ ಮಕ್ಕಳಿಗೆ ಮೊಟ್ಟೆ ಕೊಡುವ ವಿಚಾರದಲ್ಲೂ ಸರ್ಕಾರ ಈ ಕೇಸರಿ ಪಡೆಗೇ ಶರಣಾಗಿದೆ. ಆಹಾರ ಕ್ರಮವನ್ನು ಜನರ ಮೇಲೆ ಹೇರಬಾರದೆಂದು ಈಗ ಕೂಗೆಬ್ಬಿಸುತ್ತಿರುವ ಪೇಜಾವರ ಮತ್ತವರ ಬಳಗ, ದಲಿತರು ಮತ್ತು ಅಲ್ಪಸಂಖ್ಯಾತರು ಉಪಯೋಗಿಸುವ ಗೋಮಾಂಸದ ಬಗ್ಗೆ ಯಾಕೆ ಇದೇ ನೀತಿಯನ್ನು ಅನುಸರಿಸುವುದಿಲ್ಲ? ಆಹಾರ ಪ್ರತಿಯೊಬ್ಬರ ವೈಯಕ್ತಿಕ ಆಯ್ಕೆ ಆಗಿರುವಾಗ ಅವರವರಿಗೆ ಬೇಕಾದ್ದನ್ನು ಅವರವರು ಬಳಸಲು ಮುಕ್ತ ಅವಕಾಶ ಇರಬೇಕು. ಶಾಲೆಗಳಲ್ಲಿ ಮೊಟ್ಟೆ ತಿನ್ನುವ ಮಕ್ಕಳಿಗೆ ಮೊಟ್ಟೆ ನೀಡಿ ತಿನ್ನದವರಿಗೆ ಹಾಲು ನೀಡಿದ್ದರೆ ಏನಾಗುತ್ತಿತ್ತು? ಇಷ್ಟನ್ನು ಮಾಡಲಾಗದೇ ಸರ್ಕಾರ ಕೇಸರಿ ಪಡೆಗೆ ಶರಣಾದದ್ದು ಹೇಡಿತನ.

ಕೇಸರಿ ಪಡೆ ಎಲ್ಲವನ್ನು ಎಲ್ಲರನ್ನು ಜೀರ್ಣಿಸಿಕೊಳ್ಳುತ್ತಲೇ ಮುಂದುವರೆದಿದೆ. ಹುಟ್ಟು ಹೋರಾಟಗಾರರು, ಗುಡಿಸಲುಗಳನ್ನು ಗುಡುಗಿಸಿ, ಬಂಗಲೆಗಳನ್ನು ನಡುಗಿಸಿದವರೆಲ್ಲ ಈಗ ಕೇಸರಿ ಪಡೆಯಲ್ಲೂ ಕ್ರಾಂತಿಯನ್ನು ಕಾಣುತ್ತಿದ್ದಾರೆ. 'ಕೇಸರಿ ಪಡೆ'ಯ ಮಹಾ ದಂಡ ನಾಯಕರಾಗಿರಲು 'ಜಾತ್ಯಾತೀತ' ದೇವೇಗೌಡರಂಥವರೂ ನಾಚಿಕೆ ಬಿಟ್ಟು ವಕಾಲತ್ತು ವಹಿಸುತ್ತಿದ್ದಾರೆ. ಗ್ರೇಟರ್ ಬೆಂಗಳೂರು ಮತ್ತು ವಿಶೇಷ ಆರ್ಥಿಕ ವಲಯಗಳು ಈ ಕೇಸರಿ ಪಡೆಯ ಹುಲ್ಲುಗಾವಲಾಗಿ ಪರಿಣಾಮಿಸಲಿವೆ. 'ವಾತಾಪಿ ಜೀರ್ಣೋಭವ' ಎಂದರೆ ಗೊತ್ತಿರಬೇಕಲ್ಲ! ಈ ಎಲ್ಲ ಗೊತ್ತಿದ್ದರೂ ತಮ್ಮ ಸ್ವಾರ್ಥವನ್ನಷ್ಟೇ ಧ್ಯೇಯ ಮಾಡಿಕೊಂಡಿರುವ ಶೂದ್ರರೂ, ದಲಿತರೂ ಈ ಪಡೆಯ ಕಾಲಾಳುಗಳಾಗಲು ಮುನ್ನುಗ್ಗುತ್ತಿದ್ದಾರೆ.

ವಿಚಿತ್ರ ಹಾಗೂ ನೆಮ್ಮದಿಯ ಸಂಗತಿ ಎಂದರೆ ಈ ಕೇಸರಿ ಪಡೆ 'ಹಿಂದೂ'ಗಳ ಆರ್ಭಟ ಹೆಚ್ಚಾದಾಗಲೆಲ್ಲ ಭಾರತೀಯರು ಅವರಿಗೆ ಸರಿಯಾಗಿ ಬುದ್ಧಿ ಕಲಿಸಿದ್ದಾರೆ. ಭಾರತವನ್ನು ಬೆಳಗಿಸಲು ಹೋಗಿ ಅಂಧಕಾರಕ್ಕೆ ತಳ್ಳಲ್ಪಟ್ಟಿದ್ದು ಈಗಾಗಲೇ ಮರೆತು ಹೋಗಿರಬಹುದು. ಆ 'ಸುಖಾನುಭವ' ಕರ್ನಾಟಕದ ಕೇಸರಿ ಪಡೆಗೆ ಸಧ್ಯದಲ್ಲೇ ಬಂದೊದಗಲಿದೆ.

ಭಾರತೀಯರಾದ ದಲಿತರು, ಹಿಂದಳಿದವರು, ಅಲ್ಪ ಸಂಖ್ಯಾತರು ಮುಂಬರುವ ದಿನಗಳಲ್ಲಿ ಅವರಿಗೆ ಮತ್ತೊಮ್ಮೆ ಬುದ್ಧಿ ಕಲಿಸಲಿದ್ದಾರೆ.

○ ಇಂದೂಧರ ಹೊನ್ನಾಪುರ

ಆಕಾಶರಾಯರ ಒಡ್ಡೋಲಗ

ಎನ್.ಎಸ್. ಶಂಕರ್

ಈ ದುರಂತ, ಕನಿಷ್ಠ ವೆಂದರೆ ನಮ್ಮ ನಾಡನ್ನು ಅಲ್ಲಾಡಿಸಬೇಕಿತ್ತು. ಸುದ್ದಿ ಕೇಳಿಯೇ ಈ ಸಮಾಜದ ನಿದ್ದೆ ಕೆಡಬೇಕಿತ್ತು. ಆದರೆ ಆದದ್ದೇನು? ಏನೂ ಇಲ್ಲ! ಎಲ್ಲೆಲ್ಲೂ ಸಾರ್ವತ್ರಿಕ ವಾದ ಅಸೀಮ ಅನಾಸಕ್ತಿ. ಅದೇ ಸಮಯದಲ್ಲಿ ಒಂದು ಕಡೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ 'ಭಾರತ ಪ್ರಕಾಶಿಸುತ್ತಿದೆ' ಎಂದು ಬೀಗುತ್ತಿದ್ದರೆ, ಇತ್ತ ಬೆಂಗಳೂರನ್ನು ಸಿಂಗಪೂರ್ ಮಾಡುವ ಹುಮ್ಮಸ್ಸಿನಲ್ಲಿದ್ದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ತಮ್ಮದೇ ಮದ್ದೂರಿನಲ್ಲಿ ರೈತರು ಸಾಯುವವರೆಗೂ ಕಣ್ಣು ಕಿವಿ ತೆರೆದಿರಲಿಲ್ಲ. ಅಷ್ಟರ ಮೇಲೂ ಆಗಿದ್ದೇನು? ಏನೂ ಇಲ್ಲ! ಸರ್ಕಾರವೇ ನೇಮಿಸಿದ "ಕೃಷಿ ತಜ್ಞ" ಜಿ.ಕೆ. ವೀರೇಶ್ ಸಮಿತಿ- ರೈತರ ಆತ್ಮಹತ್ಯೆಗೆ ಸಾಲದ ಹೊರೆಯಲ್ಲ, "ಕುಡಿತದ ಚಟ ಕಾರಣ" ಎಂದು ಕಂಡುಹಿಡಿದು ವರದಿ ಸಲ್ಲಿಸಿತ್ತು!..

ಚಾಮುಂಡೇಶ್ವರಿ ಉಪ ಚುನಾವಣೆ ಮುಗಿದು ಸಿದ್ದರಾಮಯ್ಯ ಅತ್ಯಲ್ಪ ಬಹುಮತದಲ್ಲಿ ಗೆದ್ದಾಯಿತು. ರಾಜ್ಯದ ಇತಿಹಾಸದಲ್ಲಿ ಜಾತಿಯೊಂದನ್ನೇ ಮತದಾರರ ಮುಂದಿಟ್ಟ ಚುನಾವಣೆ ಬಹುಶಃ ಇದೊಂದೇ ಇರಬೇಕು. ಮತ್ತು ಎಲ್ಲರೂ ಹೇಳಿದ್ದು ಅದನ್ನೇ: ಹಳ್ಳಿ ಹಳ್ಳಿಯಲ್ಲಿ ಜಾತಿ ಗಡಿಗಳನ್ನು ಎಳೆದು ಜನರನ್ನು ಒಡೆದು ಹಾಕಿಬಿಟ್ಟರು... ಆದರೆ ಯಾರೂ,- ಯಾವ ಪತ್ರಿಕೆ, ಚಾನಲ್ಲೂ ಸಹ ಈ ಚುನಾವಣೆಯ ನಿಜ ಮರ್ಮ ವೇನು? ಪಕ್ಷಗಳು, ಮುಖಂಡರು ಪ್ರಯೋಗಿಸಿದ ಜಾತೀಯ ತಂತ್ರದ ವಿವರಗಳೇನು? ಯಾವ ಮಾರ್ಗ, ಯಾವ ಮಾತು, ಯಾವ ಆಮಿಷಗಳಿಂದ ಅವರು ನಮ್ಮ ಸಮಾಜವನ್ನು ಸೀಳಿಟ್ಟರು? ಇಂಥ ಪರಮ ನೀಚತನ ಸಮಾಜದ ಮೇಲೆ ಬೀರುವ ದೂರಗಾಮಿ ಪರಿಣಾಮಗಳೇನು? ಈ ಯಾವ ವಿವರಗಳ ಶೋಧನೆಗೂ ತೊಡಗಲಿಲ್ಲ.

ಚುನಾವಣೆ ನಡೆಯಿತು, ಮುಗಿಯಿತು. ವರ್ಷಗಳು ಕಳೆದರೆ ಮತ್ತೂ ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಆದರೆ ಈ ಜಾತಿ ಸೀಳಿನ ಗಾಯ ಮಾಯುವುದಿಲ್ಲ. ಸಮಾಜಕ್ಕೆ ಹೀಗೆ ಶಾಶ್ವತ ಘಾಸಿ ಮಾಡಿದವರೇ ಮತ್ತೆ ಮುಂದಿನ ಚುನಾವಣೆಯಲ್ಲಿ ಪುನಃ ತಮ್ಮ ಜಾತಿ ಹತ್ತಾರುಗಳನ್ನು ಹಿಡಿದು ಮುನ್ನುಗ್ಗುತ್ತಾರೆ. ರಕ್ತದ ರುಚಿ ಕಂಡವರು... ಅಲ್ಲಿಗೆ ಸಮಾಜದ ಒಡಲಿಗೆ ವಿಷ ಹುಯ್ಯುವ ಒಂದು ಭಯಾನಕ ಪರಂಪರೆ ಮೊದಲಾಗುತ್ತದೆ....



ಇಂಥದೊಂದು ವಿಷಮ ಬೆಳವಣಿಗೆಯ ಜಾಡು ಹಿಡಿದು ದಾಖಲು ಮಾಡಿ ಪ್ರತಿಕ್ರಿಯಿಸುವ ಕೆಲಸವನ್ನು ಮಾಧ್ಯಮಗಳು ಮಾಡದಿದ್ದರೆ ಇನ್ಯಾರು ಮಾಡಬೇಕು?

ಅಷ್ಟಕ್ಕೂ ನಮ್ಮ ಸಮಾಜದಲ್ಲಿ ಮಾಧ್ಯಮಗಳ ಜವಾಬ್ದಾರಿಯೇನು?

ಇಂಥ ಗಹನ ಚರ್ಚೆ ಎತ್ತಲು ಈಗೀಗ ಎಂಟೆದೆ ಬೇಕು! ಯಾಕೆಂದರೆ ತತ್ವ, ಸಾಮಾಜಿಕ ಜವಾಬ್ದಾರಿ- ಈ ದೊಡ್ಡ ಗತ್ತಿನ ಮಾತುಗಳನ್ನು ಇಂದು ಯಾರೂ ಅನುಮಾನವಿಲ್ಲದೆ ಕೇಳಿಸಿಕೊಳ್ಳುವ ಪರಿಸ್ಥಿತಿ ಉಳಿದಿಲ್ಲ. ಆದರೂ..

ಈ ಮೊನ್ನಿನ ಚುನಾವಣೆ ಸಂದರ್ಭದಲ್ಲೇ, ತಾನೊಬ್ಬ ಪ್ರಜ್ಞಾವಂತ ಎಂದು ಎಗ್ಗಿಲ್ಲದೆ ಕರೆದುಕೊಳ್ಳುವ ಒಬ್ಬ ತುಂಡು ಪತ್ರಕರ್ತನ ದೃಷ್ಟಿಯಲ್ಲಿ, ಈ ಜಾತೀಯ ಚುನಾವಣಾ ಪರಂಪರೆಯನ್ನು ಉದ್ಘಾಟಿಸಿದ ನಮ್ಮ ಮುಖ್ಯಮಂತ್ರಿ ಕುಮಾರಸ್ವಾಮಿಯೇ- "ಯುವಕರು, ಮಹಿಳೆಯರನ್ನು ಸೆಳೆಯುವ ಮಾಂತ್ರಿಕ"! ಆತನ ಅದೇ ಸಮೀಕ್ಷೆಯಲ್ಲಿ, ಸಿದ್ದರಾಮಯ್ಯನವರ ಮನೆ ಮುಂದೆ ಸೇರಿದ್ದ ಸಾವಿರ ಜನರಲ್ಲಿ ಒಂಬೈನೂರು ಜನ "ಸ್ವಜಾತಿ ಬಾಂಧವರೇ" ಅನ್ನುವುದರಲ್ಲಿ ಈ ಪತ್ರಕರ್ತನಿಗೆ ಅನುಮಾನವಿರಲಿಲ್ಲ! ಈತ ಆ ಸಾವಿರ ಜನರ ಜಾತಿ ಪ್ರಮಾಣಪತ್ರಗಳನ್ನು ಅದು ಯಾವಾಗ ಸಂಪಾದಿಸಿ ಯಾವಾಗ ಪರಿಶೀಲಿಸಿದನೋ ಗೊತ್ತಿಲ್ಲ!

ಈ ಬಗೆಯ ತಲೆತಿರುಕ ವಕಾಲತ್ತುಗಳ ಹಿಂದೆ ಏನನ್ನೋ ತೂಕಕ್ಕೆ ಹಾಕಿ ಮಾರಿಕೊಂಡ ಲೇವಾದೇವಿಯ ವಾಸನೆ ಹೊಡೆದರೆ ಆಶ್ಚರ್ಯವೇನು? ಹೋಗಲಿ, ಈ ತುಂಡು ಪ್ರಕರಣಗಳನ್ನು ಬಿಟ್ಟೇ ಬಿಡೋಣ. ಉಳಿದವರಾದರೂ ದೇವೇಗೌಡರ ಕುಟುಂಬದಿಂದ ಅಥವಾ ಇನ್ಯಾವುದೇ ಪಕ್ಷ/ವ್ಯಕ್ತಿಗಳಿಂದ ಜಾತಿಕಾರಣ ಹೇಗೆ ಮತ್ತು ಯಾವ ಪ್ರಮಾಣದಲ್ಲಿ ನಡೆಯಿತು ಎಂಬುದನ್ನು ಘಟನೆ, ನಿದರ್ಶನಗಳ ಮೂಲಕ ಕೆದಕಿ ಬರೆಯಬಹುದಿತ್ತಲ್ಲ? ಯಾರೂ ಬರೆಯಲಿಲ್ಲ. ಬರೆದವರೂ, ಇಲ್ಲಿ ಜಾತೀಯತೆ ವಿಜೃಂಭಿಸಿತು ಎಂಬಷ್ಟಕ್ಕೆ ನಿಂತರೇ ಹೊರತು, ಹೇಗೆ ಎಂದು ವಿವರಿಸಲಿಲ್ಲ. ಹಾಗಾಗಿ ಅವರ ವರದಿ ಸಮೀಕ್ಷೆಗಳು ಒಣ ಹೇಳಿಕೆಯ ಮಟ್ಟ ಮೀರಲಿಲ್ಲ. ಅದರಿಂದಾಗಿಯೇ ಈ ಜಾತೀಯ ಆಮಿಷ- ಹಣ- ಹೆಂಡಗಳ ಡೌಲನ್ನೂ ಧಿಕ್ಕರಿಸಿ ಮತ ಚಲಾಯಿಸಿದ ನಮ್ಮ ಅಮಾಯಕ ಜನರ ಘನತೆಗೂ ಗೌರವ ಸಲ್ಲಲಿಲ್ಲ...

ಮಾಧ್ಯಮಗಳ ವರ್ತನೆ ಬಗ್ಗೆ ಮಾತನಾಡುವಾಗ ಇನ್ನೊಂದು ಸಂದರ್ಭ ನೆನಪಾಗುತ್ತದೆ.

ಸೋನಿಯಾ ಗಾಂಧಿ ಪ್ರಧಾನಿ ಪಟ್ಟ ತಿರಸ್ಕರಿಸಿದ ದಿನದ ವಾತಾವರಣವನ್ನೇ ನೆನೆಸಿಕೊಳ್ಳಿ. ಅಂದು ಆಕೆ ಪ್ರಧಾನಿಯಾಗಿಯೇಬಿಡಬಹುದು ಎಂಬಂತ್ತಿದ್ದಾಗ, ಮುಂಬಯಿ ಷೇರು ಮಾರುಕಟ್ಟೆ ಕುಸಿಯಿತು. ಎನ್‌ಡಿಟೀವಿಯಂಥ ಚಾನಲ್ಲುಗಳು ಅಂದು- ಷೇರು ಪೇಟೆಯ ಏರಿಳಿತದ ಮೇಲೇ ಈ ದೇಶದ ಅಳಿವು ಉಳಿವು ನಿಂತಿದೆಯೋ ಎಂಬಂತೆ ಇಡೀ ದಿನ ಸೆನ್‌ಸೆಕ್ಸ್ (ಷೇರು ಸೂಚ್ಯಂಕ) ಹೊಯ್ದಾಟವನ್ನೇ ಬಿಂಬಿಸುತ್ತ, ತಜ್ಞರ ಚರ್ಚೆಗಳನ್ನು ಏರ್ಪಡಿಸುತ್ತ ಏದುಸಿರು ಬಿಡುತ್ತ ಕೂತಿದ್ದವು! ಅಪ್ಪಿತಪ್ಪಿಯೂ ಆ ವಿಷಯದಲ್ಲಿ ಜನಸಾಮಾನ್ಯರಿಗೆ ಏನನ್ನಿಸಿತು, ದೇಶದ ಸಾಮೂಹಿಕ ಜನಜೀವನದ ಮೇಲೇನು ಪರಿಣಾಮವಾಗಬಹುದು ಅನ್ನುವ ಪ್ರಸ್ತಾಪವಿಲ್ಲ!..

ಇಂಥ ಉದಾಹರಣೆಗಳನ್ನು ಲೆಕ್ಕವಿಲ್ಲದಷ್ಟು ಕೊಡಬಹುದಾದರೂ, ನನ್ನ ಆಕ್ಷೇಪಗಳು ಇನ್ನೂ ಗಂಭೀರ ಸ್ವರೂಪದವಾದ್ದರಿಂದ ಇವನ್ನು ಇಷ್ಟಕ್ಕೇ ಬಿಟ್ಟು ಮುಂದುವರೆಯೋಣ.

ನಮ್ಮ ದೇಶದಲ್ಲಿ ಈ ಕಾಲಮಾನದ ದಾರುಣತಮ

ದುರಂತವೆಂದರೆ ರೈತರ ಆತ್ಮಹತ್ಯೆ. ರೈತ ಮುಖಂಡ ಕೆ.ಎಸ್. ಪುಟ್ಟಣ್ಣಯ್ಯ ಮೊನ್ನೆ ಒಂದು ಸಭೆಯಲ್ಲಿ ಹೇಳಿದ ಪ್ರಕಾರ ಈವರೆಗೆ ದೇಶದಲ್ಲಿ ಒಂದು ಲಕ್ಷ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲೇ ೧೯೯೭ರಲ್ಲಿ ಆರಂಭವಾದ ಆತ್ಮಹತ್ಯೆಗಳ ಸರಮಾಲೆ ೨೦೦೩ ಏಪ್ರಿಲ್ ವೇಳೆಗೆ ಹನ್ನೊಂದು ಸಾವಿರದ– ಎದೆ ನಡುಗಿಸುವ ಪ್ರಮಾಣ ದಾಟಿತ್ತು! ಅಂದರೆ ಸತತ ಏಳು ವರ್ಷ ಕಾಲ ದಿನಕ್ಕೆ ಸರಾಸರಿ ನಾಲ್ಕು ಜನ ಕೈಯಾರೆ ಜೀವ ಕಳೆದುಕೊಳ್ಳುತ್ತಲೇ ಬಂದರು. ೨೦೦೪– ೦೫ರ ಸಾಲಿನಲ್ಲಿ ಮಳೆ ಚೆನ್ನಾಗಿ ಆದ ಕಾರಣ, ಆತ್ಮಹತ್ಯೆಗಳ ಅಬ್ಬರ ತಗ್ಗಿದರೂ, ಸಮಸ್ಯೆಯ ಬೇರುಗಳು ಈಗಲೂ ನಿರ್ನಾಮವಾಗಿಲ್ಲ. ಇದು ನಮ್ಮ ರಾಜ್ಯದ ಅಥವಾ ನಮ್ಮ ದೇಶದ್ದೊಂದೇ **ಕತೆಯೂ** ಅಲ್ಲ. ವಿಶ್ವ ವ್ಯಾಪಾರ ಸಂಘಟನೆಯ ಕ್ಯಾನ್‌ಕನ್ ಶೃಂಗಸಭೆಯ ತಾಣದ ಮುಂದೆಯೇ ದಕ್ಷಿಣ ಕೊರಿಯಾದ ರೈತನೊಬ್ಬ ಜಗತ್ತಿನ ಕಣ್ಣಳತೆಯಲ್ಲೇ ಜಗಜ್ಜಾಹೀರಾಗಿ ಆತ್ಮಹತ್ಯೆ ಮಾಡಿಕೊಂಡ! ಇಲ್ಲಿ ನಮ್ಮಲ್ಲೇ ಅತ್ಯಂತ ಸುಭಿಕ್ಷ ರಾಜ್ಯವೆಂದು ಹೆಸರಾದ, ಹಸಿರು ಕ್ರಾಂತಿಯ ನೆಲೆವೀಡಾದ ಪಂಜಾಬಿನಲ್ಲೇ ಇಪ್ಪತ್ತು ಸಾವಿರ ರೈತರ ಆತ್ಮಾಹುತಿಯಾಗಿತ್ತು. ನೆರೆಯ ಆಂಧ್ರದಲ್ಲೂ ಇದೇ ಸ್ಥಿತಿ.

ಈ ದುರಂತ, ಕನಿಷ್ಠವೆಂದರೆ ನಮ್ಮ ನಾಡನ್ನು ಅಲ್ಲಾಡಿಸಬೇಕಿತ್ತು. ಸುದ್ದಿ ಕೇಳಿಯೇ ಈ ಸಮಾಜದ ನಿದ್ದೆ ಕೆಡಬೇಕಿತ್ತು. ಆದರೆ ಆದದ್ದೇನು? ಏನೂ ಇಲ್ಲ! ಎಲ್ಲೆಲ್ಲೂ ಸಾರ್ವತ್ರಿಕವಾದ ಅಸೀಮ ಅನಾಸಕ್ತಿ. ಅದೇ ಸಮಯದಲ್ಲಿ ಒಂದು ಕಡೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ 'ಭಾರತ ಪ್ರಕಾಶಿಸುತ್ತಿದೆ' ಎಂದು ಬೀಗುತ್ತಿದ್ದರೆ, ಇತ್ತ ಬೆಂಗಳೂರನ್ನು ಸಿಂಗಪೂರ್ ಮಾಡುವ ಹುಮ್ಮಸ್ಸಿನಲ್ಲಿದ್ದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ತಮ್ಮದೇ ಮದ್ದೂರಿನಲ್ಲಿ ರೈತರು ಸಾಯುವವರೆಗೂ ಕಣ್ಣು ಕಿವಿ ತೆರೆದಿರಲಿಲ್ಲ. ಅಷ್ಟರ ಮೇಲೂ ಆಗಿದ್ದೇನು? ಏನೂ ಇಲ್ಲ! ಸರ್ಕಾರವೇ ನೇಮಿಸಿದ "ಕೃಷಿ ತಜ್ಞ" ಜಿ.ಕೆ. ವೀರೇಶ್ ಸಮಿತಿ– ರೈತರ ಆತ್ಮಹತ್ಯೆಗೆ ಸಾಲದ ಹೊರೆಯಲ್ಲ, "ಕುಡಿತದ ಚಟ ಕಾರಣ" ಎಂದು ಕಂಡು ಹಿಡಿದು ವರದಿ ಸಲ್ಲಿಸಿತ್ತು!..

ರೈತ ಈ ನಾಡಿನ ಬೆನ್ನೆಲುಬು ಎಂಬಂಥ ಸವಕಲು ಮಾತುಗಳನ್ನು ಪಕ್ಕಕ್ಕಿಡೋಣ. ಆದರೆ ನಮ್ಮ ರೈತ ಮರುಭೂಮಿಯಲ್ಲೂ ಚಿಗುರೊಡೆಯಬಲ್ಲ ಗಟ್ಟಿಗ. ಅಂಥ ಗಟ್ಟಿ ಜೀವಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ತಮಗೆ ಬದುಕುವ ಆಸರೆಯೇ ಇಲ್ಲವೆಂದು ಸಾಮೂಹಿಕವಾಗಿ ತೀರ್ಮಾನಿಸಿದರೂ, ಯಾಕೆ ಎಂದು ಕೇಳಿಕೊಳ್ಳುವ ವ್ಯವಧಾನ ಈ ಸಮಾಜಕ್ಕಿರಲಿಲ್ಲವಲ್ಲ?!

ಸರಿ, ಈ ಬಿಕ್ಕಟ್ಟಿನ ಗಳಿಗೆಯಲ್ಲಿ ಮಾಧ್ಯಮಗಳು ಏನು ಮಾಡಬಹುದಿತ್ತು?

ಹಳ್ಳಿ ಹಳ್ಳಿಗೆ ಹೋಗಿ ರೈತರಲ್ಲಿ ಸ್ಥೈರ್ಯ ಹುಟ್ಟಿಸುವ ಶಕ್ತಿ ಮಾಧ್ಯಮಗಳಿಗಿರಲಿಲ್ಲ, ಒಪ್ಪೋಣ. ಆದರೆ ಮೊದಲಿಗೆ ಸರಿಯಾದ ಪ್ರಶ್ನೆಗಳನ್ನು ಕೇಳಬೇಕಿತ್ತಲ್ಲವೇ? ಮೂರು ವರ್ಷದ ಸತತ ಬರಗಾಲ ಕಾರಣವಿರಬಹುದೇನೋ ಎಂಬ ಮಾತು ಬಂದಾಗ, ಹೌದು, ಆದರೆ ಅರಸು ಕಾಲದಲ್ಲೂ ಮೂರು ವರ್ಷ ಸತತ ಕ್ಷಾಮವಿತ್ತು, ಆಗ ಯಾಕೆ ಯಾರೂ ಆತ್ಮಹತ್ಯೆಗೆ ಶರಣಾಗಲಿಲ್ಲ ಎಂದು ಕೇಳಬೇಕಿತ್ತು.

ರೈತನಿಗೆ ಆಸರೆಯಾಗುವ ಕೃಷಿ ಪೂರಕ ಹಂದರವೇ ಇಡಿಯಾಗಿ ಕುಸಿಯದಿದ್ದರೆ ರೈತ ಆತ್ಮಹತ್ಯೆಯ ಹಾದಿ ಹಿಡಿಯುವುದು ಸಾಧ್ಯವೇ ಇರಲಿಲ್ಲ. ಹಾಗಾದರೆ ಈ ಕುಟುಕು ಆಸರೆಯನ್ನಾದರೂ ಒದಗಿಸುತ್ತಿದ್ದ ಹಂದರ ಯಾವುದು? ಅದು ಕುಸಿದು ಬಿದ್ದಿದ್ದು ಹೇಗೆ? ಸರ್ಕಾರದ ಯಾವ ಯಾವ ನೀತಿ ಧೋರಣೆಗಳು, ಸಮಾಜದ ಯಾವ ಸ್ಥಿತ್ಯಂತರಗಳು ರೈತನ ಈ ಅನಾಥ ಪ್ರಜ್ಞೆಗೆ ಕಾರಣವಾದವು?... ಎಷ್ಟೊಂದು ಪ್ರಶ್ನೆಗಳಿದ್ದವು! ಆದರೆ ನಮ್ಮ ಪತ್ರಿಕೆ ಚಾನಲ್ಲುಗಳು "ರಸ್ತೆ ಅಪಘಾತದಲ್ಲಿ ಎರಡು ಸಾವು" ಎಂದು ವಸ್ತುನಿಷ್ಠ ವರದಿ ಬರೆಯುವ ನಿರ್ಲಿಪ್ತತೆಯಲ್ಲೇ "ಕ್ರಿಮಿನಾಶಕ ಕುಡಿದು ಇಬ್ಬರು ರೈತರ ಆತ್ಮಹತ್ಯೆ" ಎಂದು ಬರೆದು ಕೈ ತೊಳೆದುಕೊಂಡವು.

ದೊಡ್ಡ ದೊಡ್ಡ ವಿಚಾರಗಳ ಬಗ್ಗೆ ವಿರಾಮದಲ್ಲಿ ತಲೆ ಕೆಡಿಸಿಕೊಳ್ಳುವ ಬುದ್ಧಿ ಜೀವಿಗಳು– ಅಲ್ಲಲ್ಲಿ ಜಾಗತೀಕರಣ, ಅಂತರ‍್ರಾಷ್ಟ್ರೀಯ ಬಲಾಢ್ಯರು ಹೇರುವ ಆರ್ಥಿಕ ಕಟ್ಟುಪಾಡುಗಳು– ಇತ್ಯಾದಿಯಾಗಿ ಲೋಕಾಭಿರಾಮ ಉಲ್ಲೇಖ ಮಾಡಿದರೂ, ಅಂತಿಮ ವಿವರಣೆ ಯಾರಿಗೂ, ಈವರೆಗೂ ದಕ್ಕಿಲ್ಲ.

ಇಂಥಲ್ಲಿ ಮಾಧ್ಯಮಗಳಾದರೂ ಬುಡಮಟ್ಟದವರೆಗೆ ಇಳಿದು ಸಮಸ್ಯೆಯ ಶೋಧನೆ ಮಾಡಬಹುದಿತ್ತು. ಬಹುದಿತ್ತು ಅಲ್ಲ, ಮಾಡಬೇಕಿತ್ತು. ದಪ್ಪ ಚರ್ಮದ ಈ ಸಮಾಜಕ್ಕೆ ಚುರುಕು ಮುಟ್ಟಿಸಿ ನಮ್ಮೆಲ್ಲರ ಆತ್ಮಸಾಕ್ಷಿಯನ್ನು ಚುಚ್ಚಬೇಕಿತ್ತು. ಆದರೆ ಯಾವ ಪತ್ರಿಕೆ, ಚಾನಲ್ಲಿಗೂ ಇದು ತನ್ನ ಜವಾಬ್ದಾರಿ ಅನಿಸಲಿಲ್ಲ. ಈ ಕ್ಷಣದವರೆಗೂ!....

(**ಫ್ರಂಟ್‌ಲೈನ್** ಪತ್ರಿಕೆಯೊಂದು ಇದಕ್ಕೆ ಅಪವಾದ. ಆ ಪತ್ರಿಕೆ ರೈತರ ಆತ್ಮಹತ್ಯೆಯ ವಿಸ್ತಾರವಾದ ವರದಿ ಮಾಡುವುದರ ಜೊತೆಗೆ ದುರಂತದ ಹಿನ್ನೆಲೆಯನ್ನು ಪತ್ತೆಹಚ್ಚಲೂ ಪ್ರಾಮಾಣಿಕ ಪ್ರಯತ್ನ ಮಾಡಿತ್ತು. ದುರಂತವೆಂದರೆ ಆ ಪತ್ರಿಕೆಯನ್ನು ನಾವಿನ್ನೂ 'ಮುಖ್ಯವಾಹಿನಿ ಪತ್ರಿಕೆ'ಯಾಗಿ ಸ್ವೀಕರಿಸುವುದಿಲ್ಲ. ಅದೇನಿದ್ದರೂ ಲೋಕದ ರೀತಿ ನೀತಿ ತಿಳಿಯದ ಹುಂಬತನವಾಗಿ, ಅಥವಾ ಅನಿವಾರ್ಯ ಅನಿಷ್ಟವಾಗಿ ಮಾತ್ರ ಕಾಣುತ್ತದೆ. ಅಂಥ ವಾದಗಳನ್ನು– ಎಲ್ಲದಕ್ಕೂ ಅಪಸ್ವರ ಎತ್ತುವ ಶಾಶ್ವತ ಕಿರಿಕಿರಿಯ ಭಿನ್ನಮತೀಯ ದನಿಯಾಗಿ ಮಾತ್ರ ನಾವು ಸಹಿಸಿಕೊಳ್ಳುತ್ತೇವೆ. ನಿಂದಕರಿರಬೇಕು, ಹಂದಿಗಳ ಹಾಗೆ... ಇದು ನಮ್ಮ ಧಾಟಿ!)...

ಇಂಥದೇ ಇನ್ನೊಂದು ನಿದರ್ಶನ ನೋಡಿ.

ಕಳೆದ ವರ್ಷ ಮತ್ತು ಈ ವರ್ಷ ಖಾಸಗಿ ರಂಗದಲ್ಲೂ ಮೀಸಲಾತಿ ಇರಬೇಕು ಎಂಬ **ಸೊಲ್ಲೆದ್ದಾಗ** ಏನೆಲ್ಲ ಗದ್ದಲವಾಯಿತು ನೆನೆಸಿಕೊಳ್ಳಿ. ಆಗ ದೇಶದ ಇಡೀ ಉದ್ಯಮ ಸಮೂಹ ಕೆಚ್ಚಿನಿಂದ ಮೇಲೆದ್ದು ಇದರಿಂದ ದೇಶದ ವಿನಾಶವೇ ಆಗಿಹೋಯಿತೆಂಬಂತೆ ಬೊಬ್ಬೆ ಹೊಡೆಯಿತು. ಈಗ ತಾನೇ ಅಂತರ‍್ರಾಷ್ಟ್ರೀಯ ಪೈಪೋಟಿಗೆ ಸಾಟಿಯಾಗುತ್ತಿರುವ ಉದ್ದಿಮೆಗಳು ಅಕಸ್ಮಾತ್ ಈ ಮೀಸಲಾತಿಗೆ ಹೂಡ್ಡಿ ಅಂದುಬಿಟ್ಟರೆ ಸರ್ವನಾಶ...! ಅಂಥ ಪ್ರಚಂಡ ಪ್ರತಿರೋಧ. ಈಗಲೂ ಸಾಮಾಜಿಕ ನ್ಯಾಯದ ರಾಗ ಹಾಡುತ್ತ ಮೀಸಲಾತಿಯ ಪರ ಮಾತನಾಡುವವರು– ನಮ್ಮಲ್ಲಿ ಅದೇ "ಶಾಶ್ವತ ಕಿರಿಕಿರಿ"ಯ ಗುಂಪಿಗೆ ಸೇರಿ ಹೋಗುತ್ತಾರೆ.

ಮತ್ತೆ ಪ್ರಶ್ನೆಗಳು.

ಹೌದೇ? ಪ್ರತಿಭೆ ಎಂಬುದು ನಿಜಕ್ಕೂ ಮೇಲು ಜಾತಿಗಳಿಗೆ ರಕ್ತಗತವಾಗಿ ಬಂದ ಜಹಗೀರೇ? ಹಿಂದುಳಿದ ಜನವರ್ಗ ನಿಜಕ್ಕೂ ಯಾವ ಶತಮಾನದಲ್ಲೂ, ಮುಂದುವರೆದು ಹುಟ್ಟಿದವರಿಗೆ ಪೈಪೋಟಿ ನೀಡಲಾಗದ ದಡ್ಡ ಸಮೂಹವೇ? ಹಾಗಾದರೆ ಈವರೆಗೆ ಮೀಸಲಾತಿಯ ಸವಲತ್ತು ಸಾಧಿಸಿದ್ದು ಸೊನ್ನೆಯೇ? ಈ ಪ್ರಶ್ನೆಗಳನ್ನು– ಯಥಾಪ್ರಕಾರ– ಯಾರೂ ಕೇಳಲಿಲ್ಲ. ಅಷ್ಟೇಕೆ **ಔಟ್ ಲುಕ್**– ಕೊನೇ ಪಕ್ಷ ಪರ ವಿರೋಧಿಗಳಿಬ್ಬರನ್ನೂ ಒಂದೇ ವೇದಿಕೆಗೆ ತಂದು ವಿಭಿನ್ನ ವಾದಗಳಿಗೆ ಅವಕಾಶ ನೀಡುವ

(೧೧ನೇ ಪುಟಕ್ಕೆ)

ನಮ್ಮ ದೇಶದಲ್ಲಿ ಈ ಕಾಲಮಾನದ ದಾರುಣತಮ ದುರಂತವೆಂದರೆ ರೈತರ ಆತ್ಮಹತ್ಯೆ. ರೈತ ಮುಖಂಡ ಕೆ.ಎಸ್. ಪುಟ್ಟಣ್ಣಯ್ಯ ಮೊನ್ನೆ ಒಂದು ಸಭೆಯಲ್ಲಿ ಹೇಳಿದ ಪ್ರಕಾರ ಈವರೆಗೆ ದೇಶದಲ್ಲಿ ಒಂದು ಲಕ್ಷ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲೇ ೧೯೯೭ರಲ್ಲಿ ಆರಂಭವಾದ ಆತ್ಮಹತ್ಯೆಗಳ ಸರಮಾಲೆ ೨೦೦೩ ಏಪ್ರಿಲ್ ವೇಳೆಗೆ ಹನ್ನೊಂದು ಸಾವಿರದ– ಎದೆ ನಡುಗಿಸುವ ಪ್ರಮಾಣ ದಾಟಿತ್ತು! ಅಂದರೆ ಸತತ ಏಳು ವರ್ಷ ಕಾಲ ದಿನಕ್ಕೆ ಸರಾಸರಿ ನಾಲ್ಕು ಜನ ಕೈಯಾರೆ ಜೀವ ಕಳೆದುಕೊಳ್ಳುತ್ತಲೇ ಬಂದರು. ೨೦೦೪–೦೫ರ ಸಾಲಿನಲ್ಲಿ ಮಳೆ ಚೆನ್ನಾಗಿ ಆದ ಕಾರಣ, ಆತ್ಮಹತ್ಯೆಗಳ ಅಬ್ಬರ ತಗ್ಗಿದರೂ, ಸಮಸ್ಯೆಯ ಬೇರುಗಳು ಈಗಲೂ ನಿರ್ನಾಮವಾಗಿಲ್ಲ.

ಈ ಬಿಕ್ಕಟ್ಟಿನ ಗಳಿಗೆಯಲ್ಲಿ ಮಾಧ್ಯಮಗಳು ಏನು ಮಾಡಬಹುದಿತ್ತು? ಹಳ್ಳಿ ಹಳ್ಳಿಗೆ ಹೋಗಿ ರೈತರಲ್ಲಿ ಸ್ಥೈರ್ಯ ಹುಟ್ಟಿಸುವ ಶಕ್ತಿ ಮಾಧ್ಯಮಗಳಿಗಿರಲಿಲ್ಲ, ಆದರೆ ಮೊದಲಿಗೆ ಸರಿಯಾದ ಪ್ರಶ್ನೆಗಳನ್ನು ಕೇಳಬೇಕಿತ್ತಲ್ಲವೇ? ಮೂರು ವರ್ಷದ ಸತತ ಬರಗಾಲ ಕಾರಣ ವಿರಬಹುದೇನೋ ಎಂಬ ಮಾತು ಬಂದಾಗ, ಹೌದು, ಆದರೆ ಅರಸು ಕಾಲದಲ್ಲೂ ಮೂರು ವರ್ಷ ಸತತ ಕ್ಷಾಮವಿತ್ತು, ಆಗ ಯಾಕೆ ಯಾರೂ ಆತ್ಮಹತ್ಯೆಗೆ ಶರಣಾಗಲಿಲ್ಲ ಎಂದು ಕೇಳಬೇಕಿತ್ತು.

ಜಾಗತೀಕರಣದ ಕರಾಳ ಮುಖ ದರ್ಶನ

ಡಾ॥ ಸಣ್ಣರಾಮ

ಭಾರತೀಯ ಸಂಸ್ಕೃತಿಗೆ ಜಾಗತೀಕರಣ ಬಹುದೊಡ್ಡ ಶಾಪ. ಸುಮಾರು ೬೩೨೪ ಜಾತಿಗಳು, ೧೬೩ ಬುಡಕಟ್ಟುಗಳು, ಮುಸ್ಲಿಂ, ಸಿಖ್, ಪಾರ್ಸಿ, ಕ್ರೈಸ್ತ ಮೊದಲಾದ ಧರ್ಮೀಯರನ್ನು ತನ್ನೊಡಲೊಳಗೆ ಪೋಷಿಸಿಕೊಂಡು ಬರುತ್ತಿರುವ ರಾಷ್ಟ್ರ ಭಾರತ. ಅತ್ಯಂತ ವೈಶಿಷ್ಟ್ಯ ಪೂರ್ಣವೂ ಆದ ಸಂಸ್ಕೃತಿಗಳ ನೆಲೆವೀಡು. ಒಂದೆಡೆ ಕೋಮುಗಲಭೆ, ಜಾತಿಯ ಸಂಘರ್ಷಗಳು ನಡೆಯುತ್ತಿದ್ದರೆ, ಅದೇ ಸಂದರ್ಭದಲ್ಲಿ ಮತ್ತೊಂದೆಡೆ ಧರ್ಮಸಾಮರಸ್ಯ, ಹೊಂದಾಣಿಕೆಯ ಬಗ್ಗೆ ಚಿಂತನ ಮಂಥನಗಳು ನಡೆಯುತ್ತಿರುತ್ತವೆ. ಸಮುದ್ರವು ಮೇಲುಸ್ತರದಲ್ಲಿ ಗಲಿಬಿಲಿಯಂತಿದ್ದರೂ, ಒಳಗಡೆ ಧೀರೆ, ಗಂಭೀರವಾಗಿರುವಂತೆ ಭಾರತೀಯ ಸಂಸ್ಕೃತಿ ಮೇಲು ಸ್ತರದಲ್ಲಿ ತಲ್ಲಣಗೊಂಡಂತೆ ಕಂಡರೂ, ಆಂತರ್ಯದಲ್ಲಿ ಪ್ರಶಾಂತವಾಗಿದೆ. ಇದೇ ಭಾರತೀಯ ಸಂಸ್ಕೃತಿಯ ಬಹುದೊಡ್ಡ ಶಕ್ತಿ ಕೂಡ.

ಕ್ರಿ.ಪೂ. ಕಾಲದಿಂದಲೂ ಭಾರತೀಯ ಸಂಸ್ಕೃತಿಯ ಮೇಲೆ ಜಾಗತಿಕ ಸಂಸ್ಕೃತಿಗಳ ದಾಳಿ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಹೊರ ಸಂಸ್ಕೃತಿಗಳನ್ನು ಅತ್ಯಂತ ವಿವೇಚನೆಯಿಂದ ನೋಡುವ ಭಾರತೀಯ ಸಂಸ್ಕೃತಿ ತನ್ನ ಜಾಯಮಾನಕ್ಕೆ ಒಗ್ಗುವ ವಿಚಾರಗಳನ್ನು ಸ್ವೀಕರಿಸಿ, ಒಲ್ಲದ ವಿಚಾರಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತ ಬಂದಿದೆ. ಅಂತಲೇ ಬ್ರಿಟಿಷರು ತಂದ ಆಧುನಿಕತೆಯನ್ನು ಪೂರ್ಣವಾಗಿ ಸ್ವೀಕರಿಸದೆ ಆಂಶಿಕವಾಗಿ ಕೆಲವು ವಿಚಾರಗಳನ್ನು ಸ್ವೀಕರಿಸಿ ತನ್ನದನ್ನಾಗಿಸಿಕೊಂಡು ವಿವೇಕವನ್ನು ಮೆರೆಯಿತು. ಇಂತಹ ವಿವೇಕಯುಕ್ತ ಸಂಸ್ಕೃತಿಗೆ ಜಾಗತೀಕರಣ ಬಹುದೊಡ್ಡ ಸವಾಲನೊಡ್ಡಿದೆ. ಜಾಗತೀಕರಣ ಪ್ರಹಾರಕ್ಕೆ ಭಾರತೀಯ ಸಂಸ್ಕೃತಿಯ ತಳಪಾಯವೇ ಅಲ್ಲಾಡುತ್ತಿದೆ. ಪ್ರಶಾಂತ ಸಾಗರದಲ್ಲಿ ಭೀಕರ ಜ್ವಾಲಾಮುಖಿ ಚಿಮ್ಮುತ್ತಿದೆ.

ಕಾಲ್‌ಸೆಂಟರ್‌ಗಳು ಜಾಗತೀಕರಣದ ಕೊಡುಗೆಗಳು. ಪ್ರತಿಭಾವಂತ ಮತ್ತು ಸುಲಲಿತವಾಗಿ ಆಂಗ್ಲಭಾಷೆಯನ್ನು ಮಾತನಾಡುವ ಯುವಕ ಯುವತಿಯರನ್ನು ಕೈತುಂಬಾ ಸಂಬಳಕೊಟ್ಟು ಕಾಲ್‌ಸೆಂಟರುಗಳಲ್ಲಿ ಸೇರಿಸಿಕೊಳ್ಳುತ್ತಾರೆ. ಹಾಗೇ ನೋಡಿದರೆ ಕಾಲ್‌ಸೆಂಟರ್ ಸಂಸ್ಕೃತಿಯೇ ಬೇರೆ. ಇಲ್ಲಿ ಯುವಕ-ಯುವತಿಯರು ಯಾವ ಎಗ್ಗಿಲ್ಲದೆ ಪರಸ್ಪರ ಸ್ನೇಹ ವಿಶ್ವಾಸದಿಂದ ಬೆರೆಯುತ್ತಾರೆ. ಬಿಡುವಿನ ಸಮಯವನ್ನು ನಗರದ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ, ಸೌಂದರ್ಯ ತಾಣಗಳಲ್ಲಿ ಕಳೆಯುತ್ತಾರೆ. ಖರ್ಚು ಮಾಡಲು ಹಣವಿರುವ ಇವರು ಯೌವ್ವನದ ಮತ್ತಿನಲ್ಲಿ ಮೈ ಮರೆತು ವರ್ತಿಸುತ್ತಾರೆ. ಪರಿಣಾಮ ಅತ್ಯಂತ ಘೋರ ಭೀಕರ. ೨೦೦೫ರ ಡಿಸೆಂಬರ್‌ನಲ್ಲಿ ೨೪ ವರ್ಷ ಪ್ರಾಯದ ಪ್ರತಿಭಾ ಶ್ರೀಕಂಠಮೂರ್ತಿ ಕಾರ್ ಡ್ರೈವರ್‌ನಿಂದಲೇ ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದಳು. ಈ ಕೊಲೆ ಜನರ ಮನದಲ್ಲಿ ಹಸಿರಾಗಿರುವಾಗಲೇ ದಿನಾಂಕ ೨೩-೦೭-೨೦೦೬ ರಂದು ೩೧ ವರ್ಷದ ತಾನಿಯ ಬ್ಯಾನರ್ಜಿ ತನ್ನ ಜೊತೆಗಾರ ಯುವಕನಿಂದಲೇ ಕೊಲೆಯಾದಳು. ಈ ಕೊಲೆಗಳು ಯುವ ಸಮೂಹಕ್ಕೆ ಎಚ್ಚರಿಕೆಯ ಗಂಟೆಗಳು. ತಣ್ಣನೆಯ ಭಾರತೀಯ ಸಂಸ್ಕೃತಿ, ಯುವಕ-ಯುವತಿಯರ ನಡುವೆ ಒಂದು ಮಾನಸಿಕ ದೂರದಲ್ಲಿ ಸಂಬಂಧವನ್ನು ಕಟ್ಟುತ್ತದೆ. ಸ್ನೇಹ-ವಿಶ್ವಾಸವನ್ನು ಬೆಳಸುತ್ತದೆ. ಆದರೆ ಈ ಕಾಲ್‌ಸೆಂಟರ್ ಸಂಸ್ಕೃತಿ ಈ ಅಂತರವನ್ನು ಕಿತ್ತು ಬಿಸಾಡುತ್ತಿದೆ. ಯುವತಿಯರನ್ನು ಆಕರ್ಷಣೆಯ ಸರಕನ್ನಾಗಿ ಮಾಡುತ್ತಿದೆ. ಅದರ ಪರಿಣಾಮವೇ ಈ ಕೊಲೆಗಳು.

ಕಾಲ್‌ಸೆಂಟರುಗಳಲ್ಲಿ ನಡೆಯುತ್ತಿರುವ ಯುವತಿಯರ ಕೊಲೆಯನ್ನು ಸಹಜವೆಂದು ಕಡೆಗಣಿಸುವಂತಿಲ್ಲ. ಈ ಕೊಲೆಗಳು ಕುಟುಂಬ ಮತ್ತು ಸಮಾಜದ ಮೇಲೆ ತೀವ್ರವಾದ ಪರಿಣಾಮವನ್ನು

ಕಾಲ್‌ಸೆಂಟರ್ ಯುವಕ-ಯುವತಿಯರು ಯಾವ ಎಗ್ಗಿಲ್ಲದೆ ಪರಸ್ಪರ ಸ್ನೇಹ ವಿಶ್ವಾಸದಿಂದ ಬೆರೆಯುತ್ತಾರೆ. ಬಿಡುವಿನ ಸಮಯವನ್ನು ನಗರದ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ, ಸೌಂದರ್ಯ ತಾಣಗಳಲ್ಲಿ ಕಳೆಯುತ್ತಾರೆ. ಖರ್ಚು ಮಾಡಲು ಹಣವಿರುವ ಇವರು ಯೌವ್ವನದ ಮತ್ತಿನಲ್ಲಿ ಮೈ ಮರೆತು ವರ್ತಿಸುತ್ತಾರೆ. ಪರಿಣಾಮ ಅತ್ಯಂತ ಘೋರ ಭೀಕರ. ೨೦೦೫ರ ಡಿಸೆಂಬರ್‌ನಲ್ಲಿ ೨೪ ವರ್ಷ ಪ್ರಾಯದ ಪ್ರತಿಭಾ ಶ್ರೀಕಂಠಮೂರ್ತಿ ಕಾರ್ ಡ್ರೈವರ್‌ನಿಂದಲೇ ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದಳು. ಈ ಕೊಲೆ ಜನರ ಮನದಲ್ಲಿ ಹಸಿರಾಗಿರುವಾಗಲೇ ದಿನಾಂಕ ೨೩-೦೭-೨೦೦೬ರಂದು ೩೧ ವರ್ಷದ ತಾನಿಯ ಬ್ಯಾನರ್ಜಿ ತನ್ನ ಜೊತೆಗಾರ ಯುವಕನಿಂದಲೇ ಕೊಲೆಯಾದಳು. ಈ ಕೊಲೆಗಳು ಯುವ ಸಮೂಹಕ್ಕೆ ಎಚ್ಚರಿಕೆಯ ಗಂಟೆಗಳು. ತಣ್ಣನೆಯ ಭಾರತೀಯ ಸಂಸ್ಕೃತಿ, ಯುವಕ-ಯುವತಿಯರ ನಡುವೆ ಒಂದು ಮಾನಸಿಕ ದೂರದಲ್ಲಿ ಸಂಬಂಧವನ್ನು ಕಟ್ಟುತ್ತದೆ.

ಬೀರುತ್ತವೆ. ಆಧುನಿಕತೆಯಿಂದ ಒಡೆದು ಹೋದ ಕೌಟುಂಬಿಕ ಪರಿಸರ, ಜಾಗತೀಕರಣದ ಪ್ರಭಾವದಿಂದ ಇನ್ನೂ ಶಿಥಿಲಗೊಂಡಿದೆ. ಐಟಿ–ಬಿಟಿ ಕಂಪನಿಗಳಲ್ಲಿ ಮತ್ತು ಕಾಲ್‌ಸೆಂಟರುಗಳಲ್ಲಿ ದುಡಿಯುವ ಗಂಡ–ಹೆಂಡತಿಯರು ಹಗಲು ರಾತ್ರಿ ಪಾಳಿಯದ ಮೇಲೆ ದುಡಿಯುವುದರಿಂದ ಇವರ ಪರಸ್ಪರರ ಮುಖ ದರ್ಶನವಾಗುವುದೇ ರಜಾದಿನಗಳಲ್ಲಿ. ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದ ಅವಿಭಕ್ತ ಕುಟುಂಬಗಳು ಆಧುನಿಕರಣದಿಂದ ವಿಭಕ್ತ ಕುಟುಂಬಗಳಾಗಿ ಮಾರ್ಪಟ್ಟವು. ಜಾಗತೀಕರಣದಲ್ಲಿ ವಿಭಕ್ತ ಕುಟುಂಬಗಳ ನೆಲೆ ಇನ್ನೂ ಶಿಥಿಲಗೊಳ್ಳುತ್ತಿದೆ. ರಜಾ ದಿನಗಳಲ್ಲಿ ರೆಸಾರ್ಟುಗಳಲ್ಲಿ ಮಾತ್ರ ಒಂದೆಡೆ ಸೇರುವ ಗಂಡು–ಹೆಣ್ಣು ಮತ್ತು ಮಕ್ಕಳ ಗುಂಪೇ ಕುಟುಂಬವೆಂಬ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅಭದ್ರಸ್ಥಿತಿಯ ಕುಟುಂಬಗಳಿಗೆ ಈ ಬಗೆಯ ಕೊಲೆಗಳು ತಲ್ಲಣವನ್ನುಂಟು ಮಾಡುತ್ತಿವೆ. ಆದ್ದರಿಂದಲೇ ಈ ಕೊಲೆಗಳನ್ನು ಸರ್ಕಾರ ಮತ್ತು ಸಮಾಜ ಗಂಭೀರವಾಗಿ ಪರಿಗಣಿಸಿ, ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಕಾಲ್‌ಸೆಂಟರುಗಳನ್ನು ನಿಯಂತ್ರಿಸಬೇಕಾಗಿದೆ. ಅಲ್ಲಿ ದುಡಿಯುವ ಯುವತಿಯರಿಗೆ ಸೆಕ್ಯುರಿಟಿಯನ್ನು ಕಲ್ಪಿಸುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಕಾಲ್‌ಸೆಂಟರ್‌ಗಳು ಬೆಂಗಳೂರಿನ ವೃತ್ತಿ, ಪ್ರವೃತ್ತಿಯನ್ನು ಬದಲಿಸುತ್ತಿವೆ. ಯುವ ಸಮುದಾಯಕ್ಕೆ ಕೈತುಂಬ ಹಣವನ್ನು ಕೊಡುತ್ತಲೇ ಅವರನ್ನು ದುಶ್ಚಟಗಳ ದಾಸರನ್ನಾಗಿ ಮಾಡುತ್ತಿವೆ. ಬೆಂಗಳೂರಿನಲ್ಲಿ ಪೋಲೀಸರು ನೂರಾರು ಕೋಟಿ ರೂಪಾಯಿಯ ಮಾದಕ ವಸ್ತುಗಳನ್ನು ಪತ್ತೆಹಚ್ಚಿದ್ದು, ಈ ಮಾದಕ ವಸ್ತುಗಳು ಬೆಂಗಳೂರಿನಲ್ಲಿಯೇ ಉಪಯೋಗಕ್ಕೆ ಬಂದಿದ್ದು, ಬೆಂಗಳೂರಿನ ಯುವ ಸಮುದಾಯವೇ ಇದರ ಬಳಕೆದಾರರು ಎಂಬ ಸುದ್ದಿ ನಗರದ ನಾಗರಿಕರನ್ನು ಬೆಚ್ಚಿ ಬೀಳಿಸಿದೆ. ಇತ್ತೀಚೆಗೆ ಬೆಂಗಳೂರಿನ 'ಶ್ರೀನಿವಾಸ ವೃತ್ತಿಪರ ಆರೋಗ್ಯ ಸಂಸ್ಥೆ' ಕಾಲ್‌ಸೆಂಟರುಗಳಲ್ಲಿ ಉದ್ಯೋಗಿಗಳ ಆರೋಗ್ಯದ ಸ್ಥಿತಿಗತಿ ಕುರಿತಂತೆ ಅಧ್ಯಯನ ನಡೆಸಿತು. ಕಾಲ್‌ಸೆಂಟರುಗಳ ಉದ್ಯೋಗಿಗಳು ಅಜೀರ್ಣ, ಬರ್ನ್‌ಸ್ಟ್ರೆಸ್ ಸಿಂಡ್ರೋಮ್, ದೃಷ್ಟಿದೋಷ, ನಿದ್ರಾಹೀನತೆಯಿಂದ ಬಳಲುತ್ತಿರುವವರ ಸಂಖ್ಯೆ ಸುಮಾರು ಶೇಕಡ ೮೩ ರಷ್ಟಿದೆ ಎಂಬುದನ್ನು ಪತ್ತೆ ಹಚ್ಚಿದೆ. ಇದಕ್ಕೆ ಬದಲಾದ ಜೀವನ ಶೈಲಿಯೇ ಕಾರಣವೆಂದು ಮತ್ತೆ ಹೇಳಬೇಕಾಗಿಲ್ಲ. ಕಾಲ್‌ಸೆಂಟರ್ ಸಂಸ್ಕೃತಿ ನಮ್ಮ ಭಾರತೀಯ ಸಂಸ್ಕೃತಿಯೊಂದಿಗೆ ಸಂಘರ್ಷ ನಡೆಸುತ್ತಿದೆ. ಕಾಲ್‌ಸೆಂಟರ್‌ಗಳ ಉದ್ಯೋಗಿಗಳು ಅವುಗಳ ಜೀವನ ವಿಧಾನವನ್ನು ಅನುಕರಿಸುವುದೋ ಬಿಡುವುದೋ ಎಂಬ ಗೊಂದಲದಲ್ಲಿದ್ದಾರೆ. ಅದರೊಂದಿಗೆ ಅನುದಾನವಾಗಿ ನಡೆದುಕೊಂಡು ಬಂದ ನಮ್ಮ ಸಾಮಾಜಿಕ ಜೀವನ ವಿಧಾನವನ್ನು ತೊರೆಯಲಾರದಂತಾಗಿದ್ದಾರೆ. ರಾತ್ರಿ ದುಡಿದು ಹಗಲು ನಿದ್ರಿಸುವ ಇವರು ಸಮಾಜದ ಸಂಪರ್ಕವೇ ಇಲ್ಲದಂತಾಗಿದ್ದಾರೆ. ಇವೆಲ್ಲ ಒತ್ತಡದೊಂದಿಗೆ ಉದ್ಯೋಗದಲ್ಲಿಯೂ ಅಭದ್ರತೆ ಕಾಡುತ್ತಿರುತ್ತದೆ. ಕೈತುಂಬಾ ಸಂಬಳವೇನೋ ಸಿಗುತ್ತದೆ. ಆದರೆ ಇದು ಎಷ್ಟು ದಿನ? ಎಲ್ಲಿಯವರೆಗೆ? ಮುಂದಿನ ಜೀವನೋಪಾಯವೇನು? ಈ ಎಲ್ಲಾ ಸಮಸ್ಯೆಯ– ಸಂಘರ್ಷದಲ್ಲಿ ಒಂದು ನಾಡಿನ ಯುವ ಸಮುದಾಯವಿದ್ದರೇ ನಾಡಿನ ಭವಿಷ್ಯವೇನು?

ಜಾಗತೀಕರಣದ ಪ್ರಭಾವದಿಂದ ಸಾಂಪ್ರದಾಯಿಕ ವಿದ್ಯಾಭ್ಯಾಸ ಬೆಲೆ ಕಳೆದುಕೊಳ್ಳುತ್ತಿದೆ. ಇತಿಹಾಸ, ಸಮಾಜ

ಜಾಗತೀಕರಣದ ದಾಳಿಗೆ ಮೊದಲು ಬಲಿಪಶುಗಳು ರೈತರು. ನಾಡಿನ ಬೆನ್ನೆಲುಬಾದ ರೈತರ ಮೇಲಾದ ದುಷ್ಪರಿಣಾಮ ದೇಶದ ಬುನಾದಿಗೆ ದೊಡ್ಡ ಧಕ್ಕೆ. ಆಧುನಿಕತೆ ಭಾರತವನ್ನು ಪ್ರವೇಶಿಸುತ್ತಿದ್ದಂತೆ ಈ ನಾಡಿನ ರೈತರ ದುರಂತ ಪ್ರಾರಂಭವಾಯಿತು. ಆಹಾರೋತ್ಪನ್ನದಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಭರದಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಹೇರಳವಾಗಿ ಬಳಸಲಾಯಿತು. ಇದರಿಂದ ಆಹಾರೋತ್ಪನ್ನದಲ್ಲಿ ದೇಶ ಸ್ವಾವಲಂಬನೆಯಾಯಿತು. ಇದನ್ನೇ ಹಸಿರು ಕ್ರಾಂತಿ ಎಂದು ಕರೆದು ಭಾರತದ ರಾಜಕಾರಣಿಗಳು, ರೈತರು ಹೆಮ್ಮೆಯಿಂದ ಬೀಗಿದರು. ಇಂದಿನ ರೈತರ ಸಮಸ್ಯೆಗೆ ಇದೇ ಬುನಾದಿ. ಸೊಪ್ಪು–ಸೆದೆ, ಕೊಟ್ಟಿಗೆ ಗೊಬ್ಬರ ಹಾಕಿ ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದ ವಿಧಾನ ಕಣ್ಮರೆಯಾಯಿತು. ಲೆಕ್ಕಾಚಾರವಿಲ್ಲದೆ ರಾಸಾಯನಿಕ ಗೊಬ್ಬರ ಕೀಟನಾಶಕಗಳ ಬಳಕೆ ಪ್ರಾರಂಭದಲ್ಲಿ ಫಲ ನೀಡಿದರೂ, ಕ್ರಮೇಣ ನಾಡಿನ ಫಲವತ್ತಾದ ಭೂಮಿ ಸತ್ವವನ್ನು ಕಳೆದುಕೊಳ್ಳುತ್ತಾ ಬಂದಿತ್ತು. ದೇಶಿಯ ಬೀಜದ ತಳಿಗಳು ಕಣ್ಮರೆಯಾದವು. ಇಂದು ನಮ್ಮ ಭೂಮಿಗೆ ರಾಸಾಯನಿಕ ಗೊಬ್ಬರವನ್ನು ಬಳಸದಿದ್ದರೆ ಏನನ್ನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ.

ಶಾಸ್ತ್ರ, ಅರ್ಥಶಾಸ್ತ್ರ ಮೊದಲಾದ ಮಾನವಿಕಗಳ ಅಭ್ಯಾಸಕ್ಕೆ ಇಂದು ಬೆಲೆ ಇಲ್ಲ. ತಾಂತ್ರಿಕ ಅಭ್ಯಾಸಕ್ಕೆ ಹೆಚ್ಚಿನ ಮಹತ್ವ ಪ್ರಾಪ್ತವಾಗಿದೆ. ಗ್ರಾಮೀಣ ಸಮುದಾಯದ ಬಡ ವಿದ್ಯಾರ್ಥಿಗಳು ಅಭ್ಯಾಸಕ್ಕೆ ಸಾಂಪ್ರದಾಯಿಕ ಕ್ಷೇತ್ರಗಳನ್ನೇ ಹೆಚ್ಚಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ನಗರ ಪ್ರದೇಶದ ಶ್ರೀಮಂತರ ಮಕ್ಕಳು ಹೆಚ್ಚಾಗಿ ತಾಂತ್ರಿಕ ಕ್ಷೇತ್ರದ ಅಭ್ಯಾಸವನ್ನು ಮಾಡಿ ಐ.ಟಿ–ಬಿ.ಟಿ ಕಾಲ್‌ಸೆಂಟರ್‌ಗಳಲ್ಲಿ ಉದ್ಯೋಗವನ್ನು ಗಿಟ್ಟಿಸಿಕೊಳ್ಳುತ್ತಾರೆ. ಇದರಿಂದ ಗ್ರಾಮೀಣ ಯುವ ಸಮುದಾಯ ನಿರುದ್ಯೋಗಿಗಳಾಗುತ್ತಿದ್ದರೆ, ನಗರ ಸಮುದಾಯ ಯುವಕರು ಐಟಿ–ಬಿಟಿ ಕಂಪನಿ ಮತ್ತು ಕಾಲ್‌ಸೆಂಟರುಗಳಲ್ಲಿ ಕೈತುಂಬಾ ಸಂಪಾದನೆಯನ್ನು ಮಾಡುತ್ತಿದ್ದಾರೆ. ಪರಿಣಾಮ ಗ್ರಾಮ ಮತ್ತು ನಗರಗಳ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ. ಇದು ಸಾಮಾಜಿಕ ದೃಷ್ಟಿಯಿಂದ ಅಪಾಯಕಾರಿ ಬೆಳವಣಿಗೆ.

ಇಂದು ಐಟಿ–ಬಿಟಿ ಕಂಪನಿಗಳಲ್ಲಿ ಕನಿಷ್ಠ ನಗರದ ಯುವ ಸಮುದಾಯಕ್ಕೆ ಉದ್ಯೋಗಾವಕಾಶ ಸಿಗುತ್ತಿದೆ ಎಂದು ಸಮಾಧಾನ ಪಡುವಂತಿಲ್ಲ. ಏಕೆಂದರೆ ಈ ಕಂಪನಿಗಳು ನಮ್ಮ ದೇಶದಲ್ಲಿ ಉದ್ಯೋಗಕ್ಕೆ ಹೊರದೇಶದ ಯುವಕರನ್ನು ನೇಮಿಸಿಕೊಳ್ಳುವ ದಿನಗಳು ಹೆಚ್ಚು ದೂರವಿಲ್ಲ. ದೇಶಿಯರಿಗೆ ಉದ್ಯೋಗಾವಕಾಶಗಳು ಕೈತಪ್ಪುವ ಸೂಚನೆಗಳು ಈಗಾಗಲೇ ಕಂಡುಬರುತ್ತಿವೆ. ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್ಸಿಗೆ ಅಮೆರಿಕಾ ವಿಶ್ವವಿದ್ಯಾನಿಲಯದಿಂದ ೧೨೬, ಇಂಗ್ಲೆಂಡಿನಿಂದ ೨೫, ಚೀನಾದಿಂದ ೧೦೦ ಜನ ಸಾಫ್ಟ್‌ವೇರ್ ಇಂಜಿನಿಯರುಗಳು ಬರಲಿದ್ದಾರೆ. ಒಟ್ಟು ೫೫ ಸಾವಿರ ಉದ್ಯೋಗಿಗಳಲ್ಲಿ ಹಾಲಿ ಕೆಲವೇ ಪ್ರತಿಶತ ೩ ರಷ್ಟು ಮಾತ್ರ ವಿದೇಶಿಯರಿದ್ದಾರೆ. ಕಾಲಕ್ರಮೇಣ ಹೆಚ್ಚಾಗುತ್ತಾರೆಂದು ಇನ್ಫೋಸಿಸ್ ಪ್ರಕಟಿಸಿದೆ. ದೇಶಿಯ ಸಂಪನ್ಮೂಲದಿಂದ ಬೆಳೆಯುವ ಈ ಕಂಪನಿಗಳು ದೇಶಿಯರನ್ನೇ ಕಡೆಗಣಿಸಿ ವಿದೇಶಿಯರನ್ನು ಆಹ್ವಾನಿಸುವುದರಿಂದ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇನ್ನು ಹೆಚ್ಚಾಗುತ್ತದೆ. ದೇಶಿಯರಿಗೆ ಉದ್ಯೋಗಾವಕಾಶ ಎಂಬ ಲಾಲಸೆಯನ್ನು ಒಡ್ಡಿ ಸ್ಥಾಪನೆಯಾದ ಐಟಿ–ಬಿಟಿ ಕಂಪನಿಗಳು ಕಾಲಕ್ರಮೇಣ ದೇಶಿಯರಿಂದ ದೂರಸರಿಯುತ್ತಿವೆ. ಮುಂದೊಂದು ದಿನ ಇಲ್ಲಿ ಉದ್ಯೋಗ ದೇಶಿಯರಿಗೆ ಗಗನ ಕುಸುಮವಾಗುತ್ತದೆ. ಸರ್ಕಾರ ತೀವ್ರವಾಗಿ ಆಲೋಚಿಸಿ ವಿದೇಶಿ ಕಂಪನಿಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಕುರಿತಂತೆ ನಿಯಮಗಳನ್ನು ರೂಪಿಸಬೇಕಾಗಿದೆ.

ಇದೇ ಸಂದರ್ಭದಲ್ಲಿ ಸರ್ಕಾರ ಮತ್ತೊಂದು ಅಂಶವನ್ನು ತೀವ್ರವಾಗಿ ಗಮನಿಸಬೇಕು. ಅದೇನೆಂದರೆ ಐಟಿ–ಬಿಟಿ ಕಂಪನಿಗಳಲ್ಲಿ ಮತ್ತು ಕಾಲ್‌ಸೆಂಟರುಗಳಲ್ಲಿ ಇಂಗ್ಲಿಷಿನ ಪ್ರಧಾನ್ಯತೆಯನ್ನು ಕಡಿಮೆ ಮಾಡಲಾಗುವುದಿಲ್ಲ. ಇದು ಎಲ್ಲರೂ ಬಲ್ಲ ಸಂಗತಿ. ಆದ್ದರಿಂದ ನಮ್ಮ ಗ್ರಾಮೀಣ ವಿದ್ಯಾರ್ಥಿಗಳಿಗೆ ಇಂಗ್ಲಿಷನ್ನು ಸರಳವಾಗಿ ಮಾತನಾಡಲು ಬರುವಂತೆ ಇಂಗ್ಲಿಷ್ ಕಲಿಕಾ ಕೇಂದ್ರಗಳನ್ನು ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಪ್ರಾರಂಭಿಸಬೇಕು. ಇದರಿಂದ ಗ್ರಾಮೀಣ ಯುವಕರು ವಿದೇಶಿ ಕಂಪನಿಯಲ್ಲಿ ಅವಕಾಶವನ್ನು ಪಡೆಯಲು ಸಾಧ್ಯವಾಗುತ್ತದೆ. ದಲಿತ–ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳನ್ನು ಜಾಗತೀಕರಣಕ್ಕೆ ಸಜ್ಜುಗೊಳಿಸಿದಂತೆಯೂ ಆಗುತ್ತದೆ.

ಜಾಗತೀಕರಣದ ದಾಳಿಗೆ ಮೊದಲು ಬಲಿಪಶುಗಳು ರೈತರು. ನಾಡಿನ ಬೆನ್ನೆಲುಬಾದ ರೈತರ ಮೇಲಾದ ದುಷ್ಪರಿಣಾಮ ದೇಶದ ಬುನಾದಿಗೆ ದೊಡ್ಡ ಧಕ್ಕೆ. ಆಧುನಿಕತೆ ಭಾರತವನ್ನು ಪ್ರವೇಶಿಸುತ್ತಿದ್ದಂತೆ ಈ ನಾಡಿನ ರೈತರ ದುರಂತ ಪ್ರಾರಂಭವಾಯಿತು. ಆಹಾರೋತ್ಪನ್ನದಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಭರದಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಹೇರಳವಾಗಿ ಬಳಸಲಾಯಿತು. ಇದರಿಂದ ಆಹಾರೋತ್ಪನ್ನದಲ್ಲಿ ದೇಶ ಸ್ವಾವಲಂಬನೆಯಾಯಿತು. ಇದನ್ನೇ ಹಸಿರು ಕ್ರಾಂತಿ ಎಂದು ಕರೆದು ಭಾರತದ ರಾಜಕಾರಣಿಗಳು, ರೈತರು ಹೆಮ್ಮೆಯಿಂದ ಬೀಗಿದರು. ಇಂದಿನ ರೈತರ ಸಮಸ್ಯೆಗೆ ಇದೇ ಬುನಾದಿ. ಸೊಪ್ಪು–ಸೆದೆ, ಕೊಟ್ಟಿಗೆ ಗೊಬ್ಬರ ಹಾಕಿ ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದ ವಿಧಾನ ಕಣ್ಮರೆಯಾಯಿತು. ಲೆಕ್ಕಾಚಾರವಿಲ್ಲದೆ ರಾಸಾಯನಿಕ ಗೊಬ್ಬರ ಕೀಟನಾಶಕಗಳ

(೧೦ನೇ ಪುಟಕ್ಕೆ)

ಜಾಗತೀಕರಣದ ಕರಾಳ ಮುಖ ದರ್ಶನ

(೯ನೇ ಪುಟದಿಂದ)

ಬಳಿಕ ಪ್ರಾರಂಭದಲ್ಲಿ ಫಲ ನೀಡಿದರೂ, ಕ್ರಮೇಣ ನಾಡಿನ ಫಲವತ್ತಾದ ಭೂಮಿ ಸತ್ವವನ್ನು ಕಳೆದುಕೊಳ್ಳುತ್ತಾ ಬಂದಿತ್ತು. ದೇಶಿಯ ಬೀಜದ ತಳಿಗಳು ಕಣ್ಮರೆಯಾದವು. ಇಂದು ನಮ್ಮ ಭೂಮಿಗೆ ರಾಸಾಯನಿಕ ಗೊಬ್ಬರವನ್ನು ಬಳಸದಿದ್ದರೆ ಏನನ್ನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಅತ್ಯಂತ ತೀಕ್ಷ್ಣವಾದ ಕೀಟನಾಶಕಗಳನ್ನು ಬಳಸದಿದ್ದರೇ ಕೀಟನಿಯಂತ್ರಣ ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರ ಇಂದಿನ ದುರ್ಗತಿಯ ಮೂಲ ಇರುವುದು ಇಲ್ಲಿಯೇ. ರೈತರು ತಾವು ಬೆಳೆಯುವ ಬೆಲೆಯ ಎಲ್ಲ ಲಾಭವನ್ನು ರಾಸಾಯನಿಕಗೊಬ್ಬರ, ಕೀಟನಾಶಕ ಮತ್ತು ಬೀಜಗಳಿಗೆ ಸುರಿದು ಬರಿಗೈಯಾಗುತ್ತಿದ್ದಾರೆ. ಗಾಯದ ಮೇಲೆ ಬರೆ ಎಳೆದಂತೆ ಪ್ರಬಲ ದೇಶಗಳ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ಕಡಿತ ಮಾಡಿದೆ. ಇದರಿಂದ ಅವುಗಳ ಬೆಲೆಯು ಸುಲಭಕ್ಕೆ ಕೈಗೆಟುಕದಂತೆ ಮೇಲೇರಿದೆ. ಸಾಲದಕ್ಕೆ ವೈಭವದ ಮದುವೆ, ಕುಡಿತದ ಚಟ ಇವುಗಳು ಸೇರಿ ರೈತರು ಹೈರಾಣಾಗಿ ಹೋಗಿದ್ದಾರೆ. ಮಾಡಿಕೊಂಡ ಸಾಲವನ್ನು ತೀರಿಸಲಾಗದೆ ಸಾವಿಗೆ ಶರಣಾಗುತ್ತಿದ್ದರೆ. ಇದುವರೆಗೂ ಭಾರತದಲ್ಲಿ ಒಟ್ಟು ೮೯೨೭ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಂಧ್ರದಲ್ಲಿ ೧೮೩೫, ಮಹಾರಾಷ್ಟ್ರದಲ್ಲಿ ೯೮೧ ಕೇರಳದಲ್ಲಿ ೨೦೧ ರೈತರು ಆತ್ಮಹತ್ಯೆ ಮಾಡಿಕೊಂಡರೆ ಕರ್ನಾಟಕದಲ್ಲಿ ಆತ್ಮಹತ್ಯೆ ಯಜ್ಞಕ್ಕೆ ಬಲಿಯಾದ ರೈತರ ಸಂಖ್ಯೆ ೫೯೧೦. ಇದು ಇಲ್ಲಿಗೆ ನಿಂತಿಲ್ಲ. ಸಮಸ್ಯೆಯ ಮೂಲವನ್ನು ಶೋಧಿಸಿ ರೈತರ ಆತ್ಮಹತ್ಯೆಗೆ ನಿಜವಾದ ಕಾರಣವನ್ನು ಹುಡುಕದ ಸರ್ಕಾರಗಳು ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಲಕ್ಷರೂಪಾಯಿ ಪರಿಹಾರವನ್ನು ಕೊಟ್ಟು ಕೈ ತೊಳೆದುಕೊಳ್ಳುತ್ತಿವೆ.

ದೇಶಿಯ ಆಹಾರೋತ್ಪತ್ತಿ ವಿಧಾನದಲ್ಲಿ ಹೆಚ್ಚು ಲಾಭವಿಲ್ಲದಿದ್ದರೂ ನಷ್ಟವಂತೂ ಇರಲಿಲ್ಲ. ಭೂಮಿಯೂ ಬಂಜರಾಗುತ್ತಿರಲಿಲ್ಲ. ಒಂದೆರಡು ಎಮ್ಮೆ-ಆಕಳುಗಳನ್ನು ಸಾಕಿ ತಾನು ಹಾಲುಂಡು ಇತರರಿಗೂ ಹಾಲನುಣಿಸುತ್ತಿದ್ದ ರೈತ ಇಂದು ದನದ ಕೊಟ್ಟಿಗೆಯನ್ನು ಬರಿದು ಮಾಡಿಕೊಂಡಿದ್ದಾನೆ. ಸೆಗಣಿ ಗೊಬ್ಬರದ ಬದಲು ರಾಸಾಯನಿಕ ಗೊಬ್ಬರವನ್ನು ಕೀಟಗಳ ನಾಶಕ್ಕೆ ದನದ ಗಂಜಲಿನ ಬದಲು ಕೀಟನಾಶಕವನ್ನು ಬಳಸಿ ತಾನು ವಿಷಯುಕ್ತ ಆಹಾರವನ್ನು ಸೇವಿಸಿ ಇತರರಿಗೂ ಉಣಿಸುತ್ತಿದ್ದಾರೆ. ಇದರೊಂದಿಗೆ ಮತ್ತೊಂದು ನೋವಿನ ಸಂಗತಿ ಎಂದರೆ ಕಣ್ಮರೆಯಾದ ಕಣದ ಸಂಸ್ಕೃತಿ. ಹೊಲದಲ್ಲಿ ಗಟ್ಟಿಯಾದ ಜಾಗದಲ್ಲಿ ನೆಲವನ್ನು ತಟ್ಟಿ, ಸಾರಿಸಿ, ಗುಡಿಸಿ ಸ್ವಚ್ಛಮಾಡಿ ಮೇಟಿ ನೆಟ್ಟು ಕಾಳು ಒಕ್ಕುತ್ತಿದ್ದ ಪದ್ಧತಿಯನ್ನು ನಮ್ಮ ರೈತರು ಮರತೇ ಬಿಟ್ಟಿದ್ದಾರೆ. ಅದರ ಬದಲು ಬಸ್ಸು, ಲಾರಿಗಳು ಓಡಾಡುವ ಟಾರ್ ರಸ್ತೆಯ ಮೇಲೆ ರಾಗಿ, ಜೋಳದ ತೆನೆಗಳನ್ನು ಹಾಕಿ ಸಂಜೆಯಾಗುತ್ತಲೇ ಕಾಳು ಗುಡಿಸಿ ಚೀಲ ತುಂಬಿಕೊಳ್ಳುವ ಸುಲಭೋಪಾಯವನ್ನು ಕಂಡುಕೊಂಡಿದ್ದಾರೆ. ಬಿಸಿಲಿನ ಝಳಕ್ಕೆ ಟಾರು ಕರಗಿ ಕಾಳಿಗೆ ಮೆತ್ತಿದ್ದಲ್ಲದೆ, ಬಸ್ಸು, ಲಾರಿಗಳ ಟೈರಿಗೆ ಅಂಟಿಕೊಂಡಿದ್ದ ಮಣ್ಣು, ಗಲೀಜು ಕಾಳಿಗಂಟಿಕೊಂಡಿರುತ್ತದೆ. ಇದೇ ಕಾಳನ್ನು ತಾನೂ ತಿಂದು ಇತರರಿಗೆ ತಿನ್ನಿಸುತ್ತಾರೆ. ಅದರ ಫಲವಾಗಿ ಎಂದೂ ಕಂಡು-ಕೇಳರಿಯದ ಚಿಕನ್ ಗೂನ್ಯಾ, ನಿಗೂಢ ಜ್ವರಗಳ ಬಾಧೆಗೆ ಜನರು ತುತ್ತಾಗುತ್ತಿದ್ದಾರೆ.

ದೇಶಿಯ ಆಹಾರ ಪದ್ಧತಿಯು ನಾಶವಾಗಿ ರೆಡಿ ಮೇಡ್ ಆಹಾರ ಪದ್ಧತಿಯು ಇಂದು ಎಲ್ಲಾ ವರ್ಗದ ಜನರಲ್ಲಿ ಪ್ರಿಯವಾಗುತ್ತಿದೆ. ಜಾಗತೀಕರಣದ ಪ್ರಭಾವದಿಂದ ಆಹಾರ ಕೂಡ ಒಂದು ಉದ್ಯಮವಾಗಿ ಮಾರ್ಪಡುತ್ತಿದೆ. ಇದು ಕೂಡ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ, ಬಣ್ಣ ಮಿಶ್ರಿತ ಆಹಾರವನ್ನು ಉಣಬಡಿಸುತ್ತಿರುವ ವಿದೇಶಿ ಕಂಪನಿಗಳು ಜನರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿವೆ. ಜನರ ಹಣವನ್ನು ಹೀರುತ್ತಿವೆ. ಇಷ್ಟೆಲ್ಲಾ ಬೆಳವಣಿಗೆಯ ಮಧ್ಯದಲ್ಲಿಯೂ ರೈತರು ದೇಶಿಯ ಆಹಾರೋತ್ಪನ್ನ ವಿಧಾನದ ಮಹತ್ವವನ್ನು ಮನಗಾಣುತ್ತಿರುವುದು ಸಮಾಧಾನಕರ ಸಂಗತಿ. ಶೂನ್ಯ ಬಂಡವಾಳ ಪದ್ಧತಿ ದಿನ ದಿನ ಜನಪ್ರಿಯವಾಗುತ್ತಿವೆ. ಇಂದಿನ ದುರ್ಗತಿಗೆ ಸರ್ಕಾರಗಳನ್ನು ದೂರತ್ತ ಕುಳಿತುಕೊಳ್ಳದೆ ರೈತರು ತಾವು ಎಚ್ಚರಗೊಳ್ಳುವುದು ಅಗತ್ಯವಾಗಿದೆ. ಜಾಗತೀಕರಣ ಒಡ್ಡಿರುವ ಸವಾಲಿಗೆ ದೇಶಿಯ ಆಲೋಚನಾ ಕ್ರಮದಿಂದಲೇ ಉತ್ತರಿಸಬೇಕಾಗಿದೆ. ಹಾಗಾದಾಗ ನಿಜಕ್ಕೂ ರೈತ ಈ ನಾಡಿನ ಬೆನ್ನೆಲೆಬು ಎಂಬ ಮಾತು ಸಾರ್ಥಕವಾಗುತ್ತದೆ. □

ಆಕಾಶರಾಯರ ಒಡ್ಡೋಲಗ

(೭ನೇ ಪುಟದಿಂದ)

ಔದಾರ್ಯವನ್ನಾದರೂ ಪ್ರದರ್ಶಿಸಿದರೆ, **ಇಂಡಿಯಾ ಟುಡೇ** ಅದನ್ನೂ ಮಾಡದೆ ನೇರಾನೇರ ಮೀಸಲಾತಿ ವಿರೋಧಿ ಉದ್ಯಮಿಗಳ ಪರ ನಿಂತುಬಿಟ್ಟಿತು. ಇನ್ನು ಚಾನಲ್ಲುಗಳನ್ನಂತೂ ಕೇಳುವುದೇ ಬೇಡ. ಮೀಸಲಾತಿ ವಿರೋಧಿ ಪ್ರತಿಭಟನೆ ಎಲ್ಲಿ, ಎಷ್ಟು ಸಣ್ಣ ಪ್ರಮಾಣದಲ್ಲಿ ನಡೆದರೂ, ಅದನ್ನು ರಾಷ್ಟ್ರೀಯ ಆಂದೋಲನವೋ ಎಂಬಂತೆ ಬಿಂಬಿಸುತ್ತ ಅವರ ಬಾಲ ಹಿಡಿದವು. ಮೀಸಲಾತಿ ಪರ ವಾದಿಗಳು ಎಂದಿನಂತೆ- ಇವರ ಜನತಂತ್ರವಾದಿ ಔದಾರ್ಯಕ್ಕೆ ಸಾಕ್ಷಿ ಯಾಗಲು ಕ್ಷಣ ಕಾಣಿಸಿಕೊಂಡು ಮರೆಯಾಗಬೇಕಾದ ಹುಳ ಹುಪ್ಪಟೆಗಳಾಗಿ ಹೋದರು.

ಒಟ್ಟಿನಲ್ಲಿ ಅಂಕಿ ಅಂಶಗಳ ಗಟ್ಟಿ ಬುನಾದಿಯ ಮೇಲೆ ಯಾವ ವಾದ, ಚರ್ಚೆಯೂ ಆರಂಭವಾಗಲೇ ಇಲ್ಲ. ಆಗಿದ್ದು ಬರೀ ದೃಷ್ಟಿಕೋನಗಳ ತಾಕಲಾಟವಷ್ಟೇ. ಅದೂ ಇವರೆಲ್ಲ ದೊಡ್ಡ ಮನಸ್ಸು ಮಾಡಿ ಅವಕಾಶದ ಭಿಕ್ಷೆ ಕೊಟ್ಟಾಗ.

೨೦೦೫ರ ಎಸ್ಸೆಸ್ಸೆಲ್ಸಿ ಮತ್ತು ಪಿಯೂಸಿ ಫಲಿತಾಂಶಗಳನ್ನು ವರ್ಗವಾರು ಪಡೆದು ನಾನೇ ನಡೆಸಿದ ಸಣ್ಣ ಅಧ್ಯಯನವೊಂದು ಹೇಳಿದ ಕತೆಯೇ ಬೇರೆ. ಅಲ್ಲಿ ಎಲ್ಲ ಜನವರ್ಗಗಳ ಸಾಧನೆಯೂ ಹತ್ತಿರ ಹತ್ತಿರ ಸರಿಸಮನಾಗಿಯೇ ಇತ್ತು. ಯಾಕೆ, ಈಚೆಗೆ ವೀರಪ್ಪ ಮೊಯ್ಲಿಯವರ ನೇತೃತ್ವದ ಮೀಸಲಾತಿ ಅನುಷ್ಠಾನ ಸಮಿತಿ ವಿಶ್ವವಿದ್ಯಾಲಯದ ವಿವಿಧ ಮಟ್ಟಗಳಲ್ಲಿ ಬೇರೆ ಬೇರೆ ಜನವರ್ಗಗಳ ವಿದ್ಯಾರ್ಥಿಗಳ ಸಾಧನೆಯನ್ನು ಹೋಲಿಸಿ ಅಂಕಿ ಅಂಶ ಪಡೆಯಿತು. ಅಲ್ಲಿ ಗೋಚರವಾದದ್ದೇನು? ಬಹುತೇಕ ವಿಭಾಗಗಳಲ್ಲಿ ಹಿಂದುಳಿದ ವರ್ಗಗಳೇ ಎಲ್ಲರಿಗಿಂತ ಮುಂದಿದ್ದಾರೆ! ಅಲ್ಲಿಗೆ ಪ್ರತಿಭೆ ಎಂಬುದು ಯಾವೊಂದು ಜಾತಿ/ವರ್ಗದ ಸೊತ್ತೂ ಅಲ್ಲವೆಂದು ಸಾಬೀತಾಗಿ ಈ ಉದ್ಯಮಪತಿಗಳು ಮತ್ತು ಮೇಲು ಜಾತಿ/ವರ್ಗಗಳು ಮುಂದೊಡ್ಡುತ್ತಿರುವ ಪ್ರತಿಭೆಯ ವಾದ ಕೇವಲ ಕುಂಟು ನೆಪವಾಗಿ ಹೋಯಿತಲ್ಲ! ಅವರೆಲ್ಲರ ಪ್ರತಿರೋಧಕ್ಕೆ ಜನ್ಮಾಂತರ ಪೂರ್ವಗ್ರಹಗಳ ಹೊರತು ಇನ್ನಾವ ತಳಪಾಯವೂ ಇಲ್ಲವೆಂದಾಯಿತಲ್ಲ?

ನಮ್ಮ ದೇಶದ ಮಾಧ್ಯಮಗಳಿಗೆ ನಿಜಕ್ಕೂ ಕಾಳಜಿ ಇದ್ದಿದ್ದರೆ, ಇಡೀ ದೇಶದ ದಿಕ್ಕು ದೆಸೆಗಳನ್ನು ನಿರ್ಣಯಿಸಬಲ್ಲ ಇಂಥ ತುರ್ತಿನ ವಿಷಯಗಳನ್ನು ಎತ್ತಿಕೊಂಡು ಪರಿಶೀಲಿಸಬೇಕಿತ್ತು. ಅಂದರೆ ಈ ಅಧ್ಯಯನದ ಕೆಲಸ ಮಾಧ್ಯಮಗಳಿಂದಲೇ ನಡೆಯಬೇಕಿತ್ತು. ಅವರೇ ಅಂಕಿ ಅಂಶಗಳನ್ನು ದೇಶದ ಮುಂದಿಟ್ಟು ಅರ್ಥಪೂರ್ಣ ವಾಗ್ವಾದ ನಡೆಯುವಂತೆ, ಸುಳ್ಳರು ಪೊಳ್ಳರು ಬಾಯಿ ಮುಚ್ಚಿಕೊಳ್ಳುವಂತೆ ಮಾಡಬೇಕಿತ್ತು.

ಆದರೆ ಅದ್ಯಾವುದೂ ಆಗಲಿಲ್ಲ. ನಮ್ಮ ಪತ್ರಿಕೆಗಳು, ಅದರಲ್ಲೂ ಹೆಚ್ಚಿನ ಇಂಗ್ಲಿಷ್ ಪತ್ರಿಕೆಗಳು ಮತ್ತು ಚಾನಲ್ಲುಗಳ ವರ್ತನೆ ನೋಡಿದರೆ ಅವರೆಲ್ಲ ಈ ದೇಶದಲ್ಲಿದ್ದಾರೆಯೇ ಎಂಬ ಮೂಲಭೂತ ಸಂದೇಹ ಹುಟ್ಟುತ್ತದೆ! ಯಾಕೆಂದರೆ ಇಡೀ ಮಾಧ್ಯಮ ಸಮೂಹ ಆಧುನಿಕ ಸುಖ ಮತ್ತು ಭೋಗಗಳ ಮೀಮಾಂಸೆಯಲ್ಲೇ ಸ್ಥಗಿತಗೊಂಡುಬಿಟ್ಟಿದೆ. ಆ ಎಂಟೀವಿ ಕುಣಿತಗಳಿಂದ ಹಿಡಿದು ಸುದ್ದಿಯ ಆಯ್ಕೆಯವರೆಗೆ ಈ ದೇಶದ ನೆಲಕ್ಕೂ ಅವರಿಗೂ ಸಂಬಂಧವೇ ಇದ್ದಂತಿಲ್ಲ. ಪ್ರವಾಸ, ಫ್ಯಾಷನ್, ಬಾಲಿವುಡ್ ಮುಂತಾದ ಬೆಡಗಿನ ಲೋಕಗಳು; ಷೇರುಪೇಟೆಯಂಥ ಹಣವಂತರ ಉಪದ್ವ್ಯಾಪಗಳು... ಐಟಂ ಹುಡುಗಿ ರಾಖಿ ಸಾವಂತಳಿಗೆ ಅದ್ಯಾರೋ ಫೈವ್ ಸ್ಟಾರ್ ಪಾರ್ಟಿಯಲ್ಲಿ ಮುತ್ತು ಕೊಟ್ಟದ್ದು ಇವರ ಪಾಲಿಗೆ ರಾಷ್ಟ್ರೀಯ ಮಹತ್ವದ ಸುದ್ದಿ; ರೈತನ ಆತ್ಮಹತ್ಯೆಯಲ್ಲ.

ಒಟ್ಟು ಭಾರತದ ನೆಲವನ್ನೇ ಕಾಣದ ಈ ಆಕಾಶರಾಯರ ಒಡ್ಡೋಲಗದಲ್ಲಿ ಯಾವ ಸಾಮಾಜಿಕ ಜವಾಬ್ದಾರಿ, ಯಾವ ಕಾಳಜಿಗಳ ಬಗ್ಗೆ ಮಾತನಾಡೋಣ? □

ವೈಚಾರಿಕ ಕ್ಷೇತ್ರಕ್ಕೆ ಹೊಸ ಸೇರ್ಪಡೆ

ಎಪ್ಪತ್ತರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ಗತ ಇತಿಹಾಸದಲ್ಲಿ ಕಾಣದೇ ಇರುವಷ್ಟು ಭಾರೀ ಪ್ರಮಾಣದಲ್ಲಿ ಹೊಸ ವಿಚಾರಗಳ ಅಲೆ ಪ್ರಾರಂಭವಾಯಿತು. ಪಾಶ್ಚಿ ಮಾತ್ಯ ವಿಚಾರಧಾರೆಗಳಿಗಿಂತ ಸ್ವದೇಶಿ ನೆಲೆಯ ಚಿಂತನಧಾರೆಗಳು ಅಧಿಕೃತತೆಯನ್ನು ಪಡೆದವು. ಇದರ ಫಲವಾಗಿ ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ವಿಚಾರ ಕ್ರಾಂತಿಯನ್ನು ಒಳಗೊಂಡ ಚಿಂತನಶೀಲರು ಸೃಷ್ಟಿಯಾದರು. ಸಾಮಾಜಿಕ ಪ್ರಜ್ಞೆಯ ಹಿನ್ನೆಲೆಯ ಶೋಷಣೆಯ ಸ್ವರೂಪ, ಸ್ವಭಾವ ವ್ಯಾಪ್ತಿ ಮೊದಲಾದ ಅನೇಕ ದೃಷ್ಟಿ ಕೋನಗಳ ಮುಕ್ತ ಮನಸ್ಸಿನ ಚರ್ಚೆಯೇ ನಡೆಯಿತು.

ಜೆ.ಆರ್ ತಿಪ್ಪೇಸ್ವಾಮಿ

ಪುಸ್ತಕ ಅವಲೋಕನ



ಅವೈದಿಕ ಚಿಂತನೆ
ಲೇ: ಡಾ॥ ಎಚ್.ಟಿ. ಪೋತೆ
ಬೆಲೆ: ರೂ. ೧೦೦/-
ಪ್ರಕಾಶಕರು: ತಿಪ್ಪಣ್ಣಂಬು ಪ್ರಕಾಶನ,
ಸರಸ್ವತಿ ಪುರಂ ಗುಲ್ಬರ್ಗಾ-೬

ಅಂಬೇಡ್ಕರ್ ಚಿಂತನೆಯನ್ನೇ ಕೇಂದ್ರವಾಗಿಸಿಕೊಂಡಿರುವ ಕೃತಿ 'ಅವೈದಿಕ ಚಿಂತನೆ' ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರಾದ ಡಾ॥ ಎಚ್.ಟಿ. ಪೋತೆ ಅವರ ಈ ಕೃತಿ ವೈದಿಕ ಧರ್ಮದಲ್ಲಿನ ಅರ್ಥಕಳೆದುಕೊಂಡ ಮೌಲ್ಯಗಳನ್ನು ಧಿಕ್ಕರಿಸಿದ ಮಹಾನುಭವದ ಚಿಂತನೆಗಳನ್ನು ಕುರಿತ ಅಧ್ಯಯನವಾಗಿದೆ. ಮಡಿಮೈಲಿಗೆಗಳನ್ನು ಹೊತ್ತ ಸಂಕುಚಿತ ಧರ್ಮದ ಮನುಷ್ಯ ವಿರೋಧಿ ಧೋರಣೆಗಳನ್ನು ಖಂಡಿಸುವುದರ ಮೂಲಕ ಈ ಅವೈಧಿಕ ಚಿಂತನೆ ಮುಖಾಮುಖಿಯಾಗುತ್ತದೆ. ಎಷ್ಟೋ ವರ್ಷಗಳ ಹಿಂದೆಯೇ ಸಮಾಜದ ಕಟ್ಟ ಕಡೆಯ ಮನುಷ್ಯನ ಹಿತಾಸಕ್ತಿಯನ್ನು ಕುರಿತು ಅನೇಕರು ಆಲೋಚಿಸಿದ್ದಾರೆ. ಮನುಷ್ಯ ಮುಖಿಯಾದ ಪಾಸಮರರ ಚಿಂತನೆಯ ಹಾದಿಯಲ್ಲಿ ಲೋಕಾಯತರು, ಚರ್ವಾಕರು, ಬುದ್ಧ ಬಸವಾದಿಶರಣರು, ದಾಸವರೇಣ್ಯರು ಪ್ರಮುಖವಾಗಿ ಗಮನಸೆಳೆದಿದ್ದಾರೆ. ಇಲ್ಲಿಯ ಹದಿನಾಲ್ಕು ಬರಹಗಳು ಪಾಮರರ ಬಗೆಗಿನ ಕಾಳಜಿಯನ್ನು ಈ ಬಗೆಯ ಚಿಂತನೆಗೆ ಕಾರಣರಾದವರ ಹೋರಾಟದ ಹಾದಿಗಳನ್ನು ನೆನಪಿಸುತ್ತವೆ. ಬಹುಪಾಲು ಬರಹಗಳು ಅಂಬೇಡ್ಕರ್ ವಿಚಾರಧಾರೆಯನ್ನು ಕುರಿತಾದವುಗಳಾಗಿದ್ದರೆ, ಇನ್ನು ಕೆಲವು ಅವರ ಪ್ರಭಾವಕ್ಕೆ ಒಳಗಾದ ಬಿ. ಶ್ಯಾಮಸುಂದರ್‌ರ ಹೋರಾಟದ ಹೆಜ್ಜೆಗಳನ್ನು ಪರಿಚಯಿಸುತ್ತವೆ. ಹಿಂದೂ ಧರ್ಮದಲ್ಲಿನ ಅಸಮಾನತೆ ಅಮಾನವಿಯತೆ ಹರಿಜನೋದ್ಧಾರದ ವಿಷಯದಲ್ಲಿ ಗಾಂಧಿ-ಅಂಬೇಡ್ಕರ್ ನಡುವೆ ಮೂಡಿದ ತಾತ್ವಿಕ ಭಿನ್ನಭಿಪ್ರಾಯ, ಮಹಿಳೆಯರ ಸಬಲೀಕರಣಕ್ಕೆ ಮಾಡಿದ ಪ್ರಯತ್ನ, ಮುಖ್ಯವಾಗಿ ಅಂಬೇಡ್ಕರ್ ತಮ್ಮ ಜೀವಿತಾವಧಿಯಲ್ಲಿ ಎದುರಿಸಿದ ಸವಾಲುಗಳು-ಬಹು ಮುಖ್ಯವಾದ ಸಂಗತಿಗಳು ಆರು ಅಧ್ಯಾಯಗಳಲ್ಲಿ ಚರ್ಚೆಗೊಳಪಟ್ಟಿವೆ. ಈಗಾಗಲೆ ಚರ್ಚಿತವಾದ ಸಂಗತಿಗಳನ್ನು ಈ ಬರಹಗಳು ಮುಂದಿಡುತ್ತವಾದರೂ ದಲಿತರ ಬದುಕಿನ ಭವಿಷ್ಯದತ್ತ ಕಣ್ಣು ತೆರೆಯುವ ಚಿಂತನೆಯ ಹಾದಿಯನ್ನು ಕಂಡುಕೊಂಡಿರುವುದು ಆರೋಗ್ಯಕಾರಿ ಬೆಳವಣಿಗೆಯಾಗಿದೆ.

ಅಂಬೇಡ್ಕರೋತ್ತರದ ದಲಿತಲೋಕ ಈ ನಿಟ್ಟಿನಲ್ಲಿ ದಲಿತ ಸಮುದಾಯದವರ ಆತ್ಮಾವಲೋಕನ ಭಾಗವಾಗಿದೆ. ಅಂಬೇಡ್ಕರ್ ನಂತರದ ವಿಚಾರವಂತರಲ್ಲಿ ಗಂಭೀರತೆ ಕಾಣಿಸುತ್ತಿಲ್ಲ. ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಕೇಳುವುದರಿಂದ ಆಗುತ್ತಿರುವ ಪರಿಣಾಮ, ಒಳಮೀಸಲಾತಿ ಒಳಜಗಳಗಳಿಂದ ದಲಿತ ಸಂಘಟನೆ ನಿಷ್ಫಲವಾದದ್ದು. ಇವೆಲ್ಲವನ್ನು ಪೋತೆಯವರು ಆತ್ಮಾವಲೋಕನಕ್ಕೆ ಒಳಪಡಿಸುತ್ತಾರೆ. ಏನೇ ವಿಭಜನೆಗಳು, ವಿಂಗಡನೆಗಳು ಜರುಗಿದರೂ ಅಂಬೇಡ್ಕರ್ ವಾದವೇ ಎಲ್ಲದಕ್ಕೂ ಪರಿಹಾರವೆಂಬ ಪ್ರತಿಪಾದನೆಯನ್ನು ಮಾಡುತ್ತಾರೆ. ಭೀಮಸೇನಾನಿ ಬಿ.ಶ್ಯಾಮಸುಂದರ್ ಹೈದ್ರಾಬಾದ್ ಕರ್ನಾಟಕದ ದಲಿತ ಜಾಗೃತಿ, ಬಿ. ಶ್ಯಾಮಸುಂದರ್: ಅವೈದಿಕ ಚಿಂತನೆ ಈ ಮೂರು ಅಂಬೇಡ್ಕರ್ ವಿಚಾರಧಾರೆಯ ಪ್ರಭಾವದಡಿಯಲ್ಲಿ ರೂಪಿತವಾದ ಬರಹಗಳು. ಬಿ. ಶ್ಯಾಮಸುಂದರ್ ವ್ಯಕ್ತಿತ್ವ ಮತ್ತು ಸಾಧನೆಯನ್ನು ಕುರಿತ ಬರಹಗಳು ಇವಾಗಿರುವುದರಿಂದ ಅವರ ಬಾಲ್ಯ, ಅನುಭವಿಸಿದ ಕಷ್ಟ ಪರಂಪರೆ ಎದುರಿಸಿದ ಸವಾಲುಗಳು, ತನ್ನ ಸಮುದಾಯಕ್ಕೆ ಹೋರಾಟದ ಮೂಲಕ ನೀಡಿದ ಮಹತ್ವದ ಕೊಡುಗೆಯನ್ನು ಸ್ಮರಿಸಲಾಗಿದೆ. ಶ್ಯಾಮಸುಂದರ್‌ರ ಜೀವಿತಾವಧಿಯ ಸಂದರ್ಭವನ್ನು ಆ ಮೂಲಕ ಸಾಂಸ್ಕೃತಿಕ ಸಂಘರ್ಷದ ಇತಿಹಾಸವನ್ನು ಅರಿಯಲು ಪ್ರಯತ್ನಿಸಿರುವುದು ಶ್ಲಾಘನೀಯ. ಮತಾಂತರದ ಸಮಸ್ಯೆಗಳಿಗೆ ಹೊರರಾಷ್ಟ್ರಗಳ ಹಣ ಒತ್ತಡ ಒತ್ತಾಯಗಳೇ ಪ್ರಚಾರಗಳೇ ಮುಖ್ಯವಾಗಿವೆ ಎನ್ನುವ ಸವರ್ಣೀಯರ ಮಾತಿನ ಹಿನ್ನೆಲೆಯಲ್ಲಿ ಮತಾಂತರ ಸಮಸ್ಯೆಗೆ ಕಾರಣ ಹುಡುಕುವ ಪ್ರಯತ್ನವನ್ನು ಪೋತೆಯವರು ಮತಾಂತರ ಸಮಸ್ಯೆ ಕುರಿತು ಬರಹದಲ್ಲಿ ಮಾಡಿದ್ದಾರೆ. ಉಳಿದ ಲೇಖನಗಳಲ್ಲಿ ಕೆಳವರ್ಗದ ವಚನಕಾರ್ತಿಯರಾದ ಕಾಳವ್ವೆ, ಗೊಗ್ಗವ್ವೆ ಸೂಳೆ ಸಂಕವ್ವೆ ಇವರೆಲ್ಲ ಮುಖ್ಯ ವಚನಕಾರ್ತಿಯರಂತೆಯೇ ಅಂದಿನ ಸಮಾಜದ ಸ್ಥಗಿತ ಮೌಲ್ಯಗಳ ವಿರುದ್ಧ ಸೆಣಸಾಡಿದ್ದನ್ನು ಮನದಟ್ಟು ಮಾಡಿಕೊಡುವುದರ ಜೊತೆಯಲ್ಲಿಯೇ ಒಟ್ಟು ಬಸವಾದಿ ಶರಣರಿಂದ ಹಿಡಿದು ಲೋಕಾಯತ, ಚಾರ್ವಾಕರು, ಫುಲೆ ಶಾಹುಮಹಾರಾಜ್ ಪೆರಿಯಾರ್, ಅಂಬೇಡ್ಕರ್, ಸಯ್ಯಾ ಜಿರಾವ್ ಗಾಯಕವಾಡ ಹಾಗೂ ಬಿ.ಶ್ಯಾಮಸುಂದರ್ ಈ ಎಲ್ಲ ಸುಧಾರಕ ಪರಂಪರೆಯನ್ನು ಅವಲೋಕಿಸಿರುವುದು ಪುಸ್ತಕದ ಒಟ್ಟಾರೆ ಬರವಣಿಗೆಗೆ ಪೋಷಕವೆಂಬಂತಾಗಿದೆ.

ಎಪ್ಪತ್ತರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ಆದ ಬದಲಾವಣೆಗಳು ಹಲವಾರು. ಗತ ಇತಿಹಾಸದಲ್ಲಿ ಕಾಣದೇ ಇರುವಷ್ಟು ಭಾರೀ ಪ್ರಮಾಣದಲ್ಲಿ ಹೊಸ ವಿಚಾರಗಳ ಅಲೆ ಪ್ರಾರಂಭವಾಯಿತು. ಪಾಶ್ಚಿಮಾತ್ಯ ವಿಚಾರಧಾರೆಗಳಿಗಿಂತ ಸ್ವದೇಶಿ ನೆಲೆಯ ಚಿಂತನ ಧಾರೆಗಳು ಅಧಿಕೃತತೆಯನ್ನು ಪಡೆದವು. ಇದರ ಫಲವಾಗಿ ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ವಿಚಾರ ಕ್ರಾಂತಿಯನ್ನು ಒಳಗೊಂಡ ಚಿಂತನಶೀಲರು ಸೃಷ್ಟಿಯಾದರು. ಸಾಮಾಜಿಕ ಪ್ರಜ್ಞೆಯ ಹಿನ್ನೆಲೆಯ ಶೋಷಣೆಯ ಸ್ವರೂಪ ಸ್ವಾಭಾವ ವ್ಯಾಪ್ತಿ ಮೊದಲಾದ ಅನೇಕ ದೃಷ್ಟಿಕೋನಗಳ ಮುಕ್ತ ಮನಸ್ಸಿನ ಚರ್ಚೆಯೇ ನಡೆಯಿತು. ಜಾತಿ ವ್ಯತ್ಯಾಸಗಳ ನೆಲೆಯಲ್ಲಿ ಚಿಂತನಶೀಲತೆ ಒಂದೆಡೆ ಕಂಡು ಬಂದರೆ ಮಾರ್ಕ್ಸ್ ಲೋಹಿಯಾ ಅಂಬೇಡ್ಕರ್ ವಿಚಾರಧಾರೆಯ ಸಾಹಿತ್ಯವನ್ನು ಇನ್ನೊಂದೆಡೆ ಕಾಣುತ್ತೇವೆ. ದಲಿತ ಬಂಡಾಯ ಚಳವಳಿಯಲ್ಲಿ ಮಾರ್ಕ್ಸ್, ಲೋಹಿಯಾ ಪ್ರಭಾವಗಳಿದ್ದರೂ ಅಂಬೇಡ್ಕರ್ ವಿಚಾರಧಾರೆಯ ಸಾಹಿತ್ಯವನ್ನು ಇನ್ನೊಂದೆಡೆ ಕಾಣುತ್ತೇವೆ. ದಲಿತ ಬಂಡಾಯ ಚಳವಳಿಯಲ್ಲಿ ಮಾರ್ಕ್ಸ್, ಲೋಹಿಯಾ ಪ್ರಭಾವಗಳಿದ್ದರೂ ಅಂಬೇಡ್ಕರ್ ವಿಚಾರಧಾರೆ ಬೀರಿದ ಪ್ರಭಾವ ತುಂಬ ಮಹತ್ವದ್ದು. ಹೀಗೆ ಬೇರೆ ಬೇರೆ ನೆಲೆಯಲ್ಲಿ ಡಾ॥ ಪೋತೆಯವರ ಅವೈದಿಕ ಚಿಂತನೆ ಈ ಬಗೆಯ ಪರಂಪರೆಯನ್ನು' ನೆನಪಿಸುವ ಕೃತಿಯಾಗಿದೆ. ಪೋತೆಯವರು ಸಂಬಂಧಿಸಿದ ಸಂಗತಿಗಳ ಅಂಕಿ ಅಂಶಗಳನ್ನು ನಿಖರವಾಗಿಕೊಟ್ಟು ಪುನರಾವರ್ತನೆಯನ್ನು ಒಪ್ಪಿಸಿದ್ದರೆ ಕೃತಿಗೆ ಮತ್ತಷ್ಟು ಗಾಂಭಿರ್ಯ ಬರುತ್ತಿತ್ತು. ಹೈದ್ರಾಬಾದ್ ಕರ್ನಾಟಕದ ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಶ್ಯಾಮಸುಂದರ್‌ರ ಚಿಂತನೆಯನ್ನು ವಿಶ್ಲೇಷಿಸಬೇಕಾಗಿತ್ತು. ಹಾಗೆಯೇ ಅಂಬೇಡ್ಕರೋತ್ತರದ ದಲಿತ ಲೋಕದ ಬಗೆಗೆ ಬರೆಯುವಾಗ ಭಾರತೀಯ ಸಾಹಿತ್ಯದ ಮೇಲೆ ಅಂಬೇಡ್ಕರ್ ವಿಚಾರಧಾರೆ ಉಂಟುಮಾಡಿದ ಪ್ರಭಾವಗಳನ್ನು ಹೇಳಬೇಕಿತ್ತು. ಇವೆಲ್ಲವನ್ನು ಸರಿಪಡಿಸಿದ್ದರೆ. ದಲಿತ ವೈಚಾರಿಕ ಕ್ಷೇತ್ರದಲ್ಲಿ ಹೊಸ ವಿಚಾರಗಳ ಚರ್ಚೆಗೆ ಅವಕಾಶವಾಗುತ್ತಿತ್ತು. ಆದರೂ ಗುಣಾತ್ಮಕ ಅಂಶಗಳೇ ಹೆಚ್ಚಿರುವ ಅವೈದಿಕ ಚಿಂತನೆ ವೈಚಾರಿಕ ಕ್ಷೇತ್ರಕ್ಕೆ ಹೊಸ ಸೇರ್ಪಡೆ ಅನ್ನಲು ಅಡಿಯಿಲ್ಲ. □

ಸಂಪರ್ಕ ಭಾಷೆ: ಸಂಸ್ಕೃತ ಲಾಬಿ

ಟಿ.ಕೆ. ತ್ಯಾಗರಾಜ್

ಸಂಸ್ಕೃತವು ರಾಷ್ಟ್ರೀಯ ಸಮಗ್ರತೆಗೆ ಅತ್ಯುತ್ತಮವಾಗಿ ಹೊಂದಿಕೆಯಾಗುವುದರಿಂದ ದೇಶದ ಸಂಪರ್ಕ ಭಾಷೆಯಾಗಿ ಅಭಿವೃದ್ಧಿಪಡಿಸಬೇಕೆಂದು ಉಡುಪಿಯ ಪೇಜಾವರ ಮಠದ ವಿಶ್ವೇಶ ತೀರ್ಥ ಸ್ವಾಮಿ ಅಪ್ಪಣೆ ಮಾಡಿದ್ದಾರೆ.

ಉಡುಪಿಯಲ್ಲಿ ನಡೆದ ೫೧ನೇ ಸಂಸ್ಕೃತ ಸಂಭಾಷಣಾ ಶಿಬಿರದ ಸಮಾರೋಪ (೧೧-೧೨-೨೦೦೬)ದಲ್ಲಿ ಅವರು, ಇಂಗ್ಲಿಷನ್ನು ಸಂಪರ್ಕ ಭಾಷೆಯಾಗಿ ಬಳಸುತ್ತಿರುವುದು ಅವಮಾನ ಎನ್ನುವ ಮೂಲಕ ಇಂಗ್ಲಿಷ್ ಬಳಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಷ್ಟಕ್ಕೂ ಸುಮ್ಮನಾಗದೆ, ಭಾರತೀಯ ಭಾಷೆಗಳನ್ನು ಮಾತನಾಡುವ ಜನರನ್ನು ಒಂದೇ ಭಾಷೆಯ ಸೂರಿನಡಿ ಒಗ್ಗೂಡಿಸಲು ಸಂಸ್ಕೃತ ನೆರವಾಗುತ್ತದೆ. ಹಿಂದಿಯನ್ನು ಸಂಪರ್ಕ ಭಾಷೆಯಾಗಿ ಅಭಿವೃದ್ಧಿ ಪಡಿಸುವ ಪ್ರಯತ್ನ ನಡೆದಿದ್ದರೂ ದಕ್ಷಿಣದ ರಾಜ್ಯಗಳಲ್ಲಿ ಅದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ ಈ ಕೊರತೆಯನ್ನೇ ಸಂಸ್ಕೃತ ತುಂಬಬಹುದು ಎಂಬ ಭ್ರಮೆಯನ್ನು ಬಯಲು ಮಾಡಿದ್ದಾರೆ.

ವಿಶ್ವೇಶತೀರ್ಥ ಸ್ವಾಮಿಗಳ ಅಭಿಪ್ರಾಯ ಸ್ವಾತಂತ್ರ್ಯವನ್ನೇ ಗೌರವಿಸುತ್ತಾ, ಒಂದು ನಿರ್ದಿಷ್ಟ ವಲಯದಲ್ಲಿ ಅವರ ಮಾತುಗಳಿಗೆ ಸಿಗಬಹುದಾದ ಮನ್ನಣೆಯ ಅರಿವಿದ್ದೂ ನಾನು ಅರ್ಥ ಮಾಡಿಕೊಂಡಿರುವ ಕೆಲವು ವಿಚಾರಗಳನ್ನೇ ಇಲ್ಲಿ ಮಂಡಿಸುತ್ತಿದ್ದೇನೆ.

ತಮಗೆ ಸಂಬಂಧಿಸದ, ತಮ್ಮ ಅರಿವಿಗೆ ನಿಲುಕದ ಎಷ್ಟೋ ವಿಷಯಗಳಲ್ಲಿ ರಾಜಕಾರಣಿಗಳು ಆ ಕ್ಷೇತ್ರದ ತಜ್ಞರಂತೆ ಅಭಿಪ್ರಾಯ ವ್ಯಕ್ತಪಡಿಸಿ ಹಾಸ್ಯಾಸ್ಪದರಾಗುತ್ತಾ, ಗೊಂದಲಗಳನ್ನೇ ಸೃಷ್ಟಿಸುವುದು ಹೊಸತೇನಲ್ಲ. ಇತ್ತೀಚಿನ ದಿನಗಳಲ್ಲಂತೂ ಇದೊಂದು ಫ್ಯಾಷನ್ ಆಗಿ ಸರ್ಕಾರಿ ಅಧಿಕಾರಿಗಳಿಗೂ ಈ ಕಾಯಿಲೆ ತಗಲಿಕೊಂಡಿದೆ. ಇಂಥ ಸಲಹೆ, ಅಭಿಪ್ರಾಯ, ನಿಲುವುಗಳನ್ನು ವೇದಿಕೆಯ ಮೇಲಿನ ಸಾಂದರ್ಭಿಕ ಸ್ಫೂರ್ತಿಯಿಂದ ಹೊರಗೆಡವುದರಲ್ಲಿ ಕೆಲವು ಮಠಾಧೀಶರೂ ಹಿಂದೆ ಬಿದ್ದಿಲ್ಲ.

ಗುಂಡೂರಾಯರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ ಸಂಸ್ಕೃತ ಸಮಾವೇಶದಲ್ಲಿ ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನಮಾನ ನೀಡುವುದಾಗಿ ಘೋಷಿಸಿದ ಪರಿಣಾಮವಾಗಿಯೇ ಪ್ರತಿಭಟನೆ ಶುರುವಾಗಿ, ವಿ.ಕೃ. ಗೋಕಾಕ್ ನೇತೃತ್ವದಲ್ಲಿ ಆಯೋಗ ರಚನೆಯಾಗಿ ಗೋಕಾಕ್ ಚಳವಳಿ ಎಂಬ ಕನ್ನಡಿಗರ ಸ್ವಾಭಿಮಾನದ ಮಹಾನ್ ಹೋರಾಟವೊಂದು ಇತಿಹಾಸದಲ್ಲಿ ದಾಖಲಾಯಿತು.

ಅದೇನೆ ಇರಲಿ, ಭಾರತ ಅನೇಕ ಭಾಷೆ, ಸಂಸ್ಕೃತಿಗಳ ದೇಶ, ಅಕಾರ, ಬಣ್ಣ, ಆಚಾರ, ಆಹಾರ, ವಿಚಾರ, ಉಡುಗೆ ತೊಡುಗೆಗಳಲ್ಲಿ ಒಂದೊಂದು ರಾಜ್ಯವೂ ವಿಭಿನ್ನ. ಜಮ್ಮು-ಕಾಶ್ಮೀರ ಮತ್ತು ತಮಿಳುನಾಡಿನ ಜನತೆಗೆ ಯಾವ ಸೌಮ್ಯ? ಸಿಕ್ಕಿಮರಿಗೂ ಕನ್ನಡಿಗರಿಗೂ ಅದ್ಯಾವ ಸಂಬಂಧ? ಪಂಜಾಬಿಗಳಿಗೂ ಆಂಧ್ರ ಪ್ರದೇಶದ ತೆಲುಗರಿಗೂ ಅದೇನು ಹೊಂದಿಕೆ? ಹಾಗೆ ನೋಡಿದರೆ ಭಾರತದ ಪ್ರತಿಯೊಂದು ರಾಜ್ಯವೂ ಒಂದು ಪ್ರತ್ಯೇಕ ದೇಶದಂತೆ ಕಾಣುತ್ತದೆ. ಹೀಗಾಗಿಯೇ ಭಾರತ ವೈವಿಧ್ಯತೆಯಲ್ಲಿ ಏಕತೆ ಇರುವ ರಾಷ್ಟ್ರ ಎಂದು ನಂಬಿಸಿಕೊಂಡು ಬರಲಾರದೆ. ಆದರೆ ಈ ಎಲ್ಲ ರಾಜ್ಯಗಳೂ ಒಂದು ಒಕ್ಕೂಟ ವ್ಯವಸ್ಥೆಗೆ ಒಳಪಟ್ಟು ಒಂದೇ ಸಂವಿಧಾನದಡಿ ಕಾರ್ಯಭಾರ ನಡೆಸುತ್ತಿವೆ. ಆದರೆ ಪ್ರತಿಯೊಬ್ಬ ಪ್ರಜೆಗೂ ಭಾರತೀಯ ನಾಗರಿಕತ್ವದ ಜತೆ ಆಯಾ ರಾಜ್ಯ ನಾಗರಿಕತ್ವದ ಉಭಯ ನಾಗರಿಕತ್ವ (DUAL CITIZENSHIP) ವ್ಯವಸ್ಥೆ ಮಾಡದಿರುವುದರಿಂದ ಭಾಷೆ, ಉದ್ಯೋಗ, ವಸತಿ ಸೇರಿದಂತೆ ಸ್ಥಳೀಯರನ್ನೇ ನಿರ್ಲಕ್ಷಿಸುವ ಎಷ್ಟೋ ಸಮಸ್ಯೆಗಳು ಹುಟ್ಟಿಕೊಂಡಿವೆ.

ನಮಗೆ ಬೆಂಗಳೂರಿನಲ್ಲಿ ತಮಿಳರು, ತೆಲುಗರು, ಮಾರವಾಡಿಗಳ ಅಬ್ಬರ, ಕೊಡಗಿನಲ್ಲಿ ಮಲೆಯಾಳಿಗಳ ಆರ್ಭಟ ಕಾಣುತ್ತಿದ್ದರೆ, ಮಹಾರಾಷ್ಟ್ರದವರಿಗೆ ಕನ್ನಡಿಗರ ಕಗ್ಗಂಟು ಕಾಣುತ್ತದೆ, ಬಿಹಾರಿಗಳ ಕಿರಿಕಿರಿ ಕಾಣುತ್ತದೆ. ಆದರೆ ಒಕ್ಕೂಟ ವ್ಯವಸ್ಥೆಯಲ್ಲಿ ಸಹಬಾಳ್ವೆ, ಹೊಂದಾಣಿಕೆ ಅಗತ್ಯ. ಸಂವಿಧಾನಕ್ಕೆ ಬದ್ಧರಾಗಿರಬೇಕಾದದ್ದು ಎಲ್ಲರ, ಎಲ್ಲ ರಾಜ್ಯಗಳ ಕರ್ತವ್ಯ. ನದಿ ನೀರಿನ ವಿಚಾರದಲ್ಲೂ ಅಷ್ಟೇ. ಅಗತ್ಯ, ಅನಿವಾರ್ಯತೆಗೆ ತಕ್ಕಂತೆ ಹಂಚಿಕೊಂಡು ಬದುಕಬೇಕು.

ಇದೆಲ್ಲ ಸಂವಿಧಾನದಡಿಯಲ್ಲಿ ನಾವೇ ಮಾಡಿಕೊಂಡಿರುವ ಒಪ್ಪಂದವಾದರೂ ಭಾವನಾತ್ಮಕವಾಗಿ ಎಲ್ಲರೂ ಒಂದಾದಂತೆ ಈಗಲೂ ಅನ್ನಿಸುತ್ತಿಲ್ಲ. ಬಹುಪಾಲು ಹಿಂದಿ ರಾಜ್ಯಗಳ ರಾಜಕಾರಣಿಗಳೇ ಕೇಂದ್ರ ಸರ್ಕಾರದ ಅಧಿಕಾರ (ಕೇವಲ ರಾಷ್ಟ್ರಪತಿ, ಪ್ರಧಾನಿ ಹುದ್ದೆಗಳು ಎಂಬರ್ಥದಲ್ಲಿ ಅಲ್ಲ) ಸೂತ್ರ ಹಿಡಿದು ಇತರ ರಾಜ್ಯಗಳನ್ನೇ ನಿರ್ಲಕ್ಷಿಸುತ್ತ ಬಂದ ಕಾರಣದಿಂದಾಗಿಯೇ ಪ್ರಾದೇಶಿಕ ಪಕ್ಷಗಳು ಹುಟ್ಟಿಕೊಳ್ಳುವುದಕ್ಕೆ ಅಥವಾ ಹೆಚ್ಚಾಗುವುದಕ್ಕೆ ಕಾರಣವಾಯಿತು. ಆಂಧ್ರ ಪ್ರದೇಶದಲ್ಲಿ ತೆಲುಗು ದೇಶಂ, ತಮಿಳುನಾಡಿನಲ್ಲಿ ಡಿ.ಎಂ.ಕೆ., ಎ.ಐ.ಎ. ಡಿ.ಎಂ.ಕೆ, ಮಹಾರಾಷ್ಟ್ರದಲ್ಲಿ ಶಿವ ಸೇನೆ, ಅಸ್ಸಾಂನಲ್ಲಿ ಎ.ಜಿ.ಪಿ ಹೀಗೆ ಎಷ್ಟೊಂದು ಪ್ರಾದೇಶಿಕ ಪಕ್ಷಗಳು. ಎಚ್.ಡಿ. ದೇವೇಗೌಡರ ಜಾತ್ಯತೀತ ಜನತಾದಳ, ಲಾಲುಪ್ರಸಾದರ ಆರ್‌ಜೆಡಿ, ಮುಲಾಯಂ ಸಿಂಗ್‌ರ ಸಮಾಜವಾದಿ ಪಕ್ಷ ರಾಷ್ಟ್ರೀಯ ಪಕ್ಷಗಳೆಂದು ಕರೆದುಕೊಂಡಿದ್ದರೂ ಕೇವಲ ಪ್ರಾದೇಶಿಕ ಪಕ್ಷಗಳಾಗಿ ಉಳಿದಿವೆ. ಇದರರ್ಥ ರಾಷ್ಟ್ರೀಯ ಪಕ್ಷಗಳು ಎಂದು ಬಿಂಬಿಸಿಕೊಂಡಿರುವ ಪಕ್ಷಗಳಿಗೆ ರಾಷ್ಟ್ರೀಯ ಮನೋಭಾವವೇ ಇಲ್ಲದೆ ಕೆಲವೇ ರಾಜ್ಯಗಳತ್ತ ಗಮನ ಹರಿಸಿರುವ ಕಾರಣದಿಂದ ಪ್ರಾದೇಶಿಕ ಕಾರಣಗಳಿಗಾಗಿ ಹೊಸ ಪಕ್ಷಗಳು ಹುಟ್ಟಿಕೊಂಡವು.

ವೈವಿಧ್ಯಮಯ ಕಾರಣಗಳಿಗಾಗಿ ದೇಶವನ್ನೇ ಅರ್ಥಪೂರ್ಣವಾಗಿ, ಭಾವನಾತ್ಮಕವಾಗಿ ಒಗ್ಗೂಡಿಸಲು ಸಾಧ್ಯವಾಗಿಲ್ಲ ನಿಜ. ಆದರೆ ಭಾಷೆ ಹಾಗಲ್ಲ. ಒಂದು ಪ್ರದೇಶದ ಜನರನ್ನೇ ಸಹಜವಾಗಿ ಒಗ್ಗೂಡಿಸುವ ಮಾಂತ್ರಿಕ ಶಕ್ತಿ ಭಾಷೆ. ಒಂದು ನೆಲದ ಸ್ವಾಭಿಮಾನದ ಸಂಕೇತ ಭಾಷೆ, ಅಂದರೆ ಇಡೀ ಭಾರತಕ್ಕೆ ಒಂದೇ ಭಾಷೆ ಎಂಬ ಸಾಮರಸ್ಯದ ದನಿ ಸಹಜವಾಗಿಯೇ ಹೊಮ್ಮಿದ್ದರೆ ಈಗಿರುವ ಸಮಸ್ಯೆ ಇರುತ್ತಿರಲಿಲ್ಲವೇನೋ.

ಉತ್ತರದ ನಾಲ್ಕೈದು ಹಿಂದಿ ಭಾಷಿಕರ ರಾಜ್ಯಗಳನ್ನೇ ಹೊರತುಪಡಿಸಿದರೆ ಬೇರೆಲ್ಲ ರಾಜ್ಯಗಳಲ್ಲಿ ಆಯಾ ನೆಲದ ಜನ ಭಾಷೆ ಇದೆ. ಕನ್ನಡ, ತಮಿಳು, ತೆಲುಗು, ಮಲೆಯಾಳ, ಮರಾಠಿ, ಬಂಗಾಳಿ,

ಒರಿಯಾ, ಅಸ್ಸಾಮಿ, ಪಂಜಾಬಿ, ಗುಜರಾತಿ ಮಣಿಪುರಿ, ರಾಜ್ಯಸ್ಥಾನಿ, ಕೊಂಕಣಿ... ಹೀಗೆ ಇನ್ನು ಎಷ್ಟೊಂದು ವೈವಿಧ್ಯಮಯ ಭಾಷೆಗಳಿವೆ. ತುಳು, ಅರೆಭಾಷೆ, ಬ್ಯಾರಿ ಸೇರಿದಂತೆ ಇತರ ರಾಜ್ಯಗಳಲ್ಲೂ ಅದೆಷ್ಟೋ ಬುಡಕಟ್ಟು ಭಾಷೆಗಳು ಇನ್ನು ಜನಭಾಷೆಯಾಗಿ ಉಳಿದಿವೆ. ವೈವಿಧ್ಯಮಯ ಭಾಷೆಗಳಿರುವ ಭಾರತದಂಥ ಒಕ್ಕೂಟದಲ್ಲಿ, ಇಡೀ ವಿಶ್ವವೇ ಒಂದು ಗ್ರಾಮವಾಗುತ್ತಿರುವ ಸಂದರ್ಭದಲ್ಲಿ ಒಂದು ಸಂಪರ್ಕ ಭಾಷೆ ಅಗತ್ಯ ಮತ್ತು ಅನಿವಾರ್ಯ. ಆದರೆ ಅಂಥ ಸಂಪರ್ಕ ಭಾಷೆಯಾಗುವ ಅರ್ಹತೆ ಮತ್ತು ಅನುಕೂಲಕರ ಕಾರಣಗಳು ಭಾರತದ ಯಾವ ಭಾಷೆಗಿದೆ?

ದೇಶದ ರಾಜಕೀಯ ಹಿಡಿತವನ್ನೇ ಉತ್ತರ ಭಾರತದ ಹಿಂದಿ ಭಾಷಿಕ ರಾಜಕಾರಣಿಗಳೂ ತಮ್ಮ ಕೈಗೆ ತೆಗೆದುಕೊಂಡಾಗಲೇ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ಸರ್ವಾಧಿಕಾರಿ ಧೋರಣೆಯಿಂದ ಇತರ ಇಪ್ಪತ್ತಕ್ಕೂ ಹೆಚ್ಚು ರಾಜ್ಯಗಳ ಅವು ಭಾಷಿಕರ ಮೇಲೆ ಹಿಂದಿಯನ್ನೇ ಹೇರಲಾಗಿದೆ. ಈ ಕಾರಣದಿಂದಲೇ ದೇಶಾದ್ಯಂತ ಹಿಂದಿ ಪ್ರಚಾರ ಸಭೆಗಳ ಚಟುವಟಿಕೆಗಳೂ ತೀವ್ರಗೊಂಡವು. ಅನ್ಯ ಭಾಷೆಯ ರಾಜ್ಯಗಳ ಪಠ್ಯಕ್ರಮದಲ್ಲೂ ಹಿಂದಿ ಭಾಷೆ ಸೇರ್ಪಡೆಯಾಯಿತು. ಇದರಿಂದಾಗಿಯೇ ಸುಮಾರು ೩೫ ವರ್ಷಗಳ ಹಿಂದೆಯೇ ಹಿಂದಿ ವಿರೋಧಿ ಆಂದೋಲನ ಶುರುವಾಗಿ, "KISS KISS ENGLISH, KILL KILL HINDI" ಇಂಗ್ಲಿಷ್ ಒಲವು ವ್ಯಕ್ತವಾಗಿತ್ತು. ಆಗ ಪ್ರಾಥಮಿಕ ಶಾಲೆ ವಿದ್ಯಾರ್ಥಿಯಾಗಿದ್ದ ನಾನು ಇನ್ನು ಹಿಂದಿಯ ಕಾಟವೇ ಇಲ್ಲ ಎಂಬ ನಂಬಿಕೆಯಿಂದ ಪಠ್ಯ ಪುಸ್ತಕ ಹರಿದು ಹಾಕಿ ಮಾರನೇ ದಿನ ಹಿಂದಿ ಮೇಷ್ಟ್ರ ಕೋಲಿನ ರುಚಿ ಅನುಭವಿಸಿದ್ದೆ.

ಆನಂತರದ ದಿನಗಳಲ್ಲೂ ಹೇರಿಕೆಯ ಕಾರಣದಿಂದ ಎಲ್ಲ ರಾಜ್ಯಗಳಲ್ಲಿ "ಹಿಂದಿ ಶಾಸ್ತ್ರ" ನಡೆಯುತ್ತಿದೆಯೇ ಹೊರತು ಯಾರೂ ಕೂಡಾ ಅದನ್ನೊಂದು ಸಂಪರ್ಕ ಭಾಷೆಯಾಗಿ ಸ್ವೀಕರಿಸಿಲ್ಲ. ಹಿಂದಿ ಸಿನಿಮಾ ನೋಡುವಷ್ಟರ ಮಟ್ಟಿಗೆ ಮಾತ್ರ ಸ್ವೀಕೃತವಾಗಿದೆ. ಅದರಲ್ಲೂ ತಮಿಳು ಸ್ವಾಭಿಮಾನಿಗಳಂತೂ ಹಿಂದಿಯನ್ನೇ ನೀರಾಸವಾಗಿ ತಿರಸ್ಕರಿಸಿ ಮಾತ್ರ ಭಾಷೆಯ ಜತೆ ಇಂಗ್ಲಿಷನ್ನೇ ಅಪ್ಪಿಕೊಂಡಿದ್ದಾರೆ.

ಸಂಪರ್ಕ ಭಾಷೆ ಬೇಕೆಂಬ ನೆಪದಲ್ಲಿ, ರಾಷ್ಟ್ರೀಯತೆಯನ್ನೇ ಜಾಗೃತಗೊಳಿಸುವ ಬುರುಡೆ ಬಿಡುತ್ತಾ ಹಿಂದಿ ಹೇರಿಕೆಯ ಹಿಂದಿನ ಸಂಚನ್ನೇ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

ಕನ್ನಡ, ತಮಿಳು, ಮಲೆಯಾಳ, ತೆಲುಗು, ಮರಾಠಿ.... ಹೀಗೆ ಯಾವುದೇ ಒಂದು ನೆಲಕ್ಕೆ ಸೀಮಿತಗೊಂಡ ಜನ ಭಾಷೆಯನ್ನೇ ಭಾರತದಂಥ ವಿಶಾಲ ರಾಷ್ಟ್ರದಲ್ಲಿ ಸಂಪರ್ಕ ಭಾಷೆಯಾಗಿ ಮಾಡಲಾಗುವುದಿಲ್ಲ ನಿಜ. ಆದರೆ ಕೇವಲ ನಾಲ್ಕೈದು ರಾಜ್ಯಗಳಲ್ಲಿ ಇದೆ ಎಂಬ ಕಾರಣಕ್ಕೆ ಹಿಂದಿಯನ್ನೇ ಇತರ ಭಾಷಿಕರ ಮೇಲೆ ಹೇರುವ ಅನಿವಾರ್ಯತೆ ಏನಿತ್ತು?

ಈ ಹಿನ್ನೆಲೆಯಲ್ಲೇ ನಾವು ಉರ್ದು ಭಾಷೆಯನ್ನೇ ನೋಡಬೇಕು. ಹಿಂದಿ ಭಾಷೆ, ಭಾರತದ ಕೇವಲ ನಾಲ್ಕೈದು ರಾಜ್ಯಗಳ ಪ್ರಾದೇಶಿಕ ಅಥವಾ ಆಡು ಭಾಷೆಯಾಗಿದ್ದರೆ, ಉರ್ದು ಭಾಷೆ ನಾಲ್ಕೈದು ರಾಜ್ಯಗಳಲ್ಲಿ ಮಾತ್ರ ಅಷ್ಟಾಗಿ ಬಳಕೆಯಲ್ಲಿಲ್ಲ. ಅಂದರೆ ಉಳಿದ ಇಪ್ಪತ್ತಕ್ಕೂ ಹೆಚ್ಚಿನ ರಾಜ್ಯಗಳಲ್ಲಿ ಒಟ್ಟಾರೆ ಶೇಕಡಾ ೧೫ ಕ್ಕಿಂತ ಹೆಚ್ಚು ಮಂದಿ ಉರ್ದು ಭಾಷೆಯಲ್ಲಿ ಮಾತನಾಡುತ್ತಾರೆ.

ಹೇರಿಕೆಯ ಕಾರಣದಿಂದ ಎಲ್ಲ ರಾಜ್ಯಗಳಲ್ಲಿ "ಹಿಂದಿ ಶಾಸ್ತ್ರ" ನಡೆಯುತ್ತಿದೆಯೇ ಹೊರತು ಯಾರೂ ಕೂಡಾ ಅದನ್ನೊಂದು ಸಂಪರ್ಕ ಭಾಷೆಯಾಗಿ ಸ್ವೀಕರಿಸಿಲ್ಲ. ಹಿಂದಿ ಸಿನಿಮಾ ನೋಡುವಷ್ಟರ ಮಟ್ಟಿಗೆ ಮಾತ್ರ ಸ್ವೀಕೃತವಾಗಿದೆ. ಅದರಲ್ಲೂ ತಮಿಳು ಸ್ವಾಭಿಮಾನಿಗಳಂತೂ ಹಿಂದಿಯನ್ನೇ ನೀರಾಸವಾಗಿ ತಿರಸ್ಕರಿಸಿ ಮಾತ್ರ ಭಾಷೆಯ ಜತೆ ಇಂಗ್ಲಿಷನ್ನೇ ಅಪ್ಪಿಕೊಂಡಿದ್ದಾರೆ. ಸಂಪರ್ಕ ಭಾಷೆ ಬೇಕೆಂಬ ನೆಪದಲ್ಲಿ, ರಾಷ್ಟ್ರೀಯತೆಯನ್ನೇ ಜಾಗೃತಗೊಳಿಸುವ ಬುರುಡೆ ಬಿಡುತ್ತಾ ಹಿಂದಿ ಹೇರಿಕೆಯ ಹಿಂದಿನ ಸಂಚನ್ನೇ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಕನ್ನಡ, ತಮಿಳು, ಮಲೆಯಾಳ, ತೆಲುಗು, ಮರಾಠಿ.... ಹೀಗೆ ಯಾವುದೇ ಒಂದು ನೆಲಕ್ಕೆ ಸೀಮಿತಗೊಂಡ ಜನ ಭಾಷೆಯನ್ನೇ ಭಾರತದಂಥ ವಿಶಾಲ ರಾಷ್ಟ್ರದಲ್ಲಿ ಸಂಪರ್ಕ ಭಾಷೆಯಾಗಿ ಮಾಡಲಾಗುವುದಿಲ್ಲ ನಿಜ. ಆದರೆ ಕೇವಲ ನಾಲ್ಕೈದು ರಾಜ್ಯಗಳಲ್ಲಿ ಇದೆ ಎಂಬ ಕಾರಣಕ್ಕೆ ಹಿಂದಿಯನ್ನೇ ಇತರ ಭಾಷಿಕರ ಮೇಲೆ ಹೇರುವ ಅನಿವಾರ್ಯತೆ ಏನಿತ್ತು?

ವ್ಯವಹರಿಸುತ್ತಾರೆ.

ಭಾಷೆ ಹುಟ್ಟಿರುವುದು, ಉಳಿದಿರುವುದು, ಮುಂದುವರಿಯುವುದು ಕೇವಲ ಸಂವಹನಕ್ಕಾಗಿ ಅನ್ನುವುದು ಮೂಲಭೂತ ಸತ್ಯ. ಆದರೆ ಭಾಷೆಯ ಅಳಿವು ಉಳಿವಿಗೆ ಸಂಬಂಧಿಸಿದಂತೆ ಭಾವನಾತ್ಮಕತೆ ಮತ್ತು ಸ್ವಾಭಿಮಾನ ತಳಕು ಹಾಕಿಕೊಂಡಿದೆ. ಅಂದರೆ ದೇಶದ ವಿವಿಧ ರಾಜ್ಯಗಳ ನಡುವೆ ಸಂಪರ್ಕ ಭಾಷೆಯಾಗಿ ಜನಭಾಷೆ ಅಥವಾ ಆಡುಭಾಷೆಯನ್ನೇ ಅಭಿವೃದ್ಧಿಪಡಿಸಿದರೂ ಅದು ಇನ್ನೊಂದು ಭಾಷೆಯ ಮೇಲೆ ದಾಳಿ ಮಾಡುವಂತಿರಬಾರದು. ರಾಷ್ಟ್ರೀಯ ಭಾವನೆಯನ್ನು ನಿಜಕ್ಕೂ ಉದ್ದೀಪನಗೊಳಿಸುವಂತಿರಬೇಕು. ಈ ಸಂಪರ್ಕ ಭಾಷೆಯ ಸಖ್ಯದಲ್ಲಿ ಪ್ರಾದೇಶಿಕ ಭಾಷೆಗಳೂ ಸಮೃದ್ಧವಾಗಿ ಬೆಳೆಯುವುದಕ್ಕೆ ಅವಕಾಶ ಇರಬೇಕು.

ಈ ಎಲ್ಲ ದೃಷ್ಟಿಯಿಂದ ಉರ್ದುವನ್ನೇ ದೇಶದ ಸಂಪರ್ಕ ಭಾಷೆಯಾಗಿ ಅಭಿವೃದ್ಧಿ ಪಡಿಸುವುದು ಹಿಂದಿ ಹೇರಿಕೆಗಿಂತ ಸುಲಭ ಇತ್ತು. ಯಾಕೆಂದರೆ ಭಾರತದ ಬಹುತೇಕ ರಾಜ್ಯಗಳಲ್ಲಿ ಉರ್ದು ಭಾಷಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿರುವಾಗ ಶಾಲೆಗಳಲ್ಲಿ ಸಮರ್ಪಕವಾಗಿ ಉರ್ದು ಕಲಿಸುವ ಅಧ್ಯಾಪಕರ ಕೊರತೆಯು ಇರಲಿಲ್ಲ ಹಾಗೇ ಉರ್ದು ಭಾಷೆಯಾಡುವ ಜನರ ಅಕ್ಕಪಕ್ಕದ ಮನೆಯವರೂ ನೆಲದ ಭಾಷೆಯ ಜತೆಗೆ ಉರ್ದುವನ್ನು ಸುಲಭವಾಗಿ ಕಲಿತು ವ್ಯವಹರಿಸುತ್ತಿರುವುದನ್ನೇ ನಾವು ನೋಡುತ್ತಲೇ ಇದ್ದೇವೆ. ಆದರೆ ಉರ್ದುವಿನಷ್ಟು ಸುಲಭವಾಗಿ ಇನ್ನೊಂದು ಭಾಷೆ ಅಥವಾ ಹಿಂದಿಯನ್ನೇ ಕಲಿತು ವ್ಯವಹರಿಸುತ್ತಿರುವ ಉದಾಹರಣೆ ಕಡಿಮೆಯೇ. ಹಿಂದಿಯನ್ನೇ ರಾಷ್ಟ್ರಭಾಷೆಯಾಗಿ ಹೇರಿದ ಸಂದರ್ಭದಲ್ಲಿ ಇತರ ಭಾಷಿಕರ ರಾಜ್ಯಗಳಲ್ಲಿ ಅಧ್ಯಾಪಕರಿಗೂ ಹಿಂದಿ ತರಬೇತಿ ನೀಡಿ ಆನಂತರ ಶಾಲೆಗಳಲ್ಲಿ ಬೋಧಿಸುವ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ಉರ್ದುವಿಗೆ ಈ ಕೊರತೆ ಇರಲಿಲ್ಲ.

ಭಾರತೀಯ ಭಾಷೆಯಾದ ಉರ್ದುವನ್ನೇ ಒಂದು ಧರ್ಮದ ಜತೆ ತಳಕು ಹಾಕುವ ವಿಕೃತ ಜೀವಿಗಳಿಂದ ಉರ್ದು ಭಾಷೆಗೆ ನಿರಂತರವಾಗಿ ಅನ್ಯಾಯ ಮಾಡಲಾಗುತ್ತಿದೆ.

ಉರ್ದು ಭಾಷೆಯ ಹುಟ್ಟು, ಇತಿಹಾಸ, ಸಾಹಿತ್ಯಿಕ–ಸಾಂಸ್ಕೃತಿಕ ಮೌಲ್ಯ, ಕಾವ್ಯದ ಗಮ್ಮತ್ತು, ಭಾಷೆಯ ಮಾಂತ್ರಿಕ ಬನಿ ಕುರಿತು ವಿವರಿಸುವುದು ತನ್ನ ಉದ್ದೇಶವಲ್ಲ ನಮ್ಮ ನಡುವೆಯೇ ಇರುವ ಉರ್ದುವನ್ನೇ ಪರಕೀಯವಾಗಿ ನೋಡುವ ಹುನ್ನಾರ ಮತ್ತು ಸುಲಭ ಬಳಕೆ ಸಾಧ್ಯತೆಯ ಸರಳ ಸತ್ಯಗಳನ್ನೇ ಮಾತ್ರ ಓದುಗರ ಮುಂದಿಟ್ಟಿದ್ದೇನೆ.

ಪಶ್ಚಿಮ ಬಂಗಾಳದ ನೆಲದ ಭಾಷೆ ಬಂಗಾಳಿ. ಹಾಗೇ ಬಾಂಗ್ಲಾ ದೇಶದ ರಾಷ್ಟ್ರಭಾಷೆ ಬಂಗಾಳಿ. ಕೇರಳದ ಮುಸ್ಲಿಮರ (ಮಾಪಿಳ್ಳೆಗಳ) ಮಾತೃಭಾಷೆ ಮಲೆಯಾಳಿ, ಇರಾನ್ ಮುಸ್ಲಿಮರ ಮಾತೃಭಾಷೆ ಅರಾಬಿಕ್. ದಕ್ಷಿಣ ಕನ್ನಡ ಮುಸ್ಲಿಮರ ಮಾತೃಭಾಷೆ ಬ್ಯಾರಿ. ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಉರ್ದು ಶಾಯರಿಗಳನ್ನೇ ಅದರ ಜೀವ ಸತ್ವಕ್ಕೆ ಧಕ್ಕೆಯಾಗದ ರೀತಿಯಲ್ಲಿ ಉಣಬಡಿಸಬಲ್ಲರು. ಮಾಜಿ ಮುಖ್ಯಮಂತ್ರಿ ಧರಂಸಿಂಗ್ ಕೂಡಾ ಉರ್ದುವಿನಲ್ಲಿ ಗಂಟೆಗಟ್ಟಲೆ ಅದ್ಭುತ ಭಾಷಣ ಮಾಡಬಲ್ಲರು. ಅಷ್ಟೇ ಅಲ್ಲ ನನ್ನನ್ನು ಹೆತ್ತ ಅಮ್ಮ (ಮಾತೃಭಾಷೆ ತೆಲುಗು) ಕೂಡಾ ಉರ್ದುವಿನಲ್ಲಿ ನಿರರ್ಗಳವಾಗಿ ಮಾತನಾಡಬಲ್ಲರು. ಉರ್ದು ಜನ ಭಾಷೆಯಾಗಿರುವ ಕಾರಣದಿಂದಲೇ ಇದು ಸಾಧ್ಯವಾಗಿದೆ. ಅಂದರೆ ಉರ್ದು ಕೇವಲ ಮುಸ್ಲಿಮರ ಭಾಷೆಯಲ್ಲ, ಒಂದು ಪ್ರದೇಶಕ್ಕೆ ಸೀಮಿತಗೊಂಡ ಭಾಷೆಯಲ್ಲ. ಅದು ಸಹಜ ಭಾರತೀಯ ಭಾಷೆ. ೫೦ ವರ್ಷಗಳ ಹಿಂದೆಯೇ ಹಿಂದಿ ಬದಲು ಇಂಥಾ ಉರ್ದು ಪರ ತೀರ್ಮಾನ ಕೈಗೊಂಡಿದ್ದಿದ್ದರೆ ಅದು ಈಗ ಖಂಡಿತ ಸಂಪರ್ಕ ಭಾಷೆಯಾಗಿ ಬೆಳೆದಿರುತ್ತಿತ್ತು. ಆದರೆ ವೈದಿಕ ಮನಸ್ಸು ಆಗ ಉರ್ದು ಪರ ನಿಲ್ಲದೆ ತಾತ್ಕಾಲಿಕವಾಗಿ ಹಿಂದಿಯನ್ನೇ ಬೆಂಬಲಿಸಿ ಈಗ ಸಂಸ್ಕೃತದ ಪರ ದನಿ ಎತ್ತುತ್ತಿದೆ. ಅಂದರೆ ಹಿಂದಿ ಕೂಡಾ ವೈದಿಕ ಮನಸ್ಸಿಗೆ ಪಥ್ಯವಾಗುವುದಿಲ್ಲ.

ಭಾರತದಲ್ಲಿ ಸಂಸ್ಕೃತ ಮನೆ ಭಾಷೆಯೂ ಅಲ್ಲ, ಜನ ಭಾಷೆಯೂ ಅಲ್ಲ, ಪ್ರಾದೇಶಿಕ ಭಾಷೆಯೂ ಅಲ್ಲ, ಅಥವಾ ಒಂದು ಜಾತಿ ಅಥವಾ ಧರ್ಮದ ಭಾಷೆಯಾಗಿಯೂ ಅದು ಉಳಿದಿಲ್ಲ. ಇಡೀ ದೇಶದಲ್ಲಿ ಹುಡುಕಿದರೆ ಸಂಸ್ಕೃತದಲ್ಲೇ ಮಾತನಾಡುವವರ ಮನೆಗಳು ಬೆರಳೆಣಿಕೆಯಷ್ಟು ಸಿಗಬಹುದು. ಸಂಸ್ಕೃತ ಕಲಿತವರು ಕೂಡಾ ಮನೆಯಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯನ್ನೇ ಬಳಸುತ್ತಿದ್ದಾರೆ. ಇಂಥಾ 0.00001 ರಷ್ಟು ವ್ಯವಹಾರದ ಭಾಷೆಯಾಗಿಯೂ ಉಳಿದಿಲ್ಲದ ಸಂಸ್ಕೃತವನ್ನೇ ಸಂಪರ್ಕ ಭಾಷೆಯಾಗಿಸಲು ಹೆಣಗಾಡುತ್ತಿರುವವರ

ಉದ್ದೇಶವೇನು? ವೈದಿಕರಲ್ಲೂ ತುಂಬ ಕಡಿಮೆ ಜನರ ಹುನ್ನಾರದ ಫಲವಾದಿ ಸಂಸ್ಕೃತ ಸರ್ಕಾರಿ ಮಾಧ್ಯಮಗಳನ್ನು ಹಿಂಬಾಗಿಲಿನಿಂದ ಪ್ರವೇಶಿಸಿ ಗಿಲೀಟ್ ಮಾಡುತ್ತಿದೆ. ಏಕರೂಪ ಕಾಯ್ದೆಯ ಹೆಸರಿನಲ್ಲಿ ಹಿಂದೂ ಕಾಯ್ದೆಯನ್ನೇ ಇತರ ಧರ್ಮೀಯರ ಮೇಲೂ ಹೇರುವ ಸಂಚು ರೂಪಿಸುತ್ತಿರುವವರೇ 'ಸಂಸ್ಕೃತ ರಾಷ್ಟ್ರಭಾಷೆ ಆಗಬೇಕು ಎನ್ನುತ್ತಿದ್ದಾರೆ.

ಈ ಹಿನ್ನೆಲೆಯಲ್ಲೇ ಸಂಸ್ಕೃತ ಪರ ಪ್ರಚಾರಕರು ಅದನ್ನೇ "ದೇವ ಭಾಷೆ" ಎಂದೇ ಹೇಳಿಕೊಂಡು ಬರುತ್ತಾ ಅದಕ್ಕೊಂದು ಪಾವಿತ್ರ್ಯದ ಸ್ಪರ್ಶ ಕೊಡುವ ದುಷ್ಪ ಪ್ರಯತ್ನ ನಡೆಸಿದ್ದಾರೆ. ಇಂಥಾ ಆಡು ಭಾಷೆಯಲ್ಲದ, ಪ್ರಾದೇಶಿಕ ಭಾಷೆಯಲ್ಲದ "ದೇವ ಭಾಷೆ"ಯನ್ನೇ ಜನ ಭಾಷೆ ಅನಿಸುವುದು ಹೇಗೆ ಸಾಧ್ಯ? ಬ್ರಾಹ್ಮಣ್ಯವನ್ನೇ ಅಪ್ಪಿಕೊಂಡಿರುವ ಅದನ್ನೇ ಸಂಪರ್ಕ ಭಾಷೆಯಾಗಿಸುವುದು ಎಷ್ಟು ಸರಿ?

ಉರ್ದು ಸೇರಿದಂತೆ ವಿವಿಧ ಪ್ರಾದೇಶಿಕ ಭಾಷೆಗಳಲ್ಲೇ ಭಿಕ್ಷೆ ಕೇಳುವ ಜನರನ್ನೇ ನೀವು ಕಂಡಿದ್ದೀರಿ. ಉರ್ದು ಮಾತನಾಡುವ ರಸ್ತೆ ಬದಿ ವ್ಯಾಪಾರಿಗಳು, ಅಧಿಕಾರಿಗಳು, ಉದ್ಯಮಿಗಳನ್ನು ಕಂಡಿದ್ದೀರಿ. ಆದರೆ ಸಂಸ್ಕೃತದಲ್ಲಿ ಭಿಕ್ಷೆ ಕೇಳುವ, ವ್ಯಾಪಾರ ಮಾಡುವ (ದೇವಾಲಯಗಳಲ್ಲಿ ಸಂಸ್ಕೃತ ಶ್ಲೋಕನಗಳನ್ನೇ ಪಠಿಸುವ ಭಿಕ್ಷೆ ಮತ್ತು ವ್ಯಾಪಾರ ಬಿಟ್ಟು) ಒಬ್ಬರನ್ನಾದರೂ ಯಾರಾದರೂ ಈವರೆಗೆ ನೋಡಿದ್ದಾರೆಯೆ? ಖಂಡಿತ ಇಲ್ಲ. ಯಾಕೆಂದರೆ ಸಂಸ್ಕೃತ ಜನ ಭಾಷೆಯಲ್ಲ, ಅದು "ದೇವ ಭಾಷೆ"!

ಇಂಥ ಸಂಸ್ಕೃತ ಭಾಷೆಗಿರುವ ಅಸಹನೆ ಬಗ್ಗೆ ಒಂದು ಸಣ್ಣ ಉದಾಹರಣೆ ನೋಡಿ ಮಹಾತ್ಮಗಾಂಧಿ ಆರನೇ ತರಗತಿ ವಿದ್ಯಾರ್ಥಿಯಾಗಿದ್ದಾಗ ನಡೆದ ಘಟನೆ ಇದು. ಅವರು ಓದುತ್ತಿದ್ದ ಶಾಲೆಯಲ್ಲಿ ಪಾರಸೀ ಮತ್ತು ಸಂಸ್ಕೃತ ಗುರುಗಳ ನಡುವೆ ಪೈಪೋಟಿ ಇದ್ದಂತಿತ್ತು. ಪಾರಸೀ ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಸ್ವಲ್ಪ ಸಲಿಗೆ ಕೊಟ್ಟಿದ್ದರು. ಗಾಂಧೀಜಿ ಪ್ರಕಾರ ಪಾರಸೀ ಸುಲಭ ಭಾಷೆಯಾಗಿತ್ತು. ಗಾಂಧೀಜಿ ಮಾತಿನಲ್ಲೆ ಹೇಳುವುದಾದರೆ, 'ಪಾರಸೀ ಮೌಲ್ವಿ ಒಳ್ಳೆಯವರು, ವಿದ್ಯಾರ್ಥಿಗಳ ಬಗ್ಗೆ ದಯಾಪರರು ಎಂದು ಹುಡುಗರು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಈ 'ಸೌಲಭ್ಯ' ನನ್ನನ್ನೇ ಎಳೆಯಿತು. ಒಂದು ದಿನ ಪಾರಸೀ ಭಾಷೆಯ ತರಗತಿ ಯಲ್ಲಿ ನಾನು ಕುಳಿತೆನು, ಇದರಿಂದಾಗಿ ಸಂಸ್ಕೃತ ಉಪಾಧ್ಯಾಯರಿಗೆ ದುಃಖವುಂಟಾಯಿತು. ಅವರು ನನ್ನನ್ನು ಸಮೀಪಕ್ಕೆ ಕರೆದು, ನಿಮ್ಮ ತಂದೆ ವೈಷ್ಣವರೆಂಬುದನ್ನು ನೀನು ಮರೆತುದು ಹೇಗೆ? ನಿನ್ನ ಧರ್ಮಕ್ಕೆ ಸಂಬಂಧಿಸಿದ ಭಾಷೆಯನ್ನೇ ಕಲಿಯುವುದಿಲ್ಲವೇ? ಎಂದು ನನ್ನನ್ನು ಕೇಳಿದರು". ಅಂದರೆ ಆ ಅಧ್ಯಾಪಕರ ಪ್ರಕಾರ ಸಂಸ್ಕೃತ ಒಂದು ಧರ್ಮದ ಭಾಷೆ.

ಬಾಲ್ಯದಲ್ಲಿ ಓರ್ವ ಸಂಸ್ಕೃತ ಅಧ್ಯಾಪಕ ಮಹಾತ್ಮ ಗಾಂಧಿಗೆ ಹೇಳಿದ್ದನ್ನು ಅವರು ಕೊನೆಯವರೆಗೂ ನಂಬಿಕೊಂಡಿದ್ದರು. ಈ ಹಿನ್ನೆಲೆಯಲ್ಲೇ ಅವರು ತಮ್ಮ ಆತ್ಮಕಥೆಯಲ್ಲಿ ದಕ್ಷಿಣ ಆಫ್ರಿಕಾದಲ್ಲಿ "ಅಧ್ಯಾಪಕ"ನಾಗಿದ್ದ ಅವಧಿಯ ಅನುಭವಗಳನ್ನು ಆಧರಿಸಿ," ಪ್ರತಿಯೊಬ್ಬ ಹಿಂದೂ ಬಾಲಕ, ಬಾಲಕಿಯೂ ಸಂಸ್ಕೃತದ ಅಧ್ಯಯನವನ್ನು ಚೆನ್ನಾಗಿ ಮಾಡಬೇಕು" ಎಂದು ಸಲಹೆ ನೀಡಿದ್ದಾರೆ. ಅಂದರೆ ಇದು ಹಿಂದೂ ಧರ್ಮದ ಭಾಷೆ ಎಂದು ಮಹಾತ್ಮ ಗಾಂಧಿ ಕೂಡಾ ದೃಢೀಕರಿಸಿದ್ದಾರೆ. ಆದರೆ

ಸಂಸ್ಕೃತ ಪರ ಪ್ರಚಾರಕರು ಅದನ್ನೇ "ದೇವ ಭಾಷೆ" ಎಂದೇ ಹೇಳಿಕೊಂಡು ಬರುತ್ತಾ ಅದಕ್ಕೊಂದು ಪಾವಿತ್ರ್ಯದ ಸ್ಪರ್ಶ ಕೊಡುವ ದುಷ್ಟ ಪ್ರಯತ್ನ ನಡೆಸಿದ್ದಾರೆ. ಇಂಥಾ ಆಡು ಭಾಷೆಯಲ್ಲದ, ಪ್ರಾದೇಶಿಕ ಭಾಷೆಯಲ್ಲದ "ದೇವ ಭಾಷೆ"ಯನ್ನೇ ಜನ ಭಾಷೆ ಅನಿಸುವುದು ಹೇಗೆ ಸಾಧ್ಯ? ಬ್ರಾಹ್ಮಣ್ಯವನ್ನೇ ಅಪ್ಪಿಕೊಂಡಿರುವ ಅದನ್ನೇ ಸಂಪರ್ಕ ಭಾಷೆಯಾಗಿಸುವುದು ಎಷ್ಟು ಸರಿ? ಉರ್ದು ಸೇರಿದಂತೆ ವಿವಿಧ ಪ್ರಾದೇಶಿಕ ಭಾಷೆಗಳಲ್ಲೇ ಭಿಕ್ಷೆ ಕೇಳುವ ಜನರನ್ನೇ ಕಂಡಿದ್ದೀರಿ. ಉರ್ದು ಮಾತನಾಡುವ ರಸ್ತೆ ಬದಿ ವ್ಯಾಪಾರಿಗಳು, ಅಧಿಕಾರಿಗಳು, ಉದ್ಯಮಿಗಳನ್ನು ನೀವು ಕಂಡಿದ್ದೀರಿ. ಆದರೆ ಸಂಸ್ಕೃತದಲ್ಲಿ ಭಿಕ್ಷೆ ಕೇಳುವ, ವ್ಯಾಪಾರ ಮಾಡುವ (ದೇವಾಲಯಗಳಲ್ಲಿ ಸಂಸ್ಕೃತ ಶ್ಲೋಕಗಳನ್ನೇ ಪಠಿಸುವ ಭಿಕ್ಷೆ ಮತ್ತು ವ್ಯಾಪಾರ ಬಿಟ್ಟು) ಒಬ್ಬರನ್ನಾದರೂ ಯಾರಾದರೂ ಈವರೆಗೆ ನೋಡಿದ್ದಾರೆಯೆ?

ಎಷ್ಟು ಹಿಂದೂಗಳಿಗೆ ಸಂಸ್ಕೃತ ಗೊತ್ತು? ಈವರೆಗೂ ಸಂಸ್ಕೃತ ಹಿಂದೂಗಳ ಭಾಷೆಯಾಗಿ ಯಾಕೆ ಬೆಳೆಯಲಿಲ್ಲ?

ಅಪ್ಪಟ ಧಾರ್ಮಿಕ (ಕೋಮುವಾದಿ ಅಲ್ಲ) ಮನುಷ್ಯರಾದ ಗಾಂಧೀಜಿ ಈ ಸಾವಿರಾರು ವರ್ಷಗಳಲ್ಲಿ ಉಂಟಾಗಿರುವ ಬೆಳವಣಿಗೆಯ ಹಿನ್ನೆಲೆಯಲ್ಲಿ ವೈದಿಕ ಧರ್ಮವನ್ನೇ ಹಿಂದೂ ಧರ್ಮ ಎಂದು ನಂಬಿಸಿರುವ ಹುನ್ನಾರವನ್ನೇ ಅರ್ಥ ಮಾಡಿಕೊಂಡಿರಲಾರರು. ಅಥವಾ ಈಗ ಅದನ್ನೆಲ್ಲ ಕೆದಕುವ ಅಗತ್ಯವಾದರೂ ಏನು ಎಂಬ ಸೌಜನ್ಯದಿಂದ ಸುಮ್ಮನಾಗಿರಲೂ ಸಾಕು. ಮಹಾತ್ಮಾ ಗಾಂಧಿ ನಂಬಿಕೊಂಡಿದ್ದ ಹಿಂದೂ ಧರ್ಮ, ಸಂಸ್ಕೃತ ತನ್ನ ಭಾಷೆ ಎನ್ನುವುದಾದರೆ ಸೆಕ್ಯುಲರ್ ರಾಷ್ಟ್ರವಾದ ಭಾರತದಲ್ಲಿ ಅದನ್ನು ಇತರ ಧರ್ಮೀಯರ ಮೇಲೆ ಹೇರುವುದು ಎಷ್ಟು ಸರಿ?

ಮಹಾನ್ ಶಿಕ್ಷಣ ತಜ್ಞರಾಗಿದ್ದ ಗಾಂಧೀಜಿ, "ಭಾರತದಲ್ಲಿ ಎಲ್ಲ ಉಚ್ಚ ಶಿಕ್ಷಣ ಕ್ರಮದಲ್ಲಿ ಮಾತೃ ಭಾಷೆಯಲ್ಲದೆ ಹಿಂದಿ, ಸಂಸ್ಕೃತ, ಪಾರಸೀ, ಅರಬ್ಬೀ ಮತ್ತು ಇಂಗ್ಲಿಷ್ ಭಾಷೆಗಳಿಗೆ ಸ್ಥಾನ ಕೊಡಬೇಕು" ಎಂದು ಹೇಳಿದ್ದಾರೆ. ಆದರೆ ಈ ಯಾವುದೇ ಭಾಷೆಯನ್ನು ಸಂಪರ್ಕ ಭಾಷೆಯಾಗಿ ಹೇರುವುದಕ್ಕೆ ಅವರು ಒಲವು ವ್ಯಕ್ತಪಡಿಸಿಲ್ಲ.

ಅಂದರೆ ಸಂಸ್ಕೃತ, ಹಿಂದಿ, ಫ್ರೆಂಚ, ಜರ್ಮನ್, ಅರಾಬಿಕ್, ಗ್ರೀಕ್, ಜಪಾನಿ ಯಾವುದೇ ಭಾಷೆಯನ್ನು ಒಂದು ಭಾಷೆಯಾಗಿ ಕಲಿಯುವುದು ತಪ್ಪೇನಲ್ಲ. ನಾನು ಸಂಸ್ಕೃತದ ದ್ವೇಷಿಯೂ ಅಲ್ಲ. ನನ್ನ ತಂದೆಗೂ ಸಂಸ್ಕೃತ ಜ್ಞಾನ ಸಾಕಷ್ಟಿತ್ತು. ನನ್ನ ಮಗನಿಗೂ ಸಂಸ್ಕೃತ ಕಲಿಸುವ ವ್ಯವಸ್ಥೆ ಮಾಡಿದ್ದೇನೆ. ಅವನಿಗೆ ಉರ್ದುವಿನ ಜತೆ ಒಂದೆರಡು ವಿದೇಶಿ ಭಾಷೆಗಳನ್ನೂ ಕಲಿಸಬೇಕೆನ್ನುವ ಇಚ್ಛೆಯನ್ನು ಹೊಂದಿದ್ದೇನೆ. ಅವನಿಗೆ ಸಾಹಿತ್ಯದ ಆಸಕ್ತಿ ಹುಟ್ಟಿದರೆ ಆಯಾ ಭಾಷೆಗಳ ಕೃತಿಗಳನ್ನು ಮೂಲದಲ್ಲೇ ಶಿಳಿಯಲಿ, ವಿರೂಪಗೊಂಡ ಸತ್ಯಗಳನ್ನು ಅರ್ಥ ಮಾಡಿಕೊಳ್ಳಲಿ ಎಂಬ ಕಾರಣಕ್ಕಾಗಿ.

ಆದರೆ ಒಂದು ಭಾಷೆಯನ್ನು ಸ್ವಂತ ಇಚ್ಛೆಯಿಂದ ಕಲಿಯುವ ಸ್ವಾತಂತ್ರ್ಯ ಇರಬೇಕೇ ಹೊರತು ಅದನ್ನೇ ಸರ್ವಾಧಿಕಾರಿ ಧೋರಣೆಯಿಂದ ಹೇರುವುದು ಸರಿಯಲ್ಲ. (ನನ್ನ ಈ ನಿಲುವು ಪ್ರಾದೇಶಿಕ ಭಾಷೆಗೆ ಅನ್ವಯವಾಗುವುದಿಲ್ಲ. ಉದಾಹರಣೆಗೆ ಕರ್ನಾಟಕಕ್ಕೆ ಬಂದು ನೆಲಸುತ್ತಿರುವ ಪರಭಾಷಿಕರು ಕನ್ನಡವನ್ನು ಕಲಿಯಲೇಬೇಕು. ಕನ್ನಡದಲ್ಲೇ ವ್ಯವಹರಿಸಬೇಕು. "ಎಲ್ಲೇ ಇರು, ಎಂತಾದರೂ ಇರು, ಎಂದೆಂದಿಗೂ ಕನ್ನಡಿಗನಾಗಿರು" ಎಂದು ಕುವೆಂಪು ಹೇಳಿರುವುದು ಕೂಡಾ ವಿಶೇಷಾರ್ಥ ನೀಡುತ್ತದೆ. ಇತರ ರಾಜ್ಯ ದೇಶಗಳಲ್ಲಿ ನೆಲಸುವ ಕನ್ನಡಿಗರು ಕನ್ನಡತನ ಕಳೆದುಕೊಳ್ಳದೆ ಆ ನೆಲದವರಾಗುವುದು ಹೇಗೆ ಸಾಧ್ಯವೋ ಹಾಗೇ ತಮಿಳರು, ತೆಲುಗರು, ಮರಾಠಿಗಳು, ಹಿಂದಿ ಭಾಷಿಕರು ತಮ್ಮತನ ಕಳೆದುಕೊಳ್ಳದೆ ಕನ್ನಡಿಗರಾಗುವುದು ಸಾಧ್ಯವಿದೆ. ಬುದ್ಧಿವಂತ ಮಾರವಾಡಿ ವ್ಯಾಪಾರಿಗಳು ಕನ್ನಡ ಕಲಿಯುವ ಅನಿವಾರ್ಯತೆ ಮನಗಂಡಿದ್ದರೆ, ಅಸಹಾಯಕ, ಅತಂತ್ರ, ಅಶಿಕ್ಷಿತ ತಮಿಳು ಕಾರ್ಮಿಕರು, ಕೂಲಿಗಳು ಒಂದೆಡೆ ವಾಸಿಸುತ್ತಾ, ಹೊಟ್ಟೆಪಾಡೇ ಮುಖ್ಯವಾಗಿ ಕನ್ನಡ ಕಲಿಯಲಾಗದ ಸಮಸ್ಯೆ ನಮಗೆ ತಮಿಳರನ್ನು ಭಾಷಾ ದುರಭಿಮಾನಿಗಳಾಗಿ ಕಾಣುವಂತೆ ಮಾಡಿದೆ ಆದರೆ ನಾನು ನೋಡಿದ ಎಷ್ಟೋ ಸುಶಿಕ್ಷಿತ ತಮಿಳರು ಮಕ್ಕಳಿಗೆ ಕನ್ನಡವನ್ನು ಅಚ್ಚುಕಟ್ಟಾಗಿ ಕಲಿಯುವ ವಾತಾವರಣದಲ್ಲಿ ಬೆಳಸುತ್ತಿದ್ದಾರೆ.)

ಜನ ಭಾಷೆಯಾದ ತಮಿಳು, ಕನ್ನಡ, ಮಲೆಯಾಳ, ಮರಾಠಿ... ಎಲ್ಲವೂ ಸಂಸ್ಕೃತದ ಕಲಬೆರಕೆಯ ನಡುವೆ ಉಳಿದಿದ್ದರೂ ಸಂಸ್ಕೃತ ಕೆಲವೇ ವೈದಿಕರ ಪಾಂಡಿತ್ಯದ ಭಾಷೆಯಾಗಿ ಮಾತ್ರ ಉಳಿದಿದೆ. ಸತ್ತೇ ಹೋದಂತಿರುವ ಸಂಸ್ಕೃತವನ್ನೇ ಮ್ಯೂಸಿಯಂ ಭಾಷೆ ಎಂದರೂ ತಪ್ಪೇನಲ್ಲ. ಆದರೆ ಸಂಸ್ಕೃತ ಭಾಷೆಯ ಪರ ದನಿ ಎತ್ತುತ್ತಿರುವವರು ಅದು ಮಾತೃ ಭಾಷೆಯಲ್ಲವೆಂದೂ, ಎಲ್ಲ ಭಾರತೀಯ ಭಾಷೆಗಳಲ್ಲೂ ಸಂಸ್ಕೃತ ಆವರಿಸಿಕೊಂಡಿದೆ ಎಂಬ ವಾದವನ್ನೂ ಮಂಡಿಸುತ್ತಿದ್ದಾರೆ. ಅವರ ಈ ವಾದಕ್ಕೆ ಅರ್ಥವೂ ಇದೆ. ಅದರಿಂದ ಅನರ್ಥವೂ ಸಂಭವಿಸಿದೆ. ಸಂಸ್ಕೃತ ಸಂಪೂರ್ಣ ಮಾತೃ ಭಾಷೆಯಲ್ಲ ಎಂದು ಒಪ್ಪಿಕೊಂಡರೂ ಅದಕ್ಕೆ ಇತರ ಭಾಷೆಗಳನ್ನು ಮಾತೃ ಸ್ಥಿತಿಗೆ ತರುವ ವಿನಾಶಕಾರೀ ಶಕ್ತಿ ಮತ್ತು ಸಾಮರ್ಥ್ಯ ಇರುವುದನ್ನು ನಾವು ಮನಗಾಣಬೇಕಿದೆ. ರಾಸಾಯನ ಶಾಸ್ತ್ರದಲ್ಲಿ ಬಳಸುವ "LAW OF DIS & DISPLACEMENT ಎಂಬ ಸ್ಥಳಾಂತರಿಸುವ ಸಾಮರ್ಥ್ಯದ ನಿಯಮವನ್ನು ಭಾಷೆಗಳ ಹಿನ್ನೆಲೆಯಲ್ಲೂ ನೋಡುವುದಾದರೆ ವಿವಿಧ ಭಾರತೀಯ ಭಾಷೆಗಳ ಅಸಂಖ್ಯಾತ ಪದಗಳನ್ನು ಕೇವಲ ನಿಘಂಟಿಗೆ ಸ್ಥಳಾಂತರಿಸಿ ಭಾಷೆಯನ್ನು ಕೊಲ್ಲುವ ಕಾಯಕದಲ್ಲಿ ಸಂಸ್ಕೃತ ಯಶಸ್ವಿಯಾಗಿರುವುದನ್ನು ನಮ್ಮೆಲ್ಲರ ಅನುಭವವೇ ಹೇಳುತ್ತದೆ.

ಒಂದು ಭಾಷೆಯ ಸಖ್ಯದಿಂದ ಇತರ ಭಾಷೆಗಳು ಬೆಳೆಯಬೇಕೇ ಹೊರತು ನಾಶವಾಗಕೂಡದು. ಆದರೆ ಸಂಸ್ಕೃತದ ದಾಳಿಯಿಂದ ಇಂಪು ಕನ್ನಡದ ಮೂಡಣ, ಪಡುವಣ, ತೆಂಕಣ, ಬಡಗಣಗಳೆಲ್ಲ ನಿಘಂಟಿನಲ್ಲೇ

ಉಳಿದು ಸಂಸ್ಕೃತದ ಪೂರ್ವ, ಪಶ್ಚಿಮಗಳೇ ಕನ್ನಡವಾಗಿ ಬಿಟ್ಟಿವೆ. ಇದು ಸಣ್ಣ ಉದಾಹರಣೆಯಷ್ಟೇ. ಇನ್ನು ಸಂಸ್ಕೃತವನ್ನು ಸಂಪರ್ಕ ಭಾಷೆಯಾಗಿಸಿಬಿಟ್ಟರೆ ಭಾರತದ ಅಷ್ಟ ದಿಕ್ಕುಗಳಲ್ಲೂ" ದೇವವಾಣಿ" ಮೊಳಗುತ್ತದೆ. ವಿವಿಧ ಭಾಷಿಕ ಜನ ಸಾಮಾನ್ಯರೂ ದುಭಾಷಿಗಳನ್ನಿಟ್ಟುಕೊಂಡೇ ಓಡಾಡಬೇಕಾಗುತ್ತದೆ. ಸಂಸ್ಕೃತದ ದಾಳಿ ಇದೇ ರೀತಿ ಮುಂದುವರೆದರೆ ಕನ್ನಡವೂ ಸೇರಿದಂತೆ ಎಲ್ಲ ಭಾರತೀಯ ಭಾಷೆಗಳೂ ಒಂದಲ್ಲ ಒಂದು ದಿನ "ಸಂಸ್ಕೃತ ಭೂಮಿಷ್ಠಗೊಂಡಾರರ್ಯಾ"ವಾಗಿ ಬಿಡುತ್ತದೆ. ಭಾರತೀಯ ಭಾಷೆಗಳ ಛದ್ಮವೇಷದಲ್ಲಿ ಸಂಸ್ಕೃತದ ಆತ್ಮಗಹಗಹಿಸಿ ನಗುತ್ತದೆ.

ಈ ಅಪಾಯ ಉಂಟಾಗುವ ಮೊದಲೇ ದೇಶದ ಎಲ್ಲ ಪ್ರಾದೇಶಿಕ, ಬುಡಕಟ್ಟು ಭಾಷೆಗಳ ಜನರೂ ಸಂಸ್ಕೃತದ ವಿರುದ್ಧ ದನಿ ಎತ್ತಬೇಕಿದೆ. ಬೆಂಗಳೂರಿನ ಚರ್ಚ್‌ಗಳಲ್ಲಿ ತಮಿಳಿನ ಬದಲು ಕನ್ನಡ ಪ್ರಾರ್ಥನೆ ಮಾಡಲು ಆಗ್ರಹಿಸುವ ಕನ್ನಡ ಹೋರಾಟಗಾರರು ದೇವಾಲಯಗಳಲ್ಲಿ ಸಂಸ್ಕೃತ ಶ್ಲೋಕಗಳ ಬದಲು ಕನ್ನಡದ ಕಂಪು ಕೇಳುವಂತೆ ಹೋರಾಟ ಮಾಡಬೇಕಾಗಿದೆ.

ಇಷ್ಟೆಲ್ಲದರ ನಡುವೆಯೂ ಸಂಸ್ಕೃತ ಪರ ದನಿ ಆಗಿಂದಾಗ್ಗೆ ಕೇಳುತ್ತಿರುವುದಕ್ಕೆ ಕೆಲವು ಗುಪ್ತ ಕಾರ್ಯಸೂಚಿಯೂ ಇರುವ ಅನುಮಾನಗಳಿವೆ. ಸಹನೆ, ಸಾಮರಸ್ಯ, ಸಮನ್ವಯತೆಯ ಹಿಂದೂ ಧರ್ಮಕ್ಕೆ ಅಸಹನೆ, ಅಸಮಾನತೆಯ ವೈದಿಕ ವಿಷ ಬೆರೆಸಿದ ಜನ ಇದರ ಹಿಂದಿದ್ದಾರೆ. ಆತ್ಮ ಬದಲಿಸಿದ ಹಿಂದೂ ಧರ್ಮದ ಕ್ರೌರ್ಯದ ವಿರುದ್ಧ ಶಾಂತಿ, ಅಹಿಂಸೆಯ ಮಂತ್ರ ಬೋಧಿಸಿದ ಬುದ್ಧನ ಬೌದ್ಧಧರ್ಮದ ಭಾರತದಲ್ಲಿ ವ್ಯಾಪಕವಾಗಿ ಹಬ್ಬುತ್ತಾ ವೈದಿಕ ಕುತಂತ್ರಕ್ಕೆ ನೆಲೆ ಇಲ್ಲವಾದೀತೆಂಬ ಒಂದೇ ಭಯದಿಂದ ಬೌದ್ಧಧರ್ಮದ ನೆಲೆಗಳ ಮೇಲೆ ಗೂಂಡಾಗಿರಿ ನಡೆಸಿದ ಶಂಕರಾಚಾರ್ಯರ ಪಳೆಯುಳಿಕೆಗಳೇ ಸಂಸ್ಕೃತ ಬೇಳೆ ಬೇಯಿಸುವ ಕೆಲಸಕ್ಕೆ ಮುಂದಾಗಿವೆ. ಭಾರತದಿಂದ ಹೊರಟ ಬೌದ್ಧ ಧರ್ಮ ಎಲ್ಲೆಲ್ಲಿ ನೆಲೆ ನಿಂತಿತೋ ಆ ಎಲ್ಲ ರಾಷ್ಟ್ರಗಳೂ ಅಭಿವೃದ್ಧಿ ಪಥದಲ್ಲಿ ಸಾಗಿರುವುದನ್ನು ನಾವು ನೋಡಿದ್ದೇವೆ. ಜಪಾನ್, ಚೀನಾಗಳಂಥ ಏಷ್ಯ ರಾಷ್ಟ್ರಗಳಲ್ಲದೆ ಆಸ್ಟ್ರೇಲಿಯಾದಲ್ಲೂ ಬೌದ್ಧಧರ್ಮ ಪ್ರಬಲವಾಗಿ ಬೆಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಭಾರತದಲ್ಲಿ ಬೌದ್ಧ ಧರ್ಮ ಸುಭದ್ರವಾಗಿ ನೆಲೆಯೂರಬಾರದೆಂಬ ಒಂದೇ ಕಾರ್ಯಸೂಚಿ ಹೊಂದಿರುವ ವೈದಿಕ ಮನಸ್ಸು ಇತ್ತೀಚಿನ ಬೆಳವಣಿಗೆಗಳಿಂದ ತತ್ತರಿಸಿದೆ. ದೇಶಾದ್ಯಂತ ಪ್ರಬಲವಾಗಿ ಬೆಳೆಯುತ್ತಿರುವ ದಲಿತರ ಹೋರಾಟ, ಹಿಂದುಳಿದ ವರ್ಗಗಳ ಪ್ರಜ್ಞೆ, ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಮೀಸಲಾತಿ ಒದಗಿಸಿರುವ ಅವಕಾಶ, ಇತ್ತೀಚೆಗೆ ಅಲ್ಪಸಂಖ್ಯಾತರಿಗೂ ಮೀಸಲಾತಿ ನೀಡಬೇಕೆಂದು ಸಹಜವಾಗಿ ಕೇಳಿ ಬಂದಿರುವ ಕೂಗು, ಸಚ್ಚಾರ್ ಸಮಿತಿವರದಿ, ಲಾಲೂ ಪ್ರಸಾದ್, ಮುಲಾಯಂ ಸಿಂಗ್‌ಯಾದವ್, ಚಂದ್ರಬಾಬುನಾಯ್ಡು, ದೇವೇಗೌಡ (ಆಗಿಂದಾಗ್ಗೆ ನಿಲುವು ಬದಲಿಸಿದರೂ), ಮಾಯಾವತಿಗಳೆಂದು ವೈದಿಕೇತರ ಶಕ್ತಿಗಳ ಬೆಳವಣಿಗೆ, ಆ ಮೂಲಕ ದೇಶದ ಪರೋಕ್ಷ ಹಿಡಿತ ದುರ್ಬಲವಾಗಿರುವ ಹಿನ್ನೆಲೆಯಲ್ಲಿ ವೈದಿಕ ಮನಸ್ಸು ಈಗ ಸಂಸ್ಕೃತವೆಂಬ ತಗಲೂಫಿ ಕೆಲಸಕ್ಕೆ ಮುಂದಾಗಿದೆ. ಸ್ವತಃ ಬ್ರಾಹ್ಮಣರೇ ಇಂಗ್ಲಿಷ್, ಸಾಫ್ಟ್‌ವೇರ್ ಮತ್ತು ಅಮೇರಿಕ ಮಂತ್ರ ಜಪಿಸುತ್ತಾ ಸಂಸ್ಕೃತವನ್ನೇ ನಿರ್ಲಕ್ಷಿಸಿದ್ದರೂ ಅಬ್ಬೇಪಾರಿ ಭಾಷೆಯಾಗಿರುವ ಸಂಸ್ಕೃತವನ್ನೇ ಈ ಎಲ್ಲ ಕಾರಣಗಳಿಂದ ಭಾರತದ ಬಹುಸಂಖ್ಯಾತರ ಮೇಲೆ ಹೇರುವ ಸಂಚು ರೂಪಿಸಲಾಗುತ್ತಿದೆ. ಮತ್ತೆ ದೇಶದ ಹಿಡಿತವನ್ನು ತನ್ನ ಕೈಗಳಲ್ಲೇ ಭದ್ರ ಪಡಿಸಲು ಇಂಥ ಪ್ರಯತ್ನವನ್ನು ನಡೆಸಲಾಗುತ್ತಿದೆ. ಇಂಥಾ ಸಂಸ್ಕೃತ ಅದ್ಯಾವ ರೀತಿಯಲ್ಲಿ ರಾಷ್ಟ್ರೀಯ ಸಮಗ್ರತೆಗೆ ನೆರವಾಗುತ್ತದೋ, ವಿವಿಧ ಭಾಷಿಕರನ್ನು ಒಂದೇ ಸೂರಿನಡಿ ಒಗ್ಗೂಡಿಸುತ್ತದೋ ಆ ಪೇಜಾವರರೇ ಬಲ್ಲರು.



ಕೊಲೆ

"ಪುಸ್ತಕಗಳು
ಕೊಲ್ಲುತ್ತವೆ!"
ಎಂದೊಬ್ಬರ ಹೇಳಿಕೆ!
(ಅವು ಬದುಕಿಸಲೂ ಬಲ್ಲುವು.)
ಆದರೆ ಪುಸ್ತಕಗಳನ್ನೆ ಕೊಲ್ಲುವ
ಪುಣ್ಯಾತ್ಮರುಂಟಲ್ಲ!

ಡಾ॥ ಸಿ.ಪಿ.ಕೆ

ಭಾರತದ ಪುಸ್ತುತ ವಿಷಯ ಪರಿಸ್ಥಿತಿಯಲ್ಲಿ ಧಾರ್ಮಿಕ, ಪ್ರಾದೇಶಿಕ, ಭಾಷಾ ವಿಕಾರಗಳು ಉರ್ದುವನ್ನು ಸಂಪರ್ಕ ಭಾಷೆಯಾಗಿ ಆಲಂಗಿಸಿಕೊಳ್ಳುವುದು ಅಷ್ಟು ಸುಲಭವಲ್ಲ ಹೀಗಾಗಿ ವರ್ತಮಾನದ ಜಾಗತಿಕ ಅನಿವಾರ್ಯತೆಯಿಂದ ಅನಧಿಕೃತ ಸಂಪರ್ಕ ಭಾಷೆಯಾಗಿ ಬೆಳೆದಿರುವ ಇಂಗ್ಲಿಷ್‌ನ್ನೇ ಉಳಿಸಿಕೊಂಡರೂ ತಪ್ಪೇನಲ್ಲ. ನಮ್ಮ ಶಿಕ್ಷಣ ವ್ಯವಸ್ಥೆಯ ದೋಷದಿಂದ ಇಂಗ್ಲಿಷ್ ಅಸಮಾನತೆ ಸೃಷ್ಟಿಸಿದ್ದರೂ, ಅದನ್ನು ಯಾರ ಮೇಲೂ ಹೇರದಿದ್ದರೂ ಸ್ವಂತ ಇಚ್ಛೆಯಿಂದಲೇ ಬಹುತೇಕ ಮಂದಿ ಇಂಗ್ಲಿಷ್ ಕಲಿಯುವ ಅನಿವಾರ್ಯತೆಯನ್ನು ಮನಗಂಡಿದ್ದಾರೆ. ಇಂಗ್ಲಿಷ್ ಈಗ ಎಲ್ಲ ವೈಚಾರಿಕ ವಾಸ್ತವಗಳನ್ನು ಮೀರಿ ಜಾಗತಿಕ ಭಾಷೆಯಾಗಿ ಬೆಳೆದಿದ್ದರೂ ಅದಕ್ಕೆ ಇತರ ಭಾಷೆಗಳನ್ನು ವ್ಯವಸ್ಥಿತವಾಗಿ ಸಾಯಿಸುವ ತಾಖತ್ತು ಇದ್ದಂತಿಲ್ಲ. ಈವರೆಗೆ ನಾವೆಲ್ಲ ಕಂಡುಕೊಂಡಿರುವ ಪ್ರಕಾರ ಹೊಸ ಆವಿಷ್ಕಾರಗಳ ಕಾರಣದಿಂದ ಉಂಟಾದ ಹೊಸ ಪದಗಳು ಪ್ರಾದೇಶಿಕ ಭಾಷೆಗಳಿಗೆ ಸೇರ್ಪಡೆಯಾಗಿವೆಯೇ ಹೊರತು ಮೊದಲಿದ್ದ ಪದಗಳನ್ನು ಸ್ಥಳಾಂತರಿಸುವ ಕೆಲಸ ಮಾಡಿಲ್ಲ.

ಇಷ್ಟೆಲ್ಲದರ ನಡುವೆಯೂ ಭಾರತದ ಪುಸ್ತುತ ವಿಷಯ ಪರಿಸ್ಥಿತಿಯಲ್ಲಿ ಧಾರ್ಮಿಕ, ಪ್ರಾದೇಶಿಕ, ಭಾಷಾ ವಿಕಾರಗಳು ಉರ್ದುವನ್ನು ಸಂಪರ್ಕ ಭಾಷೆಯಾಗಿ ಅಲಂಗಿಸಿಕೊಳ್ಳುವುದು ಅಷ್ಟು ಸುಲಭವಲ್ಲ ಹೀಗಾಗಿ ವರ್ತಮಾನದ ಜಾಗತಿಕ ಅನಿವಾರ್ಯತೆಯಿಂದ ಅನಧಿಕೃತ ಸಂಪರ್ಕ ಭಾಷೆಯಾಗಿ ಬೆಳೆದಿರುವ ಇಂಗ್ಲಿಷ್‌ನ್ನೇ ಉಳಿಸಿಕೊಂಡರೂ ತಪ್ಪೇನಲ್ಲ. ನಮ್ಮ ಶಿಕ್ಷಣ ವ್ಯವಸ್ಥೆಯ ದೋಷದಿಂದ ಇಂಗ್ಲಿಷ್ ಅಸಮಾನತೆ ಸೃಷ್ಟಿಸಿದ್ದರೂ, ಅದನ್ನು ಯಾರ ಮೇಲೂ ಹೇರದಿದ್ದರೂ ಸ್ವಂತ ಇಚ್ಛೆಯಿಂದಲೇ ಬಹುತೇಕ ಮಂದಿ ಇಂಗ್ಲಿಷ್ ಕಲಿಯುವ ಅನಿವಾರ್ಯತೆಯನ್ನು ಮನಗಂಡಿದ್ದಾರೆ. ಇಂಗ್ಲಿಷ್ ಈಗ ಎಲ್ಲ ವೈಚಾರಿಕ ವಾಸ್ತವಗಳನ್ನು ಮೀರಿ ಜಾಗತಿಕ ಭಾಷೆಯಾಗಿ ಬೆಳೆದಿದ್ದರೂ ಅದಕ್ಕೆ ಇತರ ಭಾಷೆಗಳನ್ನು ವ್ಯವಸ್ಥಿತವಾಗಿ ಸಾಯಿಸುವ ತಾಖತ್ತು ಇದ್ದಂತಿಲ್ಲ. ಈವರೆಗೆ ನಾವೆಲ್ಲ ಕಂಡುಕೊಂಡಿರುವ ಪ್ರಕಾರ ಹೊಸ ಆವಿಷ್ಕಾರಗಳ ಕಾರಣದಿಂದ ಉಂಟಾದ ಹೊಸ ಪದಗಳು ಪ್ರಾದೇಶಿಕ ಭಾಷೆಗಳಿಗೆ ಸೇರ್ಪಡೆಯಾಗಿವೆಯೇ ಹೊರತು ಮೊದಲಿದ್ದ ಪದಗಳನ್ನು ಸ್ಥಳಾಂತರಿಸುವ ಕೆಲಸ ಮಾಡಿಲ್ಲ. ಕಾರ್, ಟೆಲಿವಿಷನ್, ಕಂಪ್ಯೂಟರ್, ಮೋಟಾರ್ ಸೈಕಲ್, ಬೈಸಿಕಲ್, ರೆಫ್ರಿಜರೇಟರ್‌ಗಳು ಆವಿಷ್ಕಾರವಾದಂತೆ ಇಂಥ ಎಷ್ಟೋ ಪದಗಳು ನಮ್ಮ ಪ್ರಾದೇಶಿಕ ಭಾಷೆಗಳಿಗೆ ಅನಿವಾರ್ಯವಾಗಿ ಸೇರ್ಪಡೆಯಾಗಿವೆ. ಅಂದರೆ ಈ ಸಾಧನಗಳಿಗೆ ನಮ್ಮ ಭಾಷೆಗಳಲ್ಲಿ ಆವಿಷ್ಕಾರದ ಮೊದಲು ಯಾವುದೇ ಸ್ಥಾನಮಾನ ಇರಲಿಲ್ಲ. ಅವುಗಳ ಶೋಧನೆಯಾಗುವವರೆಗೆ ಅಂಥ ಪದಗಳ ಬಳಕೆ ಇಲ್ಲವಾಗಿದ್ದ ಕಾರಣ ಅವುಗಳಿಗೆ ಸಂಬಂಧಿಸಿದ ಪ್ರಾದೇಶಿಕ ಭಾಷೆಯ ಪದಗಳೂ ಚಾಲ್ತಿಯಲ್ಲಿರಲಿಲ್ಲ. ಪ್ರಾದೇಶಿಕ ಭಾಷೆಗಳ ಮಾಧ್ಯಮಗಳು ಸ್ವಲ್ಪ ಎಚ್ಚರ ವಹಿಸಿ, ಸ್ವಲ್ಪ ಶ್ರಮಪಟ್ಟರೂ ಈ ನೂತನ ಪದಗಳಿಗೆ ಪರ್ಯಾಯ ಪದಗಳನ್ನು ಜನರ ನಡುವೆ ಅಭ್ಯಾಸ ಮಾಡಿಸುವುದು ಕಷ್ಟವೇನಲ್ಲ. ಇಷ್ಟೆಲ್ಲ ಇದ್ದೂ ಪೇಜಾವರರು ಹೇಳಿದಂತೆ ಇಂಗ್ಲಿಷ್ ಬಳಕೆ ನಮಗೆ ಅವಮಾನವಾಗುವುದಿಲ್ಲ. ಭಾರತದಿಂದ ಗೊಡ್ಡು ಸಂಪ್ರದಾಯ, ಮೌಢ್ಯಗಳನ್ನು ಸಾಧ್ಯವಾದಷ್ಟೂ ಕಿತ್ತೆಸೆದ ಇಂಗ್ಲಿಷ್ ಮನಸ್ಸಿಗೆ ನಾವು ಕೈ ಮುಗಿಯಲೇಬೇಕು.

ಇಂಗ್ಲಿಷ್ ದಟ್ಟವಾಗಿ ಜಗತ್ತಿನಾದ್ಯಂತ ವ್ಯಾಪಿಸುತ್ತಿದ್ದರೂ ಜರ್ಮನ್ ಪ್ರಧಾನಿ ಜರ್ಮನ್‌ನಲ್ಲೂ, ರಷ್ಯಾ ಪ್ರಧಾನಿ ರಷ್ಯನ್‌ನಲ್ಲೂ, ಫ್ರಾನ್ಸ್ ಅಧ್ಯಕ್ಷ ಫ್ರೆಂಚ್‌ನಲ್ಲೂ ಮಾತನಾಡುತ್ತಾ ದುಭಾಷಿಯನ್ನರಿಸಿಕೊಂಡು ವ್ಯವಹರಿಸುತ್ತಿರುವಾಗ ನಮ್ಮ ಪ್ರಧಾನಿ ಕೂಡ ದುಭಾಷಿಯನ್ನಿರಿಸಿಕೊಂಡು ನಮ್ಮ ನೆಲದ ಸಂಪರ್ಕ ಭಾಷೆಯಲ್ಲೇ ಮಾತನಾಡುವಂತಾದರೆ ಎಂಥ ಚೆನ್ನ ಅನ್ನಿಸುತ್ತದೆ. ಆದರದು ಸಂಸ್ಕೃತವಾಗಬಾರದು. ಯಾಕೆಂದರೆ ಈಗ ಜನ ಭಾಷೆಯಲ್ಲಿ ಸಂಸ್ಕೃತ ಎಂದರೆ ಅಶ್ಲೀಲ ಬೈಗುಳ! □

'ತಾರತಮ್ಯ' ಹಾಗೂ 'ಅವಕಾಶ ವಂಚನೆ' ಪರಿಕಲ್ಪನೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದರ ಜತೆಗೆ ಮೀಸಲಾತಿಯ ಸ್ವರೂಪ ಮತ್ತು ಕಾರ್ಯಗಳನ್ನು ಪಾಲುದಾರಿಕೆ ನೀತಿಯಿಂದ ಬೇರ್ಪಡಿಸುವುದರ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿರುವ "ಕೆನೆಪದರ"ದ ಪ್ರಶ್ನೆಯನ್ನು ಸಮರ್ಥವಾಗಿ ಕೈಗೆತ್ತಿಕೊಳ್ಳುವುದು ಸಾಧ್ಯವಾಗುತ್ತದೆ. ಆರ್ಥಿಕ ಆಧಾರಿತ ಮೀಸಲಾತಿ ನ್ಯಾಯಾಂಗ ಹಾಗೂ ಬುದ್ಧಿಜೀವಿಗಳ ಮೇಲೆ ಮೋಡಿ ಮಾಡಿರುವುದು ಕುತೂಹಲಕಾರಿ ವಿಷಯ. ಆರ್ಥಿಕ ನೆಲೆಗಟ್ಟಿನ ಮೇಲೆ ಈ ಮಟ್ಟದಲ್ಲಿ ತಾರತಮ್ಯ ನಡೆಯುತ್ತಿರುವ ನಿದರ್ಶನಗಳು ಪ್ರಪಂಚದ ಬೇರಾವ ರಾಷ್ಟ್ರಗಳಲ್ಲಿಯೂ ಕಂಡು ಬರುವುದಿಲ್ಲ. ಶ್ರೀಮಂತ ಮತ್ತು ಬಡ ವರ್ಗಗಳ ನಡುವಿನ ಅಂತರವನ್ನು ಸರಿಪಡಿಸಲು ಸರ್ಕಾರ ಮಧ್ಯೆ ಪ್ರವೇಶಿಸಿದರೆ ಅವುಗಳನ್ನು ಸೋಷಲಿಸ್ಟ್ ರಾಷ್ಟ್ರ ಎಂದು ಕರೆಯಲಾಗುತ್ತದೆ.

ಅನುವಾದ:
ಸತ್ಯಪ್ರಕಾಶ್ ಎಂ ಆರ್

ಎಂ. ನಾಗರಾಜ್ ಮತ್ತು ಇತರರು ಹಾಗೂ ಭಾರತ ಸರ್ಕಾರ ಮತ್ತು ಇತರರ ಮೊಕದ್ದಮೆಗೆ ಸಂಬಂಧಿಸಿದ ಸುಪ್ರೀಂಕೋರ್ಟ್‌ನ ಇತ್ತೀಚೆಗಿನ ತೀರ್ಪು ಮೀಸಲಾತಿ ಕುರಿತು ನಡೆಯುತ್ತಾ ಬಂದಿರುವ ಚರ್ಚೆಗೆ ಹೊಸ ಆಯಾಮ ಒದಗಿಸಿದೆ. ಅಸಮಾನತೆ, ಹಿಂದುಳಿದಿರುವಿಕೆ, ಪಾಲುದಾರಿಕೆ ಮತ್ತು "ಕೆನೆಪದರ"ದಂತಹ ಪ್ರಮುಖ ಪ್ರಶ್ನೆಗಳ ಗ್ರಹಿಕೆಯ ಎಲ್ಲೆಗಳನ್ನು ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠವು ವಿಸ್ತರಿಸಿರುವುದು ಇಲ್ಲಿ ಅತ್ಯಂತ ನಿರ್ಣಾಯಕವಾದ ಅಂಶ. ಈ ವಾದವನ್ನು ಪುಷ್ಟೀಕರಿಸಲು ಬಹಳಷ್ಟು ಕಾರಣಗಳಿವೆ. ಅವುಗಳಲ್ಲಿ ಈ ಕೆಳಗಿನ ಮೂರು ಕಾರಣಗಳು ಇಲ್ಲಿ ಪ್ರಸ್ತುತ ಎನಿಸಿಕೊಳ್ಳುತ್ತದೆ. ಮೊದಲನೆಯದಾಗಿ, ಈಗ ಹಳಸಲಾಗಿರುವ ಸಮಾನತೆಯ ಘೋಷಣೆಗಳನ್ನು ಪುನರುಚ್ಚರಿಸದೆ ಭಾರತೀಯ ಸಮಾಜದಲ್ಲಿರುವ ಜಾತಿಧೃವೀಕರಣವನ್ನು ತೀರ್ಪು ಗುರುತಿಸುತ್ತದೆ. ಎರಡನೆಯದಾಗಿ, ತೀರ್ಪು ಆಡಳಿತಗಾರರು, ವಿದ್ವಾಂಸರು ಮತ್ತು ಮಾಧ್ಯಮದವರ ಮಧ್ಯೆ ತೀವ್ರ ಚರ್ಚೆಗೆ ಒಳಗಾಗುತ್ತಿರುವ 'ಪರಿಕಲ್ಪನೆ' ಅಥವಾ 'ಪದ'ವನ್ನು-"ಕೆನೆಪದರ"-ಮಂಚೂಣಿಗೆ ತಂದಿದೆ. ಮೂರನೆಯದಾಗಿ, "ಮೇಲು ಜಾತಿ"ಗಳ ಸಮಸ್ಯೆಗಳಿಗೆ, ಅಹವಾಲುಗಳಿಗೆ ಹಿಂದೆಂದಿಗಿಂತಲೂ ನಿಖರವಾಗಿ ಶಾಸನಬದ್ಧತೆ ಒದಗಿಸಿರುವುದಷ್ಟೇ ಅಲ್ಲದೆ ಹಿಂದುಳಿದ ಜಾತಿಗಳ ಪರವಾಗಿ ಸಂಸತ್ತು ನಡೆಸಿದ ಪ್ರಯತ್ನಗಳಿಗೆ ತಡೆಯೊಡ್ಡಿದೆ.

ಮುಂದುವರೆದ ಮತ್ತು ಹಿಂದುಳಿದ ಜಾತಿಗಳ ವಿಚಾರಗಳು, ಧೋರಣೆಗಳು, ಮೀಸಲಾತಿಗೆ ಸಂಬಂಧಿಸಿದ ಇತರೆ ಪ್ರಮುಖ ವಿಷಯಗಳ ಸುತ್ತ ಕೇಂದ್ರೀಕೃತವಾಗಿದೆ. ಜಾತಿ ಪದ್ಧತಿಯನ್ನು ಕಿತ್ತೊಗೆಯುವಂತಹ ಸಾಮಾಜಿಕ ಕ್ರಾಂತಿ ಸಂಭವಿಸದಿರುವುದು ಈ ಎರಡೂ ಗುಂಪುಗಳ ಅಜಗಜಾಂತರ ವಿಚಾರಧಾರೆಗಳಿಗೆ ಕಾರಣವಾಗಿದೆ. "ಕೆಳಜಾತಿಗಳು" ಮಾತ್ರ ಆಧುನಿಕ-ಪೂರ್ವ ಅಸ್ಮಿತೆಯಲ್ಲಿಯೇ ಸಿಲುಕಿಕೊಂಡಿದೆ, ತಮ್ಮಂತೆ ಅದರಿಂದ ಹೊರಬರಲಾಗುತ್ತಿಲ್ಲ ಎಂದು "ಮೇಲುಜಾತಿಗಳು" ನಂಬಿಕೊಂಡಿವೆ. ನ್ಯಾಯಾಲಯ ಕೂಡ ಇದೇ ವಿಚಾರಧಾರೆಗೆ ಮನ್ನಣೆ ನೀಡಿದೆ. ತೀವ್ರತರದ ಮೀಸಲಾತಿಯಿಂದ ಸಮಾಜದಲ್ಲಿರುವ ಮೇಲ್ವರ್ಗಗಳಿಗೆ ತಾರತಮ್ಯ ಮಾಡಿದಂತಾಗುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಈ ಹಿನ್ನೆಲೆಯಲ್ಲಿ ವರ್ಷಗಳಿಂದ ಜಾರಿಯಲ್ಲಿದ್ದ ಚರ್ಚೆಗಳ ಸ್ವರೂಪ ಒಮ್ಮಿಂದೊಮ್ಮೆ ಬದಲಾಗಿರುವುದು ಪರಿಸ್ಥಿತಿಯ ವ್ಯಂಗ್ಯ. ಈಗ ತಾರತಮ್ಯವನ್ನು ಸಹಿಸಬೇಕಾಗಿರುವುದು "ಮೇಲು ಜಾತಿಗಳು!" ಆದರೂ ಕೆಳಜಾತಿಗಳ "ಹಿಂದುಳಿದಿರುವಿಕೆ"ಯನ್ನು ಪರಿಗಣಿಸುವ ಔದಾರ್ಯವನ್ನು ಮೇಲುಜಾತಿ ಧೋರಣೆಗಳು ತೋರಿವೆ. ಜಾತಿ ಆಧಾರಿತ ಮೀಸಲಾತಿ ವಿಚಾರದಲ್ಲಿ ನ್ಯಾಯಾಲಯದ ಧೋರಣೆ 'ತಾರತಮ್ಯ' ಪರಿಕಲ್ಪನೆಯಿಂದ 'ಅವಕಾಶವಂಚಿತ' ಪರಿಕಲ್ಪನೆಗೆ ಬದಲಾಗಿರುವುದನ್ನು ಇಲ್ಲಿ ಗಮನಿಸಬಹುದು.

ಶೋಷಣೆಯ ಆಯಾಮಕ್ಕಿಂತ ಅವಕಾಶವಂಚಿತ ಆಯಾಮಕ್ಕೆ ಹೆಚ್ಚು ಒತ್ತು ನೀಡುತ್ತಿರುವುದರ ಜತೆಗೆ "ಮೀಸಲಾತಿ' ಎಂಬ ಪದವನ್ನು "ಪಾಲುದಾರಿಕೆ" ಎಂಬ ಪದಕ್ಕೆ ಸಮಾನಾರ್ಥಕವಾಗಿ ಬಳಸಲಾಗುತ್ತಿರುವುದನ್ನು ಕೂಡ ಗಮನಿಸಬಹುದು. ಐತಿಹಾಸಿಕ ತಪ್ಪುಗಳನ್ನು ಸರಿಪಡಿಸಲು ಅಮೆರಿಕಾ ಕಂಡುಕೊಂಡಿರುವ "ಸ್ವಯಂ ಪ್ರೇರಿತ" ಪಾಲುದಾರಿಕೆ ನೀತಿಗೆ ಸಾರ್ವತ್ರಿಕ ಮನ್ನಣೆ ದೊರಕಿದೆ. ಭಾರತದ ಮೀಸಲಾತಿ ನೀತಿಯನ್ನು ಕೂಡ ಪಾಲುದಾರಿಕೆ ನೀತಿಯ ಮತ್ತೊಂದು ರೂಪವಾಗಿ ಬಳಸಲಾಗುತ್ತಿದೆ. ಭಾರತದ ಮೀಸಲಾತಿ ಪ್ರಯತ್ನಗಳು ಅಮೆರಿಕೆಯ "ಪಾಲುದಾರಿಕೆ"ಯ ನೀತಿಗಿಂತ ಹಲವು ದಶಕಗಳಷ್ಟು ಹಳೆಯದು. ಭಾರತದ ಸಾರ್ವಭೌಮತ್ವಕ್ಕೆ ಸವಾಲಾಗಿ ಪರಿಣಮಿಸಿದ್ದ ಪರಿಸ್ಥಿತಿಗೆ ಉತ್ತರವಾಗಿ ಒಂದು ವಿಭಿನ್ನವಾದ ರಾಜಕೀಯ ನೆಲೆಗಟ್ಟಿನಲ್ಲಿ ಅಸ್ತಿತ್ವ ಪಡೆದುಕೊಂಡು, ಸಮಾಜದ ಬಹುಸಂಖ್ಯಾತರ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು ಮೀಸಲಾತಿ ಚಾಲ್ತಿಗೆ ಬಂದಿದ್ದು. ಭಾರತದಲ್ಲಿ ಬಗೆಹರಿಸಲಾಗದ

ಪಾಲುದಾರಿಕೆ ಅಥವಾ
ಸಕಾರಾತ್ಮಕ ಕ್ರಿಯಾಯೋಜನೆ

ಕಗ್ಗಂಟಾಗಿ ಉಳಿದಿದ್ದ ಸಮಸ್ಯೆಯ ಪರಿಹಾರ ಮಾರ್ಗವಾಗಿ ಮೀಸಲಾತಿಯನ್ನು ಅಳವಡಿಸಿಕೊಂಡ ವಿಶಿಷ್ಟ ರಾಜಕೀಯ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ನೋಡಿದರೆ, ಅಮೆರಿಕೆಯ ಪಾಲುದಾರಿಕೆ ಹಾಗೂ ಭಾರತದ ಮೀಸಲಾತಿ ಸಂಪೂರ್ಣ ವಿಭಿನ್ನವಾದ ಪರಿಕಲ್ಪನೆಗಳು ಎಂಬುದನ್ನು ನಾವು ತುರ್ತಾಗಿ ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ. (ಮೀಸಲು ಕ್ಷೇತ್ರಗಳನ್ನು ಕೂಡ ಮೀಸಲಾತಿ ಒಳಗೊಂಡಿದೆ ಎಂಬುದನ್ನು, ಮೀಸಲಾತಿ ವಿರೋಧಿಗಳು ಮರೆತರೂ ನಾವು ಇಲ್ಲಿ ಮರೆಯುವಂತಿಲ್ಲ.) ಪದಗಳು ಚಳವಳಿಗಳ ಅಸ್ತ್ರಗಳು. ಭಾರತದ ಮೀಸಲಾತಿ ನೀತಿಯ ಪ್ರಾಮುಖ್ಯತೆಯನ್ನು ಹಾಗೂ ಅದರ ರಾಜಕೀಯ ಮೂಲಗಳನ್ನು ಸಾರ್ವಜನಿಕ ಸ್ಮೃತಿಯಿಂದ ಅಳಿಸಿಹಾಕುವ ಉದ್ದೇಶದಿಂದ "ಪಾಲುದಾರಿಕೆ"ಯನ್ನು ಹೆಚ್ಚಿಗೆ ಬಳಸಲಾಗುತ್ತಿದೆ.

ಆಫ್ರಿಕಾ-ಅಮೆರಿಕಾ ಜೀತದಾಳುಗಳು ಹಾಗೂ ಅಮೆರಿಕೆಯ ಮೂಲನಿವಾಸಿಗಳನ್ನು ಹೊರತುಪಡಿಸಿ ಪ್ರತ್ಯೇಕವಾದ ರಾಷ್ಟ್ರವೊಂದನ್ನು ಅಮೆರಿಕೆಯ ಬಿಳಿಯ ಜನಾಂಗ ನಿರ್ಮಿಸಿಕೊಳ್ಳಲು ಹಲವಾರು ಐತಿಹಾಸಿಕ ಕಾರಣಗಳು ಕೆಲಸಮಾಡಿದ್ದವು. ಅಮೆರಿಕೆಯ ಮಾದರಿ ೧೮ನೇ ಶತಮಾನದ ಮೂಲ ಸೆಳೆವುಗಳಿಂದ ಹೊರಬಂದು ಹೊಸ ರೂಪ ಪಡೆದುಕೊಂಡಿತು. ಈ ಹೊಸ ಮಾದರಿ ತಡವಾಗಿಯಾದರೂ ಅಲ್ಲಿಯವರೆಗೆ ಕಡೆಗಣಿಸಲ್ಪಟ್ಟಿದ್ದ ಸಮುದಾಯಗಳನ್ನು "ಪಾಲುದಾರಿಕೆ" ನೀತಿ ಹಾಗೂ ಇತರ ಕೆಲವು ಕಾರ್ಯಕ್ರಮಗಳ ಮೂಲಕ ಮೇಲೆತ್ತುವ ಪ್ರಯತ್ನವನ್ನು ಶುರುವಿಟ್ಟಿಕೊಂಡಿತು. ಶಾಸನ ಕ್ರಮಗಳ ಬದಲಿಗೆ ಪ್ರಬಲ ಬಹುಸಂಖ್ಯಾತರ ನೈತಿಕತೆಗೆ ಜವಾಬ್ದಾರಿಯ ನೊಗ ಕಟ್ಟುವ "ಪಾಲುದಾರಿಕೆ" ನೀತಿಯನ್ನು ಜಾರಿಗೆ ತಂದುದರ ಪರಿಣಾಮವಾಗಿ ೧೯೬೦ ಮತ್ತು ೭೦ರ ದಶಕ ಕಂಡ ಪರಿಣಾಮಕಾರಿ ಸಾರ್ವಜನಿಕ ಹಕ್ಕುಗಳ ಚಳವಳಿಗಳ ಸಂದರ್ಭದಲ್ಲಿ ಆಫ್ರಿಕಾ-ಅಮೆರಿಕನ್ನರು ಮುಂದಿಟ್ಟಿದ್ದ ರಾಜಕೀಯ ಬೇಡಿಕೆಗಳಿಗೆ ತಿಲಾಂಜಲಿ ಇಡಲಾಯಿತು.

ಭಾರತ ೨೦ನೇ ಶತಮಾನದ ಮಧ್ಯೆ ಸಾಂವಿಧಾನಿಕ ಚೌಕಟ್ಟಿಗೆ ತನ್ನನ್ನು ತೊಡಗಿಸಿಕೊಳ್ಳುವ ಸಂದರ್ಭದಲ್ಲಿ ಅಮೆರಿಕೆಯ ಮೂಲ ಮಾದರಿಯಲ್ಲಿದ್ದ ಲೋಪದೋಷಗಳನ್ನು ತಾನೂ ಎರವಲು ಪಡೆದುಕೊಳ್ಳುವುದು ಅಪಾಯಕಾರಿಯಾಗಿತ್ತು. ಪೌರತ್ವ ತನ್ನ ಅಸ್ತಿತ್ವ ಪಡೆದುಕೊಳ್ಳಲು ಪ್ರಮುಖವಾಗಿ ಸಾರ್ವತ್ರಿಕ ಗುಣಲಕ್ಷಣ ಹೊಂದಿರಬೇಕಿತ್ತು. ಈ ಹಿನ್ನೆಲೆಯಲ್ಲಿ ಭಾರತೀಯ ಗಣರಾಜ್ಯಕ್ಕೆ ಮೀಸಲಾತಿ ರಚನಾತ್ಮಕ ಅವಶ್ಯಕತೆಯಾಗಿತ್ತು. ಪಾಲುದಾರಿಕೆ ಸಂಪೂರ್ಣವಾಗಿ ಬೇರೆಯದೇ ಆದ ರಾಜಕೀಯ ನೀತಿ. ಅಮೆರಿಕೆಯ ರಾಜಕೀಯ ಬಹುಮತ ಹಾಗೂ ರಾಷ್ಟ್ರದ ಪರಿಕಲ್ಪನೆಗೆ ಯಾವುದೇ ಮೂಲಭೂತ ಸವಾಲುಗಳಿರಲಿಲ್ಲ. ಇದೇ ಕಾರಣದಿಂದಾಗಿ ಪಾಲುದಾರಿಕೆ ನೀತಿಯ ಯಶಸ್ಸು ಅಥವಾ ವೈಫಲ್ಯವನ್ನು ಸಂಖ್ಯಾ ದೃಷ್ಟಿಯಿಂದ ಮೌಲ್ಯಮಾಪನ ಮಾಡಬಹುದು. ಇದೇ ವಾದವನ್ನು ಭಾರತದ ಮೀಸಲಾತಿ ನೀತಿಗೆ ಅನ್ವಯಿಸಲಾಗುವುದಿಲ್ಲ. ಭಾರತದ ಮೀಸಲಾತಿ ರಚನಾತ್ಮಕವಾಗಿದ್ದು ಸಾಮಾಜಿಕ-ಪ್ರತಿಮಾತ್ಮಕ ಗುಣ ಹೊಂದಿದೆ. ಸಂಖ್ಯೆಯ ದೃಷ್ಟಿಯಿಂದ ಕೂಡ ಭಾರತದ ಮೀಸಲಾತಿ ಅಮೆರಿಕೆಯ ಪಾಲುದಾರಿಕೆ ನೀತಿಗಿಂತ ಸಾಕಷ್ಟು ಭಿನ್ನವಾಗಿದೆ. ಅಮೆರಿಕೆಯ ಪಾಲುದಾರಿಕೆ ನೀತಿ ಅಲ್ಪಸಂಖ್ಯಾತರಿಗಾಗಿ ರಚನೆಯಾಗಿದ್ದರೆ, ಭಾರತದ ಮೀಸಲಾತಿ ಬಹುಸಂಖ್ಯಾತರಿಗಾಗಿ ರಚನೆಯಾಗಿದೆ.

ಸಮಾನತೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವುದಾಗಿ ಬೀಗುವ ಭಾರತದಲ್ಲಿ ವಿವಿಧ ಸಮುದಾಯಗಳು ಶ್ರೇಣೀಕೃತ ವ್ಯವಸ್ಥೆಯಡಿಯೇ ಅಸ್ತಿತ್ವದಲ್ಲಿರುವುದನ್ನು ಮೀಸಲಾತಿ ಸ್ಪಷ್ಟಪಡಿಸುತ್ತದೆ.

ಅಮೆರಿಕೆಯ ಸಾರ್ವಜನಿಕ ಕ್ಷೇತ್ರಕ್ಕೆ ಸ್ವತಂತ್ರ ನಾಗರಿಕರಾಗಿ ಕಪ್ಪು ಜನಾಂಗದವರು ಪ್ರವೇಶಿಸಿದ ಘಟನೆ ಕ್ರಾಂತಿಯಲ್ಲ. ಇದು ಕ್ರಾಂತಿಯ ನಂತರ ಸಂಭವಿಸಿದ ವಿದ್ಯಮಾನ. ಇದರಲ್ಲಿ ಸಾಮಾಜಿಕ ಕರಾರಿಗೆ ಅವಕಾಶವಿರಲಿಲ್ಲ. ಬದಲಿಗೆ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನೈತಿಕ ಜವಾಬ್ದಾರಿ ನಾಗರಿಕ ಸಮಾಜದ ಸುಪರ್ದಿಗೆ ಬಂತು. ಇದಕ್ಕೆ ವೈರುಧ್ಯವಾಗಿ ಭಾರತದಲ್ಲಿ ಯಾವುದೇ ಒಂದು ಸಮುದಾಯಕ್ಕೆ ಮೀಸಲಾತಿಯನ್ನು ಕಲ್ಪಿಸಲಾಗಲಿಲ್ಲ; ಬದಲಿಗೆ ಸಮಾನ ಗುಣಲಕ್ಷಣಗಳಿರುವ ಅಥವಾ ಆಧುನಿಕ ಆಯಾಮ ಹೊಂದಿರುವ ಜನವರ್ಗವನ್ನು ನಿರ್ಮಿಸುವ ಮೂಲೋದ್ದೇಶದ ನೆಲೆಗಟ್ಟಿನ ಮೇಲೆ ಭಾರತ ಗಣರಾಜ್ಯ ರಚನೆಯಾಯಿತು.

'ತಾರತಮ್ಯ' ಹಾಗೂ 'ಅವಕಾಶ ವಂಚನೆ' ಪರಿಕಲ್ಪನೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದರ ಜತೆಗೆ ಮೀಸಲಾತಿಯ ಸ್ವರೂಪ ಮತ್ತು ಕಾರ್ಯಗಳನ್ನು ಪಾಲುದಾರಿಕೆ ನೀತಿಯಿಂದ ಬೇರ್ಪಡಿಸುವುದರ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿರುವ "ಕೆನೆಪದರ"ದ ಪ್ರಶ್ನೆಯನ್ನು ಸಮರ್ಥವಾಗಿ ಕೈಗೆತ್ತಿಕೊಳ್ಳುವುದು ಸಾಧ್ಯವಾಗುತ್ತದೆ. ಆರ್ಥಿಕ ಆಧಾರಿತ ಮೀಸಲಾತಿ ನ್ಯಾಯಾಂಗ ಹಾಗೂ ಬುದ್ಧಿಜೀವಿಗಳ ಮೇಲೆ ಮೋಡಿ ಮಾಡಿರುವುದು ಕುತೂಹಲಕಾರಿ ವಿಷಯ. ಆರ್ಥಿಕ ನೆಲೆಗಟ್ಟಿನ ಮೇಲೆ ಈ ಮಟ್ಟದಲ್ಲಿ ತಾರತಮ್ಯ ನಡೆಯುತ್ತಿರುವ ನಿದರ್ಶನಗಳು ಪ್ರಪಂಚದ ಬೇರಾವ ರಾಷ್ಟ್ರಗಳಲ್ಲಿಯೂ ಕಂಡುಬರುವುದಿಲ್ಲ. ಶ್ರೀಮಂತ ಮತ್ತು ಬಡವರ್ಗಗಳ ನಡುವಿನ ಅಂತರವನ್ನು ಸರಿಪಡಿಸಲು ಸರ್ಕಾರ ಮಧ್ಯೆ ಪ್ರವೇಶಿಸಿದರೆ ಅವುಗಳನ್ನು ಸೋಷಲಿಸ್ಟ್ ರಾಷ್ಟ್ರ ಎಂದು ಕರೆಯಲಾಗುತ್ತದೆ.

ಇಂತಹ ರಾಷ್ಟ್ರಗಳ ಧ್ಯೇಯ ಉದ್ದೇಶಗಳು ಮೀಸಲಾತಿಯ ಗುರಿ-ಉದ್ದೇಶಗಳಿಗಿಂತ ಭಿನ್ನ. ಇಂತಹ ರಾಷ್ಟ್ರಗಳಲ್ಲಿ 'ಬಡವರು' ಶೋಷಣೆಗೆ ಒಳಗಾದ ಸಮುದಾಯಗಳಲ್ಲ, ಬದಲಿಗೆ ಕೇವಲ ಒಂದು ಆರ್ಥಿಕ ವರ್ಗ. ಆದರೆ ಭಾರತದಲ್ಲಿನ "ಕೆಳಜಾತಿಗಳು" ಶೋಷಿತ ಸಮುದಾಯಗಳು. ಸಮಾನತೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವುದಾಗಿ ಬೀಗುವ ಭಾರತದಲ್ಲಿ ವಿವಿಧ ಸಮುದಾಯಗಳು ಶ್ರೇಣೀಕೃತ ವ್ಯವಸ್ಥೆಯಡಿಯೇ ಅಸ್ತಿತ್ವದಲ್ಲಿರುವುದನ್ನು ಮೀಸಲಾತಿ ಸ್ಪಷ್ಟಪಡಿಸುತ್ತದೆ. ಜಾತಿ ಆಧಾರಿತ ತಾರತಮ್ಯ ಈಗಲೂ ಚಾಲ್ತಿಯಲ್ಲಿರುವುದು ಮತ್ತು ಜಾತಿಯನ್ನು ಮೀರಿದ ಒಂದು ಯಜಮಾನಿಕೆಯ ಅಸ್ಮಿತೆಯನ್ನು ನಿರ್ಮಿಸುವಲ್ಲಿನ ವೈಫಲ್ಯ ಮೀಸಲಾತಿಯ ಪ್ರಸ್ತುತತೆಯನ್ನು ಒತ್ತಿಹೇಳುತ್ತದೆ.

ವಿವಿಧ ಸಮುದಾಯಗಳನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಭಾರತ ಗಣರಾಜ್ಯಕ್ಕೆ ರಚನಾತ್ಮಕ ಸಂದರ್ಭ ಒದಗಿಬಂದಾಗ ಮೀಸಲಾತಿ ನೀತಿಯ ಅವಶ್ಯಕತೆ ಇತ್ತು. ಸಾರ್ವಜನಿಕವಾಗಿ ಜಾತಿಯನ್ನು ಪರಿಗಣಿಸಲು ನಿರ್ಲಕ್ಷಿಸಿದರೂ, ಮೀಸಲಾತಿಯ ಸುತ್ತ ವರ್ಷಗಳಿಂದ ಕೆಳಜಾತಿಗಳ 'ಹಿಂದುಳಿದಿರುವಿಕೆ'ಯ ವಾದಸರಣಿಯನ್ನು ಸರ್ಕಾರ ಬೆಳೆಸಿಕೊಂಡು ಬಂದಿದೆ. ಹಿಂದುಳಿದಿರುವಿಕೆಯ ವಿಚಾರದಲ್ಲಿಯೇ ಆರ್ಥಿಕ ಆಯಾಮ ಕೂಡ ಸೂಕ್ಷ್ಮವಾಗಿ ಒಳಗೊಂಡಿರುವುದನ್ನು ಗಮನಿಸಬಹುದು. ಈಗ ಮೀಸಲಾತಿಯ ಇದೇ ಆಯಾಮ ಚರ್ಚೆಗೆ ಗ್ರಾಸವಾಗಿರುವುದು. ಸರ್ಕಾರ ಇದಕ್ಕೆ ಪ್ರತ್ಯುತ್ತರವಾಗಿ ಪರಿಮಾಣಾತ್ಮಕ ಮತ್ತು ಗುಣಾತ್ಮಕ ನೆಲೆಯಲ್ಲಿ ವಿಶ್ಲೇಷಣೆ, ವಿವರಣೆ ನೀಡಿದೆ.

ದೇಶದ ವಿವಿಧ ವರ್ಗಗಳು ಗುಣಾತ್ಮಕ ಬೇಧಗಳನ್ನು ಪ್ರಮುಖವಾಗಿ ಉದಾಹರಿಸುತ್ತಿವೆ. ವಿವಿಧ ಸಮುದಾಯಗಳು ಸಮಾನ ಪರಿಸರದಲ್ಲಿ ನೆಲೆಸಿದ್ದರೂ ಒಂದರಿಂದ ಇನ್ನೊಂದು ಅಂತರ ಕಾಪಾಡಿಕೊಂಡು ಬಂದಿರುವುದು ಸತ್ಯ. ಸರ್ಕಾರ ಗುಣಾತ್ಮಕ ಭೇಧಗಳನ್ನು ಒಂದು ಹಂತದವರೆಗೆ ಪರಿಗಣಿಸಿದರೂ, ಇದನ್ನು ಹತ್ತಿಕ್ಕಲು ಪರಿಮಾಣಾತ್ಮಕ ವಿಚಾರಕ್ಕೆ ಶಾಸನಬದ್ಧತೆ ಒದಗಿಸಿದೆ. ಗುಣಾತ್ಮಕವಾದ ಸಮುದಾಯ ಕೇಂದ್ರಿತ ಮೀಸಲಾತಿಯ ಒತ್ತಾಯ ಹಾಗೂ ಪರಿಮಾಣಾತ್ಮಕ ದಿಕ್ಕಿನಲ್ಲಿ ನಡೆದಿರುವ ಸರ್ಕಾರದ ಪ್ರಯತ್ನಗಳ ನಡುವಿನ ಘರ್ಷಣೆ, ಇನ್ನೂ ಮುಕ್ತಿ ಕಾಣದೆ ಉಳಿದಿರುವ ಸಾಮಾಜಿಕ ಕ್ರಾಂತಿಯೆಡೆಗೆ ಬೆಟ್ಟು ಮಾಡಿ ತೋರಿಸುತ್ತದೆ. ಭಾರತೀಯ ಸಮಾಜದ ಸ್ವರೂಪದ ಬಗ್ಗೆ ವಿವಿಧ ಸಮುದಾಯ-ವರ್ಗಗಳ ಗ್ರಹಿಕೆಯಲ್ಲಿ ಬೃಹತ್ ಕಂದಕ ಏರ್ಪಟ್ಟಿರುವುದರಿಂದ ಪ್ರಸ್ತುತ ಈ ವಿಷಯದಲ್ಲಿ ಸಮಗ್ರತೆ, ಸಮನ್ವಯತೆ ಕಾಣುವುದು ಬಹುತೇಕ ಅಸಾಧ್ಯವಾಗಿದೆ.

ಗುಣಾತ್ಮಕ ಬೇಧಗಳ ಬಗ್ಗೆ ಕೆಲವು ವರ್ಗಗಳು ಮಂಡಿಸುತ್ತಿರುವ ವಾದಗಳಿಗೆ ಸಂಸತ್ತಿನಲ್ಲಿಯೂ ಕೂಡ ಸ್ವಲ್ಪಮಟ್ಟಿಗಿನ ಬೆಂಬಲ ವ್ಯಕ್ತವಾಗುತ್ತಿರುವುದು ಗಮನಿಸಬೇಕಾದ ಅಂಶ. ಸುಪ್ರೀಂಕೋರ್ಟ್‌ನ ತೀರ್ಪನ್ನು ನ್ಯಾಯಾಂಗ ಮತ್ತು ಶಾಸಕಾಂಗದ ನಡುವೆ ಹೆಚ್ಚುತ್ತಿರುವ ಘರ್ಷಣೆಯ ಹಿನ್ನೆಲೆಯಲ್ಲಿ ನೋಡಲಾಗುತ್ತಿದೆ. ಒಂದೆಡೆ ಸಂಸತ್ತು ಮತ್ತು ರಾಜಕೀಯ ಪಕ್ಷಗಳು ಕಳೆದ ಕೆಲವು ವರ್ಷಗಳಿಂದ ಮೀಸಲಾತಿಯ ಅಗತ್ಯತೆಯನ್ನು ಪ್ರತಿಪಾದಿಸುತ್ತಾ ಬರುತ್ತಿದ್ದರೆ ಇನ್ನೊಂದೆಡೆ ನ್ಯಾಯಾಂಗ ವಿವಿಧ ಬಗೆಯಲ್ಲಿ ತಡೆಯೊಡ್ಡುತ್ತಾ ಬಂದಿದೆ. ಸಂಸತ್ತಿನಲ್ಲಿ ಜಾತಿಗಳ ಪ್ರಾತಿನಿಧ್ಯತೆ ಬದಲಾಗಿದ್ದರೂ, ನ್ಯಾಯಾಂಗದ ಹಿಡಿತ ಈಗಲೂ "ಮೇಲು ಜಾತಿಗಳ" ಕೈಯಲ್ಲಿದೆ. ಈ ಹಿನ್ನೆಲೆಯಲ್ಲಿ ವಿಸ್ಮೃತಿಗೊಳಗಾಗಿರುವ ಬಹುತೇಕ "ಮೇಲು ಜಾತಿಗಳು" ದೇಶವನ್ನು ಉಳಿಸುವ ಸರ್ವಶಕ್ತ ಅಂಗವಾಗಿ ನ್ಯಾಯಾಂಗವನ್ನು ಅವಲಂಬಿಸುತ್ತಿರುವುದು ಅಚ್ಚರಿಯ ವಿಷಯವೇನಲ್ಲ.

ಮಂಡಲ್ ಪ್ರತಿಭಟನೆಯ ಸಂದರ್ಭದಲ್ಲಿನ ಘೋಷಣೆಗಳು ಮತ್ತೆ ಮರುಕಳಿಸುತ್ತಿರುವುದೂ ಇದೇ ಹಿನ್ನೆಲೆಯಲ್ಲಿಯೇ. ಪ್ರಬಲ ಸಮುದಾಯಗಳ ಎಗ್ಗಿಲ್ಲದೆ ಐವತ್ತು ವರ್ಷಗಳ ಹಿಂದೆ ಅಳವಡಿಸಿಕೊಳ್ಳಲಾದ ಮೀಸಲಾತಿಯ ಸಾಮಾಜಿಕ ಕರಾರರಿಗೆ ಹೊಸ ರೂಪ ಕೊಡುವ ಉದ್ದೇಶದಿಂದ ವಿವಿಧ ಗುಂಪುಗಳು ತಂತಮ್ಮ ಶ್ರೇಯೋಭಿವೃದ್ಧಿಗಳನ್ನು ಸ್ಪಷ್ಟಪಡಿಸಿಕೊಳ್ಳುತ್ತಿರುವ ಪ್ರಯತ್ನವಾಗಿ ಪ್ರಸ್ತುತ ಚಾಲ್ತಿಯಲ್ಲಿರುವ ಮೀಸಲಾತಿಯ ಚರ್ಚೆಗಳನ್ನು ಪರಿಗಣಿಸಬೇಕಿದೆ. **ಸೌಜನ್ಯ: 'ದಿ ಹಿಂದೂ'** (ಆಧಾರ: **ಹೈದರಬಾದ್‌ನ ತರ್ಕ ಅಧ್ಯಯನ ಕೇಂದ್ರ**) □

ಬಡತನ, ಅಸ್ಪೃಶ್ಯತೆ, ಆಧ್ಯಾತ್ಮಿಕ ಹಸಿವು ಹಾಗೂ ಧರ್ಮಾಂತರ

ಭಾರತದಂತಹ ದೇಶದಲ್ಲಿ ಜನಸಾಮಾನ್ಯರಿಗೆ ಅತ್ಯವಶ್ಯಕವಾಗಿರುವ ಆಧ್ಯಾತ್ಮಿಕ ಹಸಿವನ್ನು ಕಡೆಗಣಿಸುವಂತಿಲ್ಲ. ತಮ್ಮ ಪಾಲಿನ ಎಲ್ಲ ಬಗೆಯ ಕಡುಕಷ್ಟಗಳಿಗೆ ಅವರು ಧರ್ಮದಲ್ಲಿ ಸಾಂತ್ವನ ಹುಡುಕುತ್ತಿದ್ದಾರೆ. ಈಗಂತೂ ಜನ ಆಧ್ಯಾತ್ಮಿಕ ಸಾಂತ್ವನವನ್ನು ಅರಸಿ ದತ್ತಜಯಂತಿ, ಪ್ರಜಾಪಿತ ಬ್ರಹ್ಮಕುಮಾರಿ, ತರಳಬಾಳು ಹುಣ್ಣಿಮೆ, ಗೋಯಾತ್ರೆ-ಉತ್ಸವಗಳಲ್ಲಿ, ಯೋಗ-ಧ್ಯಾನ ಶಿಬಿರಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುತ್ತಿದ್ದಾರೆ. ರವಿಶಂಕರ್, ತರುಣಮುನಿ, ಬೆನ್ನಿಹಿನ್‌ರಂತಹ 'ಸಂತ'ರ ಬೆನ್ನ ಹಿಂದೆ ಬಿದ್ದಿದ್ದಾರೆ. ಧರ್ಮದ ದಾರಿಯಲ್ಲಿ ಸಾಮಾಜಿಕ ಬಿಡುಗಡೆಯನ್ನು ಬಯಸುತ್ತಿರುವ ಜನರ ಧಾರ್ಮಿಕ ಹಸಿವನ್ನು ನೀಗಿಸುವ ಮಟ್ಟಿಗಾದರೂ ಈ ಬಗ್ಗೆ ನಾವು ಆಲೋಚಿಸಬೇಕಾಗಿದೆ. ಅಲ್ಲದೆ, ಇಲ್ಲಿನ ಶ್ರೀಸಾಮಾನ್ಯರನ್ನು ನಾವು ಅನಿಕೇತನ ಪ್ರಜ್ಞೆಯನ್ನು ಧ್ಯಾನಿಸುವಷ್ಟರ ಮಟ್ಟಕ್ಕೆ ಬೆಳೆಸಿಲ್ಲ.

ಚಿಕ್ಕಮಗಳೂರು ಗಣೇಶ

೧೯೫೬ ಅಕ್ಟೋಬರ್ ೧೪ ಈ ನೆಲದ ದಮನಿತ ದಲಿತ ಚೇತನಗಳ ಪಾಲಿಗೆ ಸ್ಮರಣೀಯ ಸುವರ್ಣ ದಿನ. ವೈದಿಕ ಧರ್ಮದ ಸನಾತನವಾದ ಜಾತಿಗರ್ವಾಂಧತೆಗೆ ಡಾ॥ ಅಂಬೇಡ್ಕರ್ ವಾಚ್ಯವಾಗಿ ಪೆಟ್ಟನ್ನು ಕೊಟ್ಟಂತಹ ಸುದಿನ. "ಹುಟ್ಟು ನನ್ನ ಕೈಯಲ್ಲಿರಲಿಲ್ಲ. ಆದರೆ ಸಾವು ನನ್ನ ಕೈಯಲ್ಲಿದೆ. ನಾನು ಹಿಂದೂವಾಗಿ ಹುಟ್ಟಿದ್ದೇನೆ. ಹಿಂದೂವಾಗಿ ಸಾಯಲಾರೆ" ಎಂಬ ಮಹತ್ವದ ನಿರ್ಧಾರಕ್ಕೆ ಬಂದು, ತದನಂತರ ಆ ದಾರಿಯಲ್ಲಿ ಮುಂದುವರೆದು ತಮ್ಮ ಲಕ್ಷಾಂತರ ಅನುಯಾಯಿಗಳ ಜೊತೆ ಬೌದ್ಧಧರ್ಮ ದೀಕ್ಷೆ ಪಡೆದ ದಿನ. ಆ ಸಂದರ್ಭದ ಸುವರ್ಣ ನೆನಪಿನ ಕಾರ್ಯಕ್ರಮವನ್ನು ಈ ವರ್ಷ ನಾಡಿನೆಲ್ಲೆಡೆ ತುಂಬು ಆತ್ಮಾಭಿಮಾನದಿಂದ ಆಚರಿಸಲಾಗುತ್ತಿದೆ. ಜೊತೆಗೆ ಬೌದ್ಧಧಮ್ಮಕ್ಕೆ ಧರ್ಮಾಂತರ ಹೊಂದುವ ನಿರ್ಧಾರವನ್ನು ಕುರಿತಂತೆ ಸೂಕ್ಷ್ಮವಾಗಿ ಆಲೋಚಿಸಲಾಗುತ್ತಿದೆ.

ಈ ಧಮ್ಮ ದೀಕ್ಷೆಯ ತಾತ್ವಿಕ ಚಳವಳಿಯನ್ನು ಅದರ ಶೈಶವದಲ್ಲೇ ಹಿಮ್ಮೆಟ್ಟಿಸಲು ಈಗಾಗಲೇ ಹಲವು ಕಡೆ ಟೀಕೆ ಟಿಪ್ಪಣಿಗಳ ಮಹಾಪೂರವೇ ಹರಿಯತೊಡಗಿದೆ. ಸಮಾನತೆಯ ಸಮಾಜಕ್ಕಾಗಿ ದಲಿತ ಚೇತನಗಳು ವಿಮೋಚನೆಯ ದಾರಿಯನ್ನು ಬೌದ್ಧಧರ್ಮದಲ್ಲಿ ಕಂಡುಕೊಳ್ಳಲು ಶುರುಮಾಡುತ್ತಿದ್ದಂತೆಯೇ ಹಿಂದೂಧರ್ಮ ಮುದಿಮೂಳೆ ಮಿಸುಕಾಡತೊಡಗಿದೆ. ಮುಂದಿನ ಪೀಳಿಗೆ ಹಿಂದೂಗಳ ಹಿತವನ್ನು ಗಮನದಲ್ಲಿಟ್ಟುಕೊಂಡು– ಇಂತಹ ಮತಾಂತರವನ್ನು ಹಿಮ್ಮೆಟ್ಟಿಸಲು–ನಾಡಿನ ಧರ್ಮಸಂಸತ್ತು ಮೈಕೊಡವಿಕೊಂಡು ಮೇಲೆದ್ದು, ಸಾಧುಸಂತರ ಸಮಾವೇಶವನ್ನು ಕೂಡ (ನವೆಂಬರ್ ೨೮) ಏರ್ಪಾಡು ಮಾಡಿ ಮುಗಿಸಿದೆ.

ಬೌದ್ಧ ಜೀವನ ಮಾರ್ಗವನ್ನು ನಾಶಪಡಿಸುವ ವಿಫಲ ಪ್ರಯತ್ನಗಳು ಅದು ಜನ್ಮ ತಳೆದ ಕಾಲದಿಂದಲೂ ನಡೆಯುತ್ತ ಬಂದಿವೆ; ಇದು ಹೊಸ ತಯಾರಿಯೇನಲ್ಲ. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಸಂವಿಧಾನಬದ್ಧವಾಗಿ ಜಾರಿಯಲ್ಲಿರುವ ಈ ದಿನಮಾನಗಳಲ್ಲೇ ಇದರ ಪರಿ ಹೀಗಿರಬೇಕಾದರೆ, ವೈದಿಕ ದೌರ್ಜನ್ಯದ ಉತ್ಥಾನಾವಸ್ಥೆಯ ಆ ಸಂದರ್ಭದಲ್ಲಿ ಬೌದ್ಧ ಧರ್ಮ ಇಡೀ ಭಾರತ ಖಂಡದಿಂದ ಕಾಲ್ಕೆಗೆಯದೆ ಬೇರೆ ದಾರಿಯೇ ಇರಲಿಲ್ಲ. ಸನಾತನ ಧರ್ಮವು ಮಿಕ್ಕಂತೆ ಬಂದ ಯಾವ ಚಿಂತನೆಗಳಿಂದಲೂ ಪಾಠ ಕಲಿಯದೆ, ಅವಕ್ಕೇ ತಿರುಗಿ ಪಾಠ ಕಲಿಸುವ ತಂತ್ರಗಾರಿಕೆಯನ್ನು ಮಾತ್ರ ಬಹಳ ಚೆನ್ನಾಗಿ ಅರಗಿಸಿಕೊಂಡು ಕೊಬ್ಬಿದೆ. ಅಂತೆಯೇ ಬುದ್ಧನ ಜೀವಪರ ತಹತಹಗಳು ಅದಕ್ಕೆ ರುಚಿಸಲಿಲ್ಲ. ಒಂದರ್ಥದಲ್ಲಿ ಅಂಬೇಡ್ಕರ್‌ರವರು ದಿಕ್ಕುತಪ್ಪಿ ಹೋಗಿದ್ದ ಬೌದ್ಧ ಧರ್ಮವನ್ನು ಮರಳಿ

ಮನೆಗೆ ತಂದಿದ್ದಾರೆ. ತರುವ ಮೊದಲೇ ವಿಕೃತಗೊಂಡು ಬೆಳೆದಿದ್ದ ಅದರ ಕಿರೀಟ, ಭುಜಕೀರ್ತಿ, ಖಡ್ಗಗದಾಸಂಕುಲಗಳನ್ನೆಲ್ಲಾ ವಿಚಾರಾಸ್ತ್ರದಿಂದ ಸವರಿ ಶುದ್ಧಗೊಳಿಸಿದ್ದಾರೆ. ಬುದ್ಧ ಗುರುವಿನ ಸಂದೇಶವನ್ನು ಅವರ ಮೂಲ ದನಿಯಲ್ಲೇ ಹಿಡಿದಿಟ್ಟು ಕೊಟ್ಟಿದ್ದಾರೆ. ಈಗ ದಲಿತ ಶಕ್ತಿಗಳು ಅಂಬೇಡ್ಕರ್‌ರವರು ನೆಟ್ಟು ಕಸಿ ಕಟ್ಟಿರುವ ಈ ಹೊಸ ಧರ್ಮವನ್ನು ನೀರುಣಿಸಿ ಬೆಳೆಸುವ ಸಹಜ ಪ್ರಯತ್ನದಲ್ಲಿ ತಲ್ಲೀನವಾಗಿದೆ.

ಇದು ಈ ದೇಶದ ಎಲ್ಲ ಜಾತಿಯ, ಎಲ್ಲ ಸ್ತರದ, ಎಲ್ಲ ವರ್ಗದ ಜನರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಸೂಕ್ಷ್ಮ ವಿಚಾರ. ಬಹಿರಂಗವಾಗಿ ದಲಿತ ಚೇತನಗಳನ್ನು ಅಟ್ಟಾಡಿಸಿಕೊಂಡು ಸುಡುತ್ತಿರುವ, ಎಲ್ಲೆಂದರಲ್ಲಿ ಬೆತ್ತಲೆಗೊಳಿಸುತ್ತಿರುವ, ದಲಿತರ ಆತ್ಮ ಗೌರವದ ಪ್ರತೀಕಗಳನ್ನು ವಿರೂಪಗೊಳಿಸುತ್ತಿರುವ ತಿಳಿಗೇಡಿ ಮನಸ್ಸುಗಳಿಗೆ ಕುಮ್ಮಕ್ಕು ಯಾವ ಧರ್ಮದಿಂದ ದೊರೆಯುತ್ತಿದೆ? ಪುರೋಹಿತಶಾಹಿಯ ಸಂಸತ್ತು ಎನಿಸಿದ 'ದೇಗುಲ' ವ್ಯವಸ್ಥೆಯಲ್ಲಿ ಇಲ್ಲಿಯವರೆವಿಗೂ ಒಂದಾದರೂ ದಲಿತಪರ ಪರಿವರ್ತನೆ ಆಗಿದೆಯೇ? ಈ ದೇಶದ ಜನಸಾಮಾನ್ಯರ ಕೊರಳಿಗೆ ಉರುಳಾಗಿರುವ ವೈದಿಕಾಚರಣೆಗಳ ಬಗ್ಗೆ ಯಾರಾದರೂ ತಲೆಕೆಡಿಸಿಕೊಂಡಿದ್ದಾರೆಯೇ? ಸಂಘಪರಿವಾರಗಳ ಬಗ್ಗೆ ಚಿಂತಕರು ಎತ್ತುತ್ತಿರುವ ಪ್ರಶ್ನೆಗಳ ಸಂಬಂಧದಲ್ಲಿ ಪ್ರತಿದಿನ ಛೀಮಾರಿ ನಡೆಯುತ್ತಿರುವುದೇಕೆ? so, ಈ ಬಗ್ಗೆ ಎಲ್ಲ ಸಾಂಸ್ಕೃತಿಕ ಸ್ತರದ ಜನರು ಶತಮಾನಗಳ ತಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ರೂಪದಲ್ಲಿ ಇನ್ನಾದರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಮೊದಲಿಗೇ ಸ್ಪಷ್ಟಪಡಿಸಬಹುದಾದ ವಿಚಾರವೆಂದರೆ: ಯಾವುದೇ ಧರ್ಮದ ಸಾಂಸ್ಥೀಕರಣದ ಬಗ್ಗೆ ನಮ್ಮ ಕಡುವಿರೋಧವಿದ್ದೇ ಇದೆ. ಮತಧರ್ಮದ ಸಾಂಸ್ಥೀಕರಣವು ಅಂತಿಮವಾಗಿ ಜೀವವಿರೋಧಿಯಾಗಿಯೇ ಇರುತ್ತದೆಂಬ ಸತ್ಯ ನಮಗೆಲ್ಲರಿಗೆ ಗೊತ್ತಿದೆ. ಜಾತಿ–ಮತ–ಧರ್ಮದಿಂದ ದೂರವಾದ ಆದರ್ಶ ಜಗತ್ತಿನಲ್ಲಿ ಬಾಳಬೇಕೆಂಬ ಆಸೆಯಿಂದ ನಾವೇನೂ ವಿಮುಕ್ತರಾಗಿಲ್ಲ. ಕುವೆಂಪು ಸೂಚಿಸಿರುವ ಎಲ್ಲ ತತ್ವದೆಲ್ಲೆ ಮೀರಿದ ಅನಿಕೇತನ ಪ್ರಜ್ಞೆಯಲ್ಲಿ ಬಾಳುವುದು ನಮ್ಮ ಕನಸಾಗಿದೆ. ಆದರೆ ಅದು ಎಷ್ಟು ಮಂದಿಗೆ ಸಾಧ್ಯ? ಅಲ್ಲದೆ, ಮನುಷ್ಯದ್ವನಿಯೇ ಕ್ಷೀಣವಾಗುತ್ತಿರುವ ಇಂದಿನ ಯಾಂತ್ರಿಕ ಯುಗದಲ್ಲಿ ಜನಸಮುದಾಯವು ಕೊನೆಗೆ ಧರ್ಮದತ್ತ ವಾಲುತ್ತಿರುವುದನ್ನು ನಾವು ನಿಚ್ಚಳವಾಗಿ ಕಾಣುತ್ತಿದ್ದೇವೆ.

ಭಾರತದಂತಹ ದೇಶದಲ್ಲಿ ಜನಸಾಮಾನ್ಯರಿಗೆ ಅತ್ಯವಶ್ಯಕವಾಗಿರುವ ಆಧ್ಯಾತ್ಮಿಕ ಹಸಿವನ್ನು ಕಡೆಗಣಿಸು

ವಂತಿಲ್ಲ. ತಮ್ಮ ಪಾಲಿನ ಎಲ್ಲ ಬಗೆಯ ಕಡುಕಷ್ಟಗಳಿಗೆ ಅವರು ಧರ್ಮದಲ್ಲಿ ಸಾಂತ್ವನ ಹುಡುಕುತ್ತಿದ್ದಾರೆ. ಈಗಂತೂ ಜನ ಆಧ್ಯಾತ್ಮಿಕ ಸಾಂತ್ವನವನ್ನು ಅರಸಿ ದತ್ತ ಜಯಂತಿ, ಪ್ರಜಾಪಿತ ಬ್ರಹ್ಮಕುಮಾರಿ, ತರಳಬಾಳು ಹುಣ್ಣಿಮೆ, ಗೋಯಾತ್ರೆ-ಉತ್ಸವಗಳಲ್ಲಿ, ಯೋಗ-ಧ್ಯಾನ ಶಿಬಿರಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುತ್ತಿದ್ದಾರೆ. ರವಿ ಶಂಕರ್, ತರುಣಮುನಿ, ಬೆನ್ನಿಹಿನ್‌ರಂತಹ 'ಸಂತ'ರ ಬೆನ್ನ ಹಿಂದೆ ಬಿದ್ದಿದ್ದಾರೆ. ಧರ್ಮದ ದಾರಿಯಲ್ಲಿ ಸಾಮಾಜಿಕ ಬಿಡುಗಡೆಯನ್ನು ಬಯಸುತ್ತಿರುವ ಜನರ ಧಾರ್ಮಿಕ ಹಸಿವನ್ನು ನೀಗಿಸುವ ಮಟ್ಟಿಗಾದರೂ ಈ ಬಗ್ಗೆ ನಾವು ಆಲೋಚಿಸಬೇಕಾಗಿದೆ. ಅಲ್ಲದೆ, ಇಲ್ಲಿನ ಶ್ರೀಸಾಮಾನ್ಯರನ್ನು ನಾವು ಅನಿಕೇತನ ಪ್ರಜ್ಞೆಯನ್ನು ಧ್ಯಾನಿಸುವಷ್ಟರ ಮಟ್ಟಕ್ಕೆ ಬೆಳೆಸಿಲ್ಲ. ಅಕ್ಷರ ಸಂಪತ್ತಿನಿಂದ ವ್ಯವಸ್ಥಿತವಾಗಿ ವಂಚಿಸಿ ಕತ್ತಲೆಯಲ್ಲಿ ಅವರನ್ನು ಕೈ ಬಿಟ್ಟು, ಅವರ ಶ್ರಮದ ಕಾವಿನಲ್ಲಿ ನಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಿದ್ದೇವೆ. ಅವರೆದುರು ಕರಗಲಾರದಷ್ಟು ಮಹಾಮೌಢ್ಯದ ಗುಡ್ಡವನ್ನು ಇಟ್ಟಿದ್ದೇವೆ. ನಾವು ಮಾತ್ರ ಬೆಚ್ಚಗೆ ಕೂತು ಅನಿಕೇತನ ಪ್ರಜ್ಞೆಯ ಬಗ್ಗೆ ದಿನಗಟ್ಟಲೆ ಭಾಷಣ ಮಾಡುತ್ತಿದ್ದೇವೆ.

ಎಲ್ಲರಿಗೂ ತಿಳಿದಿರುವಂತೆ ಹಿಂದೂಧರ್ಮದ ಜೀವಶೋಷಕ ಮೌಲ್ಯಗಳು ಜನಸಮಸ್ತರ ಆಶೋತ್ತರಗಳನ್ನು ಕಾಲದಿಂದಲೂ ಕಡೆಗಣಿಸಿವೆ. ಪ್ರಪಂಚದಲ್ಲಿಯೇ ದೊಡ್ಡದಾದ ಪ್ರಜಾಪ್ರಭುತ್ವ ತತ್ವದಡಿಯಲ್ಲಿ ಬದುಕುತ್ತಿದ್ದರೂ ಪ್ರಜೆಗಳ ಪಾಲಿಗೆ ಸಮಾನತೆ ಎಂಬುದು ಇಲ್ಲಿ ಗಗನಕುಸುಮವಾಗಿದೆ. ಜಗತ್ತಿನಾದ್ಯಂತ ಹೆಸರು ಮಾಡಿದ ವಿಜ್ಞಾನಿಗಳು, ಇಂಜಿನಿಯರುಗಳು, ತತ್ವಜ್ಞಾನಿಗಳು, ಸಂತರು ಶರಣರು, ಬುದ್ಧಿಜೀವಿಗಳು ಇದ್ದಾಗ್ಯೂ ಸನಾತನ ಯಜ್ಞ ಕುಂಡಕ್ಕೆ 'ದಲಿತರ ರಕ್ತ'ದ ಆಜ್ಯ ಸಾಕುಗುತ್ತಿಲ್ಲ. ಕ್ರೌರ್ಯವನ್ನು ಅನುಭವಿಸಿ ಸುಖಿಸುವ ಕಣ್ಣುಗಳಿಗೆ ದಲಿತ ಹೆಣ್ಣು ಮಕ್ಕಳ ಬೆತ್ತಲೆ ದೇಹಗಳನ್ನು ನೋಡಿದಷ್ಟೂ ಆಸೆ ತಣಿಯುತ್ತಿಲ್ಲ. ತಂತಮ್ಮ ದೇವರು, ದಿಂಡರುಗಳನ್ನು ಖಾಸಗಿಯಾಗಿ ಪ್ರೀತಿಸುವ, ಆರಾಧಿಸುವ ಕನಿಷ್ಟ ಹಕ್ಕನ್ನು ಕ್ರಮೇಣ ಕಿತ್ತುಕೊಳ್ಳಲಾಗುತ್ತಿದೆ. ಪರಿಣಾಮ ರವಿಶಂಕರರೋ, ತರುಣಮುನಿ ಸಾಗರರೋ, ಬೆನ್ನಿಹಿನ್ನೋ, ಬಿನ್‌ಲಾಡನ್ನೋ ಹೇಳಿದ್ದು ವೇದವಾಕ್ಯವಾಗಿ ಪಸರಿಸುತ್ತಿದೆ. ಒಟ್ಟಾರೆ ಫಲಿತಾಂಶವಾಗಿ ಧಾರ್ಮಿಕ ಅವಲಂಬನೆಯೇ ಮನುಷ್ಯನ ಮೂಲಭೂತ ಹಸಿವೆಂಬುದು ದೃಢಪಡುತ್ತಿದೆ.

ಎಣಿಕೆಯನ್ನು ಮೀರಿದ ಧರ್ಮಗಳು ಜೀವಂತವಾಗಿರುವಾಗ ಬೌದ್ಧಧರ್ಮದ ಕಡೆಗೇ ಏಕೆ ಮುಖ ಮಾಡಬೇಕು? ಈ ಪ್ರಶ್ನೆ ಎಲ್ಲರ ಹುಬ್ಬೇರುವಂತೆ ಮಾಡಿದೆ. ನಿಜ, ಹಾಗೆ ನೋಡಿದರೆ ನಮ್ಮ ನೆಲದಲ್ಲಿ ಇಡೀ ಜಗತ್ತಿನಲ್ಲೇ ವಿಶಿಷ್ಟವೆನಿಸಿದ ಬಸವ ಧರ್ಮವಿದೆ. (ಜಗತ್ತಿನ ಮೊಟ್ಟಮೊದಲ Secular Academy ಯನ್ನು ಕಟ್ಟಿದ ಬಸವಣ್ಣನು ಕೊಟ್ಟ ಧರ್ಮ; ನುಡಿದಂತೆ ನಡೆದ ಶಿವಶರಣರು ಬದುಕಿ ಬೆಳಗಿದ ಧರ್ಮ ಇದು) ಆದರೆ ಭೂತದ ಸತ್ಯವನ್ನು ಅರಗಿಸಿಕೊಳ್ಳಲಾಗದ ಸ್ಥಿತಿಯಲ್ಲಿ ಬಸವನ ಹುಸಿ ಅನುಯಾಯಿಗಳು ಶ್ರೇಷ್ಠತೆಯ ವ್ಯಸನದಲ್ಲಿ ತೊಡಗಿದ್ದಾರೆ. ಚಿದಾನಂದಮೂರ್ತಿ ಅಂಥವರಿಗೆ ಬಸವಧರ್ಮ ಹಿಂದೂಧರ್ಮದೊಳಗೆ ಜೀರ್ಣವಾಗಿರುವ ಬಗ್ಗೆ ಕಿಂಚಿತ್ ದುಃಖವಿಲ್ಲ; ಬದಲಿಗೆ ಬಹುತ್ ಖುಷಿಯಿದೆ. ಇಂಥವರಿಂದ ಬಸವಧರ್ಮದ ತಾತ್ವಿಕ ಬೆಳಕಿನ ಪ್ರಕಾಶಕ್ಕೆ ಅವಕಾಶವಿಲ್ಲವಾಗಿದೆ. ಗಾಂಧಿಯ ರಾಮರಾಜ್ಯದ ಆಶಯಕ್ಕೂ ಇದಕ್ಕಿಂತ ಉನ್ನತ ಸ್ಥಾನ ದೊರಕಲಾರದು. ಭೈರಪ್ಪನಂಥವರ ಸಂತಾನವಿರುವವರೆಗೂ ಹಿಂದೂಧರ್ಮದ ವಕ್ತಾರ ಭಗವಾನ್ ಶ್ರೀ ಕೃಷ್ಣನಿಗೆ ಸೆರೆಮನೆಯೇ ಗತಿ!

ರಾಮಮಂದಿರಗಳು, ಅಷ್ಟಮಠಗಳು, ದತ್ತಪೀಠಗಳು ದಲಿತ-ಅಲ್ಪಸಂಖ್ಯಾತರ ಪಾಲಿಗೆ ಬಲಿಪೀಠಗಳಾಗಬಹುದು. ಅಥವಾ ಸ್ವಲ್ಪ ಉದಾರ ಹೃದಯವಂತರಾದರೆ ಈ ವ್ಯವಸ್ಥೆಯ ಗಂಡುಗರ್ವದ ಬಾವುಟವನ್ನೋ, ಮುದಿಮೂಳೆಗಳನ್ನು ಮಲಗಿಸಿದ ಅಡ್ಡಪಲ್ಲಕ್ಕಿಗಳನ್ನೋ ಹೊತ್ತು ತಿರುಗುವ ಜೋಕರ್‌ಗಳಾಗಬಹುದು ಈ ನೆಲದಲ್ಲಿ ಕೊಳೆತು ನಾರುವ ಶತಮಾನಗಳ ಮಲ ಹೊತ್ತು ಹೊತ್ತು ಸುಸ್ತಾಗಿದ್ದೇವೆ. ಆದರೆ, ಸಾರ್ವಜನಿಕ ಅಸಹ್ಯಗಳಲ್ಲಿ ತೊಡಗುವ ಮಠಮಾನ್ಯ ನಾಯಕಮಣಿಗಳ ತಲೆಯೊಳಗಿನ ಮಲತೊಳೆಯಲು ಸಾಧ್ಯವಾಗದೆ ಕೈ ಚೆಲ್ಲಿದ್ದೇವೆ. ನಿಂತ ನೆಲೆಗಳನ್ನೆಲ್ಲಾ ಶೋಧಿಸಿ ಅಂತಿಮವಾಗಿ ಈ ನಿರ್ಧಾರಕ್ಕೆ ಬಂದಿದ್ದೇವೆ. ಇನ್ನು ಮುಂದಾದರೂ ಕೀಳರಿಮೆಯ ಅನುಭವವನ್ನು ಗಾಳಿಗೆ ತೂರಿ, ಆತ್ಮವಿಶ್ವಾಸದ ಬಂಡಿಯೇರಿ ಹೊರಡುತ್ತೇವೆ.

ಹೆಚ್ಚೆಂದರೆ ನಿಮ್ಮ ರಾಮಮಂದಿರಗಳು, ಅಷ್ಟಮಠಗಳು, ದತ್ತಪೀಠಗಳು ದಲಿತ-ಅಲ್ಪಸಂಖ್ಯಾತರ ಪಾಲಿಗೆ ಬಲಿಪೀಠಗಳಾಗಬಹುದು ಅಷ್ಟೆ. ಅಥವಾ ಸ್ವಲ್ಪ ಉದಾರ ಹೃದಯವಂತರಾದರೆ ಈ ವ್ಯವಸ್ಥೆಯ ಗಂಡುಗರ್ವದ ಬಾವುಟವನ್ನೋ, ಮುದಿಮೂಳೆಗಳನ್ನು ಮಲಗಿಸಿದ ಅಡ್ಡಪಲ್ಲಕ್ಕಿಗಳನ್ನೋ ಹೊತ್ತುತಿರುಗುವ ಜೋಕರ್‌ಗಳಾಗಬಹುದು ನಾವು ಅಷ್ಟೆ. ಈ ನೆಲದಲ್ಲಿ ಕೊಳೆತು ನಾರುವ ಶತಮಾನಗಳ ಮಲ ಹೊತ್ತು ಹೊತ್ತು ಸುಸ್ತಾಗಿದ್ದೇವೆ. ಆದರೆ, ಸಾರ್ವಜನಿಕ ಅಸಹ್ಯಗಳಲ್ಲಿ ತೊಡಗುವ ಮಠಮಾನ್ಯ ನಾಯಕಮಣಿಗಳ ತಲೆಯೊಳಗಿನ ಮಲತೊಳೆಯಲು ಸಾಧ್ಯವಾಗದೆ ಕೈ ಚೆಲ್ಲಿದ್ದೇವೆ. ನಿಂತ ನೆಲೆಗಳನ್ನೆಲ್ಲಾ ಶೋಧಿಸಿ ಅಂತಿಮವಾಗಿ ಈ ನಿರ್ಧಾರಕ್ಕೆ ಬಂದಿದ್ದೇವೆ. ಇನ್ನು ಮುಂದಾದರೂ ಕೀಳರಿಮೆಯ ಅನುಭವವನ್ನು ಗಾಳಿಗೆ ತೂರಿ, ಆತ್ಮವಿಶ್ವಾಸದ ಬಂಡಿಯೇರಿ ಹೊರಡುತ್ತೇವೆ.

ಧರ್ಮಾಂತರದ ಅವಶ್ಯಕತೆ: ಧರ್ಮಾಂತರದ ಮೂಲಕ ಹಿಂದೂಧರ್ಮದ ಪುರಾತನ ಗರ್ವಕ್ಕೆ ಅಂಬೇಡ್ಕರ್ ಕೊಟ್ಟ ಸ್ವಾಭಿಮಾನದ ಪೆಟ್ಟು ಮುಟ್ಟಿನೋಡಿಕೊಳ್ಳುವಂಥದ್ದಾಗಿದೆ. ಸಾಮಾಜಿಕ ಜಡತೆಯ ನಡುವೆ ಇಂಥದ್ದೊಂದು ಜೀವಂತ ಚಲನೆಗೆ ವೇಗವರ್ಧಕರಾಗಬೇಕಾದ ತುರ್ತಿಗಾದರೂ ಸಾಂಕೇತಿಕವಾಗಿ ಧರ್ಮಾಂತರದ ಅವಶ್ಯಕತೆ ಇದೆ. ಅದು ದಲಿತರಿಗೆ ಬಹಳ ದೊಡ್ಡ ಗೌರವ, ಹಣ, ಅಂತಸ್ತು, ಅನ್ನಾಹಾರ ತಂದುಕೊಡದೆ ಇರಬಹುದು. ಅನುಕ್ಷಣವೂ ಆತ್ಮಗೌರವಕ್ಕೆ ಬೀಳುತ್ತಿರುವ ಪೆಟ್ಟಿನ ಗಾಯವನ್ನು ಮಾಯಿಸಲಾದರೂ ನಮಗೊಂದು ಧರ್ಮ ಬೇಕಾಗಿದೆ. ಕಾಲದುದ್ದಕ್ಕೂ ಎಡೆಬಿಡದೆ ನಡೆಯುತ್ತಿರುವ ಅವಮಾನಗಳ ಹಳೆ ಚರಿತ್ರೆಯಿಂದ ಗುಳೆ ಹೊರಡಲು ನಾವು ದೃಢನಿರ್ಧರಿಸಿದ್ದೇವೆ. ಮನೆಯೊಳಗೆ ಮನೆಯೊಡೆಯರಿರದೆ ಹೇಗೆ ಬಾಳುತ್ತಾರೋ ಕಾದು ನೋಡುತ್ತೇವೆ.

ಸಾಮಾಜಿಕ, ಧಾರ್ಮಿಕ, ತಾತ್ವಿಕವಾಗಿ ಯಾವ ನಿಟ್ಟಿನಿಂದ ನೋಡಿದರೂ ಬೌದ್ಧ ಧರ್ಮ ಅತ್ಯಂತ ಜೀವಪರವಾದ ಧರ್ಮ. ನಮಗೆ ತಿಳಿದಂತೆ ಕಾಮನ್ ಸೆನ್ಸ್ ಇರುವ ಪ್ರಪಂಚದ ಮೊತ್ತಮೊದಲ ಮನುಷ್ಯ ಬುದ್ಧ. ಮುಟ್ಟುವುದನ್ನೇ ಹುಟ್ಟಾ ನಿಷೇಧಿಸಿದ್ದ ವ್ಯವಸ್ಥೆಯಲ್ಲಿ ಜೀವಪರಿಸರದ ನಾಡಿಮಿಡಿತವನ್ನು ಮುಟ್ಟಿ ಮೈದಡವಿದ ಸಂತ; ಸಕಲ ಜೀವಾತ್ಮಗಳ ಬಿಟ್ಟಾಲಿಗಳ ನಿಟ್ಟುಸಿರಿಗೆ ಸಾಂತ್ವನವನ್ನು ನೇವರಿಸಿದ ಮಹಾತ್ಮ; ಯುದ್ಧ ಸಂಬಂಧೀ ಹಿಂಸೆಗಳನ್ನು ಸ್ಪಷ್ಟ ಮಾತುಗಳಲ್ಲಿ ವಿರೋಧಿಸಿದ ಪ್ರಪಂಚದ ಸರ್ವಶ್ರೇಷ್ಠ ಶಾಂತಿದೂತ ಆತ. ಅಂಥದೊಂದು ಮಿಡಿವ ಚೇತನವನ್ನು ಬಳುವಳಿಯಾಗಿ ಕೊಟ್ಟ ಅರಳಿ ಮರದ ನೆರಳಿಗೆ ನಾವು ಋಣಿಯಾಗಿದ್ದೇವೆ. ಇನ್ನು ಮುಂದೆ ಶತಮಾನದ ಅವಮಾನಗಳ ಸ್ಮೃತಿಯ ನೆಲೆಯಿಂದ ಜೀವ ಶೋಷಕ ಧರ್ಮವನ್ನು ಸಾರಾಸಗಟು ಧಿಕ್ಕರಿಸುತ್ತೇವೆ. ನಮ್ಮ ನಮ್ಮದೇ 'ಅಧೋ' ಬದುಕಿನ ನುಡಿಗಟ್ಟುಗಳ ಮೂಲಕ ಆ ಚೇತನವನ್ನು ಆವಾಹಿಸಿಕೊಳ್ಳಲು ಮುನ್ನಡೆಯುತ್ತೇವೆ.

ಸಾಂಸ್ಥೀಕರಣಗೊಂಡ ಬೌದ್ಧಧರ್ಮ ಕೂಡ ಜಗತ್ತಿನ ಉಳಿದೆಲ್ಲ ಧರ್ಮಗಳ ಸಾಲಿಗೆ ಸೇರುವಷ್ಟರ ಮಟ್ಟಿಗೆ ಭ್ರಷ್ಟಗೊಂಡಿದೆ. ಪುರೋಹಿತಶಾಹಿ ಹಿತಾಸಕ್ತಿಗಳ ದಾಳವಾಗಿಯೇ ಅದು ಪ್ರಯೋಗವಾಗುತ್ತಿದೆ. ಬೌದ್ಧ ಧರ್ಮವನ್ನು ಪಾಲಿಸುತ್ತಿರುವ ದೇಶಗಳಲ್ಲೇ ಅಸಮಾನತೆಯಂತು ಕೆಲಮಟ್ಟಿಗೆ ಜೀವಂತವಾಗಿದೆ. ಅಂದ ಮಾತ್ರಕ್ಕೆ ಭಾರತದಲ್ಲಿ ಅದನ್ನು ವಿರೋಧಿಸುತ್ತಿರುವ ದುಷ್ಟಶಕ್ತಿಗಳ . ಹಿಂದಿನ ನಯವಂಚಕತನದ ನೇಣಿಗೆ ಕೊರಳೊಡ್ಡಲಾರೆವು. ಆ ಎಚ್ಚರವನ್ನು ಡಾ॥ ಅಂಬೇಡ್ಕರ್ ತಮ್ಮ ಶೋಧನೆಗಳ ಮೂಲಕ ನಮಗೆ ಈಗಾಗಲೇ ತಿಳಿಹೇಳಿದ್ದಾರೆ.

ಕೊನೆಯ ಮಾತು: ಅಂದ ಹಾಗೇ ನಮ್ಮ ಧರ್ಮದೀಕ್ಷೆಯ ದಿಟ್ಟ ಹೆಜ್ಜೆಯು ಸಂಘಪರಿವಾರಗಳ ಧರ್ಮವನ್ನು ಕುರಿತ ವಾಚ್ಯ ವೈಭವೀಕರಣದಂತೆ ಮರೆಯುವುದಿಲ್ಲ. ಬುದ್ಧ ತತ್ತ್ವಗಳನ್ನು ಸೃಜನಶೀಲವಾಗಿ ಪರಿಷ್ಕರಿಸಿದ ಅಂಬೇಡ್ಕರರು ತೋರಿದ ಬಿಡುಗಡೆಯ ದಾರಿಯಲ್ಲಿ ಹೊಸಬದುಕನ್ನು ಅರಸಿ ನಡೆಯುತ್ತೇವೆ. ಎಂದಿನಂತೆ, ಸಾಂಸ್ಥೀಕರಣಗೊಂಡ ಬೌದ್ಧ ಧರ್ಮದ ಬಗ್ಗೆ ನಮಗೆ ಎಚ್ಚರ, ಭಯ ಖಂಡಿತಾ ಇದೆ. ಅದೇ ಸಂದರ್ಭದಲ್ಲಿ ಬುದ್ಧನ ಚಿಂತನೆಗಳನ್ನು ನಿಜವಾದ ಅರ್ಥದಲ್ಲಿ ವಿಶ್ಲೇಷಿಸಿರುವ ಅಂಬೇಡ್ಕರರ 'ಬುದ್ಧ ಮತ್ತು ಆತನ ಧರ್ಮ' ನಮ್ಮೆದುರಿಗಿದ್ದೇ ಇದೆ. ಅದರ ಬೆಳಕಿನಲ್ಲಿ ಇಲ್ಲಿನ ಇನ್ನಿತರ ಅಲ್ಪಸಂಖ್ಯಾತ ಧರ್ಮಗಳನ್ನು ಮುಸುಕಿದ ಮಬ್ಬಿನಿಂದ ಪಾರುಮಾಡಿ ಹಿಡಿದೆತ್ತುವ ಗಂಭೀರ ಹೊಣೆ ಹೊತ್ತು ಸಾಗುತ್ತೇವೆ. ಈ ನಮ್ಮ ನಿರ್ಧಾರದಿಂದ ಭಾರತದ ಇತಿಹಾಸದ ದಿಕ್ಕು ಕೊಂಚಮಟ್ಟಿಗಾದರೂ ಬದಲಾಗಬಹುದೆಂಬ ಭರವಸೆಯನ್ನಂತೂ ಇಟ್ಟುಕೊಂಡಿದ್ದೇವೆ. □

ಕಂಬಾಲಪಲ್ಲಿ; ನೆನೆದವರ ಮನದಲ್ಲಿ

ಕಂಬಾಲಪಲ್ಲಿ ಪ್ರಕರಣದಲ್ಲಿ ಸತ್ತವರೆಲ್ಲ ಮೊನ್ನೆ ಮಗ್ಗಲು ಬದಲಿಸಿರಬೇಕು. ನ್ಯಾಯಾಲಯಗಳಲ್ಲಿ "ಸಾಕ್ಷಿ"ಗೆ ಮಾತ್ರ ಬೆಲೆ "ಆತ್ಮ ಸಾಕ್ಷಿ"ಗಲ್ಲ ಎಂಬುದು ಸತ್ತವರಿಗೆ ಗೊತ್ತಿರಲಿಕ್ಕಿಲ್ಲ. ಸುಮಾರು ಏಳುವರ್ಷಗಳ ನಂತರ ಹೊರ ಬಿದ್ದ ತೀರ್ಪು ಸುದ್ದಿಯಾಗುವ ಸಾಧ್ಯತೆಯಿಲ್ಲ. ಘಟನೆಯ ಬಳಿಕ ಊರವರೆಲ್ಲ ಸೇರಿ (!) "ಆದದ್ದು ಆಗಿ ಹೋಯಿತು; ಮುಂದೆ ಚೆನ್ನಾಗಿರೋಣ ಯಾರ ವಿರುದ್ಧ ಯಾರೂ ಸಾಕ್ಷಿ ಹೇಳೋದು ಬೇಡ" ಎಂದು ತೀರ್ಮಾನಿಸಿದ್ದರೇನೊ. ಅಥವಾ "ಸಾಕ್ಷಿ ಹೇಳಿ ಊರಿಗೆ ಬನ್ನಿ ನೋಡೋಣ" ಎಂಬ ಸವಾಲೆಸೆದಿರಬಹುದು. ಹೆಚ್ಚಿನ ವಿಶ್ಲೇಷಣೆ ಅನವಶ್ಯಕ.

ಕಂಬಾಲಪಲ್ಲಿ ಪ್ರಕರಣ ಇಡೀ ರಾಷ್ಟ್ರದ ಗಮನ ಸೆಳೆದಿತ್ತು. ದಲಿತ ಸಂಘಟನೆಗಳು ಘಟನೆಯನ್ನು ಖಂಡಿಸಿ ಧ್ವನಿಯೆತ್ತಿದ್ದವು. ಪ್ರಜ್ಞಾವಂತರೂ, ಸಾಮಾಜಿಕ ಕಳಕಳಿವುಳ್ಳ ಇತರರೂ ಇದಕ್ಕೆ ಧ್ವನಿಗೂಡಿಸಿದ್ದರು. ವಿಧಿಯಿಲ್ಲದೆ ಪೊಲೀಸರು 'ಕೇಸು' ಹಾಕಿ ಕೈ ತೊಳೆದುಕೊಂಡಿದ್ದರು. ಕೇಸು ನಿಲ್ಲೊದಿಲ್ಲವೆಂಬುದು ಅವರಿಗೂ ಗೊತ್ತಿತ್ತೇನೋ. ಏಕೆಂದರೆ ಮಹಜರಿಗೆ ರುಜು ಹಾಕಿವರೆಲ್ಲ ತಿರುಗಿ ಬಿದ್ದಿದ್ದಾರೆ. ಏಕೆಂದರೆ ಪ್ರಾಣ ಭಯ!. ಕಣ್ಣಾರೆ ಕಂಡವರೂ "ನನಗೇನೂ ಗೊತ್ತಿಲ್ಲ" ಎಂದಿದ್ದಾರೆ. "ಸೂಕ್ತ ಸಾಕ್ಷಾಧಾರಗಳಿಲ್ಲದ ಕಾರಣ ನ್ಯಾಯಾಲಯ ಆರೋಪಿಗಳನ್ನು ಬಿಡುಗಡೆ ಮಾಡಿದೆ." ಮೇಲ್ನೋಟಕ್ಕೆ ಎಷ್ಟೊಂದು ಸರಳ!

೧೨-೩-೨೦೦೦ದಂದು ದಲಿತರನ್ನು ಜೀವ ಸಹಿತ ಸುಡುತ್ತಿದ್ದಾಗ ಬೆಂಕಿ ನಂದಿಸಲು ಬಂದ ಅಗ್ನಿ ಶಾಮಕ ದಳವನ್ನು ಊರೊಳಗೆ ಪ್ರವೇಶಿಸದಂತೆ ತಡೆದವರು ಊರಿನ ಅಪ್ಪರ್ ಕ್ಯಾಸ್ಟ್ ಮಹಿಳೆಯರು ಎಂದು ಓದಿದಾಗ ಕ್ಷಣಕಾಲ ಕಣ್ಣು ಮುಬ್ಬಾಗುತ್ತದೆ. ಚಾರ್ಜ್ ಶೀಟಿನಲ್ಲಿ ಕಾಣಿಸಲಾಗಿದ್ದ ದೋಷಾರೋಪಣೆ ಸಾಬೀತಾಗಲಿಲ್ಲ. ಒಂದು ಕೇಸಿನಲ್ಲಲ್ಲ. ಕೃಷ್ಣರೆಡ್ಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹದಿನಾಲ್ಕು ಮಂದಿ ದಲಿತರ ವಿರುದ್ಧ ಹೂಡಲಾಗಿದ್ದ ಮೊಕದ್ದಮೆಯಲ್ಲು ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ವಿರೋಧಿ ವಿಶೇಷ ನ್ಯಾಯಾಲಯ ನೀಡಿರುವ ತೀರ್ಪು ನನ್ನಂತೆ ಅನೇಕರ ನಿದ್ರೆಗೆಡಿಸಿರಬಹುದು. ಈ ದೇಶದ ನ್ಯಾಯಾಂಗ ವ್ಯವಸ್ಥೆ ವಿರುದ್ಧ ಧ್ವನಿಯೆತ್ತುವವರ್ಯಾರು?

ನನಗೆ ಪ್ರಬಲವಾದ ಸಾರ್ವಜನಿಕಾಭಿಪ್ರಾಯದ ಬಗ್ಗೆ ವಿಶ್ವಾಸ ವಿದೆ. ಜಸ್ಸಿಕಾಲಾಲ್ ಕೊಲೆ ಹಗರಣದಲ್ಲಿ ನ್ಯಾಯಾ ಲಯ ಆರೋಪಿಗಳನ್ನು ನಿರ್ದೋಷಿಗಳೆಂದು ತೀರ್ಪಿತ್ತಾಗ ನಗರಗಳ ಜನ ಸಿಡಿದೆದ್ದುದು, ಉಚ್ಚನ್ಯಾಯಾಲಯ ಜನಾಭಿಪ್ರಾಯ ವನ್ನೇ "ಸಾರ್ವಜನಿಕ ಹಿತಾಸಕ್ತಿ ಅರ್ಜಿ"ಯೆಂದು ಪರಿಗಣಿಸಿ ಮರು ವಿಚಾರಣೆಗೆ ಅವಕಾಶ ಕಲ್ಪಿಸಿದ ಪ್ರಕರಣ ಇನ್ನೂ ಹಚ್ಚ ಹಸಿರಾಗಿದೆ. ಇಂತಹ ಅನೇಕ ಪ್ರಕರಣಗಳು ಜನಮನದಿಂದ ದೂರವಾಗಿಲ್ಲ.

ಸುಳ್ಳು ಸಾಕ್ಷಿ ಹೇಳುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ಆದರೆ ಪ್ರಾಸಿಕ್ಯೂಟರ್ ಪರ ಸಾಕ್ಷಿ ನುಡಿಯುವದಾಗಿ ಮಹಜರ್‌ಗೆ ರುಜು ಹಾಕಿ ಆಬಳಿಕ ಇತರರ ಒತ್ತಾಯ ಅಥವಾ ಆಮಿಷಗಳಿಗೆ ಬಲಿಯಾಗಿ ವಿರುದ್ಧ ಸಾಕ್ಷಿ ನುಡಿಯುವುದು ಅಪರಾಧವಲ್ಲ. ಇದು ತಪ್ಪಬೇಕು. ಇಲ್ಲವಾದರೆ ಪೊಲೀಸರು ಮೊಕದ್ದಮೆ ಹೂಡಲು ಕಷ್ಟವಾಗುತ್ತದೆ. ಅಪರಾಧಿಗಳು ಸುಲಭವಾಗಿ ಕಾನೂನಿನ ಸಂಕೋಲೆಯಿಂದ ಹೊರಬರುವಂತಾಗುತ್ತದೆ. ಬಲಿಷ್ಠರು ಅಪರಾಧವೆಸಗಿ ಬಚಾವಾಗುತ್ತಾರೆ. ಆಗ SURVIVAL OF THE FITTEST-BOTH PHYSICALLY AND FINANCIALLY. ತೋಳ್ಬಲದೊಂದಿಗೆ ಹಣದ ಬಲವೂ ಸೇರಿ ಅರಾಜಕತೆ ಉಂಟಾಗುತ್ತದೆ. ಆದುದರಿಂದ ವ್ಯವಸ್ಥೆಯ ಪುನರ್ ಪರಿಶೀಲನೆ ಅನಿವಾರ್ಯವೆನಿಸುತ್ತಿದೆ. ಈ ನಿಟ್ಟಿನಲ್ಲಿ ಚಿಂತನೆ ನಡಸಬೇಕಿದೆ.

ಕಂಬಾಲಪಲ್ಲಿ ಪ್ರಕರಣ ಲೋಕಸಭೆಯಲ್ಲೂ ಚರ್ಚಿತಗೊಂಡಿತ್ತು. ಸೋನಿಯಾಗಾಂಧಿಯವರು ಕಂಬಾಲಪಲ್ಲಿಗೆ ಆ ಸಂದರ್ಭದಲ್ಲಿ ಭೇಟಿ ನೀಡಿದ್ದರು. ಪ್ರಕರಣ ಅಷ್ಟೊಂದು ಗಂಭೀರವೆನಿಸಿತ್ತು. ಆದರೆ ಮೊನ್ನಿನ ತೀರ್ಪು ನೋಡಿ ಬೆಚ್ಚಿ ಬೀಳಬೇಕಾಯ್ತು. ಬಲಿಷ್ಠರಿಗೆ HOW TO ESCAPE FROM THE CLUTCHES OF LAW ಎಂಬುದನ್ನು ಹೇಳಿಕೊಡಲು ಜನ ಇದ್ದಾರೆ. ಆದರೆ ತುಳಿತಕ್ಕೊಳಪಟ್ಟವರಿಗೆ? ಅವರ ನೋವಿಗೆ ಯಾರು ನಾಲಿಗೆಯಾಗಬಲ್ಲರು? ಕಣ್ಣ ಮುಂದೇ ಅನ್ಯಾಯ ನಡೆದರೂ ಬಾಯಿ ಮುಚ್ಚಿಕೊಂಡು ತೆಪ್ಪಗಿರಬೇಕು. ತಪ್ಪಿದರೆ ತಲೆದಂಡ.! ಸ್ವತಂತ್ರ ಭಾರತದಲ್ಲಿ. ಗಣರಾಜ್ಯ ವ್ಯವಸ್ಥೆಯಲ್ಲಿ! SOCIAL SECURITY IS GAURANTED BY THE CONSTITUTION OF INDIA ಎಂತಹ ಆಕರ್ಷಕ ನುಡಿಮುತ್ತು. ಕಂಬಾಲಪಲ್ಲಿ ಪ್ರಕರಣದಲ್ಲಿ ದುಷ್ಟಶಕ್ತಿಗಳ ಕಾಲಿಗೆ ಗೆಜ್ಜೆ ಕಟ್ಟಿದವರು ತೆರೆಮರೆಯಲ್ಲಿ ಕೇಕೆ ಹಾಕಿ ನಕ್ಕಿರಬೇಕು.

ಜೆಸ್ಸಿಕಾಲಾಲ್ ಪ್ರಕರಣ ಕೇವಲ ಒಂದು ಉದಾಹರಣೆಯಷ್ಟೆ ಇಂಗ್ಲಿಷ್ ನಿಯತಕಾಲಿಕಗಳಲ್ಲಿ ಬೆಳಕು ಕಾಣುವ ಸುದ್ದಿಗಳು, ವರದಿಗಳು ಬಹುಬೇಗ ಆಳುವವರ ಗಮನ ಸೆಳೆಯುತ್ತವೆ. "ಪ್ರಿಯದರ್ಶಿನಿ ಮಟ್ಟು ಪ್ರಕರಣೇ ಆಗಲಿ, ತೆಹೆಲ್ಕಾ ವರದಿಗಳೇ ಇರಲಿ ಸಾರ್ವಜನಿಕಾಭಿಪ್ರಾಯಗಳನ್ನು ಬಡಿದೆಬ್ಬಿಸುವಲ್ಲಿ ಅವು ಸಫಲವಾಗಿವೆ. ಪ್ರದೇಶಿಕ ಭಾಷೆಗಳೆಂದರೆ ಅಧಿಕಾರಸ್ಥರಿಗೆ ಅಲರ್ಜಿ. ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳಿಗೆ ಪ್ರಾದೇಶಿಕ ಭಾಷಾಜ್ಞಾನದ ಕೊರತೆ, ಜತೆಗೆ ತಾತ್ಸಾರ ಮನೋಭಾವನೆ. ಲೋಕಲ್ ನ್ಯೂಸ್‌ಗಳೆಂಬ ತಿರಸ್ಕಾರ.

ಇದನ್ನು ಬರೆಯುತ್ತಿರುವಾಗಲೇ ಮಹಾರಾಷ್ಟ್ರದ ಭಂಡಾರ ಜಿಲ್ಲೆ ಖೆರ್ಲಾಂಜ್ ಎಂಬ ಊರಿನಲ್ಲಿ ದಲಿತನೋರ್ವನ ತುಂಡು ಭೂಮಿ ಕುಟುಂಬದ ಐವರನ್ನು ಬಲಿತೆಗೆದುಕೊಂಡ ಘಟನೆ ವರದಿಯಾಗಿದೆ. ನಾಗರಿಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸಲೇಬೇಕಾದ ಇನ್ನೊಂದು ಪ್ರಕರಣವಿದು. ದಲಿತ ಆತನ ಪತ್ನಿ ಓರ್ವ ಪುತ್ರಿ ಇಬ್ಬರು

ಎಲ್ಲ ಮುಗಿದ ಮೇಲೆ ಪೋಲೀಸರ ಕಾವಲು

ದಲಿತರನ್ನು ಜೀವ ಸಹಿತ ಸುಡುತ್ತಿದ್ದಾಗ ಬೆಂಕಿ ನಂದಿಸಲು ಬಂದ ಅಗ್ನಿ ಶಾಮಕ ದಳವನ್ನು ಊರೊಳಗೆ ಪ್ರವೇಶಿಸದಂತೆ ತಡೆದವರು ಊರಿನ ಅಪ್ಪರ್ ಕ್ಯಾಸ್ಟ್ ಮಹಿಳೆಯರು ಎಂದು ಓದಿದಾಗ ಕ್ಷಣಕಾಲ ಕಣ್ಣು ಮುಬ್ಬಾಗುತ್ತದೆ. ಚಾರ್ಜ್ ಶೀಟಿನಲ್ಲಿ ಕಾಣಿಸಲಾಗಿದ್ದ ದೋಷಾರೋಪಣೆ ಸಾಬೀತಾಗಲಿಲ್ಲ. ಒಂದು ಕೇಸಿನಲ್ಲಲ್ಲ. ಕೃಷ್ಣರೆಡ್ಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹದಿನಾಲ್ಕು ಮಂದಿ ದಲಿತರ ವಿರುದ್ಧ ಹೂಡಲಾಗಿದ್ದ ಮೊಕದ್ದಮೆಯಲ್ಲು ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ವಿರೋಧಿ ವಿಶೇಷ ನ್ಯಾಯಾಲಯ ನೀಡಿರುವ ತೀರ್ಪು ನನ್ನಂತೆ ಅನೇಕರ ನಿದ್ರೆಗೆಡಿಸಿರಬಹುದು. ಈ ದೇಶದ ನ್ಯಾಯಾಂಗ ವ್ಯವಸ್ಥೆ ವಿರುದ್ಧ ಧ್ವನಿಯೆತ್ತುವವರ್ಯಾರು? ನನಗೆ ಪ್ರಬಲವಾದ ಸಾರ್ವಜನಿಕಾಭಿಪ್ರಾಯದ ಬಗ್ಗೆ ವಿಶ್ವಾಸವಿದೆ.

ಡಿ.ಎಂ ಚಿಣ್ಣಪ್ಪ,
ಸೋಮವಾರಪೇಟೆ

ಈ ಬರಹವನ್ನು ಕೊನೆಗೊಳಿಸಿ ಪತ್ರಿಕಾಲಯಕ್ಕೆ ಕಳುಹಿಸುವ ಸಿದ್ಧತೆಯಲ್ಲಿದ್ದಾಗಲೇ ಕಂಬಾಲಪಲ್ಲಿ ಪ್ರಕರಣದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಸರಕಾರದ ನಿರ್ಧಾರ ಪ್ರಕಟವಾಯಿತು. ಜತೆಗೆ "ಬೀದರ್ ಅಂಬೇಡ್ಕರ್ ಪ್ರತಿಮೆ ಪ್ರಕರಣಕ್ಕೆ ರಾಜ್ಯದ ಕೆಲವೆಡೆ ಪ್ರತಿಕ್ರಿಯೆ ವ್ಯಕ್ತಗೊಂಡ ಸುದ್ದಿ ಬಂತು. ಸಂಭ್ರಮಿಸಬಹುದಾದ ವಿಚಾರವಲ್ಲವಾದರೂ ಎಲ್ಲೋ ಒಂದು ಮೂಲೆಯಲ್ಲಿ "ಸದ್ಯ ಇಷ್ಟಾದರೂ ಆಗುತ್ತಿದೆಯಲ್ಲ"ವೆಂಬ ಸಮಾಧಾನ. ಮಗು ಅಳದಿದ್ದರೆ ತಾಯಿ ಹಾಲುಣಿಸುವುದಿಲ್ಲ.

ಅನ್ಯಾಯದ ವಿರುದ್ಧ ಧ್ವನಿಯೆತ್ತದಿದ್ದರೆ ನಾವು ನಮ್ಮ ಕರ್ತವ್ಯದಿಂದ ದೂರವಾಗುತ್ತಿದ್ದೇವೆಯೆನಿಸುತ್ತದೆ. ಫಲಿತಾಂಶ ಏನೇ ಇರಲಿ. ಪ್ರತಿಭಟಿಸುವುದು ಕರ್ತವ್ಯ. ನಿರ್ಲಿಪ್ತತೆ ಆತ್ಮದ್ರೋಹ. ಮಲಗಿದ್ದವರನ್ನು ಬಡಿದೆಬ್ಬಿಸುವ ಕೆಲಸವಾದರೂ ನಿರಂತರವಾಗಿ ನಡೆಯಲಿ. ರಾತ್ರಿ ಬೆಳಗಾಗುವುದರೊಳಗೆ ಕ್ರಾಂತಿಯಾಗುತ್ತಿದೆಂದು ಭಾವಿಸುವುದು ಭ್ರಾಂತಿಯಷ್ಟೇ. ಪರಿವರ್ತನೆಗೆ ಸ್ವಲ್ಪ ಸಮಯ ಬೇಕೆ ಬೇಕು. ಸಹನೆಯೂ ಬೇಕು. ಸಂಘಟನೆ ನಿಂತ ನೀರಾಗಬಾರದು. ಹರಿವ ನದಿಯಾಗಬೇಕು. ದಶ ದಿಕ್ಕುಗಳಲ್ಲಿ ದಲಿತ ಧ್ವನಿ ಮೊಳಗುವಂತಾಗಲು ನಿರಂತರ ಶ್ರಮ ಅವಶ್ಯ. ವೈಚಾರಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಂದಾಗೋಣ.

–ಲೇಖಕ

ಗಂಡು ಮಕ್ಕಳನ್ನು ಮೇಲ್ಜಾತಿ ಮಂದಿ ಬೆತ್ತಲೆಗೊಳಿಸಿ ಹತ್ಯೆ ಮಾಡಿದ್ದಾರೆ. ಹೀಗೆ ಹತ್ಯೆ ಮಾಡುವ ಮುನ್ನ ದಲಿತನ ಹದಿನೆಂಟು ವಯಸ್ಸಿನ ಪುತ್ರಿ ಪ್ರಿಯಾಂಕಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಅಯೋಗ್ಯರು ಸತ್ತ ಮೇಲೂ ಹುಡುಗಿಯನ್ನು ಬಿಟ್ಟಿಲ್ಲ.

ಕಂಬಾಲಪಲ್ಲಿ ಗ್ರಾಮೀಣ ಭಾರತದಲ್ಲಿ ದಲಿತ ಹೇಗೆ ಜೀವಿಸುತ್ತಿದ್ದಾನೆ ಎಂಬುದನ್ನು ತೋರಿಸುವ ಒಂದು ಚಿಕ್ಕ ಉದಾಹರಣೆಯಷ್ಟೆ ಪ್ರತಿಕ್ಷಣವೂ ದೇಶದ ಉದ್ದಗಲಕ್ಕೂ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ಶೇ. ೯೦ ರಷ್ಟು ಬೆಳಕಿಗೆ ಬರುವುದಿಲ್ಲ. ಬಹಳಷ್ಟು ಪ್ರಕರಣಗಳು ಪೋಲೀಸ್ ಠಾಣೆ ಮಟ್ಟದಲ್ಲಿ ರಾಜಿಯಾಗುತ್ತವೆ ಅಥವಾ ಮುಚ್ಚಿ ಹೋಗುತ್ತವೆ ನರಹಂತಕ ಸದ್ದಾಂ ಹುಸೈನ್‌ಗೆ ಮರಣದಂಡನೆ ವಿಧಿಸಿದರೆ, ಪಾರ್ಲಿಮೆಂಟ್ ಭವನಕ್ಕೆ ಬಾಂಬಿಡಲು ಬಂದ ಅಫ್ಜಲ್‌ಗುರು ಎಂಬಾತನಿಗೆ ಕಠಿಣ ಶಿಕ್ಷೆ ವಿಧಿಸಿದರೆ ಕಣ್ಣೀರಿಡುವ ನಾವು ಕೆಲವೊಮ್ಮೆ ಅತ್ಯಂತ ಹೀನಾಯ ಕೃತ್ಯವೆಸಗಿದವರ ಬಗ್ಗೆ ಸೊಲ್ಲೆತ್ತುವುದಿಲ್ಲ. ಎಲ್ಲರೂ ಸಮಾನರು; ಕೆಲವೊಮ್ಮೆ ಕೆಲವರು ಹೆಚ್ಚು ಸಮಾನರು!. ಸಮಬಾಳು–ಸಮಪಾಲು ನಮ್ಮ ಮಂತ್ರ! ವ್ಯಕ್ತಿಯ ಸಾಮಾಜಿಕ ಸ್ಥಾನಮಾನದ ಕುರಿತು ಚಿಂತನೆ. ಎಸಗಿದ ಹೀನ ಕೃತ್ಯದ ಬಗ್ಗೆ ಅಲ್ಲ.

ಕಂಬಾಲಪಲ್ಲಿಯ ದಲಿತರು PORGET & FORGIVE ನೀತಿ ಅನುಸರಿಸಿದರೆ? ಇರಬಹುದು ಇಲ್ಲವಾದರೆ ಘಟನೆಯ ನಂತರ ಊರ ಹೊರಗೆ ದಲಿತರಿಗಾಗಿ ಸರಕಾರ ಕಟ್ಟಿಕೊಟ್ಟ ಮನೆಗಳನ್ನು ಖಾಲಿ ಮಾಡಿ ಮತ್ತೆ ಊರೊಳಗೆ ವಾಸ್ತವ್ಯ ಹೂಡುತ್ತಿರಲಿಲ್ಲ. ADJUSTING THEMSELVES TO THE CHANGED CIRCUMSTANCES! ಅದಕ್ಕೂ ಕಾರಣವಿದೆ THEY CAN NOT SWIM AGAINST THE TIDE ಪಾಟೀಲ್ ಪುಟ್ಟಪ್ಪನವರು ತಮ್ಮ "ಪ್ರಪಂಚ" ಪತ್ರಿಕೆಯಲ್ಲಿ "ದ್ವೇಷವನ್ನು ಸಾಧಿಸಿಕೊಂಡು ಹೋಗುವಷ್ಟು ನನ್ನ ಆಯುಷ್ಯ ದೀರ್ಘವಾಗಿದೆ ಎಂದು ನಾನು ಭಾವಿಸುವುದಿಲ್ಲ" ಎಂದು ಮುದ್ರಿಸುತ್ತಿದ್ದರು.

ದಲಿತರು ಜಾಗೃತರಾಗದಿದ್ದರೆ, ದಲಿತರಲ್ಲಿ ಆತ್ಮಗೌರವ, ಸಾಮಾಜಿಕ ಪರಿವರ್ತನೆ ಆಗದೇ ಹೋದರೆ ಈ ಪರಿಸ್ಥಿತಿ ಇನ್ನೂ ಕೆಲವು ವರ್ಷ ಹೀಗೆ ಮುಂದುವರೆಯುವ ಭೀತಿ ಇದೆ. ಅವರಿಗೆ ಅನುಕಂಪ ಬೇಡ ಸೂಕ್ತ ಮಾರ್ಗದರ್ಶನ ಬೇಕು. ಮುಕ್ತ ವಾತಾವರಣದಲ್ಲಿ ಬದುಕಲು ಸೂಕ್ತ ಅವಕಾಶ ಬೇಕು. ಶಿಕ್ಷಣ ಮಾತ್ರ ಇದಕ್ಕೆ ಪರಿಹಾರ ದಲಿತರ ಮನೆಯ ಪ್ರತಿಯೊಂದು ಮಗುವಿಗೂ ಶಿಕ್ಷಣ ದೊರಕುವಂತಾಗಬೇಕು. ಉದ್ಯೋಗಕ್ಕಾಗಿ ಶಿಕ್ಷಣ ಅಲ್ಲ. ಓದಿದವರಿಗೆಲ್ಲಾ ಸರಕಾರಿ ಚಾಕರಿ ಇನ್ನು ಮುಂದೆ ಕನಸು ಸ್ವಾವಲಂಬಿ ಬದುಕಿಗಾಗಿ ಶಿಕ್ಷಣ ಬೇಕಾಗಿದೆ. ಸ್ವಾವಲಂಬಿ ಬದುಕು ಎಂದರೆ ಹೊಲ ಉಳುವದಲ್ಲ. ವೃತ್ತಿ ಶಿಕ್ಷಣದಿಂದಲೂ ಸ್ವಾವಲಂಬಿಯಾಗಬಹುದು. ನೂರಾರು JOB ORIENTED COURSE ಗಳಿವೆ. ರಿಕ್ಷಾ ಓಡಿಸುವ ದಲಿತ ತರುಣನಿಗೆ ತನ್ನ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಅವಕಾಶವಿದೆ.

ದಲಿತ ಸಂಘರ್ಷ ಸಮಿತಿ ಮರುವಿಚಾರಣೆಗೆ ಒತ್ತಾಯಿಸಿದೆ. ಉಳಿದಂತೆ ರಾಜ್ಯದ ಬೇರೆಡೆಗಳಿಂದ ಯಾವದೇ ಸುದ್ದಿ ಇಲ್ಲ. ಖಂಡನೆ ಪ್ರತಿಭಟನೆ, ಇನ್ಯಾವುದೇ ವಿಧದ ಪ್ರತಿಕ್ರಿಯೆ ಕೇಳಿ ಬರಲಿಲ್ಲ. ದಿನಾ ಸಾಯುವವರಿಗೆ ಅಳುವವರ್‍ಯಾರು? ಇದೆಲ್ಲಾ ಮಾಮೂಲಿ ಎಂದು ಬಾಯಿ ಮುಚ್ಚಿ ಕೊಂಡಿರಬಹುದು– "ನರಿ ಕೂಗು ಗಿರಿ ಮುಟ್ಟೀತೆ?" ಚಾಮುಂಡೇಶ್ವರಿ ಉಪಚುನಾವಣೆ ಗಲಾಟೆಯಲ್ಲಿ ಕಂಬಾಲಪಲ್ಲಿ ಜನಮನದಿಂದ ದೂರವೇ ಉಳಿದುದು ದುಃಖದ ಸಂಗತಿ. ಸಂಘಟಿತ ಹೋರಾಟಕ್ಕೆ ಚೈತನ್ಯವಿಲ್ಲ. ದಲಿತಶಕ್ತಿ ಉಡುಗಿ ಹೋಯಿತೆ? "ಅಹಿಂದ"ದ ಅಸ್ತಿತ್ವ ಕಳೆದುಕೊಂಡಿತೆ? ಯಾವ ಊರಿನಲ್ಲೂ ಕನಿಷ್ಟ ಒಂದು ಮೌನ ಮೆರವಣಿಗೆ ಸಹ ನಡೆಯಲಿಲ್ಲ.

ವಿವಿಧ ದಲಿತ ಸಂಘಟನೆಗಳನ್ನು ಒಂದೇ ಕೊಡೆ ಅಡಿಗೆ ತರುವ ಕುರಿತು ಗುಲ್ಬರ್ಗಾದಲ್ಲಿ ಚರ್ಚೆ ನಡೆಯಿತೆಂದು ಕೇಳಿ ಬಂದಿದೆ. ತಾತ್ವಿಕ ಭಿನ್ನಾಭಿಪ್ರಾಯವೂ ಸೈದ್ಧಾಂತಿಕ ಭಿನ್ನಾಭಿಪ್ರಾಯವೂ ಒಟ್ಟಿನಲ್ಲಿ ಇದೊಂದು ಆರೋಗ್ಯಕರ ಬೆಳವಣಿಗೆ. "ಸಂವಾದ" ಇದಕೆ ವೇದಿಕೆಯಾಗ ಬೇಕು, ನಾಲಿಗೆಯಾಗಬೇಕು. ಸ್ವಪ್ರತಿಷ್ಠೆಯನ್ನು ಬದಿಗೊತ್ತಿ ಸಂಬಂಧಪಟ್ಟವರು ಒಂದೆಡೆ ಕಲೆತು ಈ ನಿಟ್ಟಿನಲ್ಲಿ ದೃಢ ಹೆಜ್ಜೆ ಇಡುವಂತಾಗಲಿ ಎಂದು ಹಾರೈಸೋಣ. "ದಲಿತರು ಬರುತ್ತಿದ್ದಾರೆ; ದಾರಿ ಬಿಡಿ" ಎನ್ನುವ ಕಾಲ ಬೇಗ ಬರಲಿ. ಒಂದು ಕಿವಿ ಮಾತು. ಒಡೆಯುವವರಿದ್ದಾರೆ. ಎಚ್ಚರಿಕೆ ರಾಮಕೃಷ್ಣ ಹೆಗಡೆ ಕಾಲದಲ್ಲಿ ಏನು ನಡೆಯಿತು ಎಂಬುದು ನೆನಪಿರಲಿ. ಸಂಘಟಿತ ಹೋರಾಟ ಇಂದಿನ ತುರ್ತು ಅವಶ್ಯಕತೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿರುವವರು ಇದಕ್ಕೆ ಹೆಚ್ಚಿನ ಪ್ರೋತ್ಸಾಹ ಮಾರ್ಗದರ್ಶನ ನೀಡಬೇಕು.

DAYS AND MOMENTS QUICKLY FLYING
BLEND THE LIVING WITH THE DEAD,
SOON WILL I AND YOU WILL BE LYING
EACH WITHIN OUR NARROW BED

ಅಕಸ್ಮತ್ತಾಗಿ ಕೈಗೆ ಸಿಕ್ಕಿದ ಚೀಟಿಯೊಂದರಲ್ಲಿ ಎಂದೋ ಬರೆದಿಟ್ಟದ್ದ ಮೇಲಿನ ಇಂಗ್ಲಿಷ್ ಸಾಲುಗಳು ಮನಕಲಕುತ್ತಿವೆ. ☐

ಸಂವಾದ




ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಸ್ಪರ್ಧಾತ್ಮಕತೆ, ಸಾಮರ್ಥ್ಯ ಮತ್ತು ಸಾಮಾಜಿಕ ನ್ಯಾಯ

ರಂಗನಾಥ ಕಂಟನಕುಂಟೆ

ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದು ಕನ್ನಡ ದ್ರೋಹವಾಗುತ್ತದೆಂಬ ವಾದಸರಣಿಯನ್ನು ಮಂಡಿಸುವ ಬಣಕ್ಕೆ ವ್ಯಾವಹಾರಿಕ ಜಗತ್ತಿನಲ್ಲಿ ಸದ್ಯ ಸೃಷ್ಟಿಯಾಗಿರುವ ತಾರ್ಕಿಕ ವೈರುಧ್ಯಗಳ, ಸಮಸ್ಯೆಗಳ ಬಗೆಗೆ ತಿಳುವಳಿಕೆಯಾಗಲಿ, ಸರಿಯಾದ ಮಾಹಿತಿಯಾಗಲಿ, ಅವುಗಳ ಪರಿಹಾರದ ಕ್ರಮಗಳ ಬಗೆಗೆ ಉತ್ತರಗಳಾಗಲಿ ಇದ್ದಂತಿಲ್ಲ. ಇವರು ಕನ್ನಡವನ್ನು ಭಾವನಾತ್ಮಕ ರಾಜಕಾರಣಕ್ಕೆ ಮಾತ್ರ ಸೀಮಿತಗೊಳಿಸಿಕೊಂಡವರು. ತಮ್ಮ ಭಾಷಾ ಮೂಲಭೂತವಾದಿ ರಾಜಕಾರಣದ ಖಡ್ಗ ಝಳಪಿಸುವರು. ಹಾಗಾಗಿ ಈ ವಾದಸರಣಿಯ ತರ್ಕ ಇಂಗ್ಲಿಷ್ ಬೇಡಿಕೆಯ ಎದಿರು ಬಿದ್ದು ಹೋಗಬಹುದು. ಮುಖ್ಯ ವಿಚಾರವೆಂದರೆ ಈ ವಾದಸರಣಿಯವರು ಕೂಡ ಇಂಗ್ಲಿಷ್ ಬೇಡ ಎನ್ನುವ ಜನರಲ್ಲ. ಒಂದನೆಯ ತರಗತಿಯಿಂದ ಬೇಡ ಎನ್ನುವ ಜನರಷ್ಟೇ.

ಸರ್ಕಾರಿ ಶಾಲೆಗಳಲ್ಲಿ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೇ? ಬೇಡವೆ? ಎಂಬ ಪ್ರಶ್ನೆಗಳ ಸುತ್ತ ತೀವ್ರ ಚರ್ಚೆಗಳಾಗಿ, ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂಬ ವಾದಗಳಿಗೆ ಬಹುತೇಕರ ಬೆಂಬಲ ವ್ಯಕ್ತಗೊಂಡಿದೆ. ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಸುವುದಾಗಿ ಸರ್ಕಾರ ಹೇಳಿಕೆಯೊಂದನ್ನು ನೀಡಿದೆ.

ಹೀಗೆ ಬೆಂಬಲಿಸುವುದರ ಹಿಂದಿನ ಆಶಯವೆಂದರೆ ಜಾಗತೀಕರಣದ ಪ್ರಸ್ತುತ ಸಾಮರ್ಥ್ಯವಿದ್ದರೆ ಉದ್ಯೋಗ ಗಿಟ್ಟಿಸಲು ಅನುಕೂಲ, ಅಂತಹ 'ಸಾಮರ್ಥ್ಯ' ಗಳಿಕೆಗೆ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದು ಒಳ್ಳೆಯದು. ಬಾಲ್ಯದಲ್ಲಿ ಮಕ್ಕಳ ಕಲಿಕೆಯ ಸಾಮರ್ಥ್ಯ ಅಧಿಕವಾಗಿದ್ದು ಆ ಹಂತದಲ್ಲಿಯೇ ಇಂಗ್ಲಿಷ್ ಕಲಿಸುವುದು ಅವರ ಸಾಮರ್ಥ್ಯ ವೃದ್ಧಿಗೆ ಪೂರಕ. ಈಗಿನಂತೆ ಐದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದರಿಂದ ಸರ್ಕಾರಿ ಶಾಲೆಗಳ ಮಕ್ಕಳು ಹಿಂದುಳಿಯುತ್ತಾರೆ. ಇದು ಸರ್ಕಾರಿ–ಖಾಸಗಿ ಶಾಲೆಗಳ ಮಕ್ಕಳ ನಡುವಿನ ಅಸಮಾನತೆಗೆ ಕಾರಣವಾಗುತ್ತದೆ.

ಹೀಗೆ ವಾದಸರಣಿ ಮುಂದುವರೆಯುತ್ತ ಗ್ರಾಮೀಣ ಪ್ರದೇಶದ, ಹಿಂದುಳಿದ, ದಲಿತ, ಬಡವರ–ಅಲ್ಪಸಂಖ್ಯಾತರ ಮಕ್ಕಳು, ಅಂದರೆ ಸರ್ಕಾರಿ ಶಾಲೆಗಳಲ್ಲಿ ಕಲಿತ ಮಕ್ಕಳು 'ಉದ್ಯೋಗ ಮಾರುಕಟ್ಟೆ'ಯ ಸ್ಪರ್ಧೆಯಲ್ಲಿ ಸೋಲುತ್ತಿದ್ದಾರೆ. ಇಂಗ್ಲಿಷ್ ಕಲಿತ ನಗರದ ಖಾಸಗಿ ಶಾಲೆಗಳ ಮಕ್ಕಳು ಎಲ್ಲ ಔದ್ಯೋಗಿಕ ಅವಕಾಶಗಳನ್ನು ಕಬಳಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಇಂಗ್ಲಿಷ್ ಬಾರದ ಕಾರಣ ಸ್ಪರ್ಧೆ ಅಸಾಧ್ಯವಾಗಿ ಸಾಮಾಜಿಕ ನ್ಯಾಯದಿಂದ ವಂಚಿತರಾಗುತ್ತಾರೆ. ಹಾಗಾಗಿ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಿದರೆ ಗ್ರಾಮೀಣ ಪ್ರದೇಶದ "ಮಕ್ಕಳ ಸಾಮರ್ಥ್ಯ" ಹೆಚ್ಚಾಗಿ 'ಸಾಮಾಜಿಕ ನ್ಯಾಯ' ದಕ್ಕಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ಈ ಅಭಿಪ್ರಾಯದ ಹಿಂದಿರುವ ತರ್ಕ.

ಇದರ ಜತೆಗೆ ಇನ್ನೊಂದು ತರ್ಕವಿದೆ. ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದು ಕನ್ನಡ ದ್ರೋಹವಾಗುತ್ತದೆ. ಈ ವಾದಸರಣಿಯನ್ನು ಮಂಡಿಸುವ ಬಣಕ್ಕೆ ವ್ಯಾವಹಾರಿಕ ಜಗತ್ತಿನಲ್ಲಿ ಸದ್ಯ ಸೃಷ್ಟಿಯಾಗಿರುವ ತಾರ್ಕಿಕ ವೈರುಧ್ಯಗಳ, ಸಮಸ್ಯೆಗಳ ಬಗೆಗೆ ತಿಳುವಳಿಕೆಯಾಗಲಿ, ಸರಿಯಾದ ಮಾಹಿತಿಯಾಗಲಿ, ಅವುಗಳ ಪರಿಹಾರದ ಕ್ರಮಗಳ ಬಗೆಗೆ ಉತ್ತರಗಳಾಗಲಿ ಇದ್ದಂತಿಲ್ಲ. ಇವರು ಕನ್ನಡವನ್ನು ಭಾವನಾತ್ಮಕ ರಾಜಕಾರಣಕ್ಕೆ ಮಾತ್ರ ಸೀಮಿತಗೊಳಿಸಿಕೊಂಡವರು. ತಮ್ಮ ಭಾಷಾ ಮೂಲಭೂತವಾದಿ ರಾಜಕಾರಣದ ಖಡ್ಗ ಝಳಪಿಸುವರು. ಹಾಗಾಗಿ ಈ ವಾದಸರಣಿಯ ತರ್ಕ ಇಂಗ್ಲಿಷ್ ಬೇಡಿಕೆಯ ಎದಿರು ಬಿದ್ದು ಹೋಗಬಹುದು. ಮುಖ್ಯ ವಿಚಾರವೆಂದರೆ ಈ ವಾದಸರಣಿಯವರು ಕೂಡ ಇಂಗ್ಲಿಷ್ ಬೇಡ ಎನ್ನುವ ಜನರಲ್ಲ. ಒಂದನೆಯ ತರಗತಿಯಿಂದ ಬೇಡ ಎನ್ನುವ ಜನರಷ್ಟೇ.

ಹಿಂದೆಯೇ ಉಲ್ಲೇಖಿಸಿದಂತೆ ಗ್ರಾಮೀಣ ಪ್ರದೇಶದಲ್ಲಿನ, ಸರ್ಕಾರಿ ಶಾಲೆಗಳಲ್ಲಿ ಕಲಿತ ಮಕ್ಕಳು ಇಂಗ್ಲಿಷ್ ಬಾರದ ಕಾರಣಕ್ಕಾಗಿ ಉದ್ಯೋಗ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಇದು ಆರ್ಥಿಕ ಅಸಮಾನತೆಗೆ ಕಾರಣವಾಗುತ್ತದೆಂಬುದು ಮೊದಲನೆಯ ಮಾದರಿಯ ತರ್ಕವನ್ನು ಮಂಡಿಸುವವರಲ್ಲಿ ವ್ಯಕ್ತಗೊಳ್ಳುತ್ತಿದೆ. ಅದಕ್ಕಾಗಿ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಿದರೆ ಗ್ರಾಮೀಣ ಪ್ರದೇಶದ ಮಕ್ಕಳು ಉದ್ಯೋಗ ಮಾರುಕಟ್ಟೆಯಲ್ಲಿ ಸ್ಪರ್ಧಿಸುವ 'ಸಾಮರ್ಥ್ಯ' (compe tance) ಗಳಿಸಿಕೊಳ್ಳುತ್ತಾರೆ ಎಂಬುದು ಇದರ ಹಿಂದಿರುವ ಆಶಯ.

ಭಾಷೆಯೊಂದೇ ಸಾಮರ್ಥ್ಯ ನೀಡೀತೆ?

ಈ ಆಶಯದಂತೆ ಒಂದನೆಯ ತರಗತಿಯಿಂದ ಇಂಗ್ಲಿಷ್



ಕಲಿಕೆಯನ್ನು ಆರಂಭಿಸಿದರೆ ಎಷ್ಟು ಜನರು ಈ ಸಾಮರ್ಥ್ಯ ಗಳಿಸಿಕೊಳ್ಳುತ್ತಾರೆ.? ಎಲ್ಲರೂ ಸಾಮರ್ಥ್ಯ ಗಳಿಸಿಕೊಳ್ಳಬಹುದೇ? ಸಾಮರ್ಥ್ಯ, ಹೊಂದಿದವರೆಲ್ಲರೂ ಸ್ಪರ್ಧೆಯಲ್ಲಿ ದಿಗ್ವಿಜಯಿಗಳಾಗಿ ಬಿಡುತ್ತಾರೆಯೇ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಯಾಕೆಂದರೆ ಮೊದಲನೆಯದಾಗಿ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವ ಪದ್ಧತಿ ಅದು ಅಗತ್ಯವನ್ನು ಆಧರಿಸಿ ವೈಜ್ಞಾನಿಕವಾಗಿ ಕಲಿಸುತ್ತಿಲ್ಲ. ಪ್ರಸ್ತುತದ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವ ವಿಧಾನ ಗಿಳಿ ಪಾಠ ಮಾತ್ರ. ಈ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುತ್ತಿರುವ ಬಹುತೇಕ ಶಿಕ್ಷಕರು ಸಂವಹನದ ಇಂಗ್ಲಿಷ್ ಬೋಧಿಸುತ್ತಿಲ್ಲ. ಪುಸ್ತಕವನ್ನು ಓದಿ ಬೋರ್ಡ್ ಮೇಲೆ ಒಂದಿಷ್ಟು ಬರೆದು ಕಂಠಪಾಠ ಮಾಡಿಸಿ ಹೇಳುವುದಷ್ಟೇ ಮಾಡಲಾಗುತ್ತದೆ. ಅವರಿಗೆ ಸಮರ್ಥವಾಗಿ ಸಂವಹವದ ಇಂಗ್ಲಿಷ್ ಅನ್ನು ಬೋಧಿಸಲು ಸಾಧ್ಯವಿಲ್ಲ ಎನ್ನಿಸುತ್ತದೆ. ಕಲಿತದ್ದರ ಪರೀಕ್ಷಾ ವಿಧಾನ ಕೂಡ ಗಿಳಿಪಾಠ ಬರೆದು ಒಪ್ಪಿಸುವುದೇ ಆಗಿದೆ. ಸಂವಹನ ಸಾಮರ್ಥ್ಯದ ಪರೀಕ್ಷೆಯಲ್ಲ. ಅಲ್ಲದೆ ಕುವೆಂಪು ಅವರು ಹೇಳುವಂತೆ ಅದು ಜ್ಞಾನದ ಪರೀಕ್ಷೆಯಾಗಿರದೆ, ಜ್ಞಾಪಕ ಶಕ್ತಿಯ ಪರೀಕ್ಷೆ ಮಾತ್ರವಾಗಿರುತ್ತದೆ.

ಒಂದನೆಯ ತರಗತಿಯಿಂದಲೇ ಕಲಿಯುತ್ತ ಪದವಿ ಹಂತ ಮುಗಿಯುವ ಹೊತ್ತಿಗೆ ಪರಿಪೂರ್ಣ ಇಂಗ್ಲಿಷ್ ಕಲಿಯಲಿ ಎನ್ನುವುದಾದರೆ, ಹೀಗೆ ಕಲಿಯುವ ದಲಿತರ, ಹಿಂದುಳಿದ, ಬಡವರ ಮಕ್ಕಳ ಸಂಖ್ಯೆ ಎಷ್ಟು? ಈ ಪ್ರಶ್ನೆಗಳಿಗೂ ಉತ್ತರಿಸಿಕೊಳ್ಳಬೇಕಾಗುತ್ತದೆ. ಪದವಿಪೂರ್ವ ಪದವಿ ಹಂತಕ್ಕೆ ಬರುವ ಮಕ್ಕಳ ಬಗೆಗೆ ಮಾತ್ರ ಮಾತನಾಡುತ್ತೇವೆ ಎಂದರೆ ಆಗ ಇಡೀ ಬಡವರ, ದಲಿತರ, ಹಿಂದುಳಿದವರ-ಅಲ್ಪಸಂಖ್ಯಾತರ ಸಮಗ್ರ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದಂತಹ ಪ್ರಯತ್ನವೇ ಆಗುವುದಿಲ್ಲ.

ಹಾಗಾಗಿ ಒಂದನೆಯ ತರಗತಿಗೆ ಇಂಗ್ಲಿಷ್ ಕಲಿಸುವುದನ್ನು ವಿಸ್ತರಿಸಿದರೆ ಮತ್ತೆ ಅದೇ ಸಮಸ್ಯೆ ಮುಂದುವರಿಕೆಯಾಗಬಹುದು. ಆಗ ಏನು ಮಾಡುವುದು? ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಮೂಲಕವೇ ಎಲ್ಲ ವಿಷಯಗಳನ್ನು ಬೋಧಿಸುವುದರಿಂದ ಒಂದು ರೀತಿಯ ಕೃತಕ ಇಂಗ್ಲಿಷ್ ಭಾಷಿಕ ಪರಿಸರವನ್ನು ಮಕ್ಕಳ ಮೇಲೆ ಹೇರಿರುವುದರಿಂದ ಅದು ಇಂಗ್ಲಿಷ್ ಕಲಿಕೆಗೆ ಮಕ್ಕಳನ್ನು ಒತ್ತಾಯಿಸುತ್ತದೆ. ಮತ್ತು ನಗರದ ಮಧ್ಯಮ ವರ್ಗದ ಮನೆಗಳಲ್ಲಿನ ಮಕ್ಕಳು ಮನೆಗೆ ಬಂದಾದ ನಂತರ ತಂದೆ ತಾಯಿಗಳು ತಾವೊಂದು ತರಗತಿ ಮನೆಯಲ್ಲಿ ತೆಗೆದುಕೊಳ್ಳುತ್ತಾರೆ. ಇಲ್ಲವೇ ಖಾಸಗಿ ಮನೆ ಪಾಠಗಳಿಗೆ ಮಕ್ಕಳನ್ನು ದೂಡುತ್ತಾರೆ. ಅವರ ಇಂಗ್ಲಿಷ್ ಕಲಿಯುವ ವಿಧಾನವೂ ಕಂಠಪಾಠದ ಮೂಲಕವೇ ಕಲಿಯುವುದಾಗಿದೆ. ನಂತರದಲ್ಲಿ ಒಂದಿಷ್ಟು ಅಭ್ಯಾಸವಾದ ನಂತರ ಅರ್ಥಮಾಡಿಕೊಳ್ಳುವ ಪ್ರಯತ್ನ ನಡೆಯುತ್ತದೆ. ಇದು ಅವರ ಇಂಗ್ಲಿಷ್ ಕಲಿಕೆಗೆ ಇರುವ ಪೂರಕ ಪರಿಸರ.

ಆದರೆ ಗ್ರಾಮೀಣ ಪ್ರದೇಶದ ಅಕ್ಷರವೇ ಬಾರದ, ಗೊತ್ತಿದ್ದರೂ ಹೇಳಿಕೊಡಲಾಗದ ತಂದೆ ತಾಯಿಗಳಿರುವಾಗ ಅಂತಹ ಮಕ್ಕಳು ಇಂಗ್ಲಿಷ್ ಕಲಿಯುವ ವಿಧಾನವಾದರೂ ಯಾವುದು ಮತ್ತು ಹೇಗೆ? ಹಳ್ಳಿಗಳ ಮಕ್ಕಳಿಗೆ ಶಾಲೆಗಳು ಮಾತ್ರ ಕಲಿಸಿಬಿಡಬಲ್ಲವು ಎಂಬ ವಿಶ್ವಾಸವಂತೂ ಇಲ್ಲ. ಯಾಕೆಂದರೆ ಹಳ್ಳಿಗಳಿಂದ ಪಟ್ಟಣದ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಬಂದು ಕಲಿಯುತ್ತಿರುವವರನ್ನು ಗಮನಿಸಿದಾಗ ಇದು ಅರ್ಥವಾಗುತ್ತದೆ. ಮಕ್ಕಳಿಗೆ ತಮ್ಮ ದೈನಂದಿನ ಚಟುವಟಿಗಳ ಜತೆಗೆ ಇಂಗ್ಲಿಷ್ ಭಾಷೆಯನ್ನು ರೂಢಿಸಿಕೊಳ್ಳಲು ಅವಕಾಶಗಳಿಲ್ಲದಿದ್ದರೆ, ಆಗ ಇಂಗ್ಲಿಷ್ ಮಾಧ್ಯಮವೂ ಅವರನ್ನು ಮೇಲೆತ್ತಲಾರದು. ಎಷ್ಟೋ ಜನ ಹಳ್ಳಿಗಳ ಮಕ್ಕಳು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಸೇರಿ ಅದನ್ನು ರೂಢಿಸಿಕೊಳ್ಳಲಾಗದೆ ಹಿಂದುಳಿದಿದ್ದಾರೆ. ಹೀಗಿರುವಾಗ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದನ್ನು ಕಡ್ಡಾಯಗೊಳಿಸುವುದು ಮಾತ್ರ ಸಾಮಾಜಿಕ ನ್ಯಾಯವನ್ನು, ಸ್ಪರ್ಧಿಸುವ ಸಾಮರ್ಥ್ಯವನ್ನು ತಂದುಕೊಡಲಾರದು.

ನಾವಿಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ಗ್ರಾಮೀಣ ಪ್ರದೇಶದ, ದಲಿತರ, ಬಡವರ ಅಲ್ಪಸಂಖ್ಯಾತರ ಕುಟುಂಬಗಳಿಂದ ಶಾಲೆಗಳಿಗೆ ಬರುವ ಮಕ್ಕಳು ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳ ಬೇರೆ ಬೇರೆ ಹಂತಗಳಿಂದಲೇ ಶಿಕ್ಷಣದಿಂದ ದೂರ ಸರಿಯುತ್ತಾರೆ. ಅದಕ್ಕೆ ಅವರ ಆರ್ಥಿಕ ಸಾಮಾಜಿಕ ಹಿನ್ನೆಲೆ ಕಾರಣವಾಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ನಮ್ಮ ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ವೈದ್ಯಕೀಯ, ಇಂಜಿನಿಯರಿಂಗ್, ಸ್ನಾತಕೋತ್ತರ ಪದವಿಗಳ ವಿವಿಧ ಕ್ಷೇತ್ರಗಳ ಅಧ್ಯಯನಕ್ಕೆ ಬರುವವರ ಒಟ್ಟು ಸಂಖ್ಯೆ (ಖಾಸಗಿ ಶಾಲೆಗಳಲ್ಲಿ ಕಲಿತವರನ್ನೂ ಸೇರಿ) ಶೇಕಡ ೭ರಷ್ಟು ಮೀರುವುದಿಲ್ಲ. ಇದು ಜರ್ಮನಿ, ಫ್ರಾನ್ಸ್, ಅಮೆರಿಕ ದೇಶಗಳಲ್ಲಿ ಶೇಕಡ ೩೫ ರಷ್ಟು ದಾಟಿ ಹೋಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಪ್ರೌಢಶಿಕ್ಷಣವನ್ನು ಪೂರ್ಣಗೊಳಿಸುವ ಮೊದಲೇ ಶಿಕ್ಷಣದಿಂದ ದೂರವಾಗುವವರನ್ನು ಹೇಗೆ ಸಾಮಾಜಿಕ ನ್ಯಾಯದ ವ್ಯಾಪ್ತಿಗೆ ತರುವುದು. ಇವತ್ತು ಸೆಕ್ಯುರಿಟಿ ಗಾರ್ಡ್ ಕೆಲಸಕ್ಕೂ ಇಂಗ್ಲಿಷ್ ಬೇಕಾಗಿದೆ. ಹಾಗೆಯೇ ಎಸ್.ಎಸ್.ಎಲ್.ಸಿವರೆಗಿನ ಶಿಕ್ಷಣವೂ ಬೇಕು. ಹಾಗೆಯೇ ಪೋಲಿಸ್ ಇಲಾಖೆ, ಇತರೆ ಸೇನಾ ಇಲಾಖೆಗಳಲ್ಲಿಯು ಕನಿಷ್ಟ ಎಸ್.ಎಸ್.ಎಲ್.ಸಿ ಮಟ್ಟದ ಶಿಕ್ಷಣ ಬೇಕು. ಈ ಮಟ್ಟದ ಶಿಕ್ಷಣವೇ ಲಭ್ಯವಾಗದ, ಶಿಕ್ಷಣದಿಂದ ವಂಚಿತರಾದವರಿಗೆ ಯಾವ ಉದ್ಯೋಗ ಸಿಗಲು ಸಾಧ್ಯ? ಈ ಹಂತದಿಂದಲೇ ದೂರ ಸರಿಯುವವರ ಬಗೆಗೆ ಆಲೋಚಿಸದೆಯೇ ಈ ಹಂತವನ್ನು ದಾಟಿ ಪದವಿಪೂರ್ವ, ಪದವಿ ಶಿಕ್ಷಣಕ್ಕೆ ಬರುವ ಕೆಲವರ (ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳಿಗೆ ನೋಂದಾಯಿತವಾಗುವ ಮಕ್ಕಳಲ್ಲಿ ಕನಿಷ್ಠ ಪ್ರಮಾಣದ ಮಕ್ಕಳು ಮಾತ್ರ ಪದವಿಯನ್ನು ಅಥವಾ ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸುವರು. ಅಂದರೆ ಇಂದು ಉದ್ಯೋಗ ಮಾರುಕಟ್ಟೆಯಲ್ಲಿ ಸ್ಪರ್ಧಿಸುವ ಸಾಮರ್ಥ್ಯವನ್ನು ಪಡೆಯುವುದು ಬೆರಳೆಣಿಕೆಯಷ್ಟು ಮಾತ್ರ, ಇದು ನಗರ ಪ್ರದೇಶದಲ್ಲಿ ಗಣನೀಯವಾಗಿ ಅಧಿಕವಾಗಿರುತ್ತದೆ.) ಬಗೆಗೆ ಮಾತ್ರ ಆಲೋಚಿಸುತ್ತೇವೆ ಎನ್ನವುದಾದರೆ ಅವರಿಗೆ ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಸುವದೊಂದೇ ಪರಿಹಾರವೇ? ಐದನೆಯ ತರಗತಿಯಿಂದ ಕಲಿಸುತ್ತಿರುವವರಿಗೆ ಪ್ರೌಢ ಅಥವಾ ಪದವಿ ಹಂತ ಮುಗಿಯುವದರ ಒಳಗೆ ವ್ಯಾವಹಾರಿಕ ಇಂಗ್ಲಿಷ್ ಕಲಿಸಲು ಸಾಧ್ಯವಿಲ್ಲವೇ? ಕೇವಲ ಮೂರು, ಆರು ತಿಂಗಳು ಅಥವಾ ಒಂದು ವರ್ಷಗಳಲ್ಲಿ ಮಾತನಾಡುವ (ಸ್ಪೀಕಿಂಗ್) ಇಂಗ್ಲಿಷ್ ಕಲಿಸುವ ಖಾಸಗಿ ಸಂಸ್ಥೆಗಳಿರುವಾಗ ಎಂಟರಿಂದ ಹತ್ತು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸಲು ಸಾಧ್ಯವಿಲ್ಲವೇ? ಹಾಗೆ ಸಾಧ್ಯವಿಲ್ಲ ಎನ್ನುದಾದರೆ ನಿಜವಾದ ಸಮಸ್ಯೆಗಳೇನು? ಈ ಸಮಸ್ಯೆಗಳನ್ನು ಬಗೆಹರಿಸದೆ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಲು ಆರಂಭಿಸಿದರೆ ಈ ಸಮಸ್ಯೆ ಮತ್ತೂ ಮುಂದುವರಿಯುವುದಿಲ್ಲವೇ? ಹಾಗಾಗಿ ಒಂದನೆಯ ತರಗತಿಗೆ ವಿಸ್ತರಿಸಿ ಎನ್ನುವುದಕ್ಕಿಂತ ಇಂಗ್ಲಿಷ್ನ ಅನ್ನು ಪರಿಣಾಮಕಾರಿಯಾಗಿ ಅಗತ್ಯವಿರುವಷ್ಟನ್ನು, ಕನ್ನಡ ಅಥವಾ ಮಾತೃಭಾಷೆಗೆ ಹಾನಿಯಾಗದಂತೆ ಕಲಿಸಿ ಎನ್ನುವುದು ಹೆಚ್ಚು ಉಚಿತವಾದ ಬೇಡಿಕೆಯಾಗಬಹುದೇನೋ?

ಒಂದನೆಯ ತರಗತಿಯಿಂದಲೇ ಕಲಿಯುತ್ತ ಪದವಿ ಹಂತ ಮುಗಿಯುವ ಹೊತ್ತಿಗೆ ಪರಿಪೂರ್ಣ ಇಂಗ್ಲಿಷ್ ಕಲಿಯಲಿ ಎನ್ನುವುದಾದರೆ, ಹೀಗೆ ಕಲಿಯುವ ದಲಿತರ, ಹಿಂದುಳಿದ, ಬಡವರ ಮಕ್ಕಳ ಸಂಖ್ಯೆ ಎಷ್ಟು? ಈ ಪ್ರಶ್ನೆಗಳಿಗೂ ಉತ್ತರಿಸಿಕೊಳ್ಳಬೇಕಾಗುತ್ತದೆ. ಪದವಿಪೂರ್ವ ಪದವಿ ಹಂತಕ್ಕೆ ಬರುವ ಮಕ್ಕಳ ಬಗೆಗೆ ಮಾತ್ರ ಮಾತನಾಡುತ್ತೇವೆ ಎಂದರೆ ಆಗ ಇಡೀ ಬಡವರ, ದಲಿತರ, ಹಿಂದುಳಿದವರ-ಅಲ್ಪಸಂಖ್ಯಾತರ ಸಮಗ್ರ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದಂತಹ ಪ್ರಯತ್ನವೇ ಆಗುವುದಿಲ್ಲ.

ನಮ್ಮ ಸಾಮಾಜಿಕ ನ್ಯಾಯದ ಹೋರಾಟ ಎನ್ನುವುದು ಕೇವಲ ಬೆರಳೆಣಿಕೆಯಷ್ಟು ಮಂದಿಗೆ ಮಾತ್ರವೇ ಅಥವಾ ಇಡೀ ಶೋಷಿತ ಸಮುದಾಯದ ಸಮಗ್ರ ಬೆಳವಣಿಗೆಯ ಬಗೆಗಾಗಿಯೇ? ಎಂಬ ಪ್ರಶ್ನೆ ಕೇಳಿಕೊಳ್ಳಬೇಕಿದೆ. ಬಹುಶಃ ಈ ಎಲ್ಲ ಪ್ರಶ್ನೆಗಳಿಗೆ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದು ಉತ್ತರವಾಗಲಾರದು. ಹಾಗೆ ನಂಬುವುದು ಅರ್ಧ ಸತ್ಯ ಮಾತ್ರವಾಗುತ್ತದೆ. ಅಥವಾ ಇಡೀ ಶೋಷಿತ ಸಮುದಾಯದ ಅಭಿವೃದ್ಧಿಗೆ ಹೋರಾಡದೆ ಇರುವ ವ್ಯವಸ್ಥೆಯ ಕೆಲ ಅವಕಾಶಗಳಿಗೆ, ಅದು ಕಲಿತವರ ಹಕ್ಕುಗಳಿಗೆ ಮಾತ್ರ ದನಿಯೆತ್ತಿದಷ್ಟು ಮಾತ್ರವಾಗುತ್ತದೆ. ಇದನ್ನು ಸಂಪೂರ್ಣ ಸಾಮಾಜಿಕ ನ್ಯಾಯದ ಆಚರಣೆ ಎನ್ನಲಾಗದು. ಅದು ದುರ್ಬಲ ವರ್ಗದವರಲ್ಲಿ ಕೆಲವರಿಗೆ ಅವಕಾಶ ಮಾತ್ರ ನೀಡಿದ "ಸಾಮಾಜಿಕ ನ್ಯಾಯದ ಸಾಂಕೇತಿಕ ರೂಪಕ" ಮಾತ್ರವಾಗುತ್ತದೆ.

ಮೀಸಲಾತಿಯಂತಹ ವ್ಯವಸ್ಥೆಯ ಸಾಧನೆಯನ್ನು ನಾವು ಈ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕಿದೆ. ಹಾಗಂತ ಇಂತಹ ಸಾಂಕೇತಿಕ ರೂಪಕಗಳನ್ನು ನಿರಾಕರಿಸಬಾರದು. ಆದರೆ ನಮ್ಮ ಸಾಮಾಜಿಕ ನ್ಯಾಯದ ಆಶಯವನ್ನು ಸಂಪೂರ್ಣ ರೂಪದಲ್ಲಿ ಜಾರಿಗೊಳಿಸಲಾರದು ಎಂಬ ಸತ್ಯವನ್ನು ಮಾತ್ರ ಅರಿಯಬೇಕು. ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಕಲಿಯದೇ ಈ ಶೋಷಕ ವ್ಯವಸ್ಥೆಯ ಬಲಿಪಶುಗಳಾಗಿರುವ ಕೋಟ್ಯಂತರ ಜನರ ಹಕ್ಕಿನ ಪ್ರಶ್ನೆಯನ್ನು ಕೇಳುವವರು ಯಾರು? ಯಾವತ್ತು ಕೇಳಲಾಗುತ್ತದೆ? ಅವರಿಗೆ ದಕ್ಕಬೇಕಾದ ಸಾಮಾಜಿಕ ನ್ಯಾಯಕ್ಕಾಗಿ ಇನ್ನೆಷ್ಟು ಶತಮಾನಗಳು ಕಾಯಬೇಕಾಗಿದೆ. ಈ ಪ್ರಶ್ನೆಗಳು ಪ್ರಸ್ತುತ ಸಂದರ್ಭದಲ್ಲಿಯೇ ಕೇಳಿಕೊಳ್ಳುವುದು ಔಚಿತ್ಯಪೂರ್ಣವಾಗಿದೆ.

ಕಲಿತವರ ಹಕ್ಕುಗಳ ಜತೆಗೆ ಕಲಿಯದವರ ಹಕ್ಕು

ಗಳನ್ನು ಕೇಳಬೇಕಾಗಿದೆ. ಅದು ಕೂಡ ಸಾಮಾಜಿಕ ನ್ಯಾಯದ ಪ್ರಶ್ನೆಯ ಭಾಗವೇ ಆಗಿದೆ. ಹಾಗಾಗಿ ಯಾವ ಮಕ್ಕಳಿಗೆ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂದು ಹೇಳುತ್ತಿದ್ದೇವೆಯೋ ಅವೆಲ್ಲ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ, ಅರ್ಧದಲ್ಲಿಯೇ ಮೊಟುಕುಗೊಳಿಸದಂತೆ, ಕನಿಷ್ಠ ಉದ್ಯೋಗ ಮಾರುಕಟ್ಟೆಗೆ ಬೇಕಾದ ಶಿಕ್ಷಣವನ್ನು ಅಥವಾ ಅವರು ಸಾಮಾಜಿಕವಾಗಿ ಅವಮಾನಕ್ಕೆ ಗುರಿಯಾಗದಂತೆ ನೋಡಿಕೊಳ್ಳಬೇಕಾದ ಅಗತ್ಯವಿದೆ. ಅವರು ಶಿಕ್ಷಣದಿಂದ ವಂಚಿತರಾದರೆ ನಮ್ಮ ಆಶಯವೇ ಈಡೇರಿದಂತಾಗುವುದಿಲ್ಲ. ಮತ್ತೆ ಎಲ್ಲ ಮಕ್ಕಳು ಶಿಕ್ಷಣ ಪಡೆಯುವಂತೆ ನೋಡಿಕೊಂಡಾದ ನಂತರ ಉದ್ಯೋಗಗಳು ಸೀಮಿತವಾಗಿರುವುದರಿಂದ ಸ್ಪರ್ಧೆ ಇನ್ನೂ ಅಧಿಕವಾಗಿ ಸಾಮಾಜಿಕ ನ್ಯಾಯದ ಕಲ್ಪನೆ ಮತ್ತಷ್ಟು ಸಂಕೀರ್ಣಗೊಳ್ಳುತ್ತದೆ.

ಆದ್ದರಿಂದ ಶಿಕ್ಷಣ ನೀಡುವುದೆಂದರೆ ಮಾನವನ ನಿತ್ಯ ಬದುಕಿಗೆ ಬೇಕಾದ ಅಗತ್ಯಗಳನ್ನು ಸೃಷ್ಟಿಸುವುದರ ಸುತ್ತ ಬೇಕಾದ ವೃತ್ತಿ ಆಧರಿತ ಶಿಕ್ಷಣದ ಪೂರೈಕೆ ಅಧಿಕಗೊಳ್ಳಬೇಕಾಗುತ್ತದೆ. ಕಲಿತ ವಿದ್ಯೆ ಖಾಸಗಿ-ಸರ್ಕಾರಿ ಕ್ಷೇತ್ರಗಳಲ್ಲಿ ಉದ್ಯೋಗ ತಂದುಕೊಡುವುದು ಸೇರಿದಂತೆ ಸ್ವಯಂ ವೃತ್ತಿಯನ್ನು ಆರಂಭಿಸುವ, ಸ್ವಾವಲಂಬಿಗಳಾಗಿ ತಮ್ಮ ಸಾಮಾಜಿಕ ನ್ಯಾಯವನ್ನು ದಕ್ಕಿಸಿಕೊಳ್ಳುವಂತೆ ಮಾಡುವ ಶಿಕ್ಷಣ ನೀಡಬೇಕಾದ ಜರೂರು ಇದೆ. ಹೀಗೆ ಸಾಮಾಜಿಕ ನ್ಯಾಯ ಪಡೆಯುವುದನ್ನು ಹಲವು ದಿಕ್ಕುಗಳಲ್ಲಿ ಆಲೋಚಿಸಬೇಕಿದೆ.

ಇಂಗ್ಲಿಷ್ ಸಮಾನತೆಯ ಸಾಧನವೇ?

ಜತೆಗೆ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುವುದನ್ನು ಜಾರಿಗೊಳಿಸಿದರೂ, ಮಕ್ಕಳು ಇಂಗ್ಲಿಷ್ ಕಲಿತರೂ ಸಾಮಾಜಿಕ ನ್ಯಾಯ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ತಿಳಿಯಬೇಕಿದೆ. ಯಾಕೆಂದರೆ ಪ್ರಸ್ತುತ ಜಾಗತೀಕರಣದ ಹುನ್ನಾರವೇ ಪೂರ್ವದ-ಪಶ್ಚಿಮದ, ಬಡವರ-ಶ್ರೀಮಂತರ, ನಗರ-ಗ್ರಾಮಗಳ, ಮೇಲ್ಜಾತಿ-ಕೆಳಜಾತಿಗಳ, ಕರಿಯರ-ಬಿಳಿಯರ, ಧರ್ಮ-ಧರ್ಮಗಳ ಅಂತರವನ್ನು ಹೆಚ್ಚಿಸುತ್ತ, ಶ್ರೇಣೀಕೃತ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುವುದೇ ಆಗಿರುತ್ತದೆ. ನವವಸಾಹತುಶಾಹಿ ಕಾಲದಲ್ಲಿ ರೂಪಿತವಾದ ಎಲ್ಲ ಭಾಷಿಕ ನೀತಿಗಳೂ ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸುವಲ್ಲಿ ಪ್ರಧಾನ ಪಾತ್ರವಹಿಸಿರುವುದನ್ನು ನಾವು ಗಮನಿಸಬಹುದಾಗಿದೆ. ಈ ಬಗೆಗೆ ಹಲವು ಸಂಶೋಧನೆಗಳು ನಡೆದಿರುವುದನ್ನು ನಾವು ಇಂದು ಗಮನಿಸಬಹುದಾಗಿವೆ.

ಅಲ್ಲದೆ ಲಿಟ್ಮಸ್ ಕಾಗದದ ಮೂಲಕ ಛಟ್ಟಿ ಇಳಿಸುವಂತೆ, 'ಸ್ಪರ್ಧೆ ಎಂಬುದನ್ನು ನಡೆಸುವುದು ಎಲ್ಲರಿಗೂ ಉದ್ಯೋಗ ಕೊಡುವುದಕ್ಕಲ್ಲ. ಇವುಗಳನ್ನು ನಾವು ಗಮನಿಸಲೇಬೇಕಿದೆ. ಕೆಲವರಿಗಾಗಿ ಕೆಲಸ ಕೊಡಲು, ಬಹುಸಂಖ್ಯಾತರನ್ನು ದೂರವಿಡಲು ಮಾಡುವ ಪ್ರಯತ್ನವಾಗಿರುತ್ತದೆ.

ಹಾಗಾಗಿ ನಾವು **'ಸಾಮರ್ಥ್ಯ'** (ಮೀಸಲಾತಿ ಸಂದರ್ಭದಲ್ಲಿ ಇದನ್ನು **"ಪ್ರತಿಭೆ"** ಎಂದು ಬೇಕಾದರೂ ಅರ್ಥಮಾಡಿಕೊಳ್ಳಬಹುದು) ಮತ್ತು **'ಸ್ಪರ್ಧಾತ್ಮಕತೆ'**ಗಳೆಂಬ ಎರಡು ನುಡಿಗಟ್ಟುಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಇಂಗ್ಲಿಷ್ ಕಲಿತು ಯಾವ ವಲಯದಲ್ಲಿ ಉದ್ಯೋಗಗಳನ್ನು ಗಳಿಸಿಕೊಳ್ಳುವ, ಆ ಮೂಲಕ ಸಾಮಾಜಿಕ ನ್ಯಾಯ ಗಳಿಕೆಯ ಮಾತನಾಡುತ್ತಿದ್ದೇವೆಯೋ, ಆ ವಲಯ ಮೇಲಿನ

ಅಸಮಾನ ಶಕ್ತಿ ಸಾಮರ್ಥ್ಯಗಳಿರುವಾಗ ಮುಕ್ತ ಸ್ಪರ್ಧೆಯಲ್ಲಿ ಸಾಮಾಜಿಕ ನ್ಯಾಯ ಸಾಧಿಸುವ ಕ್ರಮಗಳ ಬಗೆಗೆ ಪ್ರಶ್ನೆಗಳೆತ್ತಿವೆ. ಇಂದು ಕೇವಲದ ಇಂಗ್ಲಿಷ್ ಮಾತ್ರದಿಂದ ಸ್ಪರ್ಧೆ ಸಾಧ್ಯವಾಗಿಬಿಡುವುದಿಲ್ಲ. ಈ ಎರಡು ನುಡಿ ಗಟ್ಟುಗಳಿಗೆ ಇಂದಿನ ಸಾಮಾಜಿಕ, ರಾಜಕೀಯ ಸಂದರ್ಭಗಳಲ್ಲಿ ಅರ್ಥಗಳು ಬೇರೆಯೇ ಇರುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಸ್ಪರ್ಧೆಯಲ್ಲಿ ಪಾಲ್ಗೊಂಡು ಗೆಲ್ಲುವ ಉತ್ಸಾಹದೊಂದಿಗೆ ಸಜ್ಜುಗೊಳ್ಳುವಾಗ ಸ್ಪರ್ಧೆಯ ಸ್ವರೂಪ-ನಿಯಮಗಳನ್ನು ಮೂಲಭೂತವಾಗಿ ಅರಿಯ ಬೇಕಿದೆ.

ನುಡಿಗಟ್ಟುಗಳನ್ನು ವ್ಯಾಪಕವಾಗಿ ಬಳಸುತ್ತಿದ್ದೆ. ಈ ಬಳಕೆ ಇರುವ ಪರಿಸ್ಥಿತಿಯನ್ನು ಸೂಚಿಸುತ್ತದೆಯೋ ಅಥವಾ ಬೇರೇನಾದರೂ ಸಂದೇಶಗಳನ್ನು ರವಾನಿಸುತ್ತದೆಯೋ ಎಂಬುದು ಮುಖ್ಯ.

ಇಂದು ಉದ್ಯಮಿಗಳು, ಸರ್ಕಾರ-ಶಿಕ್ಷಣ ಸಚಿವರು, ವಿದ್ಯಾರ್ಥಿಗಳು, ನಿರುದ್ಯೋಗಿಗಳು ಮತ್ತು ಪೋಷಕರು: ಹೀಗೆ ಹಲವು ರೀತಿಯ ಜನರು ಅದನ್ನು ಬಳಸುತ್ತಾರೆ. ಮುಕ್ತ ಮಾರುಕಟ್ಟೆಯ ಆರ್ಥಿಕ ನೀತಿಗಳನ್ನು ಜಾರಿಗೊಳಿಸುವ ಪ್ರಕ್ರಿಯೆ ಅಧಿಕವಾದಂತೆಲ್ಲ ಇವುಗಳ ಬಳಕೆ ಕೂಡ ಅಧಿಕವಾಗಿದ್ದನ್ನು ನಾವು ಗಮನಿಸಬೇಕು. ಈ ಪ್ರಕ್ರಿಯೆ ಆರಂಭಗೊಳ್ಳುವ ಮೊದಲು ಸ್ಪರ್ಧೆಯು ಇರಲಿಲ್ಲ ಎಂದಲ್ಲ. ಆಗಿನ ಅರ್ಥಗಳೇ ಬೇರೆ. ಈಗಿರುವ ಅರ್ಥಗಳೇ ಬೇರೆ. 'ಸಾಮರ್ಥ್ಯ' ಎಂಬುದರ ಅರ್ಥವೇನು? ಮುಕ್ತ ಮಾರುಕಟ್ಟೆಯ ಆರ್ಥಿಕ-ರಾಜಕೀಯ ವ್ಯವಸ್ಥೆಯ ಸಂದರ್ಭದಲ್ಲಿ ಇವುಗಳ ಅರ್ಥವೇನು? ಒಬ್ಬ ಉದ್ಯಮಿ ಬಳಸುವ ಅರ್ಥವೂ ಒಬ್ಬ ನಿರುದ್ಯೋಗಿ ಬಳಸುವ

ಅರ್ಥವೂ ಒಂದೇ ಆಗಿದೆಯೋ? ಉದ್ಯಮ ಕ್ಷೇತ್ರ ಸೂಚಿಸುವ ಅರ್ಥ ಎಂತಹದು. ಮುಕ್ತ ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯಕ್ಕೆ ಒತ್ತಾಯಿಸುವಾಗ ಈ ಗ್ರಹಿಕೆ ಮುಖ್ಯ.

ದೇಶದ ಆರ್ಥಿಕತೆಯ "ರಕ್ಷಣಾತ್ಮಕ ನೀತಿ"ಗಳನ್ನು ಸರ್ಕಾರಗಳ ಮೂಲಕವೇ ಕಾನೂನು ಬದ್ಧವಾಗಿ ಬದಿಗೊತ್ತಿಸಿ, ಸಾಮರ್ಥ್ಯವಿದ್ದರೆ 'ಮುಕ್ತ ಮಾರುಕಟ್ಟೆ'ಯಲ್ಲಿ ತನ್ನ ಜತೆಗೆ ಸ್ಪರ್ಧೆ ಮಾಡು ಎಂದು ದೇಶೀಯ ದುರ್ಬಲ ಕಂಪನಿಗೆ ಬಹುರಾಷ್ಟ್ರೀಯ ಕಂಪನಿಯೊಂದು ಕರೆ ನೀಡುತ್ತದೆ. ಈ ಸ್ಪರ್ಧೆಯಲ್ಲಿ ದುರ್ಬಲ ಕಂಪನಿ ಗೆಲ್ಲಲಾರದು ಎಂಬುದು ಎಲ್ಲರಿಗೂ ತಿಳಿದ ವಿಚಾರವೇ. ಅಂದರೆ ಆಗ ಡಾರ್ವಿನ್ ವಾದದಂತೆ "ಸಮರ್ಥನು ಉಳಿದುಕೊಳ್ಳುತ್ತಾನೆ. ದುರ್ಬಲನು ಸಾಯಬೇಕಾಗುತ್ತದೆ." ದುರ್ಬಲನು ಬದುಕಬೇಕಾದರೆ ಅವನಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸಬೇಕಾಗುತ್ತದೆ. ಹಾಗೆಯೇ ಖಾಸಗಿ ಉದ್ಯಮ ಕ್ಷೇತ್ರ ದಮನಿತ ವರ್ಗಗಳಿಗೆ ಕಲ್ಪಿಸಲಾಗುತ್ತಿದ್ದ ವಿಶೇಷ ಸೌಲಭ್ಯಗಳನ್ನು ಅಂದರೆ ಮೀಸಲಾತಿಯಂತಹ ಪದ್ಧತಿಗಳನ್ನು ತನ್ನೊಳಗೆ ಮತ್ತು ಹೊರಗೆ ರದ್ದುಗೊಳಿಸಿ ಸಾಮರ್ಥ್ಯದ ಆಧಾರದ ಮೇಲೆ ಮುಕ್ತವಾಗಿ ಸ್ಪರ್ಧಿಸುವಂತೆ ಕರೆ ನೀಡುತ್ತಿದೆ. ಹಾಗೆಯೇ ಮೇಲ್ಜಾತಿಗಳು, ಸಬಲ ವರ್ಗಗಳು ನಗರದ ವಿದ್ಯಾರ್ಥಿಗಳು ಸಾಮರ್ಥ್ಯ ಆಧರಿತ ಮುಕ್ತ ಸ್ಪರ್ಧೆಗೆ ಒತ್ತಾಯಿಸುತ್ತಾರೆ. ಮೀಸಲಾತಿಯನ್ನು ವಿರೋಧಿಸುತ್ತಾರೆ. ಇತ್ತೀಚೆಗೆ ಐಐಟಿ, ಐಐಎಂ ತರಹದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬಾರದೆಂದು ಒತ್ತಾಯಿಸಿ ನಡೆಸಿದ ಪ್ರತಿಭಟನೆಗಳು ಇದರ ಭಾಗವೇ ಆಗಿದೆ.

ಅಸಮಾನ ಶಕ್ತಿ ಸಾಮರ್ಥ್ಯಗಳಿರುವಾಗ ಮುಕ್ತ ಸ್ಪರ್ಧೆಯಲ್ಲಿ ಸಾಮಾಜಿಕ ನ್ಯಾಯ ಸಾಧಿಸುವ ಕ್ರಮಗಳ ಬಗೆಗೆ ಪ್ರಶ್ನೆಗಳೆತ್ತಿವೆ. ಇಂದು ಕೇವಲದ ಇಂಗ್ಲಿಷ್ ಮಾತ್ರದಿಂದ ಸ್ಪರ್ಧೆ ಸಾಧ್ಯವಾಗಿಬಿಡುವುದಿಲ್ಲ. ಈ ಎರಡು ನುಡಿಗಟ್ಟುಗಳಿಗೆ ಇಂದಿನ ಸಾಮಾಜಿಕ, ರಾಜಕೀಯ ಸಂದರ್ಭಗಳಲ್ಲಿ ಅರ್ಥಗಳು ಬೇರೆಯೇ ಇರುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಸ್ಪರ್ಧೆಯಲ್ಲಿ ಪಾಲ್ಗೊಂಡು ಗೆಲ್ಲುವ ಉತ್ಸಾಹದೊಂದಿಗೆ ಸಜ್ಜುಗೊಳ್ಳುವಾಗ ಸ್ಪರ್ಧೆಯ ಸ್ವರೂಪ-ನಿಯಮಗಳನ್ನು ಮೂಲಭೂತವಾಗಿ ಅರಿಯಬೇಕಿದೆ. ಸಮರ್ಥರ-ಅಂಗವಿಕಲರ ನಡುವೆ ಸ್ಪರ್ಧೆ ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅಸಮಾನ ರಾಜಕೀಯ ಆರ್ಥಿಕ ವ್ಯವಸ್ಥೆ ಆಚರಣೆಯಲ್ಲಿರುವ ನಾಡಿನಲ್ಲಿ ಈ ಮುಕ್ತ ಸ್ಪರ್ಧೆ ಸಾಮಾಜಿಕ ನ್ಯಾಯವನ್ನು ತರಲಾರದು.

ಎಲ್ಲಕ್ಕಿಂತ ಮಿಗಿಲಾಗಿ ಅನ್ನಕ್ಕೆ, ಉದ್ಯೋಗಕ್ಕೆ ಸ್ಪರ್ಧೆ ಏರ್ಪಡಿಸುವುದಂತೂ ಇನ್ನೂ ಶೋಚನೀಯ. ಎಲ್ಲರಿಗೂ ಅನ್ನ, ಉದ್ಯೋಗ ಅಗತ್ಯವಿರುವಾಗ ಅವುಗಳನ್ನು ಪೂರೈಸಲು ವಿವಿಧ ಪ್ರಯತ್ನಗಳನ್ನು ಮಾಡಬೇಕಾಗಿರುತ್ತದೆ. ಮೂಲಭೂತ ಅಗತ್ಯಗಳನ್ನು ಗಳಿಸಿಕೊಳ್ಳಲೂ ಸಾಮರ್ಥ್ಯ ಆಧರಿತ ಸ್ಪರ್ಧೆಗೆ ಕರೆ ನೀಡುವುದಂತೂ ವಿಶಾಲಾರ್ಥದಲ್ಲಿ ವಂಚನೆಯ ತಂತ್ರವೇ ಆಗಿರುತ್ತದೆ. ಇದು ಅಂತಿಮವಾಗಿ ಸಾಮಾಜಿಕ ಡಾರ್ವಿನ್ ವಾದವನ್ನು ಎತ್ತಿಹಿಡಿಯುತ್ತ **ಅಸಮರ್ಥನ ಸಾವನ್ನು ನ್ಯಾಯ ಬದ್ಧಗೊಳಿಸುತ್ತದೆ.** ಪ್ರತಿಯೊಬ್ಬನಲ್ಲಿಯೂ ವ್ಯಕ್ತಿವಾದವನ್ನು ಬೆಳೆಸುತ್ತದೆಯೇ ಹೊರತು ಸಾಮಾಜಿಕ ನ್ಯಾಯದ ಪ್ರಜ್ಞೆಯನ್ನಲ್ಲ.

ಇಂತಹ ಸ್ಪರ್ಧೆಯಲ್ಲಿ ಗೆದ್ದವನು ತನ್ನ ಸಾಮರ್ಥ್ಯದಿಂದ ಗೆಲುವು ಸಾಧಿಸಿದ್ದು ಎಂಬ ಅಹಂ ಬೆಳೆಸಿಕೊಳ್ಳು

ತ್ತಾನೆ. ಹಾಗೆಯೇ ಸೋತವನ ಬಗೆಗೆ ನಿರ್ಲಿಪ್ತತೆಯನ್ನು ಸಾಮಾಜಿಕ ಪ್ರಜ್ಞೆಯಿಂದ ಅತೀತನಾಗುವ ಮನಸ್ಥಿತಿಯನ್ನು ಬೆಳೆಸಿಕೊಳ್ಳುತ್ತಾನೆ. ಹಾಗಾಗಿ ಈ ಸ್ಪರ್ಧೆ ಎನ್ನುವಂತಹದು ಆಳದಲ್ಲಿ ಸಾಮೂಹಿಕ ಪ್ರಜ್ಞೆ ಮತ್ತು ಸಾಮಾಜಿಕ ನ್ಯಾಯ ವಿರೋಧಿಯಾದುದು. ಇವತ್ತು ಸರ್ಕಾರವು ಇಂತಹ ಸ್ಪರ್ಧೆಗಳನ್ನು ನಡೆಸಿ ಕೆಲವರನ್ನು ತನ್ನ ಆಡಳಿತ ಯಂತ್ರಾಂಗದೊಳಗೆ ಸೇರಿಸಿಕೊಳ್ಳಲು ಬಯಸುತ್ತದೆಯೇ ಹೊರತು ಅವಕಾಶದಿಂದ ವಂಚಿತರಾಗಿರುವವರನ್ನು ಆರಿಸಿ ಅವರಿಗೆ ಸಾಮಾಜಿಕ ನ್ಯಾಯವನ್ನು ಕಲ್ಪಿಸುವುದ ಕ್ಕಲ್ಲ. ಖಾಸಗಿ ಕ್ಷೇತ್ರದ ಉದ್ಯೋಗ ಸ್ಪರ್ಧೆಯಂತೂ ಕಂಪ ನಿಯ ಹಿತಾಸಕ್ತಿಯನ್ನು ಆಧರಿಸಿರುತ್ತದೆಯೇ ಹೊರತು ನಾವು ಬಯಸುವ ಸಾಮಾಜಿಕ ನ್ಯಾಯವನ್ನಲ್ಲ.

ಇಂಥ ಪರಿಸ್ಥಿತಿಯಲ್ಲಿ ಇಂಗ್ಲಿಷ್ ಭಾಷೆಯೊಂದೇ ವಂಚನೆಯ ಸ್ಪರ್ಧೆಯಲ್ಲಿ ಎಲ್ಲರಿಗೂ ಉದ್ಯೋಗಾವ ಕಾಶಗಳನ್ನು, ಅಂದರೆ ಸಾಮಾಜಿಕ ನ್ಯಾಯವನ್ನು ತಂದು ಕೊಡುವ ಸಾಮರ್ಥ್ಯ ಅಥವಾ ಪ್ರತಿಭೆಯಾಗಿರುವುದಿಲ್ಲ. ಆದರೆ ಅದು ಉದ್ಯೋಗ ಪಡೆಯಲು ನೆರವಾಗುವಂತಹ ಒಂದು ಸಂವಹನದ ಸಾಧನವಾಗಬಲ್ಲದೇ ಹೊರತು ಸಾಮಾಜಿಕ ನ್ಯಾಯ ತುರವಂತಹ ರಹದಾರಿಯಲ್ಲ. ಒಂದು ವೇಳೆ ಅವರಿಗೆ ಪ್ರಾಥಮಿಕ ಹಂತದಲ್ಲಿ ಕ್ರಿಯಾ ಶೀಲ (Functional) ಇಂಗ್ಲಿಷ್ ಕಲಿಸಿ ಅದರ ಉತ್ತಮ ಜ್ಞಾನವಿದ್ದಾಗ್ಯೂ ಸಹ ಆ ಭಾಷೆ ಮಾತ್ರದಿಂದ ಪಡೆಯಲು ಸಾಧ್ಯವಿಲ್ಲ. ಇಂದು ಓದು ಬರೆಹ ಬಾರದ ಎಷ್ಟೋ ಜನ ಇಂಗ್ಲಿಷ್ ಮಾತನಾಡಬಲ್ಲರು. ಆದರೆ ಉದ್ಯೋಗ ಮಾರು ಕಟ್ಟೆಯಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಅವರಿಗಿಲ್ಲ. ಅಂದರೆ ಆ ಭಾಷೆಯ ಮೂಲಕ ಉನ್ನತ ಶಿಕ್ಷಣವನ್ನು, ಪಡೆಯುವ ಶಕ್ತಿ ದಮನಿತ, ಶೋಷಿತ ಮತ್ತು ಆರ್ಥಿಕವಾಗಿ ಹಿಂದುಳಿ ದಿರುವ ವರ್ಗದ ಜನರಿಗೆ ಬರಬೇಕು. ಆಗ ಮಾತ್ರ ಇವ ತ್ತಿನ 'ಸ್ಪರ್ಧಾತ್ಮಕ' ಪ್ರಪಂಚದಲ್ಲಿ ಸ್ಪರ್ಧಿಸಲು ಬೇಕಾದ ಪ್ರತಿಭೆ ಅಥವಾ ಸಾಮರ್ಥ್ಯ ಗಳಿಸಲು ಸಾಧ್ಯ.

ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಶಿಕ್ಷಣವು ಜಾಗತಿಕ ಮಾರುಕಟ್ಟೆಯ ಒಂದು ಸರಕಾಗಿ ಪರಿವರ್ತಿತ ವಾಗಿದೆ. "ಖಾಸಗಿ ಶಿಕ್ಷಣ ವ್ಯವಸ್ಥೆ"ಯಲ್ಲಿ ಅಂತಹ ಸರ ಕನ್ನು, ಪ್ರಸ್ತುತದಲ್ಲಿ ಬೇಡಿಕೆಯಲ್ಲಿರುವ ಸಾಫ್ಟ್‌ವೇರ್, ಎಂ. ಬಿ.ಎ ಮುಂತಾದ ಹಲವು ಕೋರ್ಸ್‌ಗಳ ರೂಪದಲ್ಲಿ ಪಡೆ ಯಲು (ಖರೀದಿಸಲು) ಗ್ರಾಮೀಣ ಪ್ರದೇಶದ ಎಷ್ಟು ಜನ ರಿಗೆ ಸಾಧ್ಯ? ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಕಲಿತರೂ ಉನ್ನತ ಶಿಕ್ಷಣವನ್ನು ಪಡೆಯಲು ಅಸಾಧ್ಯವಾಗಿದೆ. ಅದು ಸಾಧ್ಯವಿದ್ದರೂ ಸಾಮಾಜಿಕವಾಗಿ ಹಿಂದುಳಿದಿರುವವರಿಗೆ ಅಲ್ಲ. ಈಗಾಗಲೇ ಆರ್ಥಿಕವಾಗಿ ಮುಂದುವರೆದ ಕುಟುಂ ಬಗಳಿಗೆ ಸಾಧ್ಯವಾಗಬಹುದಷ್ಟೇ. ಅಂದರೆ ಅವರ ಇಂಗ್ಲಿಷ್ ಭಾಷೆಯ ಸಾಮರ್ಥ್ಯದ ಜತೆಗೆ "ವಿಷಯ ಸಾಮರ್ಥ್ಯ" (Subject Competance)ವಿಲ್ಲದಿದ್ದರೆ ಆಗ ಪ್ರಯೋಜನ ಏನು? ಅಂದರೆ ವ್ಯಾಪಾರೀಕರಣವಾಗಿರುವ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಇಂತಹ ವಿಷಯಾಧಾರಿತ ಸಾಮರ್ಥ್ಯ 'ಅಥವಾ ಪ್ರತಿಭೆ' ಎನ್ನುವಂತಹುದು ಒಂದು ಸರಕಾಗಿ ಪರಿಣಮಿಸಿರುವುದು ಇಲ್ಲಿ ವ್ಯಕ್ತಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವವರು ಅದನ್ನು ಖರೀದಿಸುವುದು ದುಬಾರಿಯಾದ ಪ್ರಯತ್ನ ವಾಗಿದೆ. ಪ್ರತಿಭೆ-ಸಾಮರ್ಥ್ಯಗಳ ಗಳಿಕೆಗಳು ಆರ್ಥಿಕವಾಗಿ ಸಬಲರಾಗಿರುವವರ ಸ್ವತ್ತಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಾಮರ್ಥ್ಯ-ಸ್ಪರ್ಧೆಗಳೆಂಬ ಪದಪುಂಜಗಳನ್ನು ಹರಿಯಬಿ

ವಿವಿಧ ರೀತಿಯ ಶ್ರೇಣೀಕೃತ ತಾರತಮ್ಯದ ಸಾಮಾಜಿಕ ವ್ಯವಸ್ಥೆಯಿರುವ ರಾಷ್ಟ್ರದಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಯಾವ ಪ್ರಜಾತಂತ್ರವಾದಿಯು ನಿರಾಕರಿಸಲು ಸಾಧ್ಯವಿಲ್ಲ. ಎಲ್ಲರೂ ಈ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಒಪ್ಪಲೇಬೇಕಿದೆ. ಈಗಾಗಲೇ ಶತ ಶತಮಾನಗಳಿಂದ ಶ್ರೇಣೀಕೃತ ತಾರತಮ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಣೆಗೆ ಬಲಿಯಾಗಿರುವ ದಲಿತರು, ಹಿಂದುಳಿದವರು ಮತ್ತು ಗ್ರಾಮೀಣ ಪ್ರದೇಶಗಳ ಜನರು ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಯಲ್ಲಿ ತಮ್ಮ ನ್ಯಾಯದ ಪಾಲನ್ನು ಪಡೆಯುವ ಅಗತ್ಯವಿದೆ. ಅದು ಅವರ ಹಕ್ಕಾಗಿದೆ.

ಡುತ್ತಲೇ ಖಾಸಗಿ ಜಗತ್ತು ಶೋಷಣೆಯನ್ನು ಮುಂದುವರಿ ಸಲು ಬಯಸುತ್ತದೆ.

ವಿವಿಧ ರೀತಿಯ ಶ್ರೇಣೀಕೃತ ತಾರತಮ್ಯದ ಸಾಮಾ ಜಿಕ ವ್ಯವಸ್ಥೆಯಿರುವ ರಾಷ್ಟ್ರದಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಯಾವ ಪ್ರಜಾತಂತ್ರವಾದಿಯು ನಿರಾಕರಿಸಲು ಸಾಧ್ಯವಿಲ್ಲ. ಎಲ್ಲರೂ ಈ ಸಾಮಾಜಿಕ ನ್ಯಾಯದ ಪ್ರಶ್ನೆ ಯನ್ನು ಒಪ್ಪಲೇಬೇಕಿದೆ. ಈಗಾಗಲೇ ಶತ ಶತಮಾನ ಗಳಿಂದ ಶ್ರೇಣೀಕೃತ ತಾರತಮ್ಯದ ಸಾಮಾಜಿಕ ವ್ಯವಸ್ಥೆ ಯಲ್ಲಿ ಶೋಷಣೆಗೆ ಬಲಿಯಾಗಿರುವ ದಲಿತರು, ಹಿಂದುಳಿ ದವರು ಮತ್ತು ಗ್ರಾಮೀಣ ಪ್ರದೇಶಗಳ ಜನರು ಬದಲಾಗು ತ್ತಿರುವ ಜಾಗತಿಕ ವ್ಯವಸ್ಥೆಯಲ್ಲಿ ತಮ್ಮ ನ್ಯಾಯದ ಪಾಲನ್ನು ಪಡೆಯುವ ಅಗತ್ಯವಿದೆ. ಅದು ಅವರ ಹಕ್ಕಾಗಿದೆ.

ಭಾರತದಲ್ಲಿ ಊಳಿಗಮಾನ್ಯಶಾಹಿ ವ್ಯವಸ್ಥೆ ಒಂದು ರೀತಿಯ ಶ್ರೇಣೀಕರಣ ವ್ಯವಸ್ಥೆಯನ್ನು 'ಭದ್ರಗೊಳಿಸಿದರೆ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಮತ್ತೊಂದು ರೀತಿಯ ಸುಧಾರಿತ ಶ್ರೇಣೀಕೃತ ವ್ಯವಸ್ಥೆಯನ್ನು ಸ್ಥಾಪಿಸುತ್ತಿದೆ. ಇದು ಅಮೆರಿಕದಂತಹ ರಾಷ್ಟ್ರಗಳಲ್ಲಿ ಬಡವ ಶ್ರೀಮಂತರ ಅಂತ ರವು ಒಂದು ರೀತಿಯದ್ದಾದರೆ ಭಾರತದಂತಹ ರಾಷ್ಟ್ರದಲ್ಲಿ ಬೇರೆಯ ರೂಪು ಪಡೆಯುತ್ತವೆ. ಜಾತಿ ವ್ಯವಸ್ಥೆ ಅದಕ್ಕೆ ಬೇರೆ ಬೇರೆ ಆಯಾಮಗಳನ್ನು ನೀಡುತ್ತದೆ. ಖಾಸಗಿ ಕ್ಷೇತ್ರ ದಲ್ಲಿ ಅದು ಸ್ವದೇಶಿ ಕೈಗಾರಿಕೆಯಾಗಲಿ ವಿದೇಶಿ ಕೈಗಾರಿಕೆ ಯಾಗಲಿ ಅದರ ಒಡೆತನ ಖಾಸಗಿಯದು-ವ್ಯಕ್ತಿಯದು- ಸಬಲ ವರ್ಗದ್ದು. ಅದರ ಅಸ್ತಿತ್ವವನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇರುವುದಿಲ್ಲ. ಅದರ ಮಾಲೀಕನೆ ಸರ್ವಾ ಧಿಕಾರ ಹೊಂದಿರುತ್ತಾನೆ.

ಇಂತಹ ಖಾಸಗಿ ಸಂಸ್ಥೆಗಳಲ್ಲಿ ಮತ್ತೆ ಎಲ್ಲರೂ ಸಮಾನರಲ್ಲ. ವಿವಿಧ ಶ್ರೇಣೀಕೃತ ಹುದ್ದೆಗಳಿರುತ್ತವೆ. ಮೇಲ್ಮ ಟ್ಟದ ಹುದ್ದೆಗಳ ಸಂಖ್ಯೆ ಸೀಮಿತವಾಗಿದ್ದು ಅವು ಮಾಲೀಕನ ಹಿತಾಸಕ್ತಿಗೆ ಪೂರಕವಾಗಿ ಕಾರ್ಯನಿರ್ವಹಿಸ ಬೇಕಿರುತ್ತವೆ. ಉಳಿದಂತೆ ಕಾರ್ಮಿಕರ ಸಂಖ್ಯೆಯೇ ಅಧಿಕ ವಾಗಿದ್ದು ಅವರು ಮಾಲೀಕನಿಂದ ದೂರವಾಗಿರುತ್ತಾರೆ. ಈ ಹುದ್ದೆಗಳು ಖಾಯಂ ಅಲ್ಲ. ಅವು ಮಾಲೀಕನ ಅಥವಾ ಅಲ್ಲಿಯ ಖಾಸಗಿ ಗುತ್ತಿಗೆದಾರರ ಅಧೀನದಲ್ಲಿ ಕಾರ್ಯ ನಿರ್ವಹಿಸಬೇಕಿರುತ್ತದೆ. ಒಟ್ಟು ಒಂದು ಶ್ರೇಣೀ ಕೃತ ಉತ್ಪಾದನಾ ವ್ಯವಸ್ಥೆ ಖಾಸಗಿ ಕ್ಷೇತ್ರದಲ್ಲಿದೆ. ಹಾಗಾಗಿ ಇಂಗ್ಲಿಷ್ ಕಲಿತವರೆಲ್ಲರೂ ಇಂತಹ ಕೈಗಾರಿಕೆಗಳಲ್ಲಿ ಉದ್ಯೋಗ ಪಡೆದಾಗ ಎಲ್ಲರೂ ಉನ್ನತ ಉದ್ಯೋಗ ಗಳಿ ಸಲು ಸಾಧ್ಯವಿಲ್ಲ. ಅವು ಬೆರಳೆಣಿಕೆಯ ಜನರಿಗೆ ಮಾತ್ರ, ಅದರಲ್ಲಿಯೂ ಅವರು ಪಡೆದಿರುವ ಶಿಕ್ಷಣದ ಮಟ್ಟ, ಅವರು ಹೊಂದಿರುವ ಸಾಮಾಜಿಕ ತಿಳುವಳಿಕೆ, ಅವರು ಶಿಕ್ಷಣ ಪಡೆದ ಸಂಸ್ಥೆಯ ಖ್ಯಾತಿ, ಅವರ ಸಾಮಾಜಿಕ ಹಿನ್ನೆಲೆ, ಅದು ಮೇಲ್ಜಾತಿ-ಮೇಲ್ವರ್ಗಗಳೇ ಅಥವಾ ಕೆಳ ಜಾತಿ-ಕೆಳವರ್ಗಗಳೇ, ಅವರ ರಾಜಕೀಯ ತಿಳುವಳಿಕೆ ಯಾವ ರೀತಿಯದು, ಕಂಪನಿಯ ಹಿತಾಸಕ್ತಿಗೆ ಪೂರಕ ವಾಗಿ ದುಡಿಯಬಲ್ಲರೇ ಅಥವಾ ಇಲ್ಲವೇ, ಎಲ್ಲವನ್ನೂ ಪರಿಗಣಿಸಲಾಗುತ್ತದೆ.

ಎಲ್ಲ ಹಂತಗಳನ್ನು ದಾಟಿ ಉದ್ಯೋಗ ಪಡೆದಾಗ ಅಂತಿಮವಾಗಿ "ಧಣಿ-ದಲ್ಲಾಳಿ-ಸೇವಕ" ಶ್ರೇಣೀಗಳಲ್ಲಿ ಕಾರ್ಯನಿರ್ವಹಿಸಬೇಕಿರುತ್ತದೆ. ಈ ನಡುವೆ ಯಾವ ಕೊಂಡಿಯಲ್ಲಾದರೂ ಏರು ಪೇರಾದರೂ ತಮ್ಮ ವೃತ್ತಿ ಕಳೆದುಕೊಳ್ಳಬೇಕಾಗುತ್ತದೆ. ಇಂದು ಯಾವ ಖಾಸಗಿ ಕೈಗಾ ರಿಕೆಗಳಲ್ಲಿಯೂ ಕಾರ್ಮಿಕ ಸಂಘಟನೆಗಳು ಇಲ್ಲದಿರುವುದು ಕಾರ್ಮಿಕರಿಗೆ ಅನ್ಯಾಯವಾದರೂ ಪ್ರಶ್ನಿಸಲು ಸಾಧ್ಯವಿಲ್ಲ ದಂತಹ ಪರಿಸ್ಥಿತಿ ಇದೆ. ಇದು ಏನನ್ನು ಸೂಚಿಸುತ್ತದೆ? ಇಲ್ಲಿ ನಿಜವಾದ ಸಾಮಾಜಿಕ ನ್ಯಾಯದ ಪ್ರಶ್ನೆ ಏಳುತ್ತದೆ. ಇಲ್ಲಿ ಇಂಗ್ಲಿಷ್ ಜ್ಞಾನವೊಂದೇ ಸಾಮಾಜಿಕ ನ್ಯಾಯಕ್ಕೆ ಉತ್ತರವಾಗುವುದಿಲ್ಲ. ಇಂತಹ ಪರಿಸ್ಥಿತಿ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಹುದ್ದೆಯ ಆಯ್ಕೆಯಿಂದಿಡಿದು ಖಾಸಗಿ ಕೈಗಾರಿಕೆಗಳ, ಸರ್ಕಾರದ ವಿವಿಧ ಉನ್ನತ ಹುದ್ದೆ ಗಳ, ನಮ್ಮ ನಾಡಿನಲ್ಲಿ ವಿವಿಧ ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರುಗಳ ಆಯ್ಕೆಯಲ್ಲಿಯೂ ನಡೆಯುತ್ತಿದೆ. ಸ್ಥಾನ ಪಡೆದರೂ, ಪಡೆದ ಒಬ್ಬ ವ್ಯಕ್ತಿಯ ಇಡೀ ಸಮುದಾಯದ ಸಾಮಾಜಿಕ ನ್ಯಾಯ ಸಾಧನೆಯ ಪ್ರತೀಕವೇ?

ಇವತ್ತು ಇಂಗ್ಲಿಷ್ ಕಲಿತು ಯಾವ ವಲಯದಲ್ಲಿ ಅವಕಾಶಗಳಿಸಲು ಪ್ರಯತ್ನಿಸುತ್ತಿದ್ದೇವೆಯೋ ಅದೇ ವಲಯದ ಧಣಿಗಳು ಇಂಗ್ಲಿಷ್ ಶಿಕ್ಷಣವನ್ನು ಹೆಚ್ಚಿಸಬೇ ಕಾದ ಮಾತುಗಳನ್ನಾಡುತ್ತಿವೆ. ಆ ಮೂಲಕ ಅಧಿಕ ಕಾರ್ಮಿಕರನ್ನು ಸೃಷ್ಟಿಸಿ ಅಮಾನವೀಯ ಸ್ಪರ್ಧೆ ಸೃಷ್ಟಿಸಿ ಸಾಮಾಜಿಕ ಅನ್ಯಾಯಕ್ಕೆ ಕಾರಣವಾಗಿರುವುದು. ಇಂತಹ ಸಾಮಾಜಿಕ ನ್ಯಾಯ ವಿರೋಧಿಗಳ ಜತೆಗೆ ಹೇಗೆ ಮುಖಾ ಮುಖಿಗೊಳ್ಳಬೇಕೆಂಬುದು ಸಹ ಸಾಮಾಜಿಕ ನ್ಯಾಯದ, ಹಕ್ಕೊತ್ತಾಯದ ಜತೆಗೇನೆ ಇರಬೇಕಿದೆ. ಅಂದರೆ ಅಸಮಾ ನತೆಯನ್ನು ಸೃಷ್ಟಿಸುತ್ತಿರುವ ಶೋಷಕರ ಅಸ್ತಿತ್ವವನ್ನು ಪ್ರಶ್ನಿ ಸದೆ, ಅದರ ರಚನೆಯನ್ನು ಸುಧಾರಿಸದೆ ಇದ್ದರೆ, ಸಾಮಾ ಜಿಕ ನ್ಯಾಯ ಪುಸ್ತಕದ ನ್ಯಾಯವಾಗಿ ಉಳಿಯುವ ಸಾಧ್ಯ ತೆಯೇ ಹೆಚ್ಚು.

ಜತೆಗೆ ನಮಗೆ ಇಂಗ್ಲಿಷ್ ಬೇಕಾಗಿರುವುದು ಅಮೆ ರಿಕ, ಇಂಗ್ಲೆಂಡ್ ಮುಂತಾದ ವಿದೇಶಗಳಲ್ಲಿ ಕೆಲಸ ಮಾಡಲು ಅಲ್ಲ. ಅದಿದ್ದರೂ ಕೆಲವರಿಗೆ ಮಾತ್ರ, ಅದು ಇಂದು ಬೇಕಿರುವುದು ಬೆಂಗಳೂರಿನಲ್ಲಿ ಕೆಲಸ ಮಾಡಲು. ಬೆಂಗಳೂರು ಅಮೆರಿಕದ ಅಥವಾ ಇಂಗ್ಲೆಂಡಿನ ರಾಜಧಾನಿ ಯಲ್ಲ. ಆದರೆ ಅವುಗಳ ರಾಜಧಾನಿಯನ್ನಾಗಿಸಿ ಇಂಗ್ಲಿಷ್ ಅನ್ನು ಮತ್ತಷ್ಟು ಹೇರುತ್ತಿರುವುದನ್ನು ಪ್ರಶ್ನಿಸದೆ ಇಂಗ್ಲಿಷ್ ಭಾಷೆಯ ರಾಜಕಾರಣವನ್ನು ಅರಿಯಲಾಗುವುದಿಲ್ಲ. ಮತ್ತು ಆ ರೀತಿಯ ಹೇರಿಕೆಯೇ ಸಾಮಾಜಿಕ ಅನ್ಯಾಯವನ್ನು ಅಂದರೆ ಅಸಮಾನತೆಯನ್ನು ಸೃಷ್ಟಿಸುತ್ತಿರುವುದು. ಈ

ಮೌಲ್ಯಗಳನ್ನು ಬಿತ್ತುತ್ತದೆ. ಅವುಗಳನ್ನು ಪ್ರಶ್ನಿಸದೆ ನೈಜ ಸಾಮಾಜಿಕ ನ್ಯಾಯ ಸಾಧ್ಯವಿಲ್ಲ. ಯಾಕೆಂದರೆ ಪ್ರಸ್ತುತದ ಪರಿಸ್ಥಿತಿಯನ್ನು ಗಮನಿಸಿದರೆ ಅದು ಮುಂದೆ ಇನ್ನೂ ತೀವ್ರವಾದ ಸಮಸ್ಯೆಗಳನ್ನು ಸಾಮಾಜಿಕ ಸಮಾನತೆಯನ್ನು ಸೃಷ್ಟಿಸುವ ಅಪಾಯವಿದೆ. ಅಲ್ಲದೆ ಕನ್ನಡ ಮತ್ತು ಇತರೆ ಮಾತೃಭಾಷೆಗಳನ್ನು ಉಳಿಸಿಕೊಂಡು ಪ್ರಸ್ತುತದ ಸವಾಲನ್ನು ತಂತ್ರಬದ್ಧವಾಗಿ ಎದುರಿಸಲು ಸಾಧ್ಯವಿಲ್ಲ.

ಜತೆಗೆ ಇಂದು "ಜೀವನಕ್ಕಾಗಿ ಇಂಗ್ಲಿಷ್, ಜೀವನಾಡಿಗಾಗಿ ಕನ್ನಡ" ಎಂಬ ಮಾತುಗಳನ್ನಾಡಲಾಗುತ್ತಿದೆ. ಆದರೆ ಜೀವನಕ್ಕಾಗಿಯೇ ಭಾಷೆ ವಿಕಾಸಗೊಂಡಿರುವುದು. ಜೀವನ ಇದ್ದರೇನೇ ಜೀವನಾಡಿ. ಜೀವನವೇ ಜೀವನಾಡಿಯೊಂದನ್ನು ರೂಪಿಸುವುದು ಜೀವನ-ಜೀವನಾಡಿಗಳನ್ನು ಬೇರ್ಪಡಿಸಿ ಭಾಷೆಯನ್ನು ಬೆಳೆಸಲು ಸಾಧ್ಯವಿಲ್ಲ. ಹೀಗೆ ಬೇರ್ಪಡಿಸಲು ಆರಂಭಿಸಿದ ತಕ್ಷಣವೇ ಭಾಷೆಯ ಕುಂಠಿತತೆ ಆರಂಭಗೊಳ್ಳುತ್ತದೆ. ನಾವು ಹೆಚ್ಚು ಪ್ರಜ್ಞಾಪೂರ್ವಕವಾಗಿ ಯೋಚಿಸಿ ಆಚರಿಸುವವರೆಗೆ ಜೀವನ ಜೀವನಾಡಿಗಳ ಸಮತೋಲನ ಸಾಧ್ಯವಾಗಬಹುದೇನೋ? ಆದರೆ ಇದಾವುದರ ಎಚ್ಚರವಿಲ್ಲದೆ ವ್ಯಾವಹಾರಿಕವಾಗಿ ಜೀವನವನ್ನು ಸ್ವೀಕರಿಸಿದವರಿಗೆ ಈ ಪ್ರಶ್ನೆ ಮುಖ್ಯವಾಗಲಾರದು. ಯಾವುದು ಜೀವನವಾಗಿರುತ್ತದೆಯೋ, ಅದೇ ಅವರ ಜೀವನಾಡಿಯನ್ನು ರೂಪಿಸುತ್ತದೆ. ನಾವು ಯಾವುದನ್ನು ಕನ್ನಡ ಜೀವನಾಡಿ ಎನ್ನುತ್ತೇವೆಯೋ ಬಹುಶಃ ಅದಾಗಿರುವುದರ ಸಾಧ್ಯತೆ ಕಡಿಮೆ. ಇಂತಹ ಸಂದರ್ಭಗಳಲ್ಲಿ ಬಹಳ ಸೂಕ್ಷ್ಮ ನಡಾವಳಿಗಳೇ ನಿರ್ಣಾಯಕ ಪಾತ್ರ ವಹಿಸುವುದು. ಇನ್ನೊಂದು ಮಾತು. ಜೀವನಕ್ಕಾಗಿ ಇಂಗ್ಲಿಷ್ ಕಲಿತ ವ್ಯಾವಹಾರಿಕರ ಕನ್ನಡ ಜೀವನಾಡಿ ಬತ್ತಿಹೋಗಿ ಅವರಿಗೆ ಅನುಭೋಗ, ಜಗತೀಕರಣದ ಭಾಷೆಯ ಮತ್ತೊಂದು ಜೀವನಾಡಿ ದಕ್ಕುತ್ತದೆ. ಇದಕ್ಕಿಂತ ಮುಖ್ಯವಾಗಿ ನಾವು ಅರಿಯಲೇ ಬೇಕಾದ ಸತ್ಯವೆಂದರೆ ಇಂಗ್ಲಿಷ್ ಎನ್ನವುದು ಕೇವಲದ ಭಾಷೆಯಲ್ಲ. ಅದು ಒಂದು ದೇಶವನ್ನು ಅದರ ವಿಶಾಲ ಜನಸಮುದಾಯವನ್ನು ಜಾಗತಿಕ ಬಂಡವಾಳಶಾಹಿಯ, ಸಾಮ್ರಾಜ್ಯಶಾಹಿಯ ಉತ್ಪಾದನೆ ಮತ್ತು ಮಾರುಕಟ್ಟೆ ವ್ಯವಸ್ಥೆಯ ಜತೆಗೆ ಬೆಸೆಯುವ ಸಾಧನ. ಹಾಗೆ ಬೆಸೆಯಲಾದ ಜನಸಮುದಾಯವನ್ನು ಮಾನಸಿಕವಾಗಿ ಬೌದ್ಧಿಕವಾಗಿ ಆ ಜಾಗತಿಕ ಬಂಡವಾಳಶಾಹಿಯ ನಿಯಂತ್ರಿಸುತ್ತ ತನ್ನ ಲಾಭದ ಮತ್ತು ಶೋಷಕ ತಂತ್ರಗಳಿಗೆ, ಇಡೀ ಸಮಾಜ ಅಥವಾ ಸಮಾಜದ ಬಹುಸಂಖ್ಯಾತ ಜನವರ್ಗ ಬಲಿಯಾಗಬೇಕಿದೆ.

ಇಂತಹ ಸನ್ನಿವೇಶದಲ್ಲಿ ಜೀವನ-ಜೀವನಾಡಿಗಳಿಂದ ಬೇರ್ಪಟ್ಟ ಜನರು ಇಂಗ್ಲಿಷ್ ಅಲೆಯ ಅರ್ಥಾತ್ ನವ ವಸಾಹತುಶಾಹಿಯ ರಾಜಕೀಯ ಆರ್ಥಿಕ ಹುನ್ನಾರಗಳಲ್ಲಿ ಕೊಚ್ಚಿ ಹೋಗುತ್ತಿದ್ದಾರೆ. ಕೆಲವರು ಕನ್ನಡದಲ್ಲಿ ಬರೆಯುತ್ತ, ಭಾಷಣ ಮಾಡುತ್ತ ಸಾಗಿದರೆ ಅವರಿಂದಷ್ಟೇ ಕನ್ನಡ ಉಳಿಯಲಾರದು, ಅಥವಾ ಕನ್ನಡ ಜೀವನಾಡಿಯ ವಾರಸುದಾರರು ಆಗಲಾರರು. ರಾಷ್ಟ್ರೀಯ ಅನನ್ಯತೆ, ಅಸ್ಮಿತೆಗಳು ಕೇವಲ ವ್ಯಕ್ತಿ ಚಿಂತನೆಗಳನ್ನು ಆಧರಿಸಿರುವುದಿಲ್ಲ. ಅದು ಇಡೀ ಸಮುದಾಯದ ಸಮಷ್ಟಿ ಪ್ರಜ್ಞೆಯನ್ನು ಪ್ರತಿನಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ಜನರು ತಮ್ಮ ಉದ್ಯೋಗದ ಜತೆಗೆ ತಮ್ಮ ಭಾಷೆ-ಸಂಸ್ಕೃತಿಗಳನ್ನು ಉಳಿಸಿಕೊಳ್ಳುವುದು ಸಾಮಾಜಿಕ ನ್ಯಾಯವೇ ಆಗಿದೆ.

ಹಾಗಾಗಿ ದಲಿತರ, ಹಿಂದುಳಿದವರ ಸಾಮಾಜಿಕ ನ್ಯಾಯಕ್ಕಾಗಿನ ಆಗ್ರಹ, ಉದ್ಯೋಗಾವಕಾಶಗಳು ಮತ್ತು ಸಾಮಾಜಿಕ ಉನ್ನತ ಸ್ಥಾನಮಾನಗಳನ್ನು ಗಳಿಸಿಕೊಡುವ ಪ್ರಯತ್ನದ ಜತೆ ಜತೆಗೆ ಸಾಂಸ್ಕೃತಿಕ ಅನನ್ಯತೆ, ಸಮುದಾಯಗಳ ಸಾರ್ವಭೌಮತ್ವ, ಸ್ವಾವಲಂಬಿ, ಸ್ವಾಭಿಮಾನಿ ಬದುಕನ್ನು ರಕ್ಷಿಸುವ ಶಿಕ್ಷಣಕ್ಕೆ ಒತ್ತಾಯಿಸಬೇಕು. ಹಾಗೆಯೇ ಸಾಮಾಜಿಕ ನ್ಯಾಯ ದಕ್ಕಿಸಿಕೊಳ್ಳಬೇಕಿದ್ದರೆ ಈಗಿರುವ ತಾರತಮ್ಯದ ಭಾಷಾಬೋಧನೆ ಮತ್ತು ಶಿಕ್ಷಣ ಪದ್ಧತಿಯನ್ನು ರದ್ದುಗೊಳಿಸುವಂತೆ ಒತ್ತಾಯಿಸಬೇಕು. ಎಲ್ಲ ಮಕ್ಕಳಿಗೂ ಶಿಕ್ಷಣ ಕಡ್ಡಾಯವಾಗಿದ್ದು, ಏಕರೂಪದ ಸಮಾನ ಶಿಕ್ಷಣ ಪದ್ಧತಿ ಜಾರಿಗೊಳಿಸಬೇಕು, ಮಾತೃಭಾಷಾ ಶಿಕ್ಷಣ ಮತ್ತು ಇಂಗ್ಲಿಷ್‌ನಂತಹ ಅಗತ್ಯವಿರುವ ಭಾಷೆಗಳನ್ನು ಪರಿಣಾಮಕಾರಿಯಾಗಿ ಕಲಿಸುವುದು. ಉದ್ಯೋಗಗಳನ್ನು ದೊರಕಿಸಿಕೊಡುವ ವಿವಿಧ ವೃತ್ತಿಪರ ಶಿಕ್ಷಣ ಪೂರೈಕೆ ಹಾಗೂ ಯಾವುದೇ ಹಂತದಲ್ಲಿಯೂ ತಾರತಮ್ಯವನ್ನು ಸೃಷ್ಟಿಸದಂತೆ ನೋಡಿಕೊಳ್ಳುವ ಆಡಳಿತ ಯಂತ್ರಾಂಗದ ಸೃಷ್ಟಿಗೂ ಆಗ್ರಹಿಸಬೇಕು.

ಕನ್ನಡ ಭಾಷಿಕ ಪರಿಸರವನ್ನು ನಾಶಗೊಳಿಸುತ್ತಿರುವ ಖಾಸಗಿ ಉದ್ಯಮಗಳ ಆಡಳಿತ ಕ್ಷೇತ್ರಗಳನ್ನು ನಿಯಂತ್ರಿಸುತ್ತ ಕನ್ನಡ ಬಳಸುವಂತೆ ಸೂಚಿಸಬೇಕು. ಇದು ವಾಸ್ತವದಲ್ಲಿ ಸರಿಯಾಗಿ ಜಾರಿಯಾದರೆ ಇಂಗ್ಲಿಷ್ ಭಾಷೆಯನ್ನು ಯಾವಾಗ ಕಲಿಸಬೇಕು ಎಂಬ ಪ್ರಶ್ನೆ-ಬಿಕ್ಕಟ್ಟುಗಳು ಮುಖ್ಯವಾಗಲಾರವು. ಅಸಮಾನತೆಗೆ ತಾರತಮ್ಯತೆಗೆ ಈಗಿನ ಶಿಕ್ಷಣ ಪದ್ಧತಿಯೇ ನೇರ ಕಾರಣವಾಗಿರುವಾಗ ಅದನ್ನು ಸುಧಾರಿಸದೇ, ಬದಲಾಯಿಸದೇ ಅಸಮಾನತೆಯನ್ನು ನಿವಾರಿಸಲು ಸಾಧ್ಯವಿಲ್ಲ. ಸಮುದಾಯಗಳಿಗೆ ಅಗತ್ಯಬಿದ್ದರೆ ಯಾವುದೇ ಸಮಯದಲ್ಲಿ ಬೇಕಾದರೂ ಇಂಗ್ಲಿಷ್ ಭಾಷೆ ಅಥವಾ ಯಾವುದೇ ವಿದೇಶಿ ಭಾಷೆಯನ್ನು ಕಲಿಸಬಹುದಾಗಿರುತ್ತದೆ. ಅಸಮಾನತೆಗೆ ಕಾರಣವಾಗಿರುವ ಪದ್ಧತಿಗಳನ್ನು ನೀತಿಗಳನ್ನು ಪ್ರಶ್ನಿಸದೆ ಅವುಗಳ ಯಥಾವತ್ತು ಮುಂದುವರಿಕೆ ಬಿಟ್ಟು ಇಂಗ್ಲಿಷ್ ಭಾಷೆಯನ್ನು ಒಂದನೆ ತರಗತಿಯಿಂದ ಕಲಿಸುವುದು ನೈಜ ಸಾಮಾಜಿಕ ನ್ಯಾಯ ಸಾಧನೆಯ ಪರಿಹಾರವಾಗಲಾರದು. ಜತೆಗೆ ಸಾಮಾಜಿಕ ಅಸಮಾನತೆ ನಾಶಗೊಳ್ಳದ ಹೊರತು ಶಿಕ್ಷಣ ಕ್ಷೇತ್ರದ-ಉದ್ಯೋಗ ಕ್ಷೇತ್ರದ ಅಸಮಾನತೆ ನಿವಾರಣೆಯಾಗದು.

ವಿಷಾದದ ಸಂಗತಿಯೆಂದರೆ ಇಂಗ್ಲಿಷ್ ಕಲಿಸಬೇಕು-ಕಲಿಸಬಾರದು ಎಂಬುವವರ ಸಂಘರ್ಷ ನಡೆಸುತ್ತಿರುವುದು. ಇಲ್ಲಿ ಇಂಗ್ಲಿಷ್ ಭಾಷೆ ಯಾಕೆ ಅನಿವಾರ್ಯವಾಗಿದೆ? ಇದಕ್ಕೆ ಕಾರಣ ಯಾರು? ಇದರ ಹಿಂದಿನ ಹುನ್ನಾರಗಳೇನು? ಎಂಬುದು ಚರ್ಚೆಯ ಕೇಂದ್ರವಾಗಬೇಕಿತ್ತು. ಅಂದರೆ ಕನ್ನಡ ಭಾಷೆ ಬಳಕೆಯಾಗಬೇಕಿದ್ದ ಜಾಗಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಪ್ರತಿಷ್ಠಾಪಿಸಿದ ಖಾಸಗಿ ಉದ್ಯಮ ಕ್ಷೇತ್ರ, ಜಾಗತೀಕರಣ-ಖಾಸಗೀಕರಣದ ನೀತಿಗಳು, ಇದರ ಹಿಂದಿನ ಸಾಮ್ರಾಜ್ಯಶಾಹಿಗಳು, ಇದಕ್ಕೆ ಅವಕಾಶ ಕಲ್ಪಿಸಿದ ಸರ್ಕಾರಗಳು ಚರ್ಚೆಯ ವಸ್ತುಗಳಾಗಬೇಕಿದ್ದವು. ಆದರೆ ಚರ್ಚೆಗಳಿಂದ ಈ ಶೋಷಕ ಶಕ್ತಿಗಳು ತಪ್ಪಿಸಿಕೊಳ್ಳುತ್ತ ತಮ್ಮ ತಾತ್ವಿಕ ತಿಳುವಳಿಕೆಗಳ ಕಾರಣದಿಂದ, ಭಿನ್ನಾಭಿಪ್ರಾಯ ಹೊಂದಿರುವ ಜನರು ಪರಸ್ಪರ ವಾಗ್ದಾಳಿ ನಡೆಸುತ್ತಿದ್ದಾರೆ. ಇದು ಅಸಮಾನತೆ ಸೃಷ್ಟಿಸುತ್ತಿರುವ ಶೋಷಕ ಶಕ್ತಿಗಳಿಗೆ ಅನುಕೂಲವೇ ಆಗಿದೆ.

ಸಾಮಾಜಿಕ ತಾರತಮ್ಯದ ವ್ಯವಸ್ಥೆಯನ್ನು ಸೃಷ್ಟಿಸುತ್ತಿರುವ ಈ ಶಕ್ತಿಗಳನ್ನು ಇಂದು ಎಲ್ಲರೂ ಅರಿಯಬೇಕಿದೆ. ಶೋಷಕ ಶಕ್ತಿಗಳ ಜತೆಗಿನ ಚದುರಂಗದಾಟದಲ್ಲಿ ಇಡಬೇಕಾಗಿರುವ ಚೆಕ್ ಬಹಳ ಮುಖ್ಯ. ಈ ಚದುರಂಗದಾಟದಲ್ಲಿ ಅವಕಾಶವಾದಿ ತಂತ್ರಗಳಿಗೆ, ರಾಜಿಮನೋಭಾವಕ್ಕೆ ಸ್ಥಾನವಿರಬಾರದು. ಈ ಆಟದಲ್ಲಿ "ಅನುಸಂಧಾನ-ಸಂಘರ್ಷ-ಗೆಲುವಿನ ಪರಿಹಾರ" ದಮನಿತರಿಗೆ ಸಾಧ್ಯವಾಗಬೇಕು. ಯಾವ ಕಾರಣಕ್ಕೂ "ಅನುಸಂಧಾನ-ಅವಕಾಶವಾದಿ ರಾಜೀಕೋರತನ ಸಂಘರ್ಷರಹಿತ ಸೋಲೊಪ್ಪಿಗೆಗೆ" ಅವಕಾಶ ನೀಡಬಾರದು. ಈ ಸೋಲು ಸಮುದಾಯಗಳನ್ನು ಆತ್ಮಶಕ್ತಿರಹಿತ ಜನರನ್ನಾಗಿಸಿ ದಾಸ್ಯಕ್ಕೆ ಗುರಿಪಡಿಸುತ್ತದೆ. ಪುರೋಹಿತಶಾಹಿ ಸೃಷ್ಟಿಸಿದ ಮಾನಸಿಕ ಗುಲಾಮಗಿರಿಯಂತೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆ ಸೃಷ್ಟಿಸುವ ಮಾನಸಿಕ ಗುಲಾಮಗಿರಿತನವು ಅಷ್ಟೇ ಅಪಾಯಕಾರಿಯಾದುದು.

ಈ ಹಿನ್ನೆಲೆಯಲ್ಲಿ ಜಾಗತೀಕರಣದ ಜತೆಗಿನ ಅನುಸಂಧಾನಗಳು ನಡೆಯಬೇಕಿದೆ. ಈ ಅನುಸಂಧಾನಕ್ಕೆ ಇಂಗ್ಲಿಷ್ ಹೇಗೆ ಅಸ್ತ್ರವಾಗಬಲ್ಲುದು? ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅದನ್ನು ಇಂಗ್ಲಿಷ್‌ಗಾಗಿ ಬೇಡುವ ಜನರಿಗೂ ಮನದಟ್ಟು ಮಾಡಿಸಬೇಕು; ಚದುರಂಗದಾಟದಲ್ಲಿ ಜನಪರವಾದ ರಕ್ಷಣಾತ್ಮಕ ಆಟವಾಡದಿದ್ದರೆ ಶೋಷಕ ಶಕ್ತಿಗಳು ಮತ್ತೆ ಮತ್ತೆ ಗೆಲ್ಲುತ್ತ ಸಾಮಾಜಿಕ ನ್ಯಾಯ ಶರಣಾಗುತ್ತ ಸಾಗಬೇಕಾಗುತ್ತದೆ. □

ಇಂದು "ಜೀವನಕ್ಕಾಗಿ ಇಂಗ್ಲಿಷ್, ಜೀವನಾಡಿಗಾಗಿ ಕನ್ನಡ" ಎಂಬ ಮಾತುಗಳನ್ನಾಡಲಾಗುತ್ತಿದೆ. ಆದರೆ ಜೀವನಕ್ಕಾಗಿಯೇ ಭಾಷೆ ವಿಕಾಸಗೊಂಡಿರುವುದು. ಜೀವನ ಇದ್ದರೇನೇ ಜೀವನಾಡಿ. ಜೀವನವೇ ಜೀವನಾಡಿಯೊಂದನ್ನು ರೂಪಿಸುವುದು ಜೀವನ-ಜೀವನಾಡಿಗಳನ್ನು ಬೇರ್ಪಡಿಸಿ ಭಾಷೆಯನ್ನು ಬೆಳೆಸಲು ಸಾಧ್ಯವಿಲ್ಲ. ಹೀಗೆ ಬೇರ್ಪಡಿಸಲು ಆರಂಭಿಸಿದ ತಕ್ಷಣವೇ ಭಾಷೆಯ ಕುಂಠಿತತೆ ಆರಂಭಗೊಳ್ಳುತ್ತದೆ. ನಾವು ಹೆಚ್ಚು ಪ್ರಜ್ಞಾಪೂರ್ವಕವಾಗಿ ಯೋಚಿಸಿ ಆಚರಿಸುವವರೆಗೆ ಜೀವನ ಜೀವನಾಡಿಗಳ ಸಮತೋಲನ ಸಾಧ್ಯವಾಗಬಹುದೇನೋ? ಆದರೆ ಇದಾವುದರ ಎಚ್ಚರವಿಲ್ಲದೆ ವ್ಯಾವಹಾರಿಕವಾಗಿ ಜೀವನವನ್ನು ಸ್ವೀಕರಿಸಿದವರಿಗೆ ಈ ಪ್ರಶ್ನೆ ಮುಖ್ಯವಾಗಲಾರದು. ಯಾವುದು ಜೀವನವಾಗಿರುತ್ತದೆಯೋ, ಅದೇ ಅವರ ಜೀವನಾಡಿಯನ್ನು ರೂಪಿಸುತ್ತದೆ. ನಾವು ಯಾವುದನ್ನು ಕನ್ನಡ ಜೀವನಾಡಿ ಎನ್ನುತ್ತೇವೆಯೋ ಬಹುಶಃ ಅದಾಗಿರುವುದರ ಸಾಧ್ಯತೆ ಕಡಿಮೆ.



ಮತ್ತೆ ಮತ್ತೆ

ಕಲ್ಲರಳಿ ಹೂವಾಗೊ ಹೊತ್ತಿನಲ್ಲಿ
ಕನವರಿಸುತ್ತವೆ ಕನಸುಗಳು
ಯಾರ ಮನೆಯಲ್ಲೊ ನಾಯಿ ಬೊಗಳಿದ ಸದ್ದು
ಗೂರ್ಖಾನ ಲಾಠಿಯ ಟಕ್ ಟಕ್ ಟಕ್
ಮಧ್ಯರಾತ್ರಿಯಲ್ಲಿ ನಿಂತು
ಹಾರ್ನ್ ಮಾಡುವ ಕಾಲ್‌ಸೆಂಟರ್‌ನ ಗಾಡಿಗಳು
ಗಾರ್ಮೆಂಟ್ಸ್‌ನಲ್ಲಿ ಓಟಿ ಮಾಡಿ ಬಂದ ಹುಡುಗಿ
ಗಂಡನಿಂದ ಒದೆಸಿಕೊಂಡು ಮುಲುಗುತ್ತಿದ್ದಾಳೆ
        ಮತ್ತೊಂದು ಮಗ್ಗುಲಿಗೆ ಹೊರಳಿ
        ತಡಕಾಡುವ ಜೀವಕ್ಕೆ ದಕ್ಕಿದ್ದು
        ತಣ್ಣನೆಯ ಗೋಡೆ
        ಕಂಬಳಿಯೊಳಗೆ ಕವುಚಿ ಕುಸುಕುವಾಗ
        ನೋಯ್ದಾದ ಮಕ್ಕಳ ಎಲುಬುಗೂಡುಗಳು ಕುಣಿಯುತ್ತವೆ
        ಸದ್ದಾ ಹುಸೇನ್ ಯಾಕೆ
        ಮುಖಕ್ಕೆ ಕಪ್ಪು ಬಟ್ಟೆ ಹಾಕಿಸಿಕೊಳ್ಳಲಿಲ್ಲ?
ಎಲ್ಲೊ ಏನೋ ಯಾಕೊ
ಮತ್ತೆ ಮತ್ತೆ ಬಂದು
ಜೋತು ಹಾಕಿಕೊಳ್ಳುವ ಜೋಗಿ
ಅವ ಕೊಟ್ಟು ಹೋದ
ಕಮಲದ ಹೂವಿನ ದಳಗಳ ಎಣಿಸುವುದು
ಎಣಿಸುತ್ತಲೆ ರವಾನಿಸಿದ SMS:
'ಶಿವನು ಭಿಕ್ಷಕ್ಕೆ ಬಂದ
ನೋಡು ಬಾರೆ ತಂಗಿ
ಇವನಂಥ ಚೆಲ್ವರಿಲ್ಲ ನೋಡು ಬಾರೆ'
ಜಟೆಗಟ್ಟಿನ ಶಿವನ ಕಮಟು ನಾರುವ
ಕೂದಲಿಗೆ ಬೇಕು ಸನ್‌ಸಿಲ್ಕ್ ಶಾಂಪೂ
ಮಾಡು ಸಿಕ್ಕದಲ್ಲ ಮಾಡಿದ ಗೂಡು ಚಿಕ್ಕದಲ್ಲ
        ಕಾಗಕ್ಕ ಗುಬ್ಬಕ್ಕನ ಕಥೆಯನ್ನು
        ಹೀಗೂ ಮುಂದುವರೆಸಬಹುದು–
        ಆಮೇಲೆ ಟಾಮ್ ಅಂಡ್ ಜೆರ್ರಿ ಬಂತಂತೆ...
        ಸಿಗರೇಟಿನ ಹೊಗೆಯಂತೆ
        ಎಲ್ಲವೂ ಸುರುಳಿ ಸುರುಳಿ... ನಿರಂತರ
        ಧೂಮವಿದೆ ಲೀಲೆಯಿಲ್ಲ
        ಎಲ್ಲೊ ಏನೋ ಯಾಕೊ
        ಮತ್ತೆ ಮತ್ತೆ...

○ ಬಿ.ಯು. ಸುಮಾ

ಡಾ|| ಎಲ್. ಬಸವರಾಜು ಮತ್ತು ಪಠ್ಯವಿಮರ್ಶೆ

ಡಾ|| ಎಲ್.ಬಿಯವರು ಯಾವುದೇ ಒಂದು ಕ್ಷೇತ್ರವನ್ನು ಗೆರೆಕೊರೆದಂತೆ ಹಿಡಿದು ದುಡಿದವರಲ್ಲ. ಪೂರಕ ಮತ್ತು ಅಖಂಡವೆಂದೇ ಭಾವಿಸಿರುವ ಎಲ್.ಬಿ. ಇದೇ ಧಾತು ಮತ್ತು ಧೋರಣೆಯಲ್ಲಿ ಕೆಲಸ ಮಾಡುತ್ತ ಬಂದಿದ್ದಾರೆ. ಇವರ ಪಠ್ಯವಿಮರ್ಶೆಯನ್ನು ಅನುವಾದ, ಸಂಪಾದನೆ, ವ್ಯಾಖ್ಯಾನ, ಚರಿತ್ರೆ ರಚನೆ, ಸಂಶೋಧನೆ, ಹೀಗೆ ಭಿನ್ನವಾಗಿ ವರ್ಗೀಕರಿಸಿಕೊಳ್ಳಬಹುದಾದರೂ ಆ ಎಲ್ಲ ಒಂದೊಂದು ವರ್ಗೀಕರಣದಲ್ಲೂ ಅಂತರಶಿಸ್ತೀಯ_ಚಹರೆಗಳನ್ನು ಅರಗಿಸಿಕೊಂಡ ಅಖಂಡ ಪ್ರಜ್ಞೆಯೇ ಎದ್ದು ಕಾಣುತ್ತದೆ. ಯಾವುದೇ ಕೃತಿ ತೆಗೆದು ಕೊಂಡರೆ ಅಲ್ಲಿ ಸಂಪಾದನೆ, ಸಂಶೋಧನೆ, ಅನುವಾದ, ತೌಲನಿಕ ಅಧ್ಯಯನ, ಚರಿತ್ರೆ ರಚನೆಗಳೆಲ್ಲ ಏಕೀಭವಿಸಿರುವುದನ್ನು ಕಾಣಬಹುದಾಗಿದೆ. ಇವರ ಜಾಲಾರಿ ಮತ್ತು ಠಾಣಾಂತರ ಕವನ ಸಂಕಲನಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಬರವಣಿಗೆಯನ್ನು ಪಠ್ಯವಿಮರ್ಶೆ ಎಂದೇ ಇಲ್ಲಿ ಕರೆಯಲಾಗಿದೆ.

ರಾಮಲಿಂಗಪ್ಪ ಟಿ.
ಬೇಗೂರು

ಪೌರ್ವಾತ್ಯವಾದದ ಯಜಮಾನ್ಯದಿಂದ ಭಾರತೀಯ ಚರಿತ್ರೆ ರಚನಾಶಾಸ್ತ್ರವು ಕೀಳರಿಮೆಗೆ ಗುರಿಯಾದದ್ದು ಈಗ ಇತಿಹಾಸ. ಹಾಗೇ ರಾಷ್ಟ್ರೀಯತೆ-ಉಪರಾಷ್ಟ್ರೀಯತೆಗಳ ಭರಾಟೆಯಿಂದ ದೇಸಿ ಸಂಸ್ಕೃತಿ ಬಿಂಬಿಸುವ ಪಠ್ಯ-ಸಾಹಿತ್ಯಗಳ ಸಂಕಲನಾನು ಸಂಧಾನಗಳು ವೇಗೋತ್ಕರ್ಷ ಪಡೆದಿದ್ದು ಕೂಡ ಈಗ ಇತಿಹಾಸ. ಈ ಎರಡರ ಪರಿಣಾಮವೆಂಬಂತೆ ನಮ್ಮಲ್ಲಿ ಗ್ರಂಥ ಸಂಪಾದನೆ, ಸಂಶೋಧನೆ, ಸಾಹಿತ್ಯ ಚರಿತ್ರೆ ರಚನೆಗಳು ಪರಸ್ಪರ ಪೂರಕವಾಗಿ ವೇಗಗತಿಯಲ್ಲಿ ನಡೆದಿವೆ. ದೇಶೀಯ ಚಹರೆಗಳ ನಿರ್ಮಾಣ ಮತ್ತು ಸ್ವಾತಂತ್ರ್ಯ ಹೋರಾಟ ಇವೆರಡೂ ನಡೆಯುತ್ತಿದ್ದ ಕಾಲದಲ್ಲಿ ಬೆಳವಣಿಗೆ ಕಂಡ ಶಾಸ್ತ್ರಗಳಿವು. ಹಾಗಾಗಿ ನಮ್ಮ ಸಂಪಾದನೆ, ಸಂಶೋಧನೆ, ಚರಿತ್ರೆ ರಚನಾಶಾಸ್ತ್ರಗಳು ಪೌರ್ವಾತ್ಯವಾದಿ ಚರಿತ್ರೆಯ ಪರಿಕಲ್ಪನೆಯಿಂದ ನಿಯಂತ್ರಣಗೊಳ್ಳುತ್ತ, ಪೌರ್ವಾತ್ಯವಾದದ ಹತ್ಯಾರಗಳು ಮತ್ತು ಸ್ಥಳೀಯ ನಿರ್ವಸಾಹತೀಕರಣ ಪ್ರಜ್ಞೆ ಇವೆರಡನ್ನೂ ಮೈಗೂಡಿಸಿಕೊಂಡಿವೆ. ಇಂಥ ಶಾಸ್ತ್ರಗಳನ್ನು ಕೈಗೆತ್ತಿಕೊಂಡ ಡಾ|| ಎಲ್. ಬಸವರಾಜು ಸ್ವಾತಂತ್ರ್ಯನಂತರದಲ್ಲಿ ಈ ಕ್ಷೇತ್ರಗಳನ್ನು ಅಖಂಡವಾಗಿ ಪರಿಭಾವಿಸುತ್ತ ದುಡಿಯುತ್ತ ಬಂದಿದ್ದಾರೆ.

ಅಲ್ಲಮನ ವಚನ ಚಂದ್ರಿಕೆ, ಪಂಪನ ಆದಿಪುರಾಣ, ಸರ್ವಜ್ಞನ ವಚನಗಳು (ಪರಮಾರ್ಥ) ಶಿವದಾಸ ಗೀತಾಂಜಲಿ, ಕನ್ನಡ ಛಂದ ಸ್ಸಂಪುಟ, ಶಬ್ದಮಣಿದರ್ಪಣಂ, ಸರಳ ಶೂನ್ಯ ಸಂಪಾದನೆ, ಬಸವಣ್ಣನವರ ಷಟ್ಸ್ಥಲ ವಚನಗಳು, ನಿಜಗುಣಶಿವಯೋಗಿಯ ತತ್ವ ದರ್ಶನ, ಬುದ್ಧ ಚರಿತೆ, ಸೌಂದರನಂದ, ಸರಳ ಪಂಪ ಭಾರತ, ಸರಳ ಹರಿಶ್ಚಂದ್ರ ಚಾರಿತ್ರ, ಸರಳಗಧಾಯುದ್ಧ ಇತ್ಯಾದಿ ಹಲವು ಗ್ರಂಥಗಳ ಮೂಲಕ ಇವರು ಕನ್ನಡ ಪಠ್ಯ ವಿಮರ್ಶಾಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ. ಚರಿತ್ರೆ ರಚನೆ, ಸಂಶೋಧನೆ, ವ್ಯಾಖ್ಯಾನ, ವಿಮರ್ಶೆಗಳನ್ನೆಲ್ಲ ಮೈಗೂಡಿಸಿಕೊಂಡಿರುವ ಗ್ರಂಥ ಸಂಪಾದನೆ ಯನ್ನು ಪಠ್ಯಸಂಪಾದನೆ ಅಥವಾ ಪಠ್ಯ ವಿಮರ್ಶೆ ಎಂದು ಕರೆಯುವುದೇ ಸೂಕ್ತ ಡಾ|| ಎಲ್. ಬಸವ ರಾಜು ತಮ್ಮ ಪ್ರಾಕ್ಟೀಸಿನ ಮೂಲಕ ಇಂಥ ಒಂದು ಅರ್ಥವಿನ್ಯಾಸವನ್ನು ಈ ಕ್ಷೇತ್ರಕ್ಕೆ ತಂದು ಕೊಟ್ಟಿದ್ದಾರೆ. ಗ್ರಂಥ ಸಂಪಾದನೆ ಎಂದರೆ ಡಾ|| ಬಸವರಾಜ ಅವರ ಅರ್ಥದಲ್ಲಿ ತಾಳೆ ಗರಿ ಪಠ್ಯಗಳನ್ನು ಮುದ್ರಿತ ಪಠ್ಯಗಳನ್ನಾಗಿ ಪರಿವರ್ತಿಸುವುದು ಮಾತ್ರ ಅಲ್ಲ. ಗ್ರಂಥ ಸಂಪಾದನೆ ಎಂದರೆ ಅವರ ಪ್ರಕಾರ ಪಠ್ಯ ವಿಮರ್ಶೆ (Textual criticism) ಪಠ್ಯಗಳ ಸಂಶೋಧನೆ, ಪರಿಷ್ಕರಣ, ಸಂಗ್ರಹ, ವ್ಯಾಖ್ಯಾನ, ಅನುವಾದ, ಸರಳೀಕರಣ, ದೇಶ ಕಾಲ ವಿಚಾರಗಳ ಚರಿತ್ರೆ ರಚನೆ, ಟಿಪ್ಪಣಿ-ಅಡಿ ಟಿಪ್ಪಣಿರಚನೆ, ಪಾಠ್ಯಾಂತರಗಳ ಚರ್ಚೆ, ತೌಲನಿಕ ಅಂತರ ಪಠ್ಯ ಸಂವಾದಗಳನ್ನು ಏರ್ಪಡಿಸುವುದು, ಪಠ್ಯದ ಮೌಲ್ಯಮಾಪನ ಎರಡನ್ನು ಒಟ್ಟಿಗೇ ಕೊಡುವುದು ಹೀಗೆ ಇದೆಲ್ಲವನ್ನೂ ಒಳಗೊಂಡಿದ್ದು ಪಠ್ಯವಿಮರ್ಶೆ.

ಸಂಪಾದನೆ, ಸಂಶೋಧನೆ, ಚರಿತ್ರೆ ರಚನೆ, ಅನುವಾದ, ಟೀಕು, ವ್ಯಾಖ್ಯಾನ, ವಿಮರ್ಶೆ, ತೌಲನಿಕ ಅಧ್ಯಯನ, ಈ ಎಲ್ಲ ಕ್ಷೇತ್ರಗಳ ಸತ್ವಗಳನ್ನು ಮೈಗೂಡಿಸಿಕೊಂಡ ಡಾ|| ಎಲ್.ಬಿ. ಯಾವುದೇ ಒಂದು ಕ್ಷೇತ್ರವನ್ನು ಗೆರೆಕೊರೆದಂತೆ ಹಿಡಿದು ದುಡಿದವರಲ್ಲ. ಈ ಎಲ್ಲ ಕ್ಷೇತ್ರಗಳನ್ನು ಪೂರಕ ಮತ್ತು ಅಖಂಡವೆಂದೇ ಭಾವಿಸಿರುವ ಎಲ್.ಬಿ. ಇದೇ ಧಾತು ಮತ್ತು ಧೋರಣೆಯಲ್ಲಿ ಕೆಲಸ ಮಾಡುತ್ತ ಬಂದಿದ್ದಾರೆ. ಇವರ ಪಠ್ಯ ವಿಮರ್ಶೆಯನ್ನು ಅನುವಾದ, ಸಂಪಾದನೆ, ವ್ಯಾಖ್ಯಾನ, ಚರಿತ್ರೆ ರಚನೆ, ಸಂಶೋಧನೆ, ಹೀಗೆ ಭಿನ್ನವಾಗಿ ವರ್ಗೀಕರಿಸಿಕೊಳ್ಳಬಹುದಾದರೂ ಆ ಎಲ್ಲ ಒಂದೊಂದು ವರ್ಗೀಕರಣದಲ್ಲೂ ಅಂತರಶಿಸ್ತೀಯ_ಚಹರೆಗಳನ್ನು ಅರಗಿಸಿಕೊಂಡ ಅಖಂಡ ಪ್ರಜ್ಞೆಯೇ ಎದ್ದು ಕಾಣುತ್ತದೆ. ಅವರ ಯಾವುದೇ ಕೃತಿ ತೆಗೆದು ಕೊಂಡರೆ ಅಲ್ಲಿ ಸಂಪಾದನೆ, ಸಂಶೋಧನೆ, ಅನುವಾದ, ತೌಲನಿಕ ಅಧ್ಯಯನ, ಚರಿತ್ರೆ ರಚನೆಗಳೆಲ್ಲ ಏಕೀಭವಿಸಿರುವುದನ್ನು ಕಾಣಬ ಹುದಾಗಿದೆ. ಹಾಗಾಗಿಯೇ ಇವರ ಜಾಲಾರಿ ಮತ್ತು ಠಾಣಾಂತರ ಈ ಎರಡು ಕವನ ಸಂಕಲನಗಳನ್ನು ಹೊರತು ಪಡಿಸಿ ಮಿಕ್ಕೆಲ್ಲ ಬರ ವಣಿಗೆಯನ್ನು ಪಠ್ಯವಿಮರ್ಶೆ ಎಂದೇ ಇಲ್ಲಿ ಕರೆಯಲಾಗಿದೆ.

ನಮ್ಮ ಪ್ರಾಚೀನ ವಿಮರ್ಶೆಯ ಮುಖ್ಯ ಕಾರ್ಯವೇ ಸಾಹಿತ್ಯ ಪ್ರಸರಣ ಮತ್ತು ಸಾಹಿತ್ಯ ಸಂವಹನ. ಇಂಥ ವಿಮರ್ಶಾ ಪರಂಪರೆಯ ಕೊಂಡಿ ಡಾ|| ಎಲ್. ಬಸವರಾಜು ಸಾಹಿತ್ಯವನ್ನು ಜನಗಳಿಗೆ ತಲುಪಿಸುವುದು ಮತ್ತು ಅದನ್ನು ಪಡೆಯಲು ತಕ್ಕ ಪ್ರವೇಶಿಕೆ ಗಳನ್ನು ಒದಗಿಸುವುದು ಬಸವರಾಜು ಅದರ

ಕಾರ್ಯ. ತಮ್ಮ ಪಠ್ಯ ವಿಮರ್ಶೆಯಲ್ಲಿ ಏಕರೂಪಿ ಮಾದರಿಗಳನ್ನೂ ಕಟ್ಟಿಕೊಟ್ಟವರಲ್ಲ ಬಸವರಾಜು. ಸರಳ ಪಠ್ಯನಿರ್ಮಾಣ ಇವರ ಪಠ್ಯ ವಿಮರ್ಶೆಯ ಬಹುಮುಖ್ಯ ಕವಲುಗಳಲ್ಲಿ ಒಂದು. ಈ ಸರಳ ಪಠ್ಯನಿರ್ಮಾಣ ಕೂಡ ಒಂದು ತೆರನಾದದ್ದಲ್ಲ. ಬಹುರೂಪಿಯಾದದ್ದು. ಉದಾಹರಣೆಗೆ ಇವರ ಆದಿಪುರಾಣದ ಸಂಪಾದನೆ ಒಂದನ್ನು ಇಲ್ಲಿ ಮಾದರಿಯಾಗಿ ನೋಡಬಹುದು. ತಮ್ಮ ಪಠ್ಯವಿಮರ್ಶೆಯನ್ನು ಪುನರ್ನಿರೂಪಣೆ ಎನ್ನುವ ಬಸವರಾಜು ಆದಿಪುರಾಣವನ್ನು ಮೂರು ಹಂತಗಳಲ್ಲಿ ನಿರೂಪಿಸಿದ್ದಾರೆ.

೧. ೧೩೮೯, ೧೫೬೩, ೧೫೭೮, ೧೭೧೬ ಹೀಗೆ ಭಿನ್ನ ಕಾಲದ ಪ್ರಾತಿನಿಧಿಕ ಓಲೆಪಠ್ಯಗಳನ್ನು ಆಧರಿಸಿ ಪಂಪನ ಆದಿಪುರಾಣವನ್ನು ಸಂಸ್ಕೃತದ ಜಿನ ಸೇನಾಚಾರ್ಯರ ಪೂರ್ವ ಪುರಾಣದೊಂದಿಗೆ ತಾಳೆ ನೋಡಿ ಸಮ್ಯ-ವೈಷಮ್ಯ, ಸಂಗ್ರಹ-ವಿಸ್ತಾರಗಳನ್ನು ಗುರ್ತಿಸಿ, ಟಿಪ್ಪಣಿ-ಅಡಿಟಿಪ್ಪಣಿಗಳನ್ನು ಬರೆದು, ಕಥನಕ್ಕೆ ಉಪ ಶೀರ್ಷಿಕೆಗಳನ್ನು ನೀಡಿ ಕಥನವನ್ನು ನಿರ್ದೇಶಿಸುತ್ತಾ; ನಿರೂಪಿಸುತ್ತಾ: ಆದಿಪುರಾಣದ ಪದ್ಯಗಳ ಉಲ್ಲೇಖ ಇರುವ ಶಬ್ದಮಣಿ ದರ್ಪಣ, ಕಾವ್ಯಾವಲೋಕನ, ರಸರತ್ನಾಕರ, ಕಾವ್ಯ ಸಾಗರ ಇಂಥ ಗ್ರಂಥಗಳನ್ನು ಅವಲೋಕಿಸಿ, ಪಾಠ ಪರಿಷ್ಕರಿಸಿ ಆದಿಪುರಾಣವನ್ನು ಸಂಪಾದಿಸಿ ಕೊಟ್ಟಿದ್ದಾರೆ. (೧೯೭೬) ಇದನ್ನು ಪಂಪನ ಮಾನಕ ಪಠ್ಯ ನಿರ್ಮಾಣ ಎನ್ನಬಹುದು. ಇದು ಮೊದಲ ಹಂತ.

೨. ಇನ್ನು ಎರಡನೇ ಹಂತ ಸರಳ ಆದಿಪುರಾಣ; ಪಂಪನ ಕಾವ್ಯದಲ್ಲಿ ಯಾವುದೇ ಹಸ್ತಕ್ಷೇಪ ಮಾಡದೆ ಪದ್ಯಗಳನ್ನು ಅರ್ಥದ ನಿಲುಗಡೆಗೆ ತಕ್ಕಂತೆ, ಭಾವದ ನಿಲುಗಡೆಗೆ ತಕ್ಕಂತೆ ಒಡೆದು-ಬಿಡಿಸಿ-ಮರುಜೋಡಿಸಿ ನಿರೂಪಿಸಲಾಗಿದೆ. ಓದುವುದಕ್ಕೆ ಇರಬಹುದಾದ ಭಾಷಿಕ ಅಡೆತಡೆಗಳನ್ನು ನಿವಾರಿಸುವ-ಓದುಗನಿಗೆ ಹಾದಿಸುಗಮ ಮಾಡಿಕೊಡುವ-ಸುಲಭ ಓದಿಗ ಪಠ್ಯವನ್ನು ಸಿದ್ಧಪಡಿಸುವ ಕೆಲಸ ಇದು.

ಮೊದಲನೆ ಹಂತ ಜನಕ್ಕೆ ಒಂದು ಅಧಿಕೃತ ಆಕರ ಪಠ್ಯವನ್ನು ಕಟ್ಟಿಕೊಡುವ ಕೆಲಸವಾದರೆ ಈ ಎರಡನೇ ಹಂತ ಛಂದಸ್ಸುಶಾಸ್ತ್ರ, ನಿಘಂಟುಶಾಸ್ತ್ರ, ವ್ಯಾಕರಣ ಶಾಸ್ತ್ರಗಳ ಉಕ್ಕಿನ ಕೋಟೆಯಿಂದ ಕಾವ್ಯವನ್ನು ಬಿಡುಗಡೆಗೊಳಿಸುವ ಕೆಲಸ ಇದನ್ನು ಮರುಸಂಯೋಜಿತ ಪಠ್ಯ ನಿರ್ಮಾಣ ಎಂದು ಕರೆಯಬಹುದು.

೩. ಇನ್ನು ಮೂರನೇ ಹಂತ ಆದಿಪುರಾಣ ಕಥಾಮೃತ; ಬಸವರಾಜು ಹಳಗನ್ನಡ ಕಾವ್ಯವನ್ನು ಸರಳಗನ್ನಡಕ್ಕೆ-ಆಧುನಿಕ ಗದ್ಯಕ್ಕೆ ಅನುವಾದ ಮಾಡಿ ಕಥನ ರೂಪದಲ್ಲಿ ನಿರೂಪಿಸಿದ್ದಾರೆ. ವಿದ್ಯಾರ್ಥಿಗಳೂ ಸಾಮಾನ್ಯ ಜನರೂ ಹಳಗನ್ನಡ ಕಾವ್ಯಗಳನ್ನು ಯಾವುದೇ ಪಾಂಡಿತ್ಯವಿಲ್ಲದೆ ಸಾಧ್ಯತೆಯನ್ನು ನಿರ್ಮಿಸುವ ಕೆಲಸ ಇದು **a)** ಹಳಗನ್ನಡ ಕಾವ್ಯಗಳಿಂದ ಜನಗಳು ದೂರವಾಗಬಾರದು **b)** ವಿಮರ್ಶಕ-ವ್ಯಾಖ್ಯಾನಕಾರ-ಅಧ್ಯಾಪಕ ಇತ್ಯಾದಿ ಮಧ್ಯವರ್ತಿಗಳು ಓದುಗರಿಗೆ ಅನಿವಾರ್ಯ ಆಗಬಾರದು **c)** ಹಳಗನ್ನಡ ಕಾವ್ಯಗಳು ಪಂಡಿತರನ್ನು ದಾಟಿ ಸಾಮಾನ್ಯರ ಕಡೆಗೆ ಚಲಿಸಬೇಕು ಎಂಬ ಉದ್ದೇಶಗಳಿರುವ ಕೆಲಸ ಇದು. ಇದನ್ನು ಸರಳ ಪಠ್ಯ ನಿರ್ಮಾಣ ಎನ್ನಬಹುದು.

ಹೀಗೆ ಬಸವರಾಜು ಅವರ ಪಠ್ಯ ವಿಮರ್ಶೆ ಏಕರೂಪಿಯಾದುದಲ್ಲ ಬಹುರೂಪಿಯಾದುದು. ಮಾಸಿಕ (camarical) ಪಠ್ಯ, ಮರು ಸಂಯೋಜಿತ ಪಠ್ಯ, ಸರಳ ಪಠ್ಯ ಇಂಥ ಬಹುಮಾದರಿಗಳಲ್ಲಿ ಎಲ್.ಬಿ. ಸಂಪಾದನೆ, ಸಂಶೋಧನೆ, ವಿಮರ್ಶೆ, ಅನುವಾದ, ತೌಲನಿಕ ಅಧ್ಯಯನ ಈ ಎಲ್ಲವುಗಳ ಏಕೀಭವನವನ್ನು ಸಾಧಿಸಿದ್ದಾರೆ. ಅಕಡೆಮೀಶಿಯನ್ನರಿಗೆ ಇದೆಲ್ಲ ಭಿನ್ನ ಭಿನ್ನವಾದರೂ ಆಚರಣೆಯಲ್ಲಿ ಎಲ್.ಬಿ. ಯವರಿಗೆ ಇದೆಲ್ಲ ಅಖಂಡ. ಬಹುರೂಪತೆ ಮತ್ತು ಅಖಂಡತೆ ಇವೆರಡೂ ಇದರ ಪಠ್ಯ ವಿಮರ್ಶೆಯ ಅಂತಃ ಸತ್ವಗಳು.

ಈ ಸಾಹಿತ್ಯ ಪ್ರಸರಣ-ಸಂವಹನ ಕಾರ್ಯವು ಶತಶತ ಮಾನಗಳಿಂದಲೂ ಗಮಕ, ವ್ಯಾಖ್ಯಾನ, ಕಾವ್ಯವಾಚನ, ವಿದ್ವದ್‌ಗೋಷ್ಠಿ, ಕೇಳಿಕೆ, ಸುಖಸಂಕಥಾ ವಿನೋದ, ಅಧ್ಯಾಪನ, ಅಧ್ಯಯನ, ಪಾರಾಯಣ, ತಾಳಮದ್ದಲೆ, ಪುರಾಣ-ಪುಣ್ಯಶ್ರವಣ, ಹರಿಕತೆ ಇತ್ಯಾದಿ ರೂಪಗಳಲ್ಲಿ ನಡೆಯುತ್ತಿತ್ತು. ಇಂಥ ಅನುಸಂಧಾನಕ್ಕೆ ಡಾ॥ ಎಲ್. ಬಸವರಾಜು ಅವರಿಂದ ಪಠ್ಯವಿಮರ್ಶೆ ಎಂಬ ಆಧುನಿಕ ಅವತಾರ ಲಭಿಸಿದೆಯಷ್ಟೆ. ಇದರಿಂದ ನಮ್ಮ ಸಾಂಸ್ಕೃತಿಕ ಪರಂ ಪರೆಯ ಕೆಲವು ಎಳೆಗಳು ಈ ಯುಗದಲ್ಲೂ ಚಲಾವಣೆಯಾಗಲು ಸಾಧ್ಯವಾಗಿದೆ. ಅಲ್ಲದೆ ಪಠ್ಯದ ಭಾಷಿಕ ರೂಪಾಂತರ ಕೂಡ ಹಲವು ಕಾಲಗಳಲ್ಲಿ ಹಲವು ರೀತಿಗಳಲ್ಲಿ ನಡೆಯುತ್ತ ಬಂದಿದೆ

ಶೂನ್ಯ ಸಂಪಾದನಕಾರರ ವಚನ ಸಂಪಾದನೆಯಲ್ಲಿ ಮಾನಕೀಕರಣ ಮತ್ತು ಸಂಕಲನಾನು ಸಂಧಾನಗಳೆರಡೂ ಇದ್ದರೆ ಬಸವರಾಜು ಅದರಲ್ಲಿ ಈ ಸಂಪ್ರದಾಯದ ಸಮರ್ಥ ಮುಂದುವರಿಕೆ ಇದೆ. ಈ ಮುಂದುವರಿಕೆ ಮಾಸಿಕ ಪಠ್ಯ, ಮರುನಿರೂಪಿತ ಪಠ್ಯಗಳ ನಿಮಾಣವನ್ನು ದಾಟಿ ಸರಳ ಪಠ್ಯ ನಿರ್ಮಾಣದ ಕಡೆಗೆ ಬೆಳೆದಿದೆ. ಪಠ್ಯದ ಸಾಮಾಜೀಕರಣ ಕಾರ್ಯ ಇದು. ಪಠ್ಯದ ಚಲನೆಯು ಯುಗ ಬೇಡಿಕೆಗೆ ಅನುಗುಣವಾಗಿ ಬಹುರೂಪಿ ಅವತಾರಗಳನ್ನು ಪಡೆಯುವ ಕ್ರಿಯೆ ಇದು.

ಇವರು ಪಠ್ಯವನ್ನು ಪರಿಷ್ಕರಿಸಿ, ವ್ಯಾಖ್ಯಾನಿಸಿ ತಮ್ಮದೇ ಪಠ್ಯ ವಿಮರ್ಶೆಯ ಜೊತೆ ಅದನ್ನು ಪ್ರಸ್ತುತ ಪಡಿಸುತ್ತಾರೆ (Presenting) ಹಾಗೆಯೇ ಪಠ್ಯದ ರಚನೆಯನ್ನು ಒಡೆದು ಅದನ್ನು ಮರು ರಚಿಸುವ ಮೂಲಕ ಪಠ್ಯ ವಿಮರ್ಶೆಯ ಇನ್ನೊಂದು ವಿಸ್ತರಣೆಯಾಗಿ ಪಠ್ಯವನ್ನು ವರ್ತಮಾನಕ್ಕೆ ಪ್ರಸ್ತುತಗೊಳಿಸುತ್ತಾರೆ. (Making relevant) ಕೂಡ. ಅಂದರೆ ಇವರ ಪಠ್ಯ ವಿಮರ್ಶೆ ಪಠ್ಯವನ್ನು ಪ್ರಸ್ತುತಗೊಳಿಸುವ, ಪ್ರಸ್ತುತ ಪಡಿಸುವ ಮತ್ತು ವಿಸ್ತರಿಸುವ ಕ್ರಿಯೆಯಾಗಿದೆ.

ಯಾವುದೇ ಪಠ್ಯದ ಆಕೃತಿಯು ತನ್ನದೇ ಓದಿನ ಮಾದರಿಗಳನ್ನು ನಿರ್ದೇಶಿಸುತ್ತಿರುತ್ತದೆ. ಹಾಗೇ ತನ್ನದೇ ಸೃಜನಶೀಲ ಮಾದರಿಯನ್ನು ನಿರ್ಮಿಸುತ್ತಿರುತ್ತದೆ. ಆದರೆ ಎಲ್.ಬಿ. ಈ ಪಠ್ಯದ ಆಕೃತಿಯು ನಿರ್ದೇಶಿಸುವ ಓದಿನ ಮಾದರಿಗಳನ್ನು ಮತ್ತು ಕೃತಿಯ ರಚನೆಯೊಳಗಿನ ಸೃಜನಶೀಲ ಮಾದರಿಗಳನ್ನು ಮುರಿದು ಆ ಮೂಲಕ ಕಾವ್ಯವನ್ನು ಮರು ಸಂಯೋಜಿತ ಆಕೃತಿಯಾಗಿಯೂ (ಓದಿನ ತಂಗುದಾಣಗಳನ್ನು ನಿರ್ಮಿಸುತ್ತ) ಮಾಡುತ್ತಾರೆ. ಗದ್ಯವಾಗಿಯೂ ಪದ್ಯವಾಗಿಯೂ, ಕಥನವಾಗಿಯೂ ಪ್ರಸ್ತುತ ಪಡಿಸುತ್ತಾರೆ. ಹೀಗಾಗಿ ಇವರಲ್ಲಿ ಪಠ್ಯ ವಿಮರ್ಶೆಯು ಸೃಜನಶೀಲ ರೂಪಾಂತರಗಳನ್ನು ಹೊಮದುವ ಕ್ರಿಯೆಯೂ ಆಗಿದೆ ಸರಳಾನುವಾದ, ಕಥಾನುವಾದಗಳು ಪಠ್ಯದ ಸೃಜನಶೀಲ ಅನುಸಂಧಾನಗಳಾಗಿ ಇದರಲ್ಲಿ ಬೆಳೆದಿವೆ. ನಮ್ಮ ಹಳಗನ್ನಡ ಕಾವ್ಯಗಳೆಲ್ಲವೂ ಕಥನ ಕಾವ್ಯಗಳು. ಇವೆಲ್ಲವೂ ಒಂದಲ್ಲ ಒಂದು ಮಹಾಕಥನವನ್ನು ಕಾವ್ಯರೂಪದಲ್ಲಿ ಹೇಳುವ ಕೃತಿಗಳು. ಇವುಗಳ ಸರಳ ಪಠ್ಯ ನಿರ್ಮಿಸುವಾಗ ಎಲ್. ಬಸವರಾಜು ಅವರು ಕಾವ್ಯಗಳಲ್ಲಿನ ಕಥನವನ್ನು ಪ್ರಧಾನವಾಗಿ ನಿರೂಪಿಸುತ್ತಾರೆ. ಹೀಗಾಗಿ ಇದನ್ನು ಪ್ರಕಾರ ರೂಪಾಂತರ ಎನ್ನಬಹುದು.

ಬಸವರಾಜು ಅವರ ಸರಳಾನುವಾದಗಳಿಂದಾಗಿ ಮೂಲ (!) ಪಠ್ಯಗಳನ್ನು ಜನ ಓದುತ್ತಿಲ್ಲ. 'ಮೂಲ' ಕವಿ ಪಠ್ಯವು ಇವರ ಸರಳಾನುವಾದಗಳಿಂದ ಮೂಲೆಗುಂಪಾಗುತ್ತಿದೆ ಎಂದು ಕೆಲವರು ಆಪಾದಿಸುತ್ತಿದ್ದಾರೆ. ಇವರು ಈ ಮೂರೂ ಹಂತಗಳನ್ನು ಗಮನಿಸಬೇಕು. ಇಲ್ಲಿ ಓದುಗರಿಗೆ ಆಯ್ಕೆ ಇದೆ. ೧. ಮಾಸಿಕ ಪಠ್ಯ ೨. ಮರುಸಂಯೋಜಿತ ಪಠ್ಯ ೩. ಸರಳಪಠ್ಯ ಈ ಯಾವ ಪಠ್ಯ ಬೇಕೋ ಅದಕ್ಕೆ ಓದುಗ ಹೋಗಬಹುದು. (ಇವು ಪಂಪನ ಆದಿಪುರಾಣದ ಆಯ್ಕೆಗಳು. ಬೇರೆ ಪಠ್ಯಗಳಿಗೆ ಇನ್ನೂ ಭಿನ್ನ ಆಯ್ಕೆಗಳಿವೆ) ಯಾವುದರಿಂದ ಯಾವುದಕ್ಕೂ ಹಾನಿಯಿಲ್ಲ. ಯಾರಿಗೆ ಯಾವುದು ಬೇಕೋ ಅದನ್ನು ಅವರು ಓದಿಕೊಳ್ಳಲಿ. ಆದರೆ L.B. ಯವರ ಈ ಸರಳೀಕರಣ ಕಾರ್ಯವೇ ಹಳಗನ್ನಡ ಕಾವ್ಯಗಳಿಗೆ ಮಾಡುವ ಅಪಚಾರ ಎನ್ನುವ ಯಥಾಸ್ಥಿತಿವಾದಿಗಳ ಆರೋಪ ಹುರುಳಿಲ್ಲದ್ದು. ಇವರಿಗೆ ಪಠ್ಯದ ಯಾನ ತಿಳಿಯದು.

ಕಾವ್ಯಗಳನ್ನು ಗದ್ಯನುವಾದ ಮಾಡಿದಾಗ ಅದರ ಭಾಷಿಕ ಪರಿಮಳ, ಹಳೇ ಕಾವ್ಯ ಭಾಷೆಗೇ ಇರಬಹುದಾದ ಮಾಂತ್ರಿಕತೆ ನಷ್ಟವಾಗುತ್ತದೆ ನಿಜ. ಆದರೆ ಕಠಿಣ ಎಂಬ ಕಾರಣಕ್ಕೆ ಹಳಗನ್ನಡ ಕಾವ್ಯಗಳು ಜನಕ್ಕೆ ತಲುಪದೆ ಅವೇ ಮೂಲೆಗುಂಪಾಗುತ್ತಿರುವಾಗ ಬದಲಾವಣೆ ಬೇಡ ಎಂದರೆ ಹೇಗೆ! ನಾಳೆ ಹಳೆಗನ್ನಡ ಕಾವ್ಯಗಳನ್ನು ಜನಪರರನ್ನು ಆಶ್ರಯಿಸಿಯೇ ತಿಳಿಯಬೇಕು ಎಂಬಂತೆ ಆಗಬಾರದಲ್ಲವೇ? ಹಳಗನ್ನಡ ಪರಂಪರೆ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳಬಾರದಲ್ಲವೇ? ಅವು ವಿಶ್ವವಿದ್ಯಾಲಯ- ವಿಚಾರಸಂಕೀರಣ ಪಟುಗಳ-ವಿದ್ವಾಂಸರ ಗುತ್ತಿಗೆ ಮಾತ್ರ ಎಂಬಂತೆ ಆಗಬಾರದಲ್ಲವೇ?

ಈ ಸಾಹಿತ್ಯ ಪ್ರಸರಣ-ಸಂವಹನ ಕಾರ್ಯವು ಶತಶತ ಮಾನಗಳಿಂದಲೂ ಗಮಕ, ವ್ಯಾಖ್ಯಾನ, ಕಾವ್ಯವಾಚನ, ವಿದ್ವದ್‌ಗೋಷ್ಠಿ, ಕೇಳಿಕೆ, ಸುಖಸಂಕಥಾವಿನೋದ, ಅಧ್ಯಾಪನ, ಅಧ್ಯಯನ, ಪಾರಾಯಣ, ತಾಳಮದ್ದಲೆ, ಪುರಾಣ-ಪುಣ್ಯಶ್ರವಣ, ಹರಿಕತೆ ಇತ್ಯಾದಿ ರೂಪಗಳಲ್ಲಿ ನಡೆಯುತ್ತಿತ್ತು. ಇಂಥ ಅನುಸಂಧಾನಕ್ಕೆ ಡಾ॥ ಎಲ್. ಬಸವರಾಜು ಅವರಿಂದ ಪಠ್ಯವಿಮರ್ಶೆ ಎಂಬ ಆಧುನಿಕ ಅವತಾರ ಲಭಿಸಿದೆಯಷ್ಟೆ. ಇದರಿಂದ ನಮ್ಮ ಸಾಂಸ್ಕೃತಿಕ ಪರಂಪರೆಯ ಕೆಲವು ಎಳೆಗಳು ಈ ಯುಗದಲ್ಲೂ ಚಲಾವಣೆಯಾಗಲು ಸಾಧ್ಯವಾಗಿದೆ. ಅಲ್ಲದೆ ಪಠ್ಯದ ಭಾಷಿಕ ರೂಪಾಂತರ ಕೂಡ ಹಲವು ಕಾಲಗಳಲ್ಲಿ ಹಲವು ರೀತಿಗಳಲ್ಲಿ ನಡೆಯುತ್ತ ಬಂದಿದೆ. ಒಂದು ದೃಷ್ಟಿಯಿಂದ

ಪಂಪನ ಪಠ್ಯ ಕೂಡ ಯಾವು ಯಾವುದೋ ಆಕಾರಗಳ ಕನ್ನಡ ರೂಪಾಂತರ ಪೂರ್ವಪುರಾಣದ, ವರ್ತಮಾನದ ರೂಪಾಂತರ. ಅನುಭವ-ಕಲ್ಪನಾನುಭವಗಳ ರೂಪಾಂತರ ಎಲ್.ಬಿ. ಯವರದ್ದು ಸಂಪನ್ನತೆಯ ಸೃಜನಶೀಲ ಭಾಷಿಕ ರೂಪಾಂತರ [illegible] ಇಲ್ಲ. ಆದರೆ ಆ ಭಾಷೆಗಿರುವುದು ಆ ಭಾಷೆಗೆ ಈ ಭಾಷೆಗಿರುವುದು ಈ ಭಾಷೆಗೆ ಅದಕ್ಕೆ ಪರಿತಾಪವೇಕೆ? ಯಾವುದೇ ಪಠ್ಯ ರೂಪಾಂತರಗೊಂಡ ರೂಪಾಂತರವು ಚಾಲ್ತಿಗೆ ಬಂದ ಕೂಡಲೇ ಆಕಾರವು ಸಾಯುವುದಿಲ್ಲವಲ್ಲ. ಅದಕ್ಯಾಕೆ ವಿರೋಧ ಬೊಬ್ಬೆ!

ಹಾಗೆ ನೋಡಿದರೆ ಅಶ್ವಘೋಷನ ಬುದ್ಧ ಚರಿತೆಯ ಉತ್ತರಾರ್ಧ ಪಠ್ಯ ನಮಗೆ ಸಿಕ್ಕೇ ಇಲ್ಲ. ಅದರ ಚೀನೀ, ಟಿಬೆಟ್ ರೂಪಾಂತರಗಳಿಂದ ಅದನ್ನು ಮತ್ತೆ ಮರುಕಟ್ಟಿಕೊಳ್ಳಲಾಗಿದೆ. ಪಠ್ಯವು ರೂಪಾಂತರಗೊಳ್ಳುವ ಪಂಪರೆ ಅದು ಮತ್ತೆ ಮತ್ತೆ ಪ್ರಸ್ತುತಗೊಳ್ಳುತ್ತ ತನ್ನ ಅಸ್ತಿತ್ವವನ್ನು ಸಾಬೀತುಪಡಿಸುವುದೇ ಆಗಿರುತ್ತದೆ. ಗದ್ಯ ನಿರೂಪಣೆಯೇ, ಪದ್ಯನಿರೂಪಣೆಯೆ ಕಥನವೋ, ಪರಿಷ್ಕರಣೆಯೋ, ಸಂಗ್ರಹವೋ, ವ್ಯಾಖ್ಯಾನವೋ ಹೀಗೆ (Target Audiance, Target Reader) ಉದ್ದೇಶಿತ ಕೇಳುಗ-ಓದುಗ ವರ್ಗಕ್ಕೆ ತಕ್ಕಂತೆ ಪಠ್ಯವೊಂದು ಕಾಲ ಕಾಲಕ್ಕೆ ಚಲನಶೀಲವಾಗಿ ರೂಪಾಂತರ ಹೊಂದುತ್ತಿರಲೇಬೇಕು. ಇದನ್ನು ಆಚರಣೆಯ ಮೂಲಕ ಎಲ್.ಬಿ. ತೋರಿಕೊಟ್ಟಿದ್ದಾರೆ. ಪಠ್ಯ ಎನ್ನುವುದು ಜಡ ಅಲ್ಲ. Finished Product ಅಲ್ಲ. ಅದು ಜನಪದೀಯವಾದದ್ದು, ನಿತ್ಯ ಗತಿಶೀಲವಾದದ್ದು- ಎಂದು ಬಸವರಾಜು ನಿರೂಪಿಸಿದ್ದಾರೆ. ಹಳಗನ್ನಡ ಸಾಹಿತ್ಯ ಪರಂಪರೆಯ ಪಠ್ಯಗಳ ಆಧುನಿಕ ಯಾನದಲ್ಲಿ ಎಲ್. ಬಿ. ಯವರದ್ದು ಬಹುದೊಡ್ಡ ಪಾತ್ರ. ನಮ್ಮ ಸಂಸ್ಕೃತಿ-ಪರಂಪರೆಯು ಜಾಗತೀಕರಣ-ವ್ಯಾಪಾರೀಕರಣದಿಂದಾಗಿ ಅಪ್ರಸ್ತುತಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಪರಂಪರೆಯನ್ನು ಪ್ರಸ್ತುತಗೊಳಿಸುವ ಇಂಥ ಕಾರ್ಯ ತುಂಬಾ ಅಮೂಲ್ಯವಾದದ್ದು. ಕಾದಂಬರಿ ಓದಿದಷ್ಟೋ ಸಲೀಸಾಗಿ ಹಳೇ ಕಾವ್ಯ ಓದಿ ನಾನೂ ಪಂಪನನ್ನು ಓದುಬಲ್ಲೆ, ನಾನೂ ಪಂಪನನ್ನು ಓದಿದ್ದೇನೆ ಎಂದು ಯಾರು ಬೇಕಾದರೂ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಸಾಧ್ಯತೆಯನ್ನು ಎಲ್.ಬಿ. ನಿರ್ಮಿಸಿದ್ದಾರೆ. ಇದರಿಂದ ನಷ್ಟವಿಲ್ಲ.

ಇಲ್ಲಿ ಇನ್ನೊಂದು ಉದಾಹರಣೆಯನ್ನು ನಾವು ಗಮನಿಸಲೇಬೇಕು. ಅಲ್ಲಮನ ವಚನಚಂದ್ರಿಕೆ, ಸರ್ವಜ್ಞ (ಪರಮಾರ್ಥ) ವಚನಗಳು, ಶಿವದಾಸ ಗೀತಾಂಜಲಿ, ಬುದ್ಧ ಚರಿತೆ, ಶೂನ್ಯಾಂತರ ಸರಳಶೂನ್ಯ ಸಂಪಾದನೆಗಳು ಇವರು ನಿರ್ಮಿಸಿರುವ ಹಲವು ಮೈಲಿಗಲ್ಲುಗಳಾದರೂ ಅಲ್ಲಮನ ಅನುಸಂಧಾನವನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು. ಅಲ್ಲಮನ ವಚನಚಂದ್ರಿಕೆ, ಅಲ್ಲಮನ ವಚನಗಳು,

> **ನಮ್ಮ ಸಾಹಿತ್ಯ-ಸಂಸ್ಕೃತಿ ಎಲ್ಲವೂ ಅಪ್ರಸ್ತುತತೆಗೆ-ಅವಜ್ಞೆಗೆ ಗುರಿಯಾಗುತ್ತಿರುವ ಇಂದಿನ ಜಾಗತೀಕರಣದ ವೇಳೆಯಲ್ಲಿ ಅದನ್ನೆಲ್ಲ ಪ್ರಸ್ತುತಗೊಳಿಸುವ ಆಧುನಿಕ ಜಗತ್ತಿಗೆ ರವಾನಿಸುವ ಅಗತ್ಯ ತುಂಬಾ ಇದೆ. ಇಂಥ ಕಾರ್ಯವನ್ನು ಈಗಲೂ ತಮ್ಮ ಲಲರ ಹರೆಯದಲ್ಲೂ ಎಲ್. ಬಿ. ಮಾಡುತ್ತಿದ್ದಾರೆ.**

ಅಲ್ಲಮನು ಮೈಮೇಲೆ ಬಂದಾಗ, ಅಲ್ಲಮನ ವಚನಗಳ ಗದ್ಯಾನುವಾದ (ಅಪ್ರಕಟಿತ) ಹೀಗೆ ನಾಲ್ಕಾರು ರೀತಿಯ ಅಲ್ಲಮನ ಅನುಸಂಧಾನ ಮಾಡಿರುವ ಬಸವರಾಜು ಅಲ್ಲಮನನ್ನು ಬೇರೆ ಬೇರೆ ರೀತಿಗಳಲ್ಲಿ ಪ್ರಸ್ತುತಪಡಿಸಿದ್ದಾರೆ.

ಅಲ್ಲಮನ ಸಮಗ್ರ ವಚನಗಳಿಗೆ ಗದ್ಯಾನುವಾದ ಮಾಡಿರುವ ಎಲ್. ಬಿ. ಅಲ್ಲಮನೆಂದರೆ ಅರ್ಥಮಾಡಿಕೊಳ್ಳಲು ಆಗುವುದಿಲ್ಲ ಎಂದು ಮೂಗು ಮುರಿಯುವವರಿಗಾಗಿಯೇ ಈ ಅನುವಾದ ಸಿದ್ಧಪಡಿಸಿದ್ದಾರೆ. ಅಲ್ಲಮನು ಮೈಮೇಲೆ ಬಂದಾಗ ಎಂಬ ಪದ್ಯಾನುವಾದವಂತೂ ಅನುವಾದದ ಒಂದು ವಿನೂತನ ಪ್ರಯೋಗ. ಪಠ್ಯವಿಮರ್ಶೆಗೊಂದು ಸೃಜನಶೀಲ ಆಯಾಮ, ಅಲ್ಲಮನ ವಚಗಳನ್ನು ಎಲ್.ಬಿ. ಇಲ್ಲಿ ಆಧುನಿಕ ಕವಿತೆಯ ರೂಪದಿಂದ ಮರುನಿರೂಪಿಸಲು ಯತ್ನಿಸಿದ್ದಾರೆ. ಸರಳ ಪಠ್ಯ ನಿರ್ಮಾಣ, ಮರುನಿರೂಪಣೆ, ವ್ಯಾಖ್ಯಾನ, ಟೀಕು, ಅರ್ಥ ಭಾವಗಳ ಸಾಹಚರ್ಯ (Associations), ಸಾಹಿತ್ಯ ಪ್ರಸರಣ ಪ್ರಜ್ಞೆಗಳೆಲ್ಲವೂ ಹೊಸಗನ್ನಡ ಕವಿತೆಯ ರೂಪಧಾರಣೆ ಮಾಡಿರುವ ಪ್ರಯೋಗ ಇದು. ಕವಿತೆಯ ಆಕೃತಿ ಮತ್ತು ವಸ್ತುಗಳ ನಡುವಿನ ಸಂಬಂಧ ಇಲ್ಲಿ ವಿಶೇಷ ತಾಕಲಾಟಕ್ಕೆ ಒದಗಿದೆ. ಇಲ್ಲಿ ಬಸವರಾಜು ಚರಿತ್ರೆಯನ್ನು ಚರಿತ್ರೆಯಿಂದ ಬಿಡಿಸಿ ಅಲ್ಲಮನಂತೆಯೇ (ಈ ಹೊತ್ತಿನ ಕವಿತೆಯ ಮೂಲಕ) ವರ್ತಮಾನೀಕರಿಸುವ ಪ್ರಯತ್ನ ಮಾಡಿದ್ದಾರೆ. ಕವಿತೆಯಲ್ಲಿ ಅರ್ಥ ಮತ್ತು ಅನುಭವಗಳು ನಿತ್ಯ ವರ್ತಮಾನದಿಂದಲೇ ಒದಗುತ್ತಿರುತ್ತದೆ ಎಂಬುದು ಈ ಅನುವಾದದಿಂದ ತಿಳಿಯುತ್ತದೆ ಹಾಗೇ ಯಾವುದೇ ಅನುವಾದ ಎಂಬುದು ವರ್ತಮಾನವು ಚರಿತ್ರೆಯೊಂದಿಗೆ ನಡೆಸುವ ಅನುಸಂಧಾನ ಎಂಬಂತೆಯೂ ಇವರ ಪ್ರಾಕ್ಟೀಸಿನಿಂದ ತಿಳಿಯುತ್ತದೆ.

ಸರಳ ಪಠ್ಯ ನಿರ್ಮಾಣದ ಹಲವು ಬಗೆಗಳು ಸಂಪಾದನೆಯ ಹಲವು ಬಗೆಗಳು, ತೌಲನಿಕ ಅಧ್ಯಯನದ ಹಲವು ಮಾದರಿಗಳು, ಅನುವಾದದ ಹಲವು ಮಾದರಿಗಳು, ಹೀಗೆ ಪಠ್ಯ ವಿಮರ್ಶೆಯ ಹತ್ತು ಹಲವು ಮಾದರಿಗಳನ್ನು ಎಲ್.ಬಿ. ನಿರ್ಮಾಣ ಮಾಡಿದ್ದಾರೆ. ವಿಶೇಷವೆಂದರೆ ತಮ್ಮ ಪ್ರಾಕ್ಟೀಸಿನ ಮೂಲಕವೇ ಈ ಕ್ಷೇತ್ರದಲ್ಲಿ ಹಲವು ಥಿಯರಿಗಳನ್ನು ಕಟ್ಟಿಕೊಟ್ಟಿದ್ದಾರೆ. ವಿಮರ್ಶೆಯ ಹಲವು ಸ್ಕೂಲುಗಳು ಇರುವ ಇಂದು ಡಾ॥ ಎಲ್.ಬಿ ಅವರದ್ದೇ ಒಂದು ಸ್ಕೂಲು ಬೆಳೆಯಬಹುದಾದ ಸಂಭವನೀಯತೆಗಳು ಸಾಕಷ್ಟಿವೆ.

ಪಂಡಿತರೂ ಸಂಶೋಧಕರೂ ಆದವರು ಸಾಮಾನ್ಯರಿಗಾಗಿ ದುಡಿಯುವುದು ಬಹಳ ವಿರಳ. ಆದರೆ ಎಲ್.ಬಸವರಾಜು ಸಾಹಿತ್ಯವನ್ನು ಸಾಮಾನ್ಯರಿಗೆ ತಲುಪಿಸುವ ಜವಾಬ್ದಾರಿ ನಿರ್ವಹಿಸುತ್ತಿರುವ ಪರಿಚಾರಕರು. ಮಾದರಿಗಳಿಗಾಗಿ ಪಶ್ಚಿಮದ ಕಡೆ ಮುಖ ಮಾಡುವುದೇ ಸಾಮಾನ್ಯ ಚಾಳಿಯಾಗಿರುವ ಇಂದಿನ ಸಂದರ್ಭದಲ್ಲಿ ಡಾ॥ ಎಲ್.ಬಿ. ಅವರ ಪಠ್ಯ ವಿಮರ್ಶೆ ಕೆಲಸ ನಿಜವಾಗಿಯೂ ದೇಸಿ ಮಾದರಿಗಳ ಹುಡುಕಾಟ. ದೇಸೀ ಮಾದರಿಗಳ ನಿರ್ಮಾಣ. ಇವರೊಬ್ಬ ವಿಶಿಷ್ಟ ದೇಸಿ ವಿಮರ್ಶಾ ಮಾರ್ಗಗಳ ಶೋಧಕ.

ಈಗಾಗಲೇ ಹೇಳಿರುವಂತೆ ನಮ್ಮ ಸಾಹಿತ್ಯ-ಸಂಸ್ಕೃತಿ ಎಲ್ಲವೂ ಅಪ್ರಸ್ತುತತೆಗೆ-ಅವಜ್ಞೆಗೆ ಗುರಿಯಾಗುತ್ತಿರುವ ಇಂದಿನ ಜಾಗತೀಕರಣದ ವೇಳೆಯಲ್ಲಿ ಅದನ್ನೆಲ್ಲ ಪ್ರಸ್ತುತಗೊಳಿಸುವ ಆಧುನಿಕ ಜಗತ್ತಿಗೆ ರವಾನಿಸುವ ಅಗತ್ಯ ತುಂಬಾ ಇದೆ. ಇಂಥ ಕಾರ್ಯವನ್ನು ಈಗಲೂ ತಮ್ಮ ಲಲರ ಹರೆಯದಲ್ಲೂ ಎಲ್. ಬಿ. ಮಾಡುತ್ತಿದ್ದಾರೆ.

ಪ್ರಸ್ತಾವನೆ, ಪೀಠಿಕೆ, ಟಿಪ್ಪಣಿ, ವ್ಯಾಖ್ಯಾನ, ಸಾಹಿತ್ಯ ಚರಿತ್ರೆರಚನೆ, ಜೀವನ ಚಿತ್ರಣ, ತೌಲನಿಕ ಟಿಪ್ಪಣಿ, ಅಡಿಟಿಪ್ಪಣಿ, ಪ್ರವೇಶಿಕೆ, ಮುನ್ನುಡಿ, ಹೀಗೆ ಹಲವು ಕವಲುಗಳಲ್ಲಿ ಹಲವು ಗ್ರಂಥಗಳಲ್ಲಿ ಇವರ ಬರವಣಿಗೆ ಹಂಚಿಹೋಗಿದೆ. ತಮ್ಮ ಪ್ರಾಕ್ಟೀಸಿನಿಂದಲೇ ಹಲವು ಥಿಯರಿಗಳನ್ನು, ಹಲವು ಸಿದ್ಧಾಂತ ಮಾದರಿಗಳನ್ನು ನಿರ್ಮಿಸಿರುವ ಇವರ ಮೆತೆಡ್ಡುಗಳನ್ನು ಅಭ್ಯಾಸ ಮಾಡುವ ಅಗತ್ಯವಿದೆ. ಅದಕ್ಕಾಗಿ ಚೆಲ್ಲಿದಂತಿರುವ ಇದರ ಎಲ್ಲ ಬರಹಗಳನ್ನು ಸಂಪಾದಿಸಿ, ತಾತ್ವೀಕರಿಸುವ ಅಗತ್ಯವಿದೆ. ಇದರಿಂದ ಇಂದಿನ ಸಾಹಿತ್ಯಸಕ್ತ ತರುಣ ಪೀಳಿಗೆಗೆ ಸಾಹಿತ್ಯ ಪ್ರವೇಶಕ್ಕೆ ಹಲವು ತೆರವ ಕೀಲಿಕೈಗಳು ಒದಗಬಹುದು. ಹಾಗೇ ಸಾಹಿತ್ಯ ಪರಂಪರೆಯ ಅಧ್ಯಯನಕ್ಕೆ ಇವರು ನಿರ್ಮಿಸಿರುವ ಹಲವು ಓದಿನ ದಾರಿಗಳನ್ನು ಗುರ್ತಿಸಿಕೊಂಡು ಪರೀಕ್ಷಿಸಲು ಸಾಧ್ಯವಾಗಬಹುದು. □



'ಸಂವಾದ' ದೊರೆಯುವ ಸ್ಥಳ

- ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
- ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೦೩೬೮೦
- ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೫೫೦೬೮೨, ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೬೦೨
- ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೧೧೬, ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೮೯೪
- ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦೦೨೦
- ಕೆ.ಎಸ್.ಅರ್.ಟಿ.ಸಿ. ಬುಕ್ ಸ್ಟಾಲ್, ಪ್ಲಾಟ್ ಫಾರ್ಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ಮಹಾರಾಷ್ಟ್ರ: ಕೆಲವು ಭಯೋತ್ಪಾದಕ ಕಥೆಗಳು

ರಾಮ್ ಪುನಿಯಾನಿ

ಮುಂಬೈಯ ಸ್ಫೋಟವು ಪಶ್ಚಿಮ ರೈಲ್ವೆಯ ಪ್ರಥಮ ದರ್ಜೆ ಬೋಗಿಗಳಲ್ಲಿ ನಡೆದಿತ್ತು. ಸ್ಫೋಟದ ಬಳಿಕ ನೂರಾರು ಮುಸ್ಲಿಂರನ್ನು ಪೊಲೀಸರು ಬಂಧಿಸಿದರು. ಅವರನ್ನು ಬಂಧನದಲ್ಲಿರಿಸಿದ ಪೊಲೀಸ್ ಸ್ಟೇಶನ್‌ಗಳ ಮುಂದೆ ಸಮುದಾಯ ಬಾಂಧವರು ಮತ ಪ್ರದರ್ಶನ ನಡೆಸಿದ ಬಳಿಕ ಹೆಚ್ಚಿನವರನ್ನು ಬಿಡುಗಡೆಗೊಳಿಸಲಾಗಿತ್ತು. ಆದಷ್ಟು ಹೆಚ್ಚು ಮುಸ್ಲಿಮರನ್ನು ಬಂಧಿಸಲು ಪೊಲೀಸರು ಅವಸರ ಪಟ್ಟರು. ಅವರು ನಡುರಾತ್ರಿ ಬಂದು ಮುಸ್ಲಿಮರ ಮನೆಗಳ ಬಾಗಿಲು ತಟ್ಟುವುದು ರೂಢಿಯಾಯಿತು. ಯಾರನ್ನೂ ಸುಮ್ಮನೆ ಬಿಡಲಿಲ್ಲ. ಕೊಲ್ಲಿ ರಾಷ್ಟ್ರಗಳಿಗೆ ವ್ಯಾಪಾರಕ್ಕಾಗಿ ಪ್ರಯಣಿಸುವ ವೃತ್ತಿಪರರನ್ನೂ ಶ್ರೀಮಂತರನ್ನೂ ಹಿಡಿದರು. ಮುಸ್ಲಿಮನೆಂಬುದು ಭಯೋತ್ಪಾದಕ ಆರೋಪ ಹೊರಿಸಿ ಬಂಧಿಸುವುದಕ್ಕೆ ಪೊಲೀಸರಿಗೆ ಆಧಾರವಾಯಿತು. ಕೊನೆಗೆ ಮಾನವ ಹಕ್ಕು ಕಾರ್ಯಕರ್ತರು ಮತ್ತು ಸಮುದಾಯದ ನಾಯಕರು ಪ್ರಧಾನಿ ಹಾಗೂ ಮುಖ್ಯಮಂತ್ರಿಯನ್ನು ಭೇಟಿಯಾಗಬೇಕಾಯಿತು.

ಮಹಾರಾಷ್ಟ್ರವು ಒಂದೆಡೆಯಲ್ಲಿ ಸಾಮಾಜಿಕ ಆಂದೋಲನಗಳ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಗೆ ನಾಯಕತ್ವ ನೀಡುತ್ತಾ, ಇನ್ನೊಂದೆಡೆಯಲ್ಲಿ ಭಾರತೀಯ ಪ್ರಜಾಪ್ರಭುತ್ವಕ್ಕೆ ಬೆದರಿಕೆಯಾಗಿರುವ ಸಂಘಟನೆಗಳಲ್ಲಿ ಪ್ರಧಾನವಾಗಿರುವ ಆರೆಸ್ಸೆಸ್‌ಗೆ ಜನ್ಮ ನೀಡಿದ ರಾಜ್ಯವೂ ಆಗಿದೆ. ಇದು ಮಹಾರಾಷ್ಟ್ರವು ಭಯೋತ್ಪಾದಕ ಆಕ್ರಮಣಕ್ಕೆ ಗುರಿಯಾಗುತ್ತಿರುವಾಗ ಜ್ಞಾಪಿಸಬೇಕಾದ ವಾಸ್ತವಿಕಾಂಶವಾಗಿದೆ. ಆ ಪೈಕಿ ಒಂದು ಪ್ರಮುಖ ಸ್ಫೋಟದಲ್ಲಿ ಆರೆಸ್ಸೆಸ್‌ನ ಸಂತತಿಯಾಗಿರುವ ಭಜರಂಗದಳದ ಪಾತ್ರವಿದೆ. ಕಳೆದ ೩ ವರ್ಷಗಳಿಂದ ಮಹಾರಾಷ್ಟ್ರವನ್ನು ನಡುಗಿಸುತ್ತಿರುವ ಭೀಕರ ಸ್ಫೋಟಗಳಲ್ಲಿ ಲಷ್ಕರ್ ಇತೊಯಿಬಾ, ಫಿದಾಈನ್, ಅಲ್‌ಖೈದಾಗಳ ಕೈವಾಡದ ಶಂಕೆಯಿದೆ.

ಕೊನೆಯದಾಗಿ ಜುಲೈ ೧೧ರಂದು ಮುಂಬೈ ಮತ್ತು ಸೆಪ್ಟೆಂಬರ್ ೮ರಂದು ಮಾಲೆಗಾಂವ್‌ಗಳಲ್ಲಿ ಸ್ಫೋಟ ನಡೆದಿತ್ತು. ಮಾಲೆಗಾಂವ್‌ನಲ್ಲಿ ಮಸೀದಿ ಮತ್ತು ಬಡಾಕಬರಸ್ತಾನದ ಸಮೀಪದಲ್ಲಿ ಸ್ಫೋಟ ಸಂಭವಿಸಿತ್ತು. ಶುಕ್ರವಾರ ನಡೆದ ಈ ಘಟನೆಯಲ್ಲಿ ೩೮ ಮಂದಿ ಹತರಾಗಿದ್ದರು. ಅಂದು ಶಬೇ ಬರಾಅತ್ ದಿನವೂ ಆಗಿತ್ತು. ಅಲ್ಲಿ ಅನೇಕ ಮುಸ್ಲಿಮರು ನೆರೆದಿದ್ದರು. ೨೦೦೩ ರ ಏಪ್ರಿಲ್ ಮುಸ್ಲಿಮರು ೨೫ ರಂದು ಪರ್ಭನಿಯ ಮಸೀದಿಯಲ್ಲಿಯೂ ೨೦೦೪ರ ಆಗಸ್ಟ್ ೨೧ರಂದು ಸಮೀಪದಲ್ಲಿರುವ ಪೂರ್ನಿಯಾ ಮತ್ತು ಜಲ್ನಾದ ಮಸೀದಿಗಳಲ್ಲಿಯೂ ನಮಾಜ್‌ಗಿಂತ ಮುಂಚೆ ಇಂಥ ಸ್ಫೋಟಗಳು ಸಂಭವಿಸಿದ್ದವು ಪರ್ಭನಿಯಲ್ಲಿ ೨೫ ಮತ್ತು ಇತರ ಎರಡು ಕಡೆಗಳಲ್ಲಿ ೧೮ ಮಂದಿಗೆ ಗಾಯವಾಯಿತು.



ಮುಂಬೈಯ ಸ್ಫೋಟವು ಪಶ್ಚಿಮ ರೈಲ್ವೆಯ ಪ್ರಥಮ ದರ್ಜೆ ಬೋಗಿಗಳಲ್ಲಿ ನಡೆದಿತ್ತು. ಸ್ಫೋಟದ ಬಳಿಕ ನೂರಾರು ಮುಸ್ಲಿಮರನ್ನು ಪೊಲೀಸರು ಬಂಧಿಸಿದರು. ಅವರನ್ನು ಬಂಧನದಲ್ಲಿರಿಸಿದ ಪೊಲೀಸ್ ಸ್ಟೇಶನ್‌ಗಳ ಮುಂದೆ ಸಮುದಾಯ ಬಾಂಧವರು ಮತಪ್ರದರ್ಶನ ನಡೆಸಿದ ಬಳಿಕ ಹೆಚ್ಚಿನವರನ್ನು ಬಿಡುಗಡೆಗೊಳಿಸಲಾಗಿತ್ತು. ಆದಷ್ಟು ಹೆಚ್ಚು ಮುಸ್ಲಿಮರನ್ನು ಬಂಧಿಸಲು ಪೊಲೀಸರು ಅವಸರ ಪಟ್ಟರು. ಅವರು ನಡುರಾತ್ರಿ ಬಂದು ಮುಸ್ಲಿಮರ ಮನೆಗಳ ಬಾಗಿಲು ತಟ್ಟುವುದು ರೂಢಿಯಾಯಿತು. ಯಾರನ್ನೂ ಸುಮ್ಮನೆ ಬಿಡಲಿಲ್ಲ. ಕೊಲ್ಲಿ ರಾಷ್ಟ್ರ ಗಳಿಗೆ ವ್ಯಾಪಾರಕ್ಕಾಗಿ ಪ್ರಯಣಿಸುವ ವೃತ್ತಿಪರರನ್ನೂ ಶ್ರೀಮಂತರನ್ನೂ ಹಿಡಿದರು. ಮುಸ್ಲಿಮನೆಂಬುದು ಭಯೋತ್ಪಾದಕ ಆರೋಪ ಹೊರಿಸಿ ಬಂಧಿಸುವುದಕ್ಕೆ ಪೊಲೀಸರಿಗೆ ಆಧಾರವಾಯಿತು. ಕೊನೆಗೆ ಮಾನವ ಹಕ್ಕು ಕಾರ್ಯಕರ್ತರು ಮತ್ತು ಸಮುದಾಯದ ನಾಯಕರು ಪ್ರಧಾನಿ ಹಾಗೂ ಮುಖ್ಯಮಂತ್ರಿಯನ್ನು ಭೇಟಿಯಾಗಬೇಕಾಯಿತು. ಆ ಬಳಿಕ ಪೊಲೀಸರು ಸ್ವಲ್ಪ ಸಡಿಲವಾದರು.

ಮಾಲೆಗಾಂವ್ ಸ್ಫೋಟವು ಪೊಲೀಸರಲ್ಲಿ ಅಭಿಪ್ರಾಯ ಗೊಂದಲ ಸೃಷ್ಟಿಸಿತು. ಮಸೀದಿಯ ಬಳಿ ಮುಸ್ಲಿಮರು ಬಾಂಬು ಇರಿ

[illegible] ವಾದಿಸುವುದು ಹೇಗೆ? ರೂಢಿಯಂತೆಯೇ ತನಿಖಾ ವಿಭಾಗವು ಶಂಕಿತರನ್ನು ಗುರಿಯಾಗಿರಿಸಿ ಮುಂದೆ ಸಾಗಿತು. 'ಭಯೋತ್ಪಾದಕರು ಅವರ ದೇಶಗಳ ಮಸೀದಿಗಳಲ್ಲಿ ಬಾಂಬು ಸ್ಫೋಟಿಸುವುದು ತಿಳಿದಿಲ್ಲವೇ?' ಎಂದು ಓರ್ವ ಹಿಂದೂ ನಾಯಕ ಟಿ.ವಿ. ಸಂವಾದದಲ್ಲಿ ಪ್ರಶ್ನಿಸಿದರು. ಸ್ಫೋಟದಲ್ಲಿ ಯಾವುದಾದರೂ ಹಿಂದೂ ಬಲಪಂಥೀಯ ಪಕ್ಷದ ಕೈವಾಡವಿದೆಯೆಂದು ತನಿಖಾ ವಿಭಾಗದ ಹೆಚ್ಚಿನವರಿಗೆ ಮತ್ತು ಮಾಧ್ಯಮದವರಿಗೆ ಊಹಿಸಲು ಸಾಧ್ಯವಿರಲಿಲ್ಲ. ಏಪ್ರಿಲ್ ೬ರಂದು ನಾಂದೇಡ್‌ನಲ್ಲಿ ನಡೆದ ಸ್ಫೋಟದತ್ತ ಕೆಲವು ಮಂದಿ ಮಾತ್ರ ಬೆಟ್ಟು ಮಾಡಿದರು. ಓರ್ವ ಆರೆಸ್ಸೆಸ್ ಹಿತೈಷಿಯ ಮನೆಯಲ್ಲಿ ಬಾಂಬು ನಿರ್ಮಿಸುತ್ತಿದ್ದಾಗ ಸಂಭವಿಸಿದ ಸ್ಫೋಟದಲ್ಲಿ ನರೇಶ್ ರಾಜ್ ಕೊಂಡಾವರ್ ಮತ್ತು ಹಿಮಾಂಶು ಪಾನ್ಸೆ ಎಂಬೀ ಭಜ್ರಂಗದಳದ ಕಾರ್ಯಕರ್ತರು ಅಂದು ನಾಂದೇಡ್‌ನಲ್ಲಿ ಹತರಾಗಿದ್ದರು. ಸ್ಫೋಟ ಸಂಭವಿಸಿದ ಕೂಡಲೇ ಅದನ್ನು ಪಟಾಕಿ ಸಿಡಿತವೆಂದು ಸಮರ್ಥಿಸಲು ಪೊಲೀಸರು ಪ್ರಯತ್ನಿಸಿದರು. ಸಿಡಿಮದ್ದು, ಟೈಮರ್, ಸ್ವಿಚ್‌ಗಳು, ಡಿಟನೇಟರ್ ಮುಂತಾದ ಸ್ಫೋಟಕ ವಸ್ತುಗಳು ದೊರೆತಾಗ ಭಜ್ರಂಗದಳ ಕಾರ್ಯಕರ್ತರು ಬಾಂಬು ನಿರ್ಮಿಸುತ್ತಿದ್ದರೆಂದು ಪೊಲೀಸರು ಒಪ್ಪಬೇಕಾಯಿತು. ಅದೇ ಮನೆಯಿಂದ ದೊರೆತ ಒಂದು ಡೈರಿಯಲ್ಲಿ, ಬಾಂಬು ನಿರ್ಮಾಣಕ್ಕೆ ಸಂಬಂಧಿಸಿದ ಟಿಪ್ಪಣಿಗಳೂ, ಭಜರಂಗದಳದ ಸಭೆಗಳ ದಿನಾಂಕ ಮತ್ತು ಆರೆಸ್ಸೆಸ್ ನಾಯಕರ ಫೋಟೋಗಳಿದ್ದುವು. ಅದಲ್ಲದೇ ಕೃತಕ ಗಡ್ಡ ಮೀಸೆಗಳೂ ಅಲ್ಲಿ ದೊರೆತಿದ್ದುವು. ಮೈಲುಗಟ್ಟಲೆ ದೂರದವರೆಗೆ ಸ್ಫೋಟದ ಸದ್ದು ಕೇಳಿಸಿತ್ತು. ಹತ್ತಿರದ ಮನೆಯ ಕಿಟಕಿ ಮುರಿದು ಬಿತ್ತು. ಕೊನೆಗೆ ಭಯೋತ್ಪಾದನಾ ವಿರೋಧಿ ತಂಡದ ಮುಖ್ಯಸ್ಥ ರಘುವಂಶ ಪ್ರಸ್ತುತ ಸ್ಫೋಟದಲ್ಲಿ ಭಜ್ರಂಗದಳದ ಪಾತ್ರವಿದೆಯೆಂದು ಸ್ಪಷ್ಟ ಪಡಿಸಿದರು. ಅದರಿಂದ ಈ ಬಾಂಬು ನಿರ್ಮಾಣ ಕೇಂದ್ರ ಮತ್ತು ಮಸೀದಿ ಸ್ಫೋಟದ ಪರಸ್ಪರ ಸಂಬಂಧ ವ್ಯಕ್ತವಾಯಿತು. ರಾಜ್ ಕೊಂಡಾವರ್ ಮತ್ತು ಪಾನ್ಸೆ, ಪರ್ಭನಿಯ ಬಾಂಬು ಸ್ಫೋಟದ ಪ್ರಮುಖ ಆರೋಪಿಗಳಾಗಿದ್ದರು.

ಈ ಘಟನೆಯನ್ನು ಹೆಚ್ಚಿನೆಲ್ಲ ರಾಷ್ಟ್ರೀಯ ಮಾಧ್ಯಮಗಳು ಅಡಗಿಸಿದುವು. ಬಾಂಬು ನಿರ್ಮಾಣದಲ್ಲಿ ಭಾಗಿಯಾಗಿಯೂ ನಿರಂತರವಾಗಿ ಕಾರ್ಯಾಚರಿಸಲು ಭಜ್ರಂಗದಳಕ್ಕೆ ಸಾಧ್ಯವಾಯಿತು. ಅದು ಈ ಅಪರಾಧಿ ಸಂಘಟನೆಗೆ ಬಾಂಬು ನಿರ್ಮಾಣದಲ್ಲಿರುವ ಸಂಬಂಧವು ಸ್ಪಷ್ಟಪಡಿಸುವ ಘಟನೆಯಾಯಿತು. ಅದು ಹಲವು ಸಾಧ್ಯತೆಗಳತ್ತ ಬೆಟ್ಟು ಮಾಡಿತು. ಅಷ್ಟರಲ್ಲಿ ನಿರಪರಾಧಿಗಳನ್ನು ಪೀಡಿಸಬಾರದೆಂದು ಸ್ಥಳೀಯ ಬಿಜೆಪಿ ಸಂಸದರು ಪೊಲೀಸರಿಗೆ ಎಚ್ಚರಿಕೆ ನೀಡಿದರು. ನಿರ್ದಿಷ್ಟ ಕಾರಣವಿಲ್ಲದೆ ಹಲವರನ್ನು ಬಂಧಿಸಲಾಯಿತು. ಬಂಧನಗಳಿಗೆ ವಿಶೇಷ ಪ್ರಚಾರ ನೀಡಲಿಲ್ಲ. ಈ ಬಾಂಬು ನಿರ್ಮಾಣವು ಯಾವುದೇ ರಾಜಕೀಯ ಸಂಬಂಧವಿಲ್ಲದ ಕೇವಲ ಸ್ಥಳೀಯ ಘಟನೆ ಎಂಬ ಭಾವನೆಯನ್ನು ಅದು ಮೂಡಿಸಿತು.

ನಾಗ್ಪುರದ ಆರೆಸ್ಸೆಸ್ ಕಚೇರಿಯ ಆಕ್ರಮಣಕ್ಕೆ ಪ್ರಯತ್ನಿಸಿದ ನಾಲ್ವರು ಫಿದಾಈನ್ ಭಯೋತ್ಪಾದಕರನ್ನು ಪೊಲೀಸ್ ಘರ್ಷಣೆಯಲ್ಲಿ ಕೊಲ್ಲಲಾಯಿತೆಂದು ಜೂನ್ ೧೫ರಂದು ಪತ್ರಿಕೆಗಳು ವರದಿ ಮಾಡಿದವು. ಘಟನೆಯ ಕುರಿತು ಪೊಲೀಸ್ ನೀಡಿದ ವಿವರಣೆಯಲ್ಲಿ ಹಲವು ಸಂಶಯಗಳಿಗೆ ಆಸ್ಪದವಿತ್ತು. ಇದು ಮುಂಬೈ ಹೈಕೋರ್ಟ್‌ನ ಓರ್ವ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸುವಂತೆ ಕೆಲವು ಸಾಮಾಜಿಕ ಕಾರ್ಯಕರ್ತರನ್ನು ಪ್ರೇರೇಪಿಸಿತು. ಪೊಲೀಸರು ನೀಡಿದ ವಿವರಣೆಯ ತಪ್ಪುಗಳನ್ನು ಈ ತನಿಖೆಯು ದೃಢೀಕರಿಸಿತು. ನಿವೃತ್ತ ನ್ಯಾಯಾಧೀಶರ ನಾಯಕತ್ವದಲ್ಲಿರುವ ಸಮಿತಿ ಮುಂದಿದ್ದರೂ ಪೊಲೀಸರು ಅದರೊಂದಿಗೆ ಸಹಕರಿಸಲಿಲ್ಲ. ಘಟನೆಯ ಕುರಿತು ಪೊಲೀಸರ ವಿವರಣೆಯನ್ನು ತಿಳಿಯಲಿಕ್ಕಾಗಿ ಸಮಿತಿಯು ಪತ್ರಿಕಾ ವರದಿಗಳನ್ನು ಅವಲಂಬಿಸಬೇಕಾಯಿತು.

'ಭಯೋತ್ಪಾದಕರು ಅವರ ದೇಶಗಳ ಮಸೀದಿಗಳಲ್ಲಿ ಬಾಂಬು ಸ್ಫೋಟಿಸುವುದು ತಿಳಿದಿಲ್ಲವೇ?' ಎಂದು ಓರ್ವ ಹಿಂದೂ ನಾಯಕ ಟಿ.ವಿ. ಸಂವಾದದಲ್ಲಿ ಪ್ರಶ್ನಿಸಿದರು. ಸ್ಫೋಟದಲ್ಲಿ ಯಾವು ದಾದರೂ ಹಿಂದೂ ಬಲಪಂಥೀಯ ಪಕ್ಷದ ಕೈವಾಡವಿದೆಯೆಂದು ತನಿಖಾ ವಿಭಾಗದ ಹೆಚ್ಚಿನವರಿಗೆ ಮತ್ತು ಮಾಧ್ಯ ಮದವರಿಗೆ ಊಹಿಸಲು ಸಾಧ್ಯವಿರಲಿಲ್ಲ. ಏಪ್ರಿಲ್ ೬ರಂದು ನಾಂದೇಡ್‌ನಲ್ಲಿ ನಡೆದ ಸ್ಫೋಟದತ್ತ ಕೆಲವು ಮಂದಿ ಮಾತ್ರ ಬೆಟ್ಟು ಮಾಡಿದರು. ಓರ್ವ ಆರೆಸ್ಸೆಸ್ ಹಿತೈಷಿಯ ಮನೆಯಲ್ಲಿ ಬಾಂಬು ನಿರ್ಮಿಸುತ್ತಿದ್ದಾಗ ಸಂಭವಿಸಿದ ಸ್ಫೋಟದಲ್ಲಿ ನರೇಶ್ ರಾಜ್ ಕೊಂಡಾ ವರ್ ಮತ್ತು ಹಿಮಾಂಶು ಪಾನ್ಸೆ ಎಂಬೀ ಭಜ್ರಂಗದಳದ ಕಾರ್ಯಕರ್ತರು ಅಂದು ನಾಂದೇಡ್‌ನಲ್ಲಿ ಹತರಾಗಿದ್ದರು. ಸ್ಫೋಟ ಸಂಭವಿಸಿದ ಕೂಡಲೇ ಅದನ್ನು ಪಟಾಕಿ ಸಿಡಿತವೆಂದು ಸಮರ್ಥಿಸಲು ಪೊಲೀಸರು ಪ್ರಯತ್ನಿಸಿದರು.

ಈ ಎಲ್ಲ ಘಟನೆಗಳು ೧೯೯೩ರ ಮುಂಬೈ ಸ್ಫೋಟ ಪ್ರಕರಣದ ಸುದ್ದಿಗಳಲ್ಲಿ ಮುಳುಗಿ ಹೋಗಿತ್ತು. ೧೩ ವರ್ಷಗಳ ಬಳಿಕ ಈಗ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗುತ್ತಿದೆ. ಬಂಧನದಲ್ಲಿರುವ ೨೦೦ ಮಂದಿಯ ಪೈಕಿ ಎಷ್ಟು ಜನರಿಗೆ ಸ್ಫೋಟದಲ್ಲಿ ಪಾತ್ರವಿದೆಯೆಂದು ತಿಳಿದಿಲ್ಲ. ಈ ಘೋರ ಕೃತ್ಯದ ಪ್ರಧಾನ ಆರೋಪಿಯನ್ನು ಬಂಧಿಸಲು ಸಾಧ್ಯವಾಗಿಲ್ಲ ಮತ್ತು ತೀರ್ಪು ಬಹಳ ತಡವಾಗಿ ಹೊರ ಬಂದಿದೆಯೆಂಬುದು ಖಚಿತ. ಅಪರಾಧಿಗಳಲ್ಲದ ಕೆಲವರು ಟಾಡಾ ಕಾನೂನಿನ್ವಯ ಜೈಲುಗಳಲ್ಲಿ ಹಿಂಸೆ ಅನುಭವಿಸಿದರೆಂಬುದೂ ವಾಸ್ತವಿಕವಾಗಿದೆ.

ಇತರ ವೈರುಧ್ಯಗಳೂ ಸ್ಪಷ್ಟವಾಗಿವೆ. ಬಾಬರಿ ಮಸೀದಿ ಧ್ವಂಸದ ಬಳಿಕ ನಡೆದ ಮುಂಬೈ ಗಲಭೆಯ ಹಿನ್ನೆಲೆಯಲ್ಲಿ ಬಾಂಬು ಸ್ಫೋಟ ಸಂಭವಿಸಿತ್ತು. ಗಲಭೆಯ ವಿಚಾರಣೆ ನಡೆಸಿದ ಶ್ರೀ ಕೃಷ್ಣ ಆಯೋಗವು ಕಾರಣಕರ್ತರನ್ನು ಬಹಿರಂಗ ಪಡಿಸಿತ್ತು. ಕರ್ತವ್ಯ ಚ್ಯುತಿ ಮಾಡಿದ ಅಥವಾ ಗಲಭೆಯಲ್ಲಿ ಭಾಗಿಯಾಗಿದ್ದ ಪೊಲೀಸ್ ಅಧಿಕಾರಿಗಳತ್ತವೂ ಆಯೋಗವು ಬೆಟ್ಟು ಮಾಡಿತ್ತು. ಆ ಅಪರಾಧಿಗಳಿಗೆ ಈ ತನಕ ಶಿಕ್ಷೆಯಾಗಿಲ್ಲ.

ಶ್ರೀ ಕೃಷ್ಣ ಆಯೋಗವನ್ನು ಕಾಂಗ್ರೆಸ್ ಸರಕಾರ ನೇಮಿಸಿತ್ತು. ಗಲಭೆಯ ಬಳಿಕ ನಡೆದ ಚುನಾವಣೆಯಲ್ಲಿ ಗಲಭೆಕೋರರು ಯಶಸ್ವಿಯಾದಾಗ ಅವರು ಪ್ರಥಮವಾಗಿ ಶ್ರೀಕೃಷ್ಣ ಆಯೋಗವನ್ನು ವಿಸರ್ಜಿಸಿದರು. ಕೇಂದ್ರ ನಾಯಕತ್ವದ ವಿನಂತಿಯಂತೆ ಅದನ್ನು ಪುನಃ ಊರ್ಜಿತಗೊಳಿಸಬೇಕಾಯಿತು. ವರದಿ ಸಿದ್ಧವಾದಾಗಲೂ ಇದೇ ಶಿವಸೇನಾ ಒಕ್ಕೂಟವು ಅಧಿಕಾರದಲ್ಲಿತ್ತು. ಹಳೆಯ ಹುಣ್ಣುಗಳನ್ನು ಕೆದಕಿದಂತಾದೀತೆಂದು ಆರಂಭದಲ್ಲಿ ಅವರು ವರದಿಯನ್ನು ಬಹಿರಂಗ ಪಡಿಸಲು ನಿರಾಕರಿಸಿದರು. ಬೆದರಿಕೆಯಿಂದ ದಮನಿಸುವ ಬದಲಾಗಿ ನ್ಯಾಯದ ಸ್ಪರ್ಶದಿಂದ ಹುಣ್ಣನ್ನು ವಾಸಿಗೊಳಿಸಬೇಕೆಂಬ ಸತ್ಯವನ್ನು ಅವರು ಮರೆತರು. ಕೊನೆಗೆ ವರದಿಯನ್ನು ಬಹಿರಂಗಪಡಿಸುವುದು ಅನಿವಾರ್ಯವಾದಾಗ ಅದರ ಅಭಿಪ್ರಾಯಗಳು ಹಿಂದೂ ವಿರೋಧಿಯೆಂದು ಆರೋಪಿಸಿ ಅವರು ತಿರಸ್ಕರಿಸಿದರು.

ಶ್ರೀ ಕೃಷ್ಣ ಆಯೋಗದ ವರದಿಯ ಆಧಾರದಲ್ಲಿ ಕ್ರಮಕೈಗೊಳ್ಳ ಲಾಗುವುದೆಂಬ ಆಶ್ವಾಸನೆಯಿಂದ ಅಧಿಕಾರಕ್ಕೇರಿದ ಕಾಂಗ್ರೆಸ್ ಪಕ್ಷವು ಗಲಭೆಯಲ್ಲಿ ಭಾಗವಹಿಸಿದ ಅಪರಾಧಿಗಳ ವಿರುದ್ಧ ಯಾವುದೇ ಕ್ರಮಕೈಗೊಳ್ಳಲಿಲ್ಲ. ಸರಕಾರದ ಪೂರ್ವಗ್ರಹ ಮತ್ತು ದ್ವಿಮುಖ ಧೋರಣೆ ಹಾಗೂ ಪಕ್ಷ ಪಾತವು ಬಹಳ ಸ್ಪಷ್ಟವಾಗಿದೆ. ಗಲಭೆಯಲ್ಲಿ ಭಾಗವಹಿಸಿದ ಅಪರಾಧಿಗಳು ಯಾವುದೇ ಶಿಕ್ಷೆ ಅನುಭವಿಸದೆ ಸ್ವಚ್ಛಂದ ವಾಗಿ ಅಲೆದಾಡುತ್ತಿರುವಾಗ ಪ್ರಸ್ತುತ ಗಲಭೆಯ ಬಳಿಕದ ಬಾಂಬು ಸ್ಫೋಟದ ಆರೋಪಿಗಳನ್ನು ಮಾತ್ರ ದಂಡಿಸಲಾ ಗುತ್ತಿದೆ. ನಮ್ಮ ಸಮಾಜದಲ್ಲಿ ಎಲ್ಲರೂ ಸಮಾನರು. ಆದರೆ ಕೆಲವರು ಹೆಚ್ಚು ಸಮಾನರು! ಅಪರಾಧವೆಸಗಿದರೂ ಅವರು ಶಿಕ್ಷೆ ಅನುಭವಿಸಬೇಕಾಗಿಲ್ಲ.

ಮುಂಬೈ ಸ್ಫೋಟದ ತನಿಖೆಯಲ್ಲಿಯೂ ಮಾಲೆಗಾಂವ್ ಸ್ಫೋಟದ ತನಿಖೆಯಲ್ಲಿಯೂ ಈ ವೈರುಧ್ಯ ಕಂಡು ಬರುತ್ತಿದೆ. ಮಾಲೆಗಾಂವ್ ಘಟನೆಯ ತನಿಖೆಯಲ್ಲಿ ಮನಪೂರ್ವಕ ಅಥವಾ ಅಸಾಮರ್ಥ್ಯದಿಂದ ದಾರಿ ತಪ್ಪಿಸುವ ರೀತಿಗಳನ್ನು ಅಂಗೀಕರಿಸಲಾಗುತ್ತಿದೆ. ವಿಭಿನ್ನ ಧೋರಣೆಗಳು ಸಮಾಜವನ್ನು ಪೀಡಿಸಿರುವ ರೋಗ ಲಕ್ಷಣಗಳನ್ನು ಸೂಚಿಸುತ್ತದೆ. ೮೦ರ ದಶಕದಲ್ಲಿ ಆರೆಸ್ಸೆಸ್ ಸಿದ್ಧಾಂತವನ್ನು ಅಲ್ಪಸಂಖ್ಯಾತ ವಿರೋಧಿ ಪ್ರಚಾರದಿಂದ ಪುನರುತ್ತೇಜಿಸಲಾಯಿತು. ಇಂದು ಅದು ಹೆಚ್ಚು ರೂಕ್ಷವಾಗಿದೆ. ಈ ಪ್ರಕರಣದಿಂದ ಸಮಾಜದ ಸಾರ್ವಜನಿಕ ಪ್ರಜ್ಞೆಯು ಸಂಪೂರ್ಣ ಮಲಿನಗೊಂಡಿದೆ. ಪಶ್ಚಿಮದ ಮುಸ್ಲಿಮ್ ವಿರೋಧಿ ಪ್ರಚಾರ ಯುದ್ಧವು ಅದನ್ನು ತೀಕ್ಷ್ಣಗೊಳಿಸಿದೆ. ಅಮೆರಿಕವು ತೈಲ ಬೇಟೆಗೆ ಅವಲಂಬಿಸುವ ಅಲ್‌ಖೈದಾಗಳಂಥ ಭಯೋತ್ಪಾದಕತೆಯನ್ನು ಇಸ್ಲಾಮ್ ಮತ್ತು ಮುಸ್ಲಿಮರ ಜತೆ ಜೋಡಿಸಲಾಗುತ್ತಿದೆ. ಈ ವಿಷಯದಲ್ಲಿ ಅಮೆರಿಕ ಮತ್ತು ಆರೆಸ್ಸೆಸ್‌ನ ತಂತ್ರಗಳ ಸಾಮ್ಯತೆಯು ಗಮನಾರ್ಹವಾಗಿವೆ.

ಜನಾಂಗೀಯ ಸಮಸ್ಯೆಯಾ ಗಿರುವ ಕಾಶ್ಮೀರ ಸಮಸ್ಯೆಗೂ ಧಾರ್ಮಿಕ ಬಣ್ಣ ಲೇಪಿಸಲಾ ಗಿದೆ. ಎಲ್.ಟಿ.ಟಿ.ಇ., ಐರಿಷ್ ರಿಪಬ್ಲಿಕನ್ ಆರ್ಮಿ, ಖಾಲಿ ಸ್ತಾನ್‌ವಾದಿಗಳು ಅಥವಾ ಉಲ್ಫಾ ಮುಂತಾದವುಗಳ ಭಯೋತ್ಪಾದಕತೆಯನ್ನು ಧರ್ಮದೊಂದಿಗೆ ಜೋಡಿಸಿ ಸಮೀಕರಿಸುವುದಿಲ್ಲ. ಆದರೆ ಭಯೋತ್ಪಾದಕ ಚಟುವಟಿಕೆಯು ಯಾವುದಾದರೂ ಮುಸ್ಲಿಮ್ ವಿಭಾಗದಿಂದ ಸಂಭವಿಸಿದರೆ ಅದನ್ನು ಸಮೀಕರಿಸಲಾಗುತ್ತದೆ. ಎಲ್ಲ ಮುಸ್ಲಿಮರೂ ಭಯೋತ್ಪಾದಕರಲ್ಲ. ಆದರೆ ಭಯೋತ್ಪಾದಕರೆಲ್ಲ ಮುಸ್ಲಿಮರು ಇತ್ಯಾದಿ ವ್ಯಾಪಕ ಪ್ರಚಾರಕ್ಕೆ ಅದೇ ಪ್ರೇರಕವಾಗಿದೆ. ಅದು ಕೋಮುವಾದಿಗಳು ರಾಜಕೀಯ ಲಾಭಗಳಿಗಾಗಿ ರಚಿಸಿದ ಕಟ್ಟುಕಥೆಯಾಗಿದೆ.

ನಾವು ಎಲ್ಲಿಗೆ ಹೋಗುತ್ತಿದ್ದೇವೆ? ನಾವು ಕತ್ತಲೆ ಕವಿದ ಸುರಂಗದಲ್ಲಿ ಸಾಗುತ್ತಿದ್ದೇವೆ. ಈ ಸುರಂಗವು ಅಲ್ಪಸಂಖ್ಯಾತರನ್ನು ವಿಶೇಷತಃ ಮುಸ್ಲಿಮರನ್ನು ಬೆದರಿಸುತ್ತಿದೆ. ಅವರ ಮಾನವ ಹಕ್ಕುಗಳನ್ನು ದಮನಿಸುತ್ತಿದೆ. ಸರಕಾರೀ ಯಂತ್ರದ ಪಕ್ಷಪಾತ ಮತ್ತು ಪೂರ್ವಗ್ರಹಗಳು ಅವರ ಗಾಯಗಳಿಗೆ ಉಪ್ಪು ಸವರುತ್ತಿದೆ. ಆರೆಸ್ಸೆಸ್, ಬಿಜೆಪಿ, ಭಜರಂಗದಳ, ವಿಹಿಂಪ ಮುಂತಾದ ಕೋಮು ಒಕ್ಕೂಟವು ಹಿಂದೂ ರಾಷ್ಟ್ರವನ್ನು ಗುರಿಯಾಗಿರಿಸಿ ಸಂಪೂರ್ಣ ಕೋಮುವಾದಿಯಾಗಿ ವರ್ತಿಸುತ್ತಿದೆ. ಕಾಂಗ್ರೆಸ್ ಪಕ್ಷವೂ ಆಂಶಿಕವಾಗಿ ಕೋಮುಘಟಕಗಳಿಂದ ಪ್ರಭಾವಿತವಾಗಿದೆ. ಪೊಲೀಸ್ ಮತ್ತು ಅಧಿಕಾರಿ ಮಟ್ಟದಲ್ಲಿಯೂ ಮಾಧ್ಯಮ ರಂಗದಲ್ಲಿಯೂ ಆರೆಸ್ಸೆಸ್‌ವಾದಿಗಳ ಪ್ರಭುತ್ವವಿದೆ. ಕೋಮುವಾದಕ್ಕೆ ಸಾಂಸ್ಕೃತಿಕ ರೂಪ ನೀಡಿ ಮತ್ತಷ್ಟು ಪ್ರತಿಗಾಮಿ ಮಟ್ಟಕ್ಕೆ ಸಾಗಿಸಲಾಗುತ್ತಿದೆ. ಇದರಿಂದಾಗಿ ದೇಶದ ವಿವಿಧೆಡೆಗಳಲ್ಲಿ ಮುಸ್ಲಿಮರ ಧ್ರುವೀಕರಣ ನಡೆಯುತ್ತಿದೆ.

ಈ ಸುರಂಗದ ಕೊನೆಯಲ್ಲಿ ನಮಗೆ ಬೆಳಕು ಕಾಣಿಸಿತೇ? ಕೆಲವು ಆಶಾಕಿರಣಗಳೂ ಅತ್ತಿತ್ತ ಗೋಚರಿಸುತ್ತಿವೆ. ವಿವಿಧ ಮಾನವ ಹಕ್ಕು ಸಂಘಟನೆಗಳು ಈ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿವೆ. ಈ ಕಳವಳಗಳನ್ನು ಸೂಕ್ತ ವೇದಿಕೆಗಳಲ್ಲಿ ಪ್ರಕಟಿಸುವ ನಿಟ್ಟಿನಲ್ಲಿ ಅವರು ಯಶಸ್ವಿಯಾಗಿದ್ದಾರೆ. ಮುಸ್ಲಿಮ್ ಸಮುದಾಯದ ಬಹದೊಡ್ಡ ವಿಭಾಗವು ಭಯೋತ್ಪಾದಕ ಕೃತ್ಯಗಳನ್ನು ಖಂಡಿಸಿದೆ. ಮಾತ್ರವಲ್ಲ, ವ್ಯಾಪಕ ಮಟ್ಟದಲ್ಲಿ ಮಾನವ ಹಕ್ಕು ಅಭಿಯಾನಗಳಲ್ಲಿ ಭಾಗವಹಿಸಿದೆ.

ಜಾಗತಿಕ ಮಟ್ಟದಲ್ಲಿ ಪ್ರಬಲವಾಗುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿತ್ವ ಮತ್ತು ರಾಷ್ಟ್ರ ಮಟ್ಟದಲ್ಲಿ ಸಮಾಜದಲ್ಲಿ ಕೋಮು ಪಕ್ಷಪಾತವನ್ನು ಬಲಪಡಿಸುತ್ತಿರುವ ಸಂಘಪರಿವಾರವನ್ನು ಹೇಗೆ ಎದುರಿಸಬೇಕೆಂಬುದೇ ಪ್ರಧಾನ ವಿಷಯವಾಗಿದೆ. ಪ್ರಜಾಪ್ರಭುತ್ವ ಮತ್ತು ವೈವಿಧ್ಯಮಯ ಮೌಲ್ಯಗಳನ್ನು ಬಲಪಡಿಸುವುದಕ್ಕಾಗಿ ನಾವು ಸಾಧ್ಯವಿರುವುದನ್ನೆಲ್ಲ ಮಾಡಬೇಕಾಗಿದೆ. ಎಲ್ಲ ಪೌರರ ಹಕ್ಕುಗಳಿಗಾಗಿ ನಡೆಯುವ ಹೋರಾಟಗಳನ್ನು ನಾವು ಬಲಪಡಿಸಬೇಕು.

ಸುಲಭದಲ್ಲಿ ಬಲಿಯಾಗುವವರ ಹಾಗೂ ಸರಕಾರ ಮತ್ತು ಸಮಾಜದ ಮೇಲ್ವರ್ಗದ ಬೆದರಿಕೆಗೆ ಗುರಿಯಾದವರ ಹಕ್ಕುಗಳಿಗಾಗಿ ನಾವು ವಿಶೇಷವಾಗಿ ರಂಗಕ್ಕಿಳಿಯಬೇಕು. ಅಲ್ಪಸಂಖ್ಯಾತ ವಿರೋಧಿ ಕಟ್ಟು ಕಥೆ ಮತ್ತು ವಿದ್ವೇಷದ ನಿವಾರಣೆಗಾಗಿ ಸಾಮಾಜಿಕ ನಾಯಕತ್ವವು ವಿಶಾಲ ಮಟ್ಟದಲ್ಲಿ ಕಾರ್ಯೋನ್ಮುಖವಾಗಬೇಕು. ಮುಸ್ಲಿಮ್ ಸಮುದಾಯದ ನಾಯಕರು ಮತ್ತು ಬುದ್ಧಿಜೀವಿಗಳು ಈ ನಿಟ್ಟಿನಲ್ಲಿ ಚೆನ್ನಾಗಿ ವರ್ತಿಸುತ್ತಿದ್ದರೂ ಅದನ್ನು ಮತ್ತಷ್ಟು ವ್ಯಾಪಕಗೊಳಿಸಲಾಗುತ್ತಿದೆ.

ಮಹಾರಾಷ್ಟ್ರದ ಘಟನೆಗಳು ಇತರ ಸ್ಥಳಗಳಲ್ಲಿಯೂ ಅದರ ಸಾಧ್ಯತೆಯಿದೆಯೆಂದು ಸಾಬೀತು ಪಡಿಸುತ್ತದೆ. ಇದನ್ನು ಒಂದು ಅಪಾಯ ಸೂಚಕವೆಂದು ಪರಿಗಣಿಸಿ ವಿದ್ವೇಷದ ರಾಜಕೀಯ ಮತ್ತು ನಿರಪರಾಧಿಗಳ ವಿರುದ್ಧ ನಡೆಯುತ್ತಿರುವ ಅಕ್ರಮ ರಾಜಕೀಯವನ್ನು ಕೊನೆಗಾಣಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೧
ದೂರವಾಣಿ : ೦೮೦ ೨೮೪೩/೯೪೪೮೦೪೪೫೦೬

ಬ್ರಾಹ್ಮಣ ಧರ್ಮ & ಮತಾಂತರ

ಡಾ|| ಸಿ.ಜಿ. ಲಕ್ಷ್ಮಿಪತಿ

ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳು ಮಸೀದಿ ಮತ್ತು ಚರ್ಚ್‌ಗಳಂತಹ ಸಾರ್ವಜನಿಕವಾದ ಸಾಮುದಾಯಿಕ ಪ್ರಾರ್ಥನಾ ಸ್ಥಳವನ್ನು ಹೊಂದಿರುತ್ತವೆ. ಆ ಧರ್ಮದ ಸೆಮಿನರಿ ಅಥವಾ ಮದರಸಗಳಿಂದ ತರಬೇತಿ ಹೊಂದಿದ ಪಾದ್ರಿಯೋ, ಮೌಲ್ವಿಯೋ ಇರುತ್ತಾನೆ. ನಿಗದಿ ಪಡಿಸಿದ ಪವಿತ್ರ ಗ್ರಂಥಗಳಿಂದಾಯ್ದ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಪ್ರಾರ್ಥನಾ ಸ್ಥಳಕ್ಕೆ ತಾತ್ವಿಕವಾಗಿ ಎಲ್ಲರಿಗೂ ಮುಕ್ತ ಪ್ರವೇಶವಿರುತ್ತದೆ. ಕ್ರೈಸ್ತ ಧರ್ಮವು 'Canon Law' ಆಧಾರದಮೇಲೆ ಸಂಘಟಿತವಾಗಿದೆ. ವ್ಯಾಟಿಕನ್ ಕ್ರೈಸ್ತ ಧರ್ಮದ ಕೇಂದ್ರ ಬಿಂದುವಾಗಿದೆ. ಆದರೆ ಬ್ರಾಹ್ಮಣ ಧರ್ಮದ ಸಂಘಟನೆ ವಿಶಿಷ್ಟವಾದದ್ದು. ಅದು ತನ್ನೊಳಗೆಯೇ ಅನೇಕ ಕವಲು, ಶಾಖೆ, ಭಿನ್ನ ಭಿನ್ನ ತಾತ್ವಿಕ ಪ್ರಣಾಳಿಕೆಯನ್ನು ಹೊಂದಿದೆ. ಆದುದರಿಂದಲೇ ಅದು ಜಾತಿಯಂತೆಯೂ ಕಾಣುತ್ತದೆ. ಅದು ಪ್ರಕಟಿತ ರೂಪದಲ್ಲಿ ಭಿನ್ನತೆಯನ್ನು ಅಭಿವ್ಯಕ್ತಿಸಿದರೂ ಮರೆಮಾಚಿದ ಕಾರ್ಯಾಚರಣೆಯ ವಿಧಾನದಲ್ಲಿ ಏಕಸೂತ್ರವನ್ನು ಪಡೆಯುತ್ತದೆ.

ಬ್ರಾಹ್ಮಣ ಧರ್ಮವು ಬ್ರಾಹ್ಮಣೇತರರನ್ನು ಅಥವಾ ಇತರ ಜಾತಿಯವರನ್ನು ಮತಾಂತರ ಗೊಳಿಸುತ್ತದೆಯೇ? ಈ ಧರ್ಮದ ಮತಾಂತರದ ವಿಧಾನ ಯಾವುದು? ಮತ್ತು ಹೇಗೆ ಎಂಬುದನ್ನು ಪರಿಶೀಲಿಸಲು ಪ್ರಯತ್ನಿಸಬಹುದು.

ಮುಸ್ಲಿಂ, ಕ್ರಿಶ್ಚಿಯನ್ ಧರ್ಮಕ್ಕೆ ಸೇರಬಯಸುವ ವ್ಯಕ್ತಿಗಳು ಆಯಾ ಧರ್ಮದ ಪ್ರಮುಖರಿಂದ ದೀಕ್ಷೆ ಪಡೆಯುತ್ತಾರೆ. ತಮ್ಮ ಧಾರ್ಮಿಕ ಆಚರಣಾ ವಿಧಾನಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಆಯಾ ಧರ್ಮದ ಅತೀತ ಶಕ್ತಿಯೊಂದರ ಮೇಲೆ ತಮ್ಮ ನಂಬಿಕೆಯನ್ನು ಕೇಂದ್ರೀಕರಿಸುತ್ತಾರೆ. ಈ ಪ್ರಕ್ರಿಯೆಗಳಿಂದ ಮತಾಂತರ ಹೊಂದಿದ ವ್ಯಕ್ತಿ ವಿಶ್ವದಾದ್ಯಂತ ಹರಡಿ ಹೋಗಿರುವ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮದ ಅಪಾರ ಧಾರ್ಮಿಕ ಬಳಗದಲ್ಲಿ ಒಬ್ಬನಾಗುತ್ತಾನೆ. ಚರ್ಚ್ ಮತ್ತು ಮಸೀದಿಗಳಿಗೆ ಹೋಗಿ ಪ್ರಾರ್ಥನೆಯ ಮೂಲಕ ತಮ್ಮ ನಂಬಿಕೆಯನ್ನು ಬಹಿರಂಗ ಪಡಿಸುತ್ತಾರೆ. ಆಯಾ ಧರ್ಮದ ಪವಿತ್ರ ಗ್ರಂಥದಲ್ಲಿನ ವಾಕ್ಯಗಳನ್ನು ಸತ್ಯವೆಂದು ನಂಬುವುದರ ಜೊತೆಗೆ, ಅದನ್ನು ಪಾಲಿಸುತ್ತಿದ್ದೇವೆಂದು ಹೇಳಿಕೊಳ್ಳುತ್ತಾರೆ. ಅವರ ಸಾಮಾಜಿಕ ಸ್ಥಾನಮಾನಗಳು ಧಾರ್ಮಿಕವಾಗಿ ಇತರ ಎಲ್ಲರಂತೆಯೇ ಇರುತ್ತವೆ. ವ್ಯಕ್ತಿಯ ಸ್ಥಾನಮಾನವನ್ನು ಹುಟ್ಟಿನಿಂದ ನಿರ್ಧರಿಸದೇ ಆತನ ಧರ್ಮಪಾಲನೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಈ ಬಗೆಯ ಮತಾಂತರದ ಪ್ರಕ್ರಿಯೆ ಬಹಳ ಸ್ಪಷ್ಟವಾಗಿರುತ್ತದೆ. ೧೯೮೦ ರ ದಶಕದಲ್ಲಿ ತಮಿಳುನಾಡಿನ ಮೀನಾಕ್ಷಿಪುರಂನಲ್ಲಿ ದಲಿತರು ಮುಸ್ಲಿಂರಾಗಿ ಮತಾಂತರ ಹೊಂದಿದ್ದು ಮತ್ತು ಬಾಬಾಸಾಹೇಬರು ೧೯೫೬ರಲ್ಲಿ ಬೌದ್ಧಧರ್ಮ ಸ್ವೀಕರಿಸಿದ್ದು ಜಗದ್ವ್ಯಾಪಿ ಸುದ್ದಿಯಾಗಿತ್ತು. ಕ್ರಿಶ್ಚಿಯನ್ ಧರ್ಮಕ್ಕೆ ಭಾರತದ ಅಸಂಖ್ಯಾತ ಜನ ಈಗಲೂ ಮತಾಂತರ ಹೊಂದುತ್ತಿದ್ದಾರೆ. ಈ ಧರ್ಮಗಳಿಗೆ ಮತಾಂತರ ಹೊಂದಿದವರಿಗೆ ತಮ್ಮ ನಂಬಿಕೆಯನ್ನು ಪ್ರಕಟಪಡಿಸಲು ಸುಸ್ಪಷ್ಟ ಮಾರ್ಗಗಳಿವೆ.

ಈ ಧರ್ಮಗಳು ಮಸೀದಿ ಮತ್ತು ಚರ್ಚ್‌ಗಳಂತಹ ಸಾರ್ವಜನಿಕವಾದ ಸಾಮುದಾಯಿಕ ಪ್ರಾರ್ಥನಾ ಸ್ಥಳವನ್ನು ಹೊಂದಿರುತ್ತವೆ. ಆ ಧರ್ಮದ ಸೆಮಿನರಿ ಅಥವಾ ಮದರಸಗಳಿಂದ ತರಬೇತಿ ಹೊಂದಿದ ಪಾದ್ರಿಯೋ, ಮೌಲ್ವಿಯೋ ಇರುತ್ತಾನೆ. ನಿಗದಿ ಪಡಿಸಿದ ಪವಿತ್ರ ಗ್ರಂಥಗಳಿಂದಾಯ್ದ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಪ್ರಾರ್ಥನಾ ಸ್ಥಳಕ್ಕೆ ತಾತ್ವಿಕವಾಗಿ ಎಲ್ಲರಿಗೂ ಮುಕ್ತಪ್ರವೇಶವಿರುತ್ತದೆ. ಕ್ರೈಸ್ತಧರ್ಮವು 'Canon Law' ಆಧಾರದಮೇಲೆ ಸಂಘಟಿತವಾಗಿದೆ. ವ್ಯಾಟಿಕನ್ ಕ್ರೈಸ್ತ ಧರ್ಮದ ಕೇಂದ್ರಬಿಂದುವಾಗಿದೆ. ಆದರೆ ಬ್ರಾಹ್ಮಣ ಧರ್ಮದ ಸಂಘಟನೆ ವಿಶಿಷ್ಟವಾದದ್ದು. ಅದು ತನ್ನೊಳಗೆಯೇ ಅನೇಕ ಕವಲು, ಶಾಖೆ, ಭಿನ್ನ ಭಿನ್ನ ತಾತ್ವಿಕ ಪ್ರಣಾಳಿಕೆಯನ್ನು ಹೊಂದಿದೆ. ಆದುದರಿಂದಲೇ ಅದು ಜಾತಿಯಂತೆಯೂ ಕಾಣುತ್ತದೆ. ಅದು ಪ್ರಕಟಿತ ರೂಪದಲ್ಲಿ ಭಿನ್ನತೆಯನ್ನು ಅಭಿವ್ಯಕ್ತಿಸಿದರೂ ಮರೆಮಾಚಿದ ಕಾರ್ಯಾಚರಣೆಯ ವಿಧಾನದಲ್ಲಿ ಏಕಸೂತ್ರವನ್ನು ಪಡೆಯುತ್ತದೆ. ಕಾರ್ಯಾಚರಣೆಯು ಯಜ್ಞೋಪವೀತದಂತೆ ಇಡೀ ಬ್ರಾಹ್ಮಣಧರ್ಮವನ್ನು ಆವರಿಸಿದೆ.

ಅದು ನಡೆಸುವ ಕಾರ್ಯಾಚರಣೆಯೆಂದರೇ ಇಡೀ ಭಾರತೀಯ ಜನಸಮುದಾಯವನ್ನು ಮನುಧರ್ಮದ ತನ್ನ ತಾತ್ವಿಕ ಪ್ರಣಾಳಿಕೆಗೆ ಒಗ್ಗಿಸಿಕೊಳ್ಳುವುದು. ಅಂದರೆ ಬ್ರಾಹ್ಮಣ ಧರ್ಮಕ್ಕೆ ಮತಾಂತರ ಗೊಳಿಸುವುದು. ಈ ಬ್ರಾಹ್ಮಣ ಧರ್ಮ ನಡೆಸುವ ಮತಾಂತರ ಅನನ್ಯವಾದದ್ದು. ಕ್ರೈಸ್ತ ಅಥವಾ ಇಸ್ಲಾಂನಂತೆ ಸಿದ್ಧ ಮಾದರಿಯದಲ್ಲ. ಈ ಎರಡೂ ಧರ್ಮಗಳೂ ಯಾರಾದರೂ ತಮ್ಮ ಧರ್ಮಕ್ಕೆ ಸೇರಿಕೊಂಡರೆ Baptise ಮಾಡುತ್ತವೆ ಅಥವಾ ದೀಕ್ಷೆಕೊಡುತ್ತವೆ. ತಮ್ಮ ಧರ್ಮದ ಸದಸ್ಯತ್ವ ಮತ್ತು ಧಾರ್ಮಿಕ ಹಕ್ಕುಗಳನ್ನು ನೀಡುತ್ತವೆ. ಬ್ರಾಹ್ಮಣ ಧರ್ಮದ ಮತಾಂತರ ಮಾತ್ರ ಬೇರೆಯದೇ ಬಗೆಯದ್ದು. ಮೇಲ್ನೋಟಕ್ಕೆ ಅದು ಜಾತಿಯಂತೆ ಕಾಣುವುದರಿಂದ ಅಥವಾ ಜಾತಿ, ಧರ್ಮ ಎರಡೂ ಆಗಿರುವುದರಿಂದ ಮತಾಂತರ ಕ್ರಮವನ್ನು ಗ್ರಹಿಸಲು ಕಷ್ಟ ಸಾಧ್ಯವಾಗಿದೆ. ಏಕೆಂದರೆ ಬ್ರಾಹ್ಮಣಧರ್ಮಕ್ಕೆ ಮತಾಂತರ



ಹೊಂದಿದವರಿಗೆ ಬ್ರಾಹ್ಮಣಧರ್ಮದ ಸದಸ್ಯತ್ವ ಸಿಗುವುದಿಲ್ಲ. ಬದಲಾಗಿ ಬ್ರಾಹ್ಮಣ ಧರ್ಮದ ಅಧೀನತೆಗೆ ಒಳಪಡುತ್ತಾರೆ. ತಾತ್ವಿಕ ವಾಗಿ ಮಾತ್ರ ಮತಾಂತರ ಹೊಂದುತ್ತಾರೆ. ತಾತ್ವಿಕವಾಗಿ ಮತಾಂತರ ಹೊಂದುವುದೆಂದರೆ ಮನುಧರ್ಮ ಶಾಸ್ತ್ರ ವನ್ನು ಸ್ವೀಕರಿಸುವುದೇ ಆಗಿದೆ. ಆದುದರಿಂದ ಜಾತಿಪದ್ಧ ತಿಯ ಏಣಿ ಶ್ರೇಣಿಯಲ್ಲಿ ಯಾವುದೇ ವ್ಯತ್ಯಾಸವುಂಟಾ ಗುವುದಿಲ್ಲ.

ಈ ಪ್ರಮೇಯವನ್ನು ಅರ್ಥೈಸಿಕೊಳ್ಳಲು ಜಾತಿಯ ಚರಿತ್ರೆಯನ್ನು ಸ್ವಲ್ಪ ಗಮನಿಸಬಹುದು. ಲೇಖಕನ ಅಭಿಪ್ರಾಯದಂತೆ ಜಾತಿ ಉಗಮದ ಸಿದ್ಧಾಂತಗಳಲ್ಲೆಲ್ಲಾ ಧರ್ಮಾನಂದ ಕೊಸಾಂಬಿಯವರು ತಮ್ಮ Introduction to Indian History ಕೃತಿಯಲ್ಲಿ ಮಂಡಿಸಿರುವ ಸಿದ್ಧಾಂತವು ಅತ್ಯಂತ ಸುಸಂಗತವೂ, ಚಾರಿತ್ರಿಕವೂ ಆಗಿದೆ. ಕೋಸಾಂಬಿಯವರ ಪ್ರಕಾರ ಜಾತಿಯು ವರ್ಣಗಳ ಆಂತರಿಕ ವಿಭಜನೆಯಿಂದ ಉಂಟಾಗದೆ ಬಾಹ್ಯಕಾರಣಗಳಿಂದಾಗಿ ಉಂಟಾಗಿದೆ. ಜಾತಿ ವ್ಯವಸ್ಥೆಯ ಚರಿತ್ರೆಯೆಂದರೆ ಬುಡಕಟ್ಟುಗಳು ಜಾತಿಯಾಗಿ ಪರಿವರ್ತನೆ ಹೊಂದುವುದೇ ಆಗಿದೆ. ಆರ್ಯರು ಭಾರತ ಪ್ರವೇಶಿಸಿದಾಗ ನಾಗ ಜನರು ಅವರನ್ನು ಎದುರಿಸಿದರು. ಇದರ ಬಗ್ಗೆ ನಾಗ ಜನಪದ ಕಾವ್ಯದಲ್ಲಿ ಬರುವ ವಿವರಗಳನ್ನು ಕೋಸಾಂಬಿ ನೀಡುತ್ತಾರೆ. ವೇದಗಳಲ್ಲಿ ಮತ್ತು ಬ್ರಾಹ್ಮಣ ಕಾವ್ಯಗಳಲ್ಲಿ ಇದರ ಚಹರೆಗಳಿವೆ ಎಂದು ಅಭಿಪ್ರಾಯ ಪಡುತ್ತಾರೆ. ಬ್ರಾಹ್ಮಣರ ಮೇಲರಿಮೆಗೆ ಕಾರಣವಾಗಿದ್ದು ಅವರು ನಿರ್ವಹಿಸುತ್ತಿದ್ದ ಪೂಜಾಕಾರ್ಯಗಳು ಅದಕ್ಕಿಂತ ಮುಖ್ಯ ವಾಗಿ ಕಾಲಮಾನವನ್ನು ಗ್ರಹಿಸುವಲ್ಲಿ ವಲಸಿಗರಾದ ಬ್ರಾಹ್ಮಣರು ಬುಡಕಟ್ಟುಗಳಿಗಿಂತ ಮುಂದಿದ್ದರು. ಇದರಿಂದ ಹೆಚ್ಚಿದ ಬ್ರಾಹ್ಮಣರ ಸ್ಥಾನಮಾನವು ಕಾಲಾನುಕ್ರಮದಲ್ಲಿ ಗಟ್ಟಿಗೊಂಡಿತು. ಇದರಿಂದಾಗಿಯೇ ಬ್ರಾಹ್ಮಣರು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಹೆಚ್ಚು ಅಧಿಕಾರವನ್ನು ಪಡೆದುಕೊಂಡರು.

ಚರಿತ್ರಕಾರ ಇರ್ಫಾನ್ ಹಬೀಬರು ಅಭಿಪ್ರಾಯ ಪಡುವಂತೆ, ಜಾತಿಪದ್ಧತಿಯನ್ನು ಭಾರತದಾದ್ಯಂತ ಹರಡುವಲ್ಲಿ ಬ್ರಾಹ್ಮಣರು ವಹಿಸಿದ ಮಹತ್ವದ ಪಾತ್ರವನ್ನು ಯಾರೂ ಅಲ್ಲಗಳೆಯುವುದಿಲ್ಲ. ಬ್ರಾಹ್ಮಣರು ಜಾತಿ ವ್ಯವಸ್ಥೆ ಮತ್ತು ಧರ್ಮವನ್ನು ಪರಸ್ಪರ ಮೇಳೈಸಿದರು. ಇರ್ಫಾನ್ ಹಬೀಬರ ಈ ತಿಳುವಳಿಕೆಯನ್ನು ಸ್ವಲ್ಪ ವಿಸ್ತರಿಸಿಕೊಳ್ಳಲು ಪ್ರಯತ್ನಿಸಿದರೆ ಬ್ರಾಹ್ಮಣ ಧರ್ಮವು ಮತಾಂತರಗೊಳಿಸುವ ಬಗೆಯು ಅರ್ಥವಾಗುತ್ತದೆ. ನಿರಂತರವಾಗಿ ಭಾರತೀಯ ಬುಡಕಟ್ಟುಗಳ ಮೇಲೆ ಭೌತಿಕ, ಬೌದ್ಧಿಕ, ಮಾನಸಿಕ ದಾಳಿಯನ್ನು ಮಾಡುತ್ತಾ ಕ್ರಮೇಣ ಬ್ರಾಹ್ಮಣ ಧರ್ಮ ಮತಾಂತರದ ಮೂಲಕ ತನ್ನ ಪ್ರಭುತ್ವವನ್ನು ಸಾಧಿಸಿತು. ಏಣಿ ಶ್ರೇಣಿಯಲ್ಲಿನ ತನ್ನ ಉನ್ನತ ಸ್ಥಾನಕ್ಕಾಗಿ ಜಾತಿವ್ಯವಸ್ಥೆಯನ್ನು ಹರಡುತ್ತಾ, ಪ್ರತ್ಯೇಕ ಅಸ್ತಿತ್ವಕ್ಕಾಗಿ ಬ್ರಾಹ್ಮಣ ಧರ್ಮವನ್ನು ಉಳಿಸಿಕೊಂಡಿತು. ಆದರೆ ನಿರಂತರವಾಗಿ ಮನುಧರ್ಮಶಾಸ್ತ್ರದ ತತ್ವಗಳನ್ನು ಜಾರಿಯಲ್ಲಿರುವಂತೆ ನೋಡಿಕೊಂಡಿತು. ಭಾರತೀಯ ಬುಡಕಟ್ಟುಗಳು ತಮ್ಮ ಮೂಲ ದೇವತೆಗಳನ್ನು ಬಿಟ್ಟುಕೊಟ್ಟು ಆರ್ಯದೇವತೆಗಳ ಮೊರೆ ಹೊಕ್ಕರು. ಬುಡಕಟ್ಟುಗಳ ದೇವತೆಗಳನ್ನು ಬಿಟ್ಟುಕೊಟ್ಟು ವೈದಿಕ ದೇವತೆಗಳಿಗೆ ಮೊರೆಹೋದದ್ದು ಬ್ರಾಹ್ಮಣ ಧರ್ಮದ ತಾತ್ವಿಕ ವಿಜಯವಾಗಿತ್ತು. ವೈದಿಕ ದೇವತೆಗಳನ್ನು ಒಪ್ಪಿಕೊಂಡವರು ಬ್ರಾಹ್ಮಣಧರ್ಮದ ಪ್ರಮುಖ ತತ್ವವಾದ ಏಣಿ ಶ್ರೇಣಿಯನ್ನು ತಾತ್ವಿಕವಾಗಿ ಆಚರಿಸತೊಡಗಿದರು.

ಬ್ರಾಹ್ಮಣ ಧರ್ಮದ ಉದ್ದೇಶ ಈಡೇರಿತು. ಅದು ತನ್ನ ಧರ್ಮದ ಸದಸ್ಯತ್ವವನ್ನು ಅಥವಾ ಹಕ್ಕುಗಳನ್ನು ಇತರರಿಗೆ ನೀಡದೆಯೇ ಅವರ ನಂಬಿಕೆಗಳನ್ನು ಮತಾಂತರಿಸಿತು. ಈ ನಂಬಿಕೆಗಳು ಮನುಧರ್ಮಶಾಸ್ತ್ರಕ್ಕೆ ಮತ್ತು ಬ್ರಾಹ್ಮಣ ಧರ್ಮಕ್ಕೆ ಅನುಗುಣವಾಗಿದ್ದವು ಎಂದು ಹೇಳ ಬೇಕಾಗಿಲ್ಲ. ಈ ತರ್ಕವನ್ನು ಸಮಕಾಲೀನ ಉದಾಹರಣೆಗಳೊಂದಿಗೆ ಇಟ್ಟು ನೋಡಬಹುದು.

ಭಾರತೀಯ ಜನತಾಪಕ್ಷದ ಮತ್ತು ಸಂಘಪರಿವಾರದ ಪ್ರಮುಖ ಸದಸ್ಯರಾದ ಗುಜರಾತಿನ ಮುಖ್ಯಮಂತ್ರಿ ನರೇಂದ್ರಮೋದಿ ಮತ್ತು ಒಂದುಕಾಲದಲ್ಲಿನ ಬಿಜೆಪಿ ಪ್ರಮುಖನಾಯಕಿ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿದ್ದ ಉಮಾಭಾರತಿಯವರ ಪ್ರಕರಣಗಳು ಮೇಲೆ ಹೇಳಿದ ಮತಾಂತರದ ಪ್ರಕಾರಕ್ಕೆ ಜ್ವಲಂತ ಉದಾಹರಣೆಗಳಾಗಿವೆ. ಏಕಕಾಲದಲ್ಲಿ ಅವರು ಅಸ್ತಿತ್ವದಲ್ಲಿರುವ ಜಾತಿ ವ್ಯವಸ್ಥೆಗೆ ಕಿಂಚಿತ್ತೂ ಊನ ಬಾರದಂತೆ ನೋಡಿಕೊಳ್ಳುತ್ತಾ ಬ್ರಾಹ್ಮಣಧರ್ಮದ ಪಾರಮ್ಯವನ್ನು ಎತ್ತಿಹಿಡಿಯುತ್ತಿದ್ದಾರೆ. ಸಂಘಪರಿವಾರ ಈ ಮತಾಂತರವನ್ನು ಅತ್ಯಂತ ಸೂಕ್ಷ್ಮವಾಗಿ ಸಾಧಿಸಿದೆ. ನಿಮ್ಮದು ಸನಾತನ ಬ್ರಾಹ್ಮಣ ಧರ್ಮದ ತತ್ವದ ಮೇಲೆ ನಿಂತ ಸಂಘಟನೆ ಎಂದು ಯಾರಾದರೂ ಕೇಳಿದರೆ ಸಂಘಪರಿವಾರದ ಉತ್ತರ ತಕ್ಷಣ ಸಿದ್ಧವಾಗಿರುತ್ತದೆ. ನರೇಂದ್ರಮೋದಿ ಕಲ್ಲುಹೊಡೆಯುವ ಜಾತಿಯಿಂದಲೂ, ಉಮಾಭಾರತಿ ಅಸ್ಪೃಶ್ಯ ಜಾತಿಯಿಂದ ಬಂದವರಾದರೂ ಕೂಡ ಅವರು ಮುಖ್ಯಮಂತ್ರಿಗಳಾಗಿಲ್ಲವೇ. ಇದರಲ್ಲಿ ಬ್ರಾಹ್ಮಣ ಧರ್ಮದ ಮೇಲರಿಮೆ ಎಲ್ಲಿ ಬಂತು? ಎಂಬ ಮರುಪ್ರಶ್ನೆಯನ್ನು ಬ್ರಾಹ್ಮಣ ಧರ್ಮಕೇಳುತ್ತದೆ. ಆದರೆ ತಾತ್ವಿಕವಾಗಿ ಮನುಧರ್ಮಶಾಸ್ತ್ರವನ್ನು ಬ್ರಾಹ್ಮಣ ಧರ್ಮದ ನೀತಿಗಳನ್ನು ಅನುಸರಿಸುವ ಅವರು ಬ್ರಾಹ್ಮಣ ಧರ್ಮದಲ್ಲಿ ಜನಿಸಿದವನ ಧಾರ್ಮಿಕ ಹಾಗೂ ಸಾಮಾಜಿಕ ಸ್ಥಾನಮಾನಗಳನ್ನು ಪಡೆಯದೆಯೇ ಬ್ರಾಹ್ಮಣಧರ್ಮವನ್ನು ಪರಿಪಾಲಿಸುತ್ತಾರೆ. ಆದುದರಿಂದಾಗಿಯೇ ಬ್ರಾಹ್ಮಣ ಧರ್ಮದ ಮತಾಂತರದ ವಿಧಾನವು ಅತ್ಯಂತ ಸೂಕ್ಷ್ಮವಾದ ಮರೆಮಾಚಿದ ಕಾರ್ಯಾಚರಣೆಯಾಗಿದೆ. ಅದನ್ನು ಅರ್ಥ ಮಾಡಿಕೊಳ್ಳಲು ವಿಭಿನ್ನವಾದ ಬೌದ್ಧಿಕ ಸಿದ್ಧತೆ ಬೇಕಾಗುತ್ತದೆ.

ಸನಾತನ ಬ್ರಾಹ್ಮಣಧರ್ಮದ ನೀತಿ ನಿಯಮಗಳನ್ನು ಉಲ್ಲಂಘಿಸಿ ಕೆಲವರು ತಾತ್ವಿಕವಾಗಿ ಬ್ರಾಹ್ಮಣೇತರರಾಗಿ ಮತಾಂತರ ಹೊಂದುತ್ತಾರೆ. ಉದಾಹರಣೆಗೆ ಕೆ.ವಿ. ಸುಬ್ಬಣ್ಣ, ಅನಂತಮೂರ್ತಿ, ಕಿ.ರಂ. ನಾಗರಾಜ, ಜಿ ರಾಮಕೃಷ್ಣ ಮೊದಲಾದವರು. ಇವರೆಲ್ಲಾ ಗಾಂಧಿ, ಮಾರ್ಕ್ಸ್, ಲೋಹಿಯಾರಿಂದ ಪ್ರಭಾವಕ್ಕೆ ಒಳಗಾಗಿ ಹುಟ್ಟಿನಿಂದ ಬ್ರಾಹ್ಮಣನಾದರೂ ತಾತ್ವಿಕವಾಗಿ ಅದರ ನೀತಿ ನಿಯಮಗಳನ್ನು ಉಲ್ಲಂಘಿಸಿದವರು ಅಥವಾ ಬ್ರಾಹ್ಮಣೇತರರಾಗಿ ಮತಾಂತರ ಹೊಂದಿದವರು. ಆದರೆ ಈ ಮತಾಂತರದಿಂದ ಸನಾತನ ಬ್ರಾಹ್ಮಣಧರ್ಮಕ್ಕೆ ಸಣ್ಣ ಧಕ್ಕೆಯಾಗಲೀ, ಆಘಾತವಾಗಲೀ ಉಂಟಾಗುವುದಿಲ್ಲ.

ಸನಾತನ ಬ್ರಾಹ್ಮಣ ಧರ್ಮದ ದಂಗೆಕೋರರಂತೆ ಕಾಣುವ ಇವರ ಆಶಯವೂ ಈ ಬಗೆಯ ಆಘಾತ ನೀಡುವುದೇ ಆಗಿರುತ್ತದೆ, ಆದರೆ ಈಡೇರುವುದಿಲ್ಲ. ಬದಲಾಗಿ ಇವರು ಬ್ರಾಹ್ಮಣಧರ್ಮವನ್ನು ರಕ್ಷಿಸುವ ಕವಚ ಕುಂಡಲಗಳಂತೆ ಪರಿ ವರ್ತಿತರಾಗುವುದು ಚಾರಿತ್ರಿಕ ವ್ಯಂಗ್ಯವೇ ಸರಿ. ಏಕೆಂದರೆ ಯಾರಾದರೂ ಸನಾತನ ಬ್ರಾಹ್ಮಣಧರ್ಮವನ್ನು ಭಾರತದಲ್ಲಿ ಅದು ತನ್ನ ಮೇಲರಿಮೆಗಾಗಿ ನಡೆಸುತ್ತಿರುವ ಬುಡಮೇಲು ಚಟುವಟಿಕೆಗಳನ್ನು ಟೀಕಿಸಿದರೆಂದಿಟ್ಟುಕೊಳ್ಳಿ, ಅದು ಕೂಡಲೇ ಬ್ರಾಹ್ಮಣ ಧರ್ಮದ ದಂಗೆಕೋರರ ಉದಾಹರಣೆ ನೀಡತೊಡಗುತ್ತದೆ. "ನೋಡಿ ಇವರೂ ಬ್ರಾಹ್ಮಣರಲ್ಲವೇ, ಆದರೂ ಪ್ರಗತಿಪರವಾಗಿಲ್ಲವೇ?" ಅದುದರಿಂದ ಜಾತಿಯ ಆಧಾರದ ಮೇಲೆ ಟೀಕಿಸುವುದು ತಪ್ಪು ಎಂಬ ತರ್ಕ ಮುಂದಿಟ್ಟು ಸನಾತನ ಬ್ರಾಹ್ಮಣಧರ್ಮದ ವಿರುದ್ಧ ದನಿಯೆತ್ತದಂತೆ ಟೀಕಾಕಾರರ ಬಾಯಿ ಮುಚ್ಚಿಸಿಬಿಡುತ್ತದೆ. ಇದರಿಂದಾಗಿಯೇ ಬ್ರಾಹ್ಮಣಧರ್ಮ ದೀರ್ಘಕಾಲ ತನ್ನ ಅಧಿಕಾರ ಮತ್ತು ಅಸ್ತಿತ್ವಕ್ಕೆ ಕಿಂಚಿತ್ತೂ ಧಕ್ಕೆಯಾಗದಂತೆ ತನ್ನನ್ನು ತಾನು ರಕ್ಷಿಸಿಕೊಂಡಿದೆ. ತತ್ವಶಾಸ್ತ್ರಜ್ಞ ನೀಷೆ ಹೇಳುವ ಸೂಪರ್ ಮ್ಯಾನ್ ಕಲ್ಪನೆಗೆ ಅನುಗುಣವಾಗಿ ತನ್ನನ್ನು ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದೆ. □

ಸನಾತನ ಬ್ರಾಹ್ಮಣಧರ್ಮದ ನೀತಿ ನಿಯಮಗಳನ್ನು ಉಲ್ಲಂಘಿಸಿ ಕೆಲವರು ತಾತ್ವಿಕವಾಗಿ ಬ್ರಾಹ್ಮಣೇತರರಾಗಿ ಮತಾಂತರ ಹೊಂದುತ್ತಾರೆ. ಉದಾಹರಣೆಗೆ ಕೆ.ವಿ. ಸುಬ್ಬಣ್ಣ, ಅನಂತಮೂರ್ತಿ, ಕಿ.ರಂ. ನಾಗರಾಜ, ಜಿ ರಾಮಕೃಷ್ಣ ಮೊದಲಾದವರು. ಇವರೆಲ್ಲಾ ಗಾಂಧಿ, ಮಾರ್ಕ್ಸ್, ಲೋಹಿಯಾರಿಂದ ಪ್ರಭಾವಕ್ಕೆ ಒಳಗಾಗಿ ಹುಟ್ಟಿನಿಂದ ಬ್ರಾಹ್ಮಣನಾದರೂ ತಾತ್ವಿಕವಾಗಿ ಅದರ ನೀತಿ ನೇಮಗಳನ್ನು ಉಲ್ಲಂಘಿಸಿದವರು ಅಥವಾ ಬ್ರಾಹ್ಮಣೇತರರಾಗಿ ಮತಾಂತರ ಹೊಂದಿದವರು. ಆದರೆ ಈ ಮತಾಂತರದಿಂದ ಸನಾತನ ಬ್ರಾಹ್ಮಣ ಧರ್ಮಕ್ಕೆ ಸಣ್ಣ ಧಕ್ಕೆಯಾಗಲೀ, ಆಘಾತವಾಗಲೀ ಉಂಟಾಗುವುದಿಲ್ಲ. ಸನಾತನ ಬ್ರಾಹ್ಮಣ ಧರ್ಮದ ದಂಗೆ ಕೋರರಂತೆ ಕಾಣುವ ಇವರ ಆಶಯವೂ ಈ ಬಗೆಯ ಆಘಾತ ನೀಡುವುದೇ ಆಗಿರುತ್ತದೆ, ಆದರೆ ಈಡೇರುವುದಿಲ್ಲ. ಬದಲಾಗಿ ಇವರು ಬ್ರಾಹ್ಮಣಧರ್ಮವನ್ನು ರಕ್ಷಿಸುವ ಕವಚಕುಂಡಲಗಳಂತೆ ಪರಿವರ್ತಿತರಾಗುವುದು ಚಾರಿತ್ರಿಕ ವ್ಯಂಗ್ಯವೇ ಸರಿ.

ನೊಯ್ಡಾ: ಬಡ ಜನರನ್ನು ಕಾಡಿದ ನರಭಕ್ಷಕ

ಪಶ್ಚಿಮಬಂಗಾಳದ ಸಿಂಗೂರ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಟಾಟಾ ಸಣ್ಣ ಕಾರುಗಳ ಉತ್ಪಾದನ ಘಟಕಕ್ಕೆ ಕೃಷಿಭೂಮಿ ಸ್ವಾದೀನ ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿಯ ಜೀವಭಯದಿಂದ ಈ ದೇಶದ ರಾಷ್ಟ್ರಪತಿ, ಪ್ರಧಾನಮಂತ್ರಿ, ವಿರೋಧ ಪಕ್ಷದ ನಾಯಕ ಎಲ್.ಕೆ. ಅಡ್ವಾಣಿ ಮುಂತಾದ ಘಟಾನುಘಟಿ ರಾಜಕೀಯ ದಿಗ್ಗಜರು ತಲೆಕೆಡಿಸಿಕೊಂಡು ಉಪವಾಸ ಅಂತ್ಯಗೊಳಿಸಿದರು. ಆದರೆ ಹತ್ತಾರು ಮಕ್ಕಳ ಮಾರಣ ಹೋಮ ನಡೆದರೂ ಅಲ್ಲಿಯ ಮುಖ್ಯಮಂತ್ರಿ, ಪ್ರಧಾನಮಂತ್ರಿ, ರಾಷ್ಟ್ರಪತಿ ಹಾಗೆ ಇನ್ನೂ ಅನೇಕ ಸಚಿವರು ಅಧಿಕಾರದ ಆಸೆಯಿಂದ ಆ ನಗರಕ್ಕೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತೇವೆ ಎಂಬ ಭಯದಿಂದ ಇಣುಕಿ ನೋಡದಿರುವುದು ಈ ದೇಶದ ದುರಂತ, ರಾಜಕಾರಣಿಗಳ ಶ್ರೀಮಂತರ ಜೀವನಕ್ಕೆ ಮಾತ್ರ ಮೌಲ್ಯ ಬಡವರ ಜೀವಕ್ಕೆ ಮೌಲ್ಯವಿಲ್ಲವೆ?

ಡಾ॥ ಜೆ. ರಾಜು
ಗುಂಡಾಪುರ

NOIDA ಎಂದರೆ New oklo industrial development Authority

ಈ ನಗರವು ಭಾರತದ ರಾಜಧಾನಿಯಾದ ದೆಹಲಿ ನಗರಕ್ಕೆ ಸಮೀಪದಲ್ಲಿದೆ. ದೆಹಲಿಯಿಂದ ೨೨ ಕಿ.ಮೀ. ದೂರದಲ್ಲಿರುವ ದೆಹಲಿಯ ಮಯೂರ್ ವಿಹಾರ್ ಬಡಾವಣೆಗೆ ಹೊಂದಿಕೊಂಡಿದ್ದರೂ ಇದರ ಮೂಲ ರಾಜ್ಯ ಉತ್ತರಪ್ರದೇಶ. ಸ್ವತಂತ್ರ ನಂತರ ಭಾರತದಲ್ಲಿ ರಾಜಕೀಯ ಕಪಿಮುಷ್ಠಿಯನ್ನು ತನ್ನದಾಗಿಸಿಕೊಳ್ಳುತ್ತಾ ಬಂದ ಅನೇಕ ನಾಯಕರು ಉತ್ತರಪ್ರದೇಶದ ರಾಜಕಾರಣಿಗಳೆ ಉದಾಹರಣೆಗೆ ನೆಹರು, ಇಂದಿಗಾಂಧಿ, ರಾಜೀವ್‌ಗಾಂಧಿ, ರಾಜನಾಥ ಸಿಂಗ್, ಮುಲಾಯಂಸಿಂಗ್‌ಯಾದವ್, ಮಾಯಾವತಿ ಮುಂತಾದವರಿಂದ ಹಿಡಿದು ಇಂದಿನ ಯುವರಾಜಕಾರಣಿ ರಾಹುಲ್‌ಗಾಂಧಿಯವರೆವಿಗೂ ತಮ್ಮ ರಾಜಕೀಯ ಛಾಪನ್ನು ಮೂಡಿಸುತ್ತಾ ಬಂದ ಈ ರಾಜ್ಯದ ಜನ ಇಂದು ಬೆಚ್ಚಿ ಬೀಳುವಂತಹ ಅಲ್ಲೋಲ ಕಲ್ಲೋಲದ ಘಟನೆ ನೊಯ್ಡಾ ನಗರದಲ್ಲಿ ನಡೆದಿದೆ.

ನೊಯ್ಡಾ ಎಂಬ ನಗರವು Planing City. ಇಲ್ಲಿ ದೆಹಲಿಯ ಬಹುತೇಕ ಶ್ರೀಮಂತರು ಈ ನಗರದಲ್ಲಿ ವಾಸಿಸುತ್ತಾರೆ. ಸುಮಾರು ೪೬ ಸೆಕ್ಟರ್‌ಗಳನ್ನು ಹೊಂದಿದೆ. ಒಂದೊಂದು ಸೆಕ್ಟರ್‌ನಲ್ಲಿ ಕೂಡ ಉದ್ಯಾನವನ, ಆಟದ ಮೈದಾನ, ವ್ಯಾಪರ ಮಳಿಗೆಗಳನ್ನು ನಿರ್ಮಿಸಿದ್ದಾರೆ. ಹಾಗೂ ಪ್ರತಿಷ್ಠಿತ ಡೆಲ್ಲಿ ಪಬ್ಲಿಕ್ ಸ್ಕೂಲ್ ಒಳಗೊಂಡಿದೆ. ಈ ಶಾಲೆಯಲ್ಲಿ ದೆಹಲಿಯ ಆಗರ್ಭ ಶ್ರೀಮಂತರು, ಸಚಿವರು, ಶಾಸಕರು, ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ಮಕ್ಕಳು ಕೂಡ ವ್ಯಾಸಂಗ ಮಾಡುತ್ತಿದ್ದಾರೆ. ಇಂತಹ ಈ ನಗರದಲ್ಲಿ ನೊಂದವರ ಒಡಲುರಿಯಲ್ಲಿ ಬೆಂದು ಹೊಗೆಯಾಗುತ್ತಿದೆ. ನೊಯ್ಡಾ ಎಂಬ ಮಾಯಾ ನಗರ. ಯಾರೋ ಒಬ್ಬ ಶ್ರೀಮಂತರ ಮಗು ಕಾಣೆಯಾದರೆ ದೇಶದ್ಯಾದಂತ ಪತ್ರಿಕೆಗಳ ಮುಖ ಪುಟದಲ್ಲಿ ದೂರದರ್ಶನದಲ್ಲಿ ಸರ್ಕಾರದ ಸದನದಲ್ಲಿ ಚರ್ಚೆಗೊಳಪಡುತ್ತದೆ. ಆದರೆ ಸತತವಾಗಿ ಎರಡು ವರ್ಷಗಳಿಂದಲೂ ನೊಯ್ಡಾದ ನಿತಾರಿ ಎಂಬ ಗ್ರಾಮದಲ್ಲಿ ನಲವತ್ತಕ್ಕೂ (೪೦) ಹೆಚ್ಚು ಮಕ್ಕಳ ಅಪಹರಣವಾಗಿದ್ದರೂ ಈ ದೇಶದ ಯಾವೊಬ್ಬ ರಾಜಕಾರಣಿ ಅಥವಾ ಅಧಿಕಾರಿ ತಲೆಕೆಡಿಸಿಕೊಳ್ಳಲೇ ಇಲ್ಲ. ಇದಕ್ಕೆ ಕಾರಣ ಅಧಿಕಾರಿಗಳ ಬೇಜವಬ್ದಾರಿತನವೂ ಅಥವಾ ರಾಜಕಾರಣೀಗಳ ಕೈವಾಡವೊ ತಿಳಿಯದಾಗಿದೆ. ನಿತಾರಿ ಗ್ರಾಮದಲ್ಲಿ ಬಡ ಹಾಗೂ ಮಧ್ಯಮ ವರ್ಗದ ಜನರೆ ಹೆಚ್ಚಾಗಿ ನೆಲಸಿದ್ದಾರೆ. ಅವರು ಕೂಡ ಜೀವನೋಪಾಯಕ್ಕಾಗಿ ಬಿಹಾರ, ಪಶ್ಚಿಮಬಂಗಾಳ, ಒರಿಸ್ಸಾ ಮತ್ತು ನೇಪಾಳದಿಂದ ಬಂದು ಜೀವನ ಮಾಡುತ್ತಿರುವ ಬಡ ಜನರು.

ಮಕ್ಕಳ ಅಪಹರಣದ ಕೇಂದ್ರಬಿಂದು ಮೋಹಿಂದರ್ ಸಿಂಗ್ ಮತ್ತು ಸುರೇಂದ್ರ ಕೋಲಿ ಅಪಹರಣವಾದ ೩೮ ಮಕ್ಕಳಲ್ಲಿ ಮೂರರಿಂದ ಹನ್ನೊಂದು ವರ್ಷದ ಹೆಚ್ಚು ಬಾಲಕಿಯರು ಕಳೆದು ೨೧

ತಿಂಗಳಲ್ಲಿ ಕಾಣೆಯಾಗಿದ್ದಾರೆ. ಇವೆಲ್ಲದರ ನಡುವೆ ಹಲವು ಅನು ಮಾನಗಳು ಜನರು ಮತ್ತು ಪೋಲೀಸರನ್ನು ಕಾಡತೊಡಗಿವೆ. ಮಕ್ಕ ಳನ್ನು ಅಪಹರಿಸಿ ಲೈಂಗಿಕ ಕುರುಕುಳವನ್ನು ನೀಡಿ ನಂತರ ಅವುಗಳ ಕೆಲವು ಅಂಗಾಂಗಗಳನ್ನು ಹಣಕ್ಕೆ ಮಾರಿ ಉಳಿದ ಕೆಲವು ಮಾಂಸದ ತುಂಡುಗಳನ್ನು ತಿನ್ನುತ್ತಿದ್ದ ಈ ನರಭಕ್ಷಕರಿಗೆ ನಾವು ಏನೆಂದು ಕರಯೋಣ ಹಿಂದೆ ತೇತ್ರಾಯುಗ ಮತ್ತು ದ್ವಾಪರಯುಗದಲ್ಲಿ ರಾಕ್ಷಸರು ಇದ್ದರು ಎಂಬುದನ್ನು ಕಾವ್ಯಗಳಲ್ಲಿ ಕಥೆಗಳಲ್ಲಿ ರಾಮಾ ಯಣ, ಮಹಾಭಾರತದಂತಹ ಮಹಾಕಾವ್ಯಗಳಲ್ಲಿ ಕೇಳಿ ದ್ದೆವು. ಆದರೆ ಇಂದು ಕೂಡ ನಮ್ಮ ನಿಮ್ಮೆಲ್ಲರ ನಡುವೆ ಇಂತಹ ನರಭಕ್ಷಕ ರಾಕ್ಷಸರು ಬದುಕುತ್ತಿದ್ದಾರೆ ಎಂಬುದು ಈಗ ತಿಳಿದಂತಾಗಿದೆ.

ಇಂದು ಪೋಲೀಸರು ನರಭಕ್ಷಕರನ್ನು ಹಿಡಿದು ಒಂದೊಂದೇ ವಿಚಾರವನ್ನು ಹೊರಗೆಳೆದಾಗ ರಾಜಕಾರಣಿ ಗಳು ಕೂಡ ಈ ಲೈಂಗಿಕ ಹಗರಣದಲ್ಲಿ ಬಾಗಿಯಾಗಿರು ವುದು ಸಂಶಯಾಸ್ಪದ ಸಂಗತಿ, ಎಷ್ಟೋ ಭಾರಿ ಮಕ್ಕಳ ಕಾಣೆಯ ಬಗ್ಗೆ ದೂರು ನೀಡಿದ್ದರೂ ಪೋಲೀಸರು ಕ್ರಮ ತೆಗೆದುಕೊಳ್ಳದಿರಲು ಕಾರಣವೇನು? ಹುಡುಕಲು ಪ್ರಯತ್ನ ಮಾಡದಿರುವ ಗುಟ್ಟಾದರೂ ಏನು? ಇಲ್ಲಿಯ ಜನ ಆರ್ಥಿ ಕವಾಗಿ, ಸಾಮಾಜಿಕವಾಗಿ ಹಿಂದುಳಿದಿರುವುದೇ ಪ್ರಮುಖ ಕಾರಣವೇ ದೇಶದ ಅತ್ಯಂತ ಬೀಭತ್ಸ ಕೃತ್ಯ ಎಂದು ಬಣ್ಣಿ ಸಲಾಗಿರುವ ಇಲ್ಲಿಯ ಮಕ್ಕಳ ಸರಣಿ ಕೊಲೆ ಪ್ರಕರಣ ಇಡಿ ದೇಶದ ಜನರನ್ನೇ ತಲ್ಲಣಗೊಳಿಸಿದೆ.

ಪಶ್ಚಿಮಬಂಗಾಳದ ಸಿಂಗೂರ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಟಾಟಾ ಸಣ್ಣ ಕಾರುಗಳ ಉತ್ಪಾದನ ಘಟಕಕ್ಕೆ ಕೃಷಿಭೂಮಿ ಸ್ವಾದೀನ ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿಯ ಜೀವಭಯದಿಂದ ಈ ದೇಶದ ರಾಷ್ಟ್ರಪತಿ, ಪ್ರಧಾನಮಂತ್ರಿ, ವಿರೋಧ ಪಕ್ಷದ ನಾಯಕ ಎಲ್.ಕೆ. ಅಡ್ವಾಣಿ ಮುಂತಾದ ಘಟಾನುಘಟಿ ರಾಜಕೀಯ ದಿಗ್ಗಜರು ತಲೆಕೆಡಿಸಿಕೊಂಡು ಉಪವಾಸಾಂತ್ಯಗೊಳಿಸಿದರು ಆದರೆ ಹತ್ತಾರು ಮಕ್ಕಳ ಮಾರಣ ಹೋಮ ನಡೆದರೂ ಅಲ್ಲಿಯ ಮುಖ್ಯಮಂತ್ರಿ, ಪ್ರಧಾನಮಂತ್ರಿ, ರಾಷ್ಟ್ರಪತಿ ಹಾಗೆ ಇನ್ನೂ ಅನೇಕ ಸಚಿವರು ಅಧಿಕಾರದ ಆಸೆಯಿಂದ ಆ ನಗರಕ್ಕೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತೇವೆ ಎಂಬ ಭಯದಿಂದ ಇಣುಕ ನೋಡದಿರುವುದು ಈ ದೇಶದ ಜನರ ಬಹುದೊಡ್ಡ ದುರಂತ, ರಾಜಕಾರಣಿಗಳ ಶ್ರೀಮಂತರ ಜೀವನಕ್ಕೆ ಮಾತ್ರ ಮೌಲ್ಯ ಬಡವರ ಜೀವಕ್ಕೆ ಮೌಲ್ಯವಿಲ್ಲವೆ.

ರಾಜಕಾರಣಕ್ಕಾಗಿ ಈ ವಿಷಯವನ್ನು ಬಳಸಿಕೊಳ್ಳು ತ್ತಿರುವ ಈ ಜನರು ಹಿಂದೆಂದು ಕೂಡ ಈ ಅಪಹರಣದ ಚಕಾರವೆತ್ತಿರಲಿಲ್ಲ ಪೋಲೀಸ್ ಇಲಾಖೆ ಸುದಾರಣೆಗೆ ರಾಜ್ಯ ಸರ್ಕಾರ ಒಲವು ತೋರಿದ್ದರೆ ನಿತಾರಿ ಕೊಲೆ ಪ್ರಕ ರಣ ತಡಗಟ್ಟಬಹುದಿತ್ತೇನೊ ಈಗ ಇಬ್ಬರು ಎಸ್.ಪಿ. ಗಳು ಇನ್ಸ್‌ಪೆಕ್ಟರ್ ಕೆಲವು ಪೋಲೀಸರ ಮೇಲೆ ಕ್ರಮ ಜರುಗಿಸಿದ್ದಾರೆ. ಇದರಿಂದಾಗುವ ಪ್ರಯೋಜನವಾದರು ಏನು? ತೃತೀಯ ರಂಗದ ಪ್ರಧಾನಮಂತ್ರಿಯ ಅಭ್ಯರ್ಥಿ ಯೆಂದೆ ಬಿಂಬಿಸಿಕೊಳ್ಳುತ್ತಿದ್ದ ಮುಲಾಯಂಸಿಂಗ್ ಯಾದವ್ ಎಂಬ ಗೋಮುಖ ವ್ಯಾಘ್ರನ ಆಡಳಿತದಲ್ಲಿ ನಡೆದ ಈ ಘಟನೆ ಈ ದೇಶದ ಮುಖಕ್ಕೊಂದು ಕಪ್ಪು ಚುಕ್ಕಿ ಹತ್ಯೆಯಾದ ಮಕ್ಕಳ ತಲೆದಂಡವಾಗಿ ಎರಡು ಲಕ್ಷ ಮತ್ತು ಶಿ ಲಕ್ಷಗಳ ಪರಿಹಾರ ಧನವನ್ನು ನೀಡಿ ಕಣ್ಣೊ ರೆಸುವ ಕೆಲಸ ಭರದಿಂದ ಸಾಗಿದೆ. ಸುರೇಂದ್ರಕೋಲಿಗೆ ನಡೆಸಿದ ನಾರ್ಕೊ ಅನಾಲಿಷಿಸ್ ಪರಿಕ್ಷೆಯ ವೇಳೆ ಪ್ರಕ ರಣ ನಡೆದ ಮನೆಯಲ್ಲಿ ಮಕ್ಕಳಿಂದ ಲೈಂಗಿಕ ಸುಖ ಪಡೆ ಯಲು ಗಣ್ಯ ವ್ಯಕ್ತಿಗಳು ಹಾಗೂ ಪೊಲೀಸರು ಬರುತ್ತಿ ದ್ದರು, ಎನ್ನುವುದು ದಿಗ್ಭ್ರಮೆಗೊಳಿಸಿದೆ.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದ ಈ ಜನರ ನೋವಿನ ಬೇಗೆಯನ್ನು ತಣಿಸುವು ದಾದರೂ ಹೇಗೆ? ಮೋಹಿಂದರ್‌ಸಿಂಗ್ ಪಂದೇರ್‌ಗೆ ಪಂದೇರ್ ಸಮುದಾಯ ಸಾಮಾಜಿಕ ಬಹಿಷ್ಕಾರ ಹಾಕಿದೆ. ಆದರೆ ಇವನಂತಹ ಎಷ್ಟೋ ವ್ಯಕ್ತಿಗಳು ಜನರ ಕಣ್ಣಿಗೆ ಕಾಣದೆ ಇರುವವರು ಅದೆಷ್ಟೋ ಜನ ಈ ದೇಶದಲ್ಲಿ ಇಂದೆಂದೂ ಕಾಣದ ಕೇಳರಿಯದ ಈ ಘಟನೆ ಹಿರೋ ಷಿಮಾ, ಮತ್ತು ನಾಗಸಾಕಿಯ ಮೇಲೆ ನಡೆದ ಅಣು ಬಾಂಬು ದಾಳಿಯ ಘಟನೆಗಿಂತ ಘೋರ ಕೃತ್ಯವಾಗಿದೆ. ಕೆಲವರ ಮಾನಸಿಕ ವೈಪಲ್ಯವೋ, ಜೀವನದ ದೌರ್ಬ ಲ್ಯವೋ ತಮ್ಮ ಸ್ವಾರ್ಥ ಬದುಕಿಗಾಗಿ ಸಮಾಜ ಜನರನ್ನು ಕಾಡುವ ಮತ್ತು ಆ ಜನರ ರಕ್ತವನ್ನು ಹೀರುವ ಜಿಗಣೆ ಗಳಾಗಿ ಹೊರಹೊಮ್ಮುತ್ತಿರುವ ಇಂತಹ ಗೋಮುಖ ವ್ಯಾಘ್ರಗಳಿಗೆ ಪಾಠಕಲಿಸುವ ಕೆಲಸ ಶೀಘ್ರವಾಗಿ ನಡೆಯ ಬೇಕಿದೆ.

ನೊಯ್ಡಾ ಎಂಬ ಮಾಯಾನಗರಿಯಲ್ಲಿ ನಡೆದ ಈ ಘಟನೆ ವಿಶ್ವದ ಜನರನ್ನು ಬೆರಗುಗೊಳಿಸಿದೆ. ಈ ನಗರದಲ್ಲಿ ಅಥವಾ ಈ ಗ್ರಾಮದಲ್ಲಿ ಎಂದೂ ಕಂಡರಿಯದ, ಕೇಳರಿ ಯದ ಶ್ಮಶಾನ ಮೌನ ಆವರಿಸಿದೆ. ಮಕ್ಕಳು ಹಾಗೂ ಮಹಿಳೆಯರ ಹತ್ಯಕಾಂಡ ನಡೆದ ನಿತಾರಿಗ್ರಾಮ ಬಿಕೋ ಎನ್ನುತ್ತಿದೆ. ಮಕ್ಕಳ ಅಪಹರಣ ಹಾಗೂ ಹತ್ಯೆಯಿಂದ ಭಯಗೊಂಡಿರುವ ಜನರು ಗ್ರಾಮವನ್ನೇ ಕೊರೆಯುತ್ತಿ ದ್ದಾರೆ. ಸಣ್ಣಪುಟ್ಟ ವಿಚಾರಗಳಿಗೆ ದೇಶದ್ಯಾದಂತ ಚಳುವಳಿ ಯನ್ನು ಮಾಡುವ ಮೂರ್ಖ ರಾಜಕಾರಣಿಳು, ವಿವಿಧ ಸಂಘಟನೆಗಳು ಆರ್.ಎಸ್.ಎಸ್. ಸಂಘಟನೆಗಳು, ವಿಶ್ವ ಹಿಂದೂ ಪರಿಷತ್, ಮಹಿಳಾ ಸಂಘಟನೆಗಳು ಎಲ್ಲಿ ಕಣ್ಮರೆ ಯಾಗಿದೆ. ಇದನ್ನು ಗಮನಿಸಿದರೆ ಸಣ್ಣ ಪುಟ್ಟ ವಿಚಾರ ಗಳಿಗೆ ರೈಲು ತಡೆ, ರಸ್ತೆತಡೆ, ರಾಜಕಾರಣಿಗಳ ಘೇರಾವ್ ಇವೆಲ್ಲವೂ ಹಣದ ಆಮಿಷಕ್ಕಾಗಿ ಅಧಿಕಾರದ ಆಸೆಗಾಗಿ, ಅಧಿಕಾರದ ಗದ್ದುಗೆಗಾಗಿ ಇವರು ನಡೆಸುವ ಸಂಚು ಎಂದರೆ ತಪ್ಪಾಗಲಾರದು. ಸಂಘಟನೆಗಳು ಹೋರಾಟ ಗಳು, ಸಾಮಾಜಿಕ ಕಳಕಳಿಯನ್ನುಳ್ಳ ಇಂತಹ ವಿಚಾರ ಗಳನ್ನು ಧ್ವನಿಯೆತ್ತದೆ, ಮೌನವಾಗಿರುವುದು ಈ ದೇಶದ ಬಹುದೊಡ್ಡ ದುರಂತ.

ಇನ್ನಾದರು ಈ ದೇಶದ ಯಾವುದೇ ಮೂಲೆ ಯಲ್ಲೂ ಇಂತಹ ಘಟನೆ ಮತ್ತೊಮ್ಮೆ ಮರುಕಳಿಸದಂತೆ ಮುಂಜಾಗ್ರತೆ ವಹಿಸುವುದು. ಈ ದೇಶದ ಪ್ರತಿಯೊಬ್ಬ ನಾಗರೀಕನ ಕರ್ತವ್ಯ. ಬಂಧುಗಳೇ ಎಚ್ಚರದಿಂದಿರಿ ಈ ದೇಶದ ಪ್ರತಿಯೊಂದು ಹಳ್ಳಿಯಲ್ಲೂ ಮೋಹಿಂದರ್‌ಸಿಂಗ್ ಮತ್ತು ಸುರೇಂದ್ರಕೋಲಿಯಂತಹ ನರಭಕ್ಷಕ ಕಾಮುಕರಿರ ಬಹುದು. ಅಂತಹವರಿಗೆ ಅವಕಾಶ ಮಾಡಿಕೊಡಬೇಡಿ ಇಂದಾದರೂ ಎಚ್ಚತ್ತುಕೊಳ್ಳಿ, ಜನರ ಮತಗಳಿಂದ ಆರಿಸಿ ಬಂದ ಜನ ಪ್ರತಿನಿಧಿಗಳೇ ಇನ್ನು ಮುಂದಾದರು ಬಡ ವರ, ಹಿಂದುಳಿದವರ, ಸಾಮಾನ್ಯ ಜನರ ಕಷ್ಟಗಳನ್ನು ನಿವಾರಿಸಲು. ತೊಂದರೆಗಳನ್ನು ತಡೆಗಟ್ಟಲು ನಿಷ್ಠೆ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗು ತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆ ಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಗ್ಲೋಬಲ್ ದಲಿತ



ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಲ್ಲಿ ನಾನು ಇಳಿದಾಗ ಮುಂಜಾನೆ ೮ ಗಂಟೆಯಾಗಿತ್ತು. ವಿಮಾನ ನಿಲ್ಲುತ್ತಿರುವಾಗ ನನ್ನನ್ನು ಕರದೊಯ್ಯಲು ಬಿ. ಪ್ರವೀನ್ ಬರುವವನಿದ್ದ. ಆತನನ್ನು ಕುರಿತೇ ನನ್ನ ಮನಸ್ಸು ಯೋಚಿಸುತ್ತಿತ್ತು. ನನ್ನ ಲಗೇಜ್ ಹೊತ್ತು ಹೊರಬಂದಾಗ ಆತ ಅಲ್ಲಿ ಕಾಣಲಿಲ್ಲ. ನಾನು ಜನರತ್ತ ನೋಡುತ್ತಿದ್ದಂತೆ ಮುಗ್ಧ ಸಂತ ಕ್ಲಾಸ್‌ನಂತೆ ಅಲ್ಲೊಬ್ಬಳು ಕೈಯಲ್ಲಿ ಹಲಗೆಯೊಂದನ್ನು ಹಿಡಿದು ನಿಂತಿದ್ದರ ಕಡೆ ನನ್ನ ಗಮನ ಹೋಯಿತು.

ಆಕೆಯ ಕೂದಲು ಕೆಂಚಗಿದ್ದು, ಉದ್ದ ಕೋಟನ್ನು ತೊಟ್ಟು, ಸೊಂಟ ಪಟ್ಟಿಯನ್ನು ಧರಿಸಿದ್ದ ಆಕೆಯ ಕೈಯಲ್ಲಿ ಬ್ಯಾಗೊಂದು ಇತ್ತು. ಆಕೆ ಹಿಡಿದಿದ್ದ ಹಲಗೆಯ ಮೇಲೆ ನನ್ನ ಹೆಸರಿತ್ತು. ದೂರದಿಂದಲೇ ನಾನು ಆಕೆಯತ್ತ ಕೈ ಯಾಡಿಸುತ್ತಾ ಆಕೆ ಇದ್ದ ಕಡೆಗೆ ನಡೆದೆ. ಆಕೆ ನನ್ನ ಕೈಯ ಕುಲುಕುತ್ತಾ ತನ್ನ ಹೆಸರು "ಆ್ಯಂಡ್ರಿಯಾ" ಎಂದಳು. ಅಚ್ಚರಿಯೆಂಬಂತೆ ಸೌಂದರ್ಯವತಿಯಾದ ಆಕೆ ಚುರುಕಾಗಿದ್ದು ನನ್ನನ್ನು ಪಕ್ಕದ ರೈಲ್ವೆ ನಿಲ್ದಾಣಕ್ಕೆ ಕರೆದೋಯ್ದು, ಅಲ್ಲಿಂದ ಪ್ರವೀಣ್ ಮನೆಗೆ ಬಂದು ಮುಟ್ಟಿದೆವು. ಬೃಹತ್ ಯೂರೋಪಿಯನ್ ಬ್ಯಾಂಕ್‌ವೊಂದರಲ್ಲಿ ಉದ್ಯೋಗಿಯಾಗಿದ್ದ ಪ್ರವೀಣ್ ಮನೆಯಲ್ಲೇ ಉಳಿದು ಮುಖ್ಯವಾದ ಕೆಲಸವೊಂದನ್ನು ಮುಗಿಸಬೇಕಾಗಿತ್ತು. ಆತನ ಗೈರುಹಾಜರಿಯಲ್ಲಿ ಆಂಡ್ರಿಯಾ ಬ್ರೆಡಿಲ್ ನನ್ನ ಆತಿಥ್ಯಕ್ಕೆ ಬಂದಿದ್ದಳು.

ಸಂಜೆ ವೇಳೆಗೆ ಪ್ರವೀಣ್ ಕಛೇರಿಯಿಂದ ವಾಪಸ್ಸಾದ. ಆಂಡ್ರಿಯಾ ನಮ್ಮೊಡನೆ ಊಟಕ್ಕೆ ಸೇರಿಕೊಂಡಳು. ಬೌದ್ಧ ಧರ್ಮದ ಬಗ್ಗೆ ಅಧಿಕ ಪಾಂಡಿತ್ಯವನ್ನು ಪಡೆದಿದ್ದ ಪ್ರವೀಣ್‌ನ ಬಗ್ಗೆ ನನ್ನಗೆ ಆಶ್ಚರ್ಯವಾಯಿತು. ಐಐಟಿಯ ವಿದ್ಯಾರ್ಥಿಯಾಗಿದ್ದ ಈತ ಯಶಸ್ವಿಯಾದ ಉದ್ಯೋಗಿಯಾಗಿದ್ದ. ಇದರೊಡನೆ ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಸಿದ್ಧಾಂತದ ಬಗೆಗಿನ ಆತನ ಜ್ಞಾನ ಯಾರನ್ನು ಚಕಿತಗೊಳಿಸುವಂಥದ್ದು. ಒಟ್ಟಾರೆಯಲ್ಲಿ ಹೇಳುವುದಾದರೆ ಆತ ದಲಿತ ಚಳುವಳಿಯ ನೆನಪುಗಳ ಕಣಜವಾಗಿದ್ದ.

ಆತ ಆಂಡ್ರಿಯಾಳ ಬಗ್ಗೆ ನನ್ನಲ್ಲಿ ಹೆಚ್ಚು ಮಾತನಾಡಿದ. ಆಕೆ ಜರ್ಮನಿಯವಳಾಗಿದ್ದು ಯಶಸ್ಸಿನ ಭವಿಷ್ಯ ಆಕೆಗೆ ಕಾದಿತ್ತು. ಆಕೆ ಫ್ರಾಂಕ್‌ಫರ್ಟ್ ನಿಲ್ದಾಣಕ್ಕೆ ಒಂದು ತಾಸು ಮೊದಲೇ ಬಂದಿದ್ದಳು.

ಅನಂತರದಲ್ಲಿ ಆಕೆ ನನಗೆ ತಿಳಿಸಿದ ಪ್ರಕಾರ ಸಮಾಜ ಸೇವೆಯಲ್ಲಿ ಡಿಪ್ಲೋಮ ಪಡೆಯುವ ಭಾಗವಾಗಿ ಆಕೆ ಭಾರತಕ್ಕೆ ಬಂದಿದ್ದಳು. ಅಲ್ಲಿ ಆಕೆ ದಲಿತರ ಸ್ಥಿತಿಗತಿಯನ್ನು ಕಂಡಿದ್ದಳು. ಆಕೆ ಪ್ರವೀಣ್ ಮತ್ತು ನನ್ನೊಡನೆ ಬಾನ್‌ಗೂ ಬಂದಿದ್ದಳು. ಮರುದಿನ ಆಕೆಗೆ ಸಂದರ್ಶನವಿದ್ದ ಕಾರಣ ಅದೇ ಸಂಜೆ ಆಕೆ ಫ್ರಾಂಕ್‌ಫರ್ಟ್‌ಗೆ ಹಿಂತಿರುಗಿದಳು. ನಮ್ಮ ಮಾತುಗಳನ್ನು ಆಕೆ ತಿಳಿದುಕೊಳ್ಳಲು ನಮ್ಮೊಡನೆ ಬಂದಿದ್ದಳು.

ಜರ್ಮನಿಯಲ್ಲಿನ ದಲಿತ ಭ್ರಾತೃತ್ವದ ನೆಟ್‌ವರ್ಕ್‌ನ ಆಹ್ವಾನದ ಮೇರೆಗೆ ನಾನು ಜರ್ಮನಿಗೆ ಹೋಗಿದ್ದು. ಬ್ರೆಡ್ ಫಾರ್ ದ ವರ್ಲ್ಡ್ ಸಂಘಟನೆಯು ೧೦ ದಿನಗಳ ನನ್ನ ಉಪನ್ಯಾಸವನ್ನು ಅಲ್ಲಿ ಸಂಘಟಿಸಿತ್ತು. (ಅಮೆರಿಕಾದಲ್ಲೂ ಅದೇ ತರದ ಸಂಘಟನೆಯೊಂದಿದೆ. ಆದರೆ ಇದು ಬೇರೆಯದ್ದೇ ಆಗಿದೆ).

ಜರ್ಮನಿಯ ಬ್ರೆಡ್ ಫಾರ್ ದ ವರ್ಲ್ಡ್ ಸಂಘಟನೆಯು ವಾರ್ಷಿಕವಾಗಿ ಭಾರತದ ಎನ್‌ಜಿಒಗಳಿಗೆ ಸುಮಾರು ೭ ಮಿಲಿಯನ್ ಯೂರೋ ಡಾಲರ್ ನೆರವನ್ನು ಒದಗಿಸುತ್ತಿದೆ. ಇದರಲ್ಲಿ ಅಧಿಕ ಹಣ ದಲಿತ ಎನ್‌ಜಿಒಗಳಿಗೆ ಹೋಗುತ್ತಿದೆ. ಜರ್ಮನಿಯಲ್ಲಿನ ದಲಿತ ಭ್ರಾತೃತ್ವದ ನೆಟ್‌ವರ್ಕ್ ತನ್ನ ವಾರ್ಷಿಕ ಸಮ್ಮೇಳನವನ್ನು ಡಿಸೆಂಬರ್ ೧ರಂದು ಬಾನ್‌ನಲ್ಲಿ ಏರ್ಪಡಿಸಿತ್ತು. ಈ ಸಲದ ಸಮ್ಮೇಳನದ ವಿಷಯ – ಬಾಬಾ ಸಾಹೇಬ್ ಡಾ. ಅಂಬೇಡ್ಕರ್‌ರವರು ಆರಂಭಿದ ಮತಾಂತರ ಚಳುವಳಿಯ ೫೦ವರ್ಷಗಳ ಆಚರಣೆಯೇ ಆಗಿತ್ತು. ಆಂಡ್ರಿಯಾ ಆ ಸಮ್ಮೇಳನವನ್ನು ಯಶಸ್ವಿಯಾಗಿಸಲು ತನ್ನ ನೆರವನ್ನು ನೀಡಿದ್ದಳು.

ಯಾವುದೇ ಮತೀಯವಾದ ಉದ್ದೇಶವಿಲ್ಲದ ಜರ್ಮನಿಯಲ್ಲಿನ ದಲಿತ ಭ್ರಾತೃತ್ವದ ನೆಟ್‌ವರ್ಕ್ ಮತ್ತು ಬ್ರೆಡ್ ಫಾರ್ ದ ವರ್ಲ್ಡ್ ಸಂಘಟನೆಯು ದಲಿತರ ವಿಮೋಚನೆಯಲ್ಲಿ ಮತಾಂತರದ ಪಾತ್ರವನ್ನು ಚರ್ಚಿಸಲು ಯೋಚಿಸಿತ್ತು.

ಡಿಸೆಂಬರ್ ಮೂರರಂದು ಸಮ್ಮೇಳನ ಮುಗಿದ್ದರಿಂದ ನಾನು ಅಲ್ಲೇ ಉಳಿದುಕೊಂಡು ಜರ್ಮನಿಯ ಮುಖ್ಯ ಜಾಗಗಳನ್ನು ನೋಡಲು ನಿರ್ಧರಿಸಿದ್ದೆ. ನಾನು ಪ್ರವಾಸದಲ್ಲಿ ತೊಡಗಿದಂತೆ ಆಂಡ್ರಿಯಾಳಂತೆ ಅನೇಕರು ದಲಿತರ ಸ್ಥಿತಿಗತಿಯನ್ನು ಚರ್ಚಿಸುತ್ತಿರುವುದನ್ನು ಕಂಡೆ. ಅವರೆಲ್ಲಾ ಕ್ರೈಸ್ತರಾದರೂ ಯಾರೂ ಸಹ ದಲಿತರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳಲು ಆಸಕ್ತಿ ಹೊಂದಿರಲಿಲ್ಲ ಎಂಬುದನ್ನಿಲ್ಲಿ ದಾಖಲಿಸಲೇಬೇಕಾಗಿದೆ.

ಅವರೆಲ್ಲಾ ಭಾರತದಲ್ಲಿನ ಹಸಿವನ್ನು ಹೊಗಲಾಡಿಸುವ ಹಾಗೂ ದಲಿತರ ವಿಮೋಚನೆಗೆ ನೆರವಾಗುವ ಬಗ್ಗೆ ಮಾತಾನಾಡುತ್ತಿದ್ದರು. ಬಾನ್ ವಿಶ್ವವಿದ್ಯಾಲಯದ ನನ್ನ ಉಪನ್ಯಾಸದ ಸಂದರ್ಭದಲ್ಲಿ ಅಲ್ಲಿನ ಹಲವಾರು ಮಂದಿ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರು ದಲಿತರ ಬಗ್ಗೆ ಸಾಕಷ್ಟು ತಿಳಿದಿದ್ದರು. ಜರ್ಮನಿಯ ರೇಡಿಯೋದಲ್ಲಿ ನಾನು ಸಂದರ್ಶನದಲ್ಲಿದ್ದಾಗ, ಅಲ್ಲಿ ಹಿಂದಿ ರೇಡಿಯೋ ಕಾರ್ಯಕ್ರಮ ಸೇವೆಯಲ್ಲಿದ್ದ ಅರ್ಧ ಡಜನ್ ಭಾರತೀಯರನ್ನು ಕಂಡು ನನಗೆ ಬಹಳಷ್ಟು ಆಶ್ಚರ್ಯವಾಯಿತು. ಅವರೂ ಸಹ ಮಹಾರಾಷ್ಟ್ರದಲ್ಲಿ ಇತ್ತೀಚಿನ ದಲಿತ ಪ್ರತಿರೋಧ'ವನ್ನು ಕಂಡು ದಂಗಾಗಿದ್ದರು. ಗೆಳೆಯ ಪ್ರವೀಣ್ ಹೇಳುವ ಪ್ರಕಾರ ಅದು ಬೌದ್ಧರ ಆಂದೋಲನವೇ ಆಗಿತ್ತು.

ಭಾರತೀಯರ ಜನಪ್ರಿಯ ಸಾರ್ವಜನಿಕ ಗ್ರಹಿಕೆಯಲ್ಲಿ ಜರ್ಮನಿಯವರು ಇತರ ಸಮಾಜಗಳಲ್ಲಿ ತೊಡಗುವುದರ ಬಗ್ಗೆ ಅರಿವು ಇಲ್ಲ. ಆದರೂ ಯೂರೋಪಿನಲ್ಲಿ 'ಇಂಡಾಲಜಿ' ಶಾಸ್ತ್ರ ಆರಂಭಿಸಿದವರಲ್ಲಿ ಜರ್ಮನಿಯವರೇ ಮೊದಲಿಗರಾಗಿದ್ದಾರೆ. ಈಗ ತುಂಬಾ ಬದಲಾಗಿದೆ.

ಜರ್ಮನಿಯ ರೇಡಿಯೋ ೧೭ ಭಾಷೆಗಳಲ್ಲಿ ಪ್ರಸಾರವಾಗುತ್ತಿದ್ದು, ಮುಂಜಾನೆ ಮತ್ತು ಸಂಜೆ ಅರ್ಧತಾಸಿನ ಹಿಂದೆ ಬುಲ್ಲೆಟಿನ್ ಪ್ರಸಾರವಾಗುತ್ತಿದೆ.

ಅಲ್ಲಿನ ಸಿಬ್ಬಂದಿಯೊಡನೆ ನಾನು ಮಾತುಕತೆಯಲ್ಲಿ ತೊಡಗಿದ್ದಾಗ, ಅವರೆಲ್ಲಾ ದಲಿತ ಸ್ಥಿತಿಗತಿ ಮತ್ತು ವಿಮೋಚನೆಗಾಗಿ ಅವರ ಹೋರಾಟದ ಬಗ್ಗೆ ಹೆಚ್ಚು ತಿಳಿದುಕೊಂಡಿರುವುದನ್ನು ಗಮನಿಸಿದೆ. ಆಂಡ್ರಿಯಾ ಬ್ರೆಡೆಲ್‌ಳಂತೆ ನಾನು ಭೇಟಿ ಮಾಡಿದ ಅನೇಕ ಜರ್ಮನಿಯವರು ಪರಿಶುದ್ಧ ಹೃದಯಿಗಳಾಗಿದ್ದು ಭಾರತದ ದಲಿತರಿಗೆ ತಮ್ಮ ನೆರವನ್ನು ನೀಡಲು ಪ್ರಯತ್ನಿಸುತ್ತಿದ್ದರು.

ಆಂಡ್ರಿಯಾಳಲ್ಲಿನ ಸಂತ ಕ್ಲಾಸ್ ಅಂಥ ಅನುಕರಣೀಯ ನಿದರ್ಶನವಾಗಿದೆ.

ಅವರೆಲ್ಲಾ ಭಾರತದಲ್ಲಿನ ಹಸಿವನ್ನು ಹೊಗಲಾಡಿಸುವ ಹಾಗೂ ದಲಿತರ ವಿಮೋಚನೆಗೆ ನೆರವಾಗುವ ಬಗ್ಗೆ ಮಾತಾನಾಡುತ್ತಿದ್ದರು. ಬಾನ್ ವಿಶ್ವವಿದ್ಯಾಲಯದ ನನ್ನ ಉಪನ್ಯಾಸದ ಸಂದರ್ಭದಲ್ಲಿ ಅಲ್ಲಿನ ಹಲವಾರು ಮಂದಿ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರು ದಲಿತರ ಬಗ್ಗೆ ಸಾಕಷ್ಟು ತಿಳಿದಿದ್ದರು. ಜರ್ಮನಿಯ ರೇಡಿಯೋದಲ್ಲಿ ನಾನು ಸಂದರ್ಶನದಲ್ಲಿದ್ದಾಗ, ಅಲ್ಲಿ ಹಿಂದಿ ರೇಡಿಯೋ ಕಾರ್ಯಕ್ರಮ ಸೇವೆಯಲ್ಲಿದ್ದ ಅರ್ಧ ಡಜನ್ ಭಾರತೀಯರನ್ನು ಕಂಡು ನನಗೆ ಬಹಳಷ್ಟು ಆಶ್ಚರ್ಯವಾಯಿತು. ಅವರೂ ಸಹ ಮಹಾರಾಷ್ಟ್ರದಲ್ಲಿ ಇತ್ತೀಚಿನ ದಲಿತ ಪ್ರತಿರೋಧವನ್ನು ಕಂಡು ದಂಗಾಗಿದ್ದರು. ಗೆಳೆಯ ಪ್ರವೀಣ್ ಹೇಳುವ ಪ್ರಕಾರ ಅದು ಬೌದ್ಧರ ಆಂದೋಲನವೇ ಆಗಿತ್ತು. ಭಾರತೀಯರ ಜನಪ್ರಿಯ ಸಾರ್ವಜನಿಕ ಗ್ರಹಿಕೆಯಲ್ಲಿ ಜರ್ಮನಿಯವರು ಇತರ ಸಮಾಜಗಳಲ್ಲಿ ತೊಡಗುವುದರ ಬಗ್ಗೆ ಅರಿವು ಇಲ್ಲ.

ಅನು: ಡೊಮಿನಿಕ್. ಡಿ

ಹತ್ತರೊಲ್ಲೊಂದು ಆಯ್ಕೆ

ಇಡೀ ಯೂರೋಪನ್ನು ಎರಡನೇ ಮಹಾಯುದ್ಧವು ಸರ್ವನಾಶ ಮಾಡಿತ್ತು. ಅದರಲ್ಲೂ ಜರ್ಮನಿಯಂತೂ ಅಧಿಕ ನಷ್ಟವನ್ನು ಅನುಭವಿಸಿತ್ತು. ಈ ಯುದ್ಧದಲ್ಲಿ ಶೇ.೧೫ರಷ್ಟು ಜನ ಸಂಖ್ಯೆ ಸಾವನ್ನಪ್ಪಿತ್ತು. ನಾಲ್ಕರಲ್ಲಿ ಒಂದು ಮನೆ ನಾಶವಾಗಿತ್ತು. ಮೂಲಸೌಖರ್ಯಗಳು ಮತ್ತು ಕೈಗಾರಿಕೆಗಳು ಸುಡುಗಾಡಿನಂತಾಗಿದ್ದವು.

ಯುದ್ಧದ ನಂತರದಲ್ಲಿ ಇಡೀ ಯೂರೋಪ್ ಬಿಕ್ಕಟ್ಟು, ಕ್ಷಾಮ, ತೀವ್ರವಾದ ಚಳಿ ಮತ್ತು ಅಪರಾಧಗಳ ತಾಣವಾಯಿತು. ಪೂರ್ವ ಯೂರೋಪಿನಿಂದ ಮಿಲ್ಲಿಯಗಟ್ಟಲೆ ಜರ್ಮನರನ್ನು ಓಡಿಸಿದ್ದರು. ಈ ನೋವಿನ ಕತೆಯಲ್ಲಿ ಸುಮಾರು ೧೬.೫ ಮಿಲಿಯನ್ ಜರ್ಮನ್ನರು ತೊಂದರೆಗೀಡಾಗಿದ್ದು, ಮಿಲಿಯಗಟ್ಟಲೆ ಸಾವು ಸಂಭವಿಸಿತ್ತು. ಜರ್ಮನಿಯ ಪ್ರಸಿದ್ಧ ನಗರವಾದ ಕೊಲೊಂಗ್ನೆಯಲ್ಲಿ ಯುದ್ಧಕ್ಕೆ ಮೊದಲು ೭,೫೦,೦೦೦ ಇದ್ದ ಜನಸಂಖ್ಯೆ, ಯುದ್ಧದ ನಂತರ ೩,೨೦,೦೦೦ಕ್ಕೆ ಇಳಿದಿತ್ತು.

ಯುದ್ಧದ ನಂತರದ ಜರ್ಮನಿಯು ಹಸಿವಿನ ಕೂಪದಲ್ಲಿ ಬಿದ್ದಿತ್ತು. ಬಟ್ಟೆ ಮತ್ತು ವಸತಿ ಕೊರತೆ ಅವರ ಕಷ್ಟಕ್ಕೆ ಮತ್ತಷ್ಟು ನೋವನ್ನು ಸೇರಿಸಿತ್ತು. ೧೯೪೫-೧೯೪೭ರಲ್ಲಿ ಜರ್ಮನಿಯಲ್ಲಿ ಸರಾಸರಿಯಂತೆ ದಿನಕ್ಕೆ ಸಿಗುತ್ತಿದ್ದ ಆಹಾರ ೧೨೦೦ ಕ್ಯಾಲೋರಿಗಳಿಗಿಂತಲೂ ಕಮ್ಮಿಯಾಗಿತ್ತು. ತೀವ್ರ ಆಹಾರ ಕೊರತೆಯನ್ನು ನೀಗಿಕೊಳ್ಳಲು ಪಟ್ಟಣಗಳಿಂದ ಜರ್ಮನಿಯ ಜನ ಗ್ರಾಮೀಣ ಪ್ರದೇಶಗಳತ್ತ ಸಾಗಿ ತಮ್ಮಲಿದ್ದ ಎಲ್ಲವನ್ನು ಅಲ್ಲಿನ ರೈತರಿಗೆ ನೀಡಿ ಆಹಾರ ಬೇಡುತ್ತಿದ್ದರು.

ತಮ್ಮ ಚರಿತ್ರೆಯಲ್ಲಿ ಮೊದಲಬಾರಿಗೆ ಇಂಥ ತೀವ್ರವಾದ ಬಿಕ್ಕಟ್ಟನ್ನು ಎದುರಿಸುತ್ತಿದ್ದಾಗ **ಕೇರ್ ಪಾರ್ಸೆಲ್**ಗಳು ಅವರ ಗಾಯಗೊಂಡ ನೈತಿಕತೆಯನ್ನು ಮೇಲೆತ್ತಲು ಧಾವಿಸಿದ್ದವು. ಯುದ್ಧದಿಂದ ಕೂಡಿದ ಯೂರೋಪಿನ ತೀವ್ರ ಆಹಾರ ಕೊರತೆಯನ್ನು ಕಂಡು ಆಘಾತಗೊಂಡ ೨೨ ಅಮೇರಿಕಾದ ಸಂಘಟನೆಗಳು (ಚರ್ಚ್ ಬೆಂಬಲದಿಂದ) ಒಂದುಗೂಡಿ ಅಂಖಇ ಎನ್ನುವ **ಯೂರೋಪಿಗೆ ಅಮೇರಿಕಾದವರ ಕೊಡುಗೆಯ ಒಕ್ಕೂಟ**ವು ೧೯೪೫ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಕೇರ್ ಪಶ್ಚಿಮ ಯೂರೋಪಿನಲ್ಲಿ ಸಾಕಷ್ಟು ಪ್ರಚಾರಕ್ಕೆ ಬಂದಿತು.

ಈ ಕೇರ್‌ನ ಆ್ಯಪಲ್ ಬಾಕ್ಸ್‌ನಂತಿದ್ದ ಆಹಾರ ಪೊಟ್ಟಣಗಳು ೧೦-ಇನ್-೧ ಎಂದೇ ಸುದ್ದಿಯಾಗಿದ್ದವು. ಈ ಪೊಟ್ಟಣಗಳನ್ನು ತಯಾರಿಸಿದ್ದು ಅಮೇರಿಕಾದ ಸೈನ್ಯವಾಗಿದ್ದು ಜಪಾನ್ ವಿರುದ್ಧ ಯುದ್ಧದ ಸಂದರ್ಭದಲ್ಲಿ ಬಳಕೆಯಾಗಬೇಕಿತ್ತು. ಆದರೆ ಯುದ್ಧ ಕೊನೆಗೊಂಡದ್ದರಿಂದ ಅವನ್ನು ಬಳಸಲಾಗಲಿಲ್ಲ. ಈ ೧೦-ಇನ್-೧ ಬಾಕ್ಸ್‌ಗಳು ೧೦ ಜನ ಸೈನಿಕರಿಗೆ ಒಂದರಂತೆ ಆಹಾರವನ್ನು ಅದರಲ್ಲಿ ಪ್ಯಾಕ್ ಮಾಡಲಾಗಿತ್ತು. ಹೀಗೆ ಈ ಬಾಕ್ಸ್‌ಗಳು ಹೇರಳವಾಗಿದ್ದವು.

ಅವುಗಳನ್ನು ಕೇರ್ ಬಳಸಿ ಪಶ್ಚಿಮ ಯೂರೋಪಿನ ಆಹಾರ ಕೊರತೆಯನ್ನು ನೀಗಲು ಪ್ರಯತ್ನಿಸಿತು. ಪ್ರತಿಯೊಂದು ಪ್ಯಾಕ್‌ನಲ್ಲೂ ೧೦ ಮತ್ತು ೧೮ ಪೌಂಡ್ ಆಹಾರ ಇರುತ್ತಿತ್ತು. ಇಂಥ ಸುಮಾರು ೧೦೧ ಮಿಲಿಯನ್ ಬಾಕ್ಸ್‌ಗಳನ್ನು ಹಡಗಿನ ಮೂಲಕ ಯೂರೋಪಿಗೆ ಸಾಗಿಸಲಾಗಿತ್ತು. ಅವುಗಳಲ್ಲಿ ೧೦ ಮಿಲಿಯನ್ ಪಶ್ಚಿಮ ಜರ್ಮನಿಯೊಂದಕ್ಕೇ ಬಂದಿದ್ದವು.

ಯುದ್ಧದ ನಂತರದ ಜರ್ಮನಿಯು ಹಸಿವಿನ ಕೂಪದಲ್ಲಿ ಬಿದ್ದಿತ್ತು. ಬಟ್ಟೆ ಮತ್ತು ವಸತಿ ಕೊರತೆ ಅವರ ಕಷ್ಟಕ್ಕೆ ಮತ್ತಷ್ಟು ನೋವನ್ನು ಸೇರಿಸಿತ್ತು. ೧೯೪೫-೧೯೪೭ರಲ್ಲಿ ಜರ್ಮನಿಯಲ್ಲಿ ಸರಾಸರಿಯಂತೆ ದಿನಕ್ಕೆ ಸಿಗುತ್ತಿದ್ದ ಆಹಾರ ೧೨೦೦ ಕ್ಯಾಲೋರಿಗಳಿಗಿಂತಲೂ ಕಮ್ಮಿಯಾಗಿತ್ತು. ತೀವ್ರ ಆಹಾರ ಕೊರತೆಯನ್ನು ನೀಗಿಕೊಳ್ಳಲು ಪಟ್ಟಣಗಳಿಂದ ಜರ್ಮನಿಯ ಜನ ಗ್ರಾಮೀಣ ಪ್ರದೇಶಗಳತ್ತ ಸಾಗಿ ತಮ್ಮಲಿದ್ದ ಎಲ್ಲವನ್ನು ಅಲ್ಲಿನ ರೈತರಿಗೆ ನೀಡಿ ಆಹಾರ ಬೇಡುತ್ತಿದ್ದರು.

ಅಂದರೆ ಅಮೆರಿಕಾವು ಅಗತ್ಯವಿದ್ದ ೧ ಮಿಲಿಯನ್ ಆಹಾರವನ್ನು ಪಶ್ಚಿಮ, ಜರ್ಮನಿಗೆ ಒದಗಿಸಿತ್ತು. ಯುದ್ಧದ ನಂತರದ ಜರ್ಮನಿಯ ಸಾಂಘಿಕ ಕಲ್ಪನೆಯಲ್ಲಿ ಈ ಕೇರ್ ಆಹಾರ ಪಾರ್ಸಲ್‌ಗಳು ಬಹು ಗೌರವ ಸ್ಥಾನವನ್ನು ಪಡೆದಿವೆ.

ಈ ಗೌರವ ಎಷ್ಟಿದೆಯೆಂದರೆ ಬಾನ್ನ್ ಮ್ಯೂಸಿಯಂನಲ್ಲಿ ಈಗಲೂ ಸಹ ಡಜನ್ ಕೇರ್ ಪಾರ್ಸಲ್‌ಗಳನ್ನು ನೋಡಬಹುದಾಗಿದೆ. ಇದೇ ಕೇರ್ ಪಾರ್ಸಲ್‌ಗಳನ್ನು ೧೯೫೦ರ ಸಂದರ್ಭದಲ್ಲಿ ಭಾರತಕ್ಕೂ ವಿತರಿಸಲಾಗಿತ್ತು ಎಂಬುದನ್ನು ಇಲ್ಲಿ ಹೇಳಬೇಕೆಂದೇನೂ ಇಲ್ಲ.

ಹೇಗಿದ್ದರು ಜರ್ಮನಿಯ ಜನ ಬೇಗನೆ ತಮ್ಮ ಕಾಯಕಕ್ಕೆ ಹಿಂತಿರುಗಿ ಮರುನಿರ್ಮಾಣ ಕಾರ್ಯದಲ್ಲಿ ತೊಡಗಿದರು. ಕೇವಲ ಒಂದೇ ದಶಕದಲ್ಲಿ ಜರ್ಮನಿಯು ತನ್ನ ಆರ್ಥಿಕತೆಯನ್ನು ಮತ್ತೆ ಉನ್ನತಕ್ಕೊಯಿತು. ೧೯೫೦ರ ವೇಳೆಗೆ ಕೈಗಾರಿಕೆ ಬೆಳವಣಿಗೆಯು ಶೇ.೨೫ರಷ್ಟಾಗಿತ್ತು.

೧೯೬೦ರಲ್ಲಿ ಜರ್ಮನಿಯ ಕೈಗಾರಿಕೆಯು ೧೯೫೦ರಲ್ಲಿ ಸಾಧಿಸಿದ್ದಕ್ಕಿಂತಲೂ ಎರಡುವರೆಯಷ್ಟು ಅಧಿಕ ಉತ್ಪಾದನೆಯನ್ನು ಸಾಧಿಸಿತ್ತು. ಈ ಹಿಂದೆ ನಾಝಿಗಳ್ಯಾರೂ ಸಹ ಅಂಥ ಬೃಹತ್ ಉತ್ಪಾದನೆಯಲ್ಲಿ ತೊಡಗಿರಲಿಲ್ಲ. ೧೯೬೦ರ ಅವಧಿಯಲ್ಲಿ ಜರ್ಮನಿಯ ತಲಾದಾಯವು ೨/೩ರಷ್ಟು ಹೆಚ್ಚಿತು. ೧೯೫೦ರಲ್ಲಿ ಉದ್ಯೋಗದಲ್ಲಿದ್ದವರ ಸಂಖ್ಯೆ ೧೩.೮ ಮಿಲಿಯನ್. ಇದು ೧೯೬೦ರಲ್ಲಿ ೧೯.೮ ಮಿಲಿಯನ್‌ಗೇರಿತು. ನಿರುದ್ಯೋಗ ಸಂಖ್ಯೆಯು ಶೇ.೧೦.೩ರಿಂದ ಶೇ.೧.೨ಕ್ಕೆ ಇಳಿಯಿತು. ಹೀಗೆ ಕೇವಲ ಒಂದುವರೆ ದಶಕದಲ್ಲಿ ಪಶ್ಚಿಮ ಜರ್ಮನಿಯು ಜಗತ್ತಿನ ಮೂರನೇ ದೊಡ್ಡ ಆರ್ಥಿಕ ರಾಷ್ಟ್ರವಾಗಿ ಬೆಳೆಯಿತು.

ಹೀಗೆ ಶ್ರೀಮಂತಿಕೆಯನ್ನು ಸಾಧಿಸಿದ ಜರ್ಮನಿ ನಂತರದಲ್ಲಿ ಏನು ಮಾಡಿತು? ೧೯೫೯ರಲ್ಲಿ ಪ್ರೊಟೆಸ್ಟೆಂಟ್ ಚರ್ಚ್ ಬ್ರೆಡ್ ಫಾರ್ ದ ವರ್ಲ್ಡ್‌ನ್ನು ಸ್ಥಾಪಿಸಲು ನಿರ್ಧರಿಸಿತು: "ನಮ್ಮ ಅಗತ್ಯದ ಸಂದರ್ಭದಲ್ಲಿ ನಾವು ನೆರವನ್ನು ಪಡೆದೆವು. ಇನ್ನೂ ಸಹ ಯಾರಿಗೆ ನೆರವು ಅಗತ್ಯವಾಗಿದೆಯೋ ಮತ್ತು ಗಂಭೀರ ಸನ್ನಿವೇಶದಲ್ಲಿರುವವರೋ ಅವರಿಗಾಗಿ ನಾವೀಗ ನೆರವು ನೀಡಲು ಬದ್ಧರಾಗಬೇಕಾಗಿದೆ" ಎನ್ನುವ ಗುರಿಯೊಡನೆ ಸಂಘಟನೆಯಲ್ಲಿ ತೊಡಗಿತು.

ಈ ಧ್ಯೇಯ ಸಾಧನೆಗಾಗಿ ಸಂಗ್ರಹಿಸಿದ ಎಲ್ಲ ಹಣವನ್ನು ಚರ್ಚ್ ಈ ಬ್ರೆಡ್ ಫಾರ್ ದ ವರ್ಲ್ಡ್ ಸಂಘಟನೆಗೆ ನೀಡುತ್ತದೆ. ಈ ದೇಣಿಗೆ ನೀಡುವವರೆಲ್ಲರೂ ಸಹ ಯುದ್ಧದ ಸಂದರ್ಭದಲ್ಲಿ ಹಸಿವನ್ನು ಅನುಭವಿಸಿದವರೇ ಆಗಿದ್ದಾರೆ. ಈ ಸಂಘಟನೆಯ ವಾರ್ಷಿಕ ಬಜೆಟ್ ೨೦೦೫ರಲ್ಲಿ ೫೫ ಮಿಲಿಯನ್ ಯೂರೋ ಡಾಲರ್ ಆಗಿತ್ತು. ಅದರಲ್ಲಿ ೩.೩ ಮಿಲಿಯನ್ ಯೂರೋ ಡಾಲರ್ ಭಾರತೀಯ ಎನ್‌ಜಿಓಗಳಿಗೆ ಬಂದಿತ್ತು. ಅದರಲ್ಲಿ ಬಹುಪಾಲು ದಲಿತ/ಆದಿವಾಸಿಗಳ ಹಸಿವು ಮತ್ತು ತಾರತಮ್ಯವನ್ನು ನೀಗಲು ಬಳಕೆಯಾಗುತ್ತಿದೆ.

ಮತಾಂತರ ಕೆಟ್ಟದ್ದೇನೂ ಅಲ್ಲ. ಆದರೆ ಬ್ರೆಡ್ ಫಾರ್ ದ ವರ್ಲ್ಡ್ ತನ್ನ ಸ್ಥಾಪಿತ ವರ್ಷ ೧೯೫೯ರಿಂದಲೂ ಯಾವುದೇ ಮತಾಂತರವನ್ನು ಪ್ರೋತ್ಸಾಹಿಸಿಲ್ಲ. ಈ ಸಂಘಟನೆಯಿಂದ ಸ್ಫೂರ್ತಿ ಪಡೆದ ಅದರ ಸೋದರಿ ಸಂಘಟನೆಯು ಸುಮಾರು

ಕರುಣೆಯ ದೂತರು

೧೨ ಮಿಲಿಯನ್ ಯೂರೋ ಡಾಲರ್‌ನ್ನು ೨೦೦೫ರಲ್ಲಿ ಭಾರತೀಯ ಎನ್‌ಜಿಒಗಳಿಗೆ ನೀಡಿತು. ಎರಡನೇ ಮಹಾಯುದ್ಧದಂತೆ ಯುಗಾಂತರಗಳಿಂದಲೂ ದಲಿತರು/ಆದಿವಾಸಿಗಳು ನೋವನ್ನು ಅನುಭವಿಸುತ್ತಿರುವಾಗ ಭಾರತವೇಕೆ ಮೇಲಿನ ಸಂಘಟನೆಗಳ ಉದಾಹರಣೆಯನ್ನು ಅನುಸರಿಸಬಾರದು?

೧೯ನೇ ಶತಮಾನದ ಇಂಡಾಲಜಿಯಲ್ಲಿದ್ದ ಜರ್ಮನಿಯ ರಮ್ಯವಾದವನ್ನು ಬದಿಗೆ ಸರಿಸಿದಲ್ಲಿ ಈ ಕೆಳಗಿನ ಮೂರು ಮಂದಿ ಜರ್ಮನಿಯವರು ದಲಿತರ ದೂತರಾಗಿ ಬದಲಾಗಿದ್ದಾರೆ:

೧. ಡಾ. ಮಾರೆನ್ ಬೆಲ್‌ವಿಂಕೆಲ್-ಶೆಂಪ್: ಒಂದೇ ಪದದಲ್ಲಿ ಹೇಳಬೇಕಾದರೆ ಆಕೆ ಉಲ್ಲಾಸದ, ಅನುಕಂಪೆಯ ಮತ್ತು ಪಾಂಡಿತ್ಯದ ಬುಗ್ಗೆ. ೨೪ರ ವಯಸ್ಸಲ್ಲೇ ಆಕೆ ಕಾನ್ಪುರಕ್ಕೆ ಭೇಟಿನೀಡಿ, ಅಲ್ಲಿನ ಕಾರ್ಖಾನೆಯ ಕಾರ್ಮಿಕರ ವಾಸ್ತವಗಳನ್ನು ತಿಳಿಯಲು ಬಂದಿದ್ದಳು. ಹಾಗೆ ಬಂದ ಆಕೆ ಬಡ ದಲಿತ ಹುಡುಗೊಂದನ್ನು ಆಕೆಯ ಸಹೋದರನನ್ನಾಗಿ ದತ್ತು ಸ್ವೀಕರಿಸಿದಳು. ೩೦ ವರ್ಷಗಳ ಹಿಂದೆ ವಿದೇಶಿಯರ್‍ಯಾರು ದಲಿತರ ಪರವಾಗಿ ನಿಲ್ಲುವುದಿರಲಿ ಅವರ ಬಗ್ಗೆ ಅಥವಾ ಅವರ ನೋವುಗಳನ್ನು ತಿಳಿದುಕೊಂಡಿರಲಿಲ್ಲ ಎಂದೇ ಹೇಳಬೇಕು.

ಮಾರೆನ್‌ಳ ಭಾರತದ ಸಂಪರ್ಕ ೧೯೭೦-೭೧ರಲ್ಲೇ ಆಗಿತ್ತು. ಆಗ ಆಕೆ ದೆಹಲಿಯಲ್ಲಿ ಸಂಘಟಿತ ಕಾರ್ಮಿಕರ ಬಗ್ಗೆ ಅಧ್ಯಯನ ನಡೆಸಲು ಬಂದಿದ್ದಳು. ಅನಂತರದಲ್ಲಿ ಆಕೆ ದೆಹಲಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಆಕೆ ಸಮಾಜಶಾಸ್ತ್ರದಲ್ಲಿ ಎಂ.ಎ ಪದವಿ ಪಡೆದಳು. ೧೯೭೭ ಝೂರಿಕ್ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿಯನ್ನು ಕಾನ್ಪುರದ ಕಾರ್ಖಾನೆ ಕಾರ್ಮಿಕರ ವಿಷಯದಲ್ಲಿ ಪಡೆದಳು. ೧೯೭೩ರಲ್ಲಿ ಆಕೆ ಕಾನ್ಪುರದಲ್ಲಿ ಕ್ಷೇತ್ರ ಕಾರ್ಯಕೈಗೊಂಡಾಗ ದಲಿತ ಜಗತ್ತಿಗೆ ಪ್ರವೇಶ ಪಡೆಯುತ್ತಾಳೆ. ಅಲ್ಲಿಂದಾಚೆಗೆ ಆಕೆ ಮತ್ತಷ್ಟು ಗಾಢವಾಗಿ ದಲಿತ ಬದುಕಿನೊಂದಿಗೆ ಗಾಢವಾಗಿ ತೊಡಗಿಕೊಂಡಳು.

ಡಾ. ಅಂಬೇಡ್ಕರ್ ಸಿದ್ಧಾಂತಕ್ಕೆ ಮರುಳಾದ ಆಕೆ ಭಕ್ತಿ ಚಳುವಳಿಯನ್ನು ಅಧ್ಯಯನಕ್ಕೆ ಒಳಪಡಿಸಿ ದಲಿತರ ಧಾರ್ಮಿಕತೆಯನ್ನು ಅನಾವರಣಮಾಡಲು ತೊಡಗಿದಳು. ಪೂರ್ವ ಉತ್ತರ ಪ್ರದೇಶದಲ್ಲಿನ ಶಿವ ನಾರಾಯಣ ಶಾಖೆಯ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದ ಆಕೆ ಕಾಲಾನು ಕ್ರಮದಲ್ಲಿ ದಲಿತರು ಪರ್ಯಾಯ ಧಾರ್ಮಿಕ ಹುಡುಕಾಟವನ್ನು ಮಾಡಿದನ್ನು ದಾಖಲಿಸುತ್ತಾಳೆ. ಹಿಂದೂ ಎಂಬ ಬೃಹತ್ ಛತ್ರಿಯಡಿ ಬೆಳೆದ ಭಕ್ತಿ ಚಳುವಳಿಯು ಒಂದು ದಂಗೆಯ ಸಂಕೇತವಾಗಿತ್ತು. ಈ ಪ್ರಕ್ರಿಯೆಯ ಮುಂದುವರಿದ ರೂಪವೇ ಶಿವ ನಾರಾಯಣ ಶಾಖೆಯೆಂದು ಆಕೆ ಗುರುತಿಸುತ್ತಾಳೆ. ಭಾರತದಲ್ಲಿ ಡಾ. ಮಾರೆನ್ 'ಗೌರವಾನ್ವಿತ' ದಲಿತಳೆಂದೇ ಗುರುತಿಸಲಾಗಿದ್ದು, ಆಕೆ ದಲಿತ ವಿಮೋಚನೆಯೊಂದಿಗೆ ಬೆರೆತುಕೊಂಡಿದ್ದಾಳೆ.

೨. ಡಾ. ಹೇಯ್ನರ್ಝ್ ವೆರ್ನರ್ ವೆಸ್ಲರ್: 'ಜೀನಿಯಸ್' ಎಂಬ ಪರಿಕಲ್ಪನೆ ಡಾ. ವೆಸ್ಲರ್‌ನನ್ನು ವಿವರಿಸಲು ಸಾಲದು. ಆತ ೧೨ ಭಾಷೆಗಳನ್ನು ಕಲಿತಿದ್ದಾನೆ – ಇಂಗ್ಲಿಷ್, ಲ್ಯಾಟಿನ್, ಫ್ರೆಂಚ್, ಪ್ರಾಕೃತ್, ಪಾಳಿ, ಹಿಂದಿ, ಗುಜರಾತಿ, ಪರ್ಶಿಯನ್, ಅರೇಬಿಕ್, ಉರ್ದು ಮತ್ತು ಜರ್ಮನಿ. ಈಗ ಆತ ಬಾನ್ ವಿಶ್ವ ವಿದ್ಯಾಲಯದಲ್ಲಿ ಕಲಿಸುತ್ತಿದ್ದಾರೆ.

ಈತ ತಮ್ಮನ್ನೇ ಆತ್ಮವಿಮರ್ಶೆಗೆ ಒಳಪಡಿಸಿಕೊಂಡ ಯುವಪೀಳಿಗೆಯ ಇಂಡಾಲಜಿಸ್ಟ್‌ರನ್ನು ಪ್ರತಿನಿಧಿಸುತ್ತಾನೆ. ಅಲ್ಲದೆ ಸಂಸ್ಕೃತ ಸಂಶೋಧನೆಯಿಂದ ಭಾರತದಲ್ಲಿ ಯಾವ ಪರಿಣಾಮವಾಗುತ್ತದೆಯೆಂಬುದರ ಬಗ್ಗೆ ಆತ ಸಾಕಷ್ಟು ಕ್ರಿಟಿಕಲ್ ಅರಿವನ್ನು ಹೊಂದಿದ್ದಾನೆ.

೧೮೧೮ರಲ್ಲಿ ಜರ್ಮನಿಯ ಬಾನ್ ವಿಶ್ವ ವಿದ್ಯಾಲಯದಲ್ಲಿ ಮೊದಲ ಇಂಡಾಲಜಿಯ ಪೀಠ ಆರಂಭವಾಯಿತು.

ಮಾರೆನ್‌ಳ ಭಾರತದ ಸಂಪರ್ಕ ೧೯೭೦-೭೧ರಲ್ಲೇ ಆಗಿತ್ತು. ಆಗ ಆಕೆ ದೆಹಲಿಯಲ್ಲಿ ಸಂಘಟಿತ ಕಾರ್ಮಿಕರ ಬಗ್ಗೆ ಅಧ್ಯಯನ ನಡೆಸಲು ಬಂದಿದ್ದಳು. ಅನಂತರದಲ್ಲಿ ಆಕೆ ದೆಹಲಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಆಕೆ ಸಮಾಜಶಾಸ್ತ್ರದಲ್ಲಿ ಎಂ.ಎ ಪದವಿ ಪಡೆದಳು. ೧೯೭೭ ಝೂರಿಕ್ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿಯನ್ನು ಕಾನ್ಪುರದ ಕಾರ್ಖಾನೆ ಕಾರ್ಮಿಕರ ವಿಷಯದಲ್ಲಿ ಪಡೆದಳು. ೧೯೭೩ರಲ್ಲಿ ಆಕೆ ಕಾನ್ಪುರದಲ್ಲಿ ಕ್ಷೇತ್ರ ಕಾರ್ಯಕೈಗೊಂಡಾಗ ದಲಿತ ಜಗತ್ತಿಗೆ ಪ್ರವೇಶ ಪಡೆಯುತ್ತಾಳೆ. ಅಲ್ಲಿಂದಾಚೆಗೆ ಆಕೆ ಮತ್ತಷ್ಟು ಗಾಢವಾಗಿ ದಲಿತ ಬದುಕಿನೊಂದಿಗೆ ತೊಡಗಿಕೊಂಡಳು. ಡಾ. ಅಂಬೇಡ್ಕರ್ ಸಿದ್ಧಾಂತಕ್ಕೆ ಮರುಳಾದ ಆಕೆ ಭಕ್ತಿ ಚಳುವಳಿಯನ್ನು ಅಧ್ಯಯನಕ್ಕೆ ಒಳಪಡಿಸಿ ದಲಿತರ ಧಾರ್ಮಿಕತೆಯನ್ನು ಅನಾವರಣಮಾಡಲು ತೊಡಗಿದಳು. ಪೂರ್ವ ಉತ್ತರ ಪ್ರದೇಶದಲ್ಲಿನ ಶಿವ ನಾರಾಯಣ ಶಾಖೆಯ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದ ಆಕೆ ಕಾಲಾನುಕ್ರಮದಲ್ಲಿ ದಲಿತರು ಪರ್ಯಾಯ ಧಾರ್ಮಿಕ ಹುಡುಕಾಟವನ್ನು ಮಾಡಿದನ್ನು ದಾಖಲಿಸುತ್ತಾಳೆ.

ಆಗಿಂದಲೇ ಜರ್ಮನಿಯವರ ಕಲಿಕೆ ಸಂಸ್ಕೃತದ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ೧೯೨೧ರಲ್ಲಿ ಅಂಬೇಡ್ಕರ್‌ರವರೂ ಸಹ ಸಂಸ್ಕೃತ ಕಲಿಯಲು ಇದೇ ವಿಶ್ವವಿದ್ಯಾಲಯದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರು.

ಸಾಹಿತ್ಯಕ ಕೃತಿಗಳನ್ನು ಜರ್ಮನಿಗೆ ಅನುವಾದಿಸುವ ಡಾ. ವೆಸ್ಲರ್ ಹಿಂದಿಯಲ್ಲಿರುವ ದಲಿತ ಸಾಹಿತ್ಯದ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಜರ್ಮನಿಯ ಅಕೆಡಮಿಗಳಿಗೆ ದಲಿತರ ನೋವನ್ನು ಮತ್ತು ದಲಿತರ ತಾತ್ವಿಕತೆಯನ್ನು ಪರಿಚಯಿಸುವ ಉದ್ದೇಶದಿಂದ ಹಿಂದಿ ದಲಿತ ಬರಹಗಾರರ ಕೃತಿಗಳನ್ನು ಅವರು ಅನುವಾದಿಸುತ್ತಿದ್ದಾರೆ.

"ದಲಿತರೇಕೆ ದಲಿತ 'ಮ್ಯಾಜಿಕ್'ರಿಯಲಿಸಂ'ನ್ನು ಬರೆಯಬಾರದು? ಎಂದು ಆತ ಕೇಳುತ್ತಾನೆ. ಹೀಗೆ ದಲಿತರ ವಿಷಯಗಳನ್ನು ಅಧ್ಯಯನದ ಬಹು ಮುಖ್ಯ ಭಾಗವನ್ನಾಗಿ ಮಾಡುವಲ್ಲಿ ಶ್ರಮಿಸಿರುವ ಡಾ. ವೆಸ್ಲರ್ ಜರ್ಮನಿಯ ಇಂಡಾಲಜಿ ಅಧ್ಯಯನಕ್ಕೆ ಹೊಸ ತಿರುವನ್ನು ನೀಡುತ್ತಿದ್ದಾರೆ.

೩. ವಾಲ್ಟರ್ ಹ್ಯಾನ್: ಈತನನ್ನು ಒಂದೇ ಶಬ್ದದಲ್ಲಿ ವಿವರಿಸುವುದಾದರೆ ಅದು 'ಸಂತ' ಪದ. ಫ್ರೆಡ್ರಿಕ್ ಎಂಗೆಲ್ಸ್‌ನಂತೆ ಕಾಣುವ ವಾಲ್ಟರ್ 'ಹೃದಯ ಬೇಟೆಗಾರ'ನೆಂದರೆ ತಪ್ಪಿಲ್ಲ. ಕಾರಣ ತನ್ನೆಡೆಗೆ ಬರುವ ಎಲ್ಲರ ಹೃದಯವನ್ನು ಆತ ಕದ್ದುಬಿಡುತ್ತಾನೆ. "ನಿಮ್ಮೊಡನೆ ಯಾರೂ ಇಲ್ಲದಿದ್ದಾಗ ನಿಮ್ಮ ಖರ್ಚಿಗೆ ದಿನಕ್ಕೆ ೩೦ ಯೂರೋ ಡಾಲರ್ ಭತ್ಯೆಯನ್ನು ಪಡೆಯಬಹುದಾಗಿದೆ. ಬೇರೆಯವರು ನಿಮ್ಮೊಡನೆ ಇದ್ದಲ್ಲಿ ಅದು ೨೦ಕ್ಕೆ ಇಳಿಯುತ್ತದೆ. ಅಲ್ಲದೆ ಕುಟುಂಬದಲ್ಲಿ ಉಳಿದುಕೊಂಡರೆ ಅದು ೧೦ಕ್ಕಷ್ಟೆ ಸೀಮಿತಗೊಳ್ಳುತ್ತದೆ" ಎಂದ ವಾಲ್ಟರ್. ಆತನ ಪ್ರಕಾರ ಒಂದೇ ಒಂದು ಡಾಲರ್ ಸಹ ಲೆಕ್ಕವಿಲ್ಲದೆ ಹೋಗಬಾರದು. ನುರಿತ ಶಿಕ್ಷಕನಾದ ವಾಲ್ಟರ್ ಕಲಿತಿರುವ ವಿಷಯವೆಂದರೆ, "ಶಾಂತಿ, ಸಂಘರ್ಷ ಪರಿಹಾರ ಮತ್ತು ಅಭಿವೃದ್ಧಿ". ಆತ ಪಾಪ ನ್ಯೂಗಿನಿಯಾದಲ್ಲಿ ೧೯೮೦ರಲ್ಲಿ ಕೆಲಸ ಮಾಡಲು ಇಚ್ಛಿಸಿ, ನಾಲ್ಕು ವರ್ಷಗಳ ಕಾಲ ಆತ ಅಲ್ಲಿ ಕಾರ್ಯನಿರ್ವಹಿಸಿದ್ದ. ಅಲ್ಲಿನ ಅನುಭವಗಳಿಂದ ಪ್ರೇರಿತನಾಗಿ ಅಭಿವೃದ್ಧಿ ಕುರಿತು ಕೆಲಸ ಮಾಡಲು ಬ್ರೆಡ್ ಫಾರ್ ದ ವರ್ಲ್ಡ್‌ಗೆ ಸೇರಿದ.

೧೯೮೮ ರಲ್ಲಿ ಆತ ಭಾರತೀಯ ಡೆಸ್ಕ್ ವಿಭಾಗವನ್ನು ನೋಡಿಕೊಳ್ಳಲು ಬಂದ. ಭಾರತದ ದಲಿತ ಎನ್‌ಜಿಒಗಳತ್ತ ತೀವ್ರ ಒಲವುಳ್ಳವನಾಗಿ ಡರ್ಬನ್ ಸಮ್ಮೇಳನದಲ್ಲಿ ಸಕ್ರೀಯವಾಗಿ ತೊಡಗಿಕೊಂಡಿದ್ದ. ಈಗಲೂ ಸಹ ಆತನು ತನ್ನ ಸಂತ ಸ್ವಭಾವದಿಂದಾಗಿ ಜರ್ಮನಿಯಲ್ಲಿ ದಲಿತ ಪರವಾದ ಕಾರ್ಯವನ್ನು ಬದ್ಧತೆಯಿಂದ ಮಾಡುತ್ತಿದ್ದಾನೆ.

ಹೊಸ ವರ್ಷದ ಶುಭಾಶಯ ಎನ್ನುವುದು ಈಗ ನಗರ ಭಾರತದ ಭಾಗವಾಗಿದ್ದು ದಲಿತ/ಆದಿವಾಸಿಗಳನ್ನು ಒಳಗೊಂಡುಬಿಟ್ಟಿದೆ. ಆದರೂ ೧೯೯೧ಕ್ಕಿಂತ ಮುಂಚೆ ಇದ್ದಂತೆ ಈಗಲೂ ಸಹ ದಲಿತ/ಆದಿವಾಸಿಗಳಿಗೆ ಪ್ರತಿ ಹೊಸ ವರುಷವೂ ಸಹ ಮತ್ತಷ್ಟು ಸಂಕಟವನ್ನು ತರುವಂತಾಗಿದೆ. ಕಾರಣ ೧೯೯೧ರಿಂದಲೇ ದಲಿತ/ಆದಿವಾಸಿಗಳ ನಿವೃತ್ತಿ ಅಧಿಕವಾಗುತ್ತಿದ್ದು ನೌಕರಿ ಪಡೆಯುವವರ ಸಂಖ್ಯೆ ತೀವ್ರ ಕುಸಿಯುತ್ತದೆ.

ಭಾರತದ ಹಿತಾಸಕ್ತಿಯಿಂದಲೇ ದಲಿತ/ಆದಿವಾಸಿಗಳ ವರ್ಷವನ್ನು ದೇಶ ತನ್ನದಾಗಿಸಿಕೊಳ್ಳಬೇಕಿದೆ. ದಲಿತ/ಆದಿವಾಸಿಗಳನ್ನು ಈ ದೇಶ ತನ್ನೊಳಗೆ ತೆಗೆದುಕೊಳ್ಳದಿದ್ದರೆ ಜಾಗತಿಕ ಸಮುದಾಯದಲ್ಲಿ ಅದರ ಮರ್ಯಾದೆ ಹಾಳಾಗುತ್ತದೆ. ೨ನೇ ಮಹಾಯುದ್ಧದ ನಂತರ ಅಮೆರಿಕಾವು ಆರ್ಥಿಕವಾಗಿ ಜಾಗತಿಕ ಕೇಂದ್ರ ಬಿಂದುವಾಗಿ ಹೊರಹೊಮ್ಮಿದೆ. ಆದರೂ ೬೦ರ ದಶಕದ ಕೊನೆಯ ಹೊತ್ತಿಗೆ ಅಮೆರಿಕಾದ ಅನೇಕ ಬೀದಿಗಳು

ದಯವಿಟ್ಟು ದಲಿತರಿಗೆ ಮೊದಲಾಗಲಿ

ಜನಾಂಗೀಯ ಗಲಭೆಗಳಿಂದ ಕೆಂಪಾದವು. ಆದ್ದರಿಂದ ಆರ್ಥಿಕವಾಗಿ ಮುಂದುವರೆಯುವುದರಿಂದ ಸಾಮಾಜಿಕ ಶಾಂತಿ ಇರುತ್ತದೆಯೆಂದು ಭಾವಿಸಬೇಕಿಲ್ಲ. ಭಾರತ ಪ್ರಕಾಶಿಸುತ್ತಿದೆ ಅಥವಾ ೮+ ಅಂಕಿ-ಅಂಶಗಳು ಸಾಮಾಜಿಕ ಶಾಂತಿಯನ್ನು ತರುವುದಿಲ್ಲ. ಅದು ಸಾಧ್ಯವಾಗಬೇಕಾದರೆ ದಲಿತ/ಆದಿವಾಸಿಗಳು ಮುಖ್ಯವಾಹಿನಿಯಲ್ಲಿ ತಮ್ಮ ಪಾಲನ್ನು ಪಡೆಯಲೇಬೇಕಾಗುತ್ತದೆ.

ಸಕಾರಾತ್ಮಕ ಕ್ರಿಯೆ/ವೈವಿಧ್ಯತೆಯ ದಲಿತ್ ಡೈರಿಯ ಆಂದೋಲನ ಫಲನೀಡುತ್ತಿದೆ. ಸಿಐಐ ಮತ್ತು ಅಸೋಚಮ್‌ಗಳು ಇರಾನಿ ಸಮಿತಿಯನ್ನು ಸ್ಥಾಪಿಸುವುದರ ಮೂಲಕ ದಲಿತ/ಆದಿವಾಸಿಗಳನ್ನು ತಮ್ಮ ತೆಕ್ಕೆಗೆ ಒಳಗೊಳ್ಳು ಕಾರ್ಯವನ್ನು ಆರಂಬಿಸಿವೆ. ಟಾಟಾ ವೃಂದವನ್ನು ಪ್ರತಿನಿಧಿಸುವ ಡಾ. ಜೆ.ಜೆ ಇರಾನಿಯ ಹೇಳಿಕೆಗಳ ಬಗ್ಗೆ ನಾವು ಸಂದೇಹಿಸದೆ ಖುಶಿ ಪಡುವ ಎಲ್ಲಾ ಕಾರಣಗಳು ಇವೆ. ನಮ್ಮ ಸಮಕಾಲೀನ ಮಾದರಿಯಾಗಿರುವ ಕೆ. ಆರ್. ನಾರಾಯಣ್ ವಿದೇಶದಲ್ಲಿ ವ್ಯಾಸಂಗ ಮಾಡಲು ಟಾಟಾ ಫೆಲೋಶಿಪ್ ಪಡೆದಿದ್ದನ್ನು ನಾವು ಮರೆಯುವಂತಿಲ್ಲ.

೨೦೦೭ರ ಅಕ್ಟೋಬರ್‌ನಲ್ಲಿ ಸಿಐಐ ಮತ್ತು ಅಸೋ ಚಮ್‌ಗಳು ಎಷ್ಟು ಮಂದಿ ದಲಿತ/ಆದಿವಾಸಿ ಗಳನ್ನು ತಮ್ಮ ಉದ್ಯೋಗ ಮತ್ತು ಬ್ಯುಸಿನೆಸ್‌ಗಳಲ್ಲಿ ಸೇರಿಸಿಕೊಂಡಿದ್ದಾರೆನ್ನುವುದನ್ನು ಬಹಿರಂಗ ಪಡಿಸಲಿವೆ. ಇರಾನಿ ಸಮಿ ತಿಯು ತನ್ನೆಲ್ಲಾ ಕಾರ್ಯ ದಕ್ಷತೆಯನ್ನು ತೋರಿಸುತ್ತರಾದರೆ ೨೦೦೭ನ್ನು ದಲಿತ/ಆದಿವಾಸಿಗಳ ವರ್ಷವೆಂದು ಆಚರಿಸಲೇಬೇಕಾದ ಅಗತ್ಯವಿದೆ. ಭಾರತೀಯ ಕೈಗಾರಿಕೋದ್ಯಮವು ತೃಪ್ತಿಕರ ಫಲಿತಾಂಶವನ್ನು ತೋರಿಸುತ್ತದೆಯಾದರೆ ಅದು ಹೊಸತ್ತೊಂದು ಮಾರ್ಗವನ್ನೇ ನಮ್ಮೆದುರು ತೆರೆದಂತಾಗುತ್ತದೆ. ಅದನ್ನು ನಾವು ಉಲ್ಲಾಸದಿಂದ ಆಚರಿಸಲೇಬೇಕಾದೀತು. ಇಲ್ಲಿಯುವರೆಗೆ ದಲಿತ/ಆದಿವಾಸಿಗಳ ಮೀಸ ಲಾತಿ ಎನ್ನುವುದು ಮುಖ್ಯವಾಹಿನಿಯು ಯಾವಾಗಲೂ ತಿರಸ್ಕರಿಸುವ ಸಂಗತಿಯಾಗಿದ್ದು, ರಾಜಕೀಯವಾಗಿಯಷ್ಟೆ ಒಪ್ಪಿತ ಸತ್ಯವಾಗಿತ್ತು. ಭಾರತೀಯ ಕೈಗಾರಿಕೋದ್ಯ ಮವು ಆ ಮುಖ್ಯವಾಹಿನಿಯ ಭಾಗವಾಗಿತ್ತಷ್ಟೆ ಆದ್ದರಿಂದ ಇರಾನಿ ಸಮಿತಿಯು ೨೦೦೭ರಲ್ಲಿ ಯಶಸ್ವಿಯಾಗುತ್ತದೆಯಾದರೆ ಮೀಸಲಾತಿಗೆ ಸಾಮಾಜಿಕ ಮನ್ನಣೆ ದೊರೆತಂತೆಯೇ ಸರಿ.

ದಲಿತ/ಆದಿವಾಸಿಗಳಿಗೆ ಸಕಾರಾತ್ಮಕ ಕ್ರಿಯೆಯನ್ನು ಜಾರಿಗೊಳಿಸುವ ಬಗ್ಗೆ ಈಗಾಗಲೇ ೩೦೦ ಖಾಸಗಿ ಕಂಪನಿಗಳು ತಮ್ಮ ಒಪ್ಪಿಗೆಯನ್ನು ನೀಡಿವೆಯಲ್ಲದೆ, ಅದಕ್ಕಾಗಿ ನಡಾವಳಿಯೊಂದನ್ನು ರೂಪಿಸಿಕೊಂಡಿವೆ. ಇತರ ಕಂಪನಿಗಳೂ ಸಹ ಇದನ್ನೇ ಅನುಸರಿಸಲು ತಯಾರಿವೆ. ಈ ಭಾರತೀತ ಕೈಗಾರಿಕೋದ್ಯಮವು ಹೇಗೆ ತನ್ನ ಉದ್ದೇಶವನ್ನು ನೆರವೇರಿಸಿವೆ ಎಂಬುದನ್ನು ಅಕ್ಟೋಬರ್ ತಿಂಗಳು ತೋರಿಸಲಿದೆ. ಆದರೂ ದಲಿತ/ಆದಿವಾಸಿಗಳನ್ನು ಖಾಸಗಿ ವಲಯದಲ್ಲಿ ಒಳ ಗೊಳ್ಳುವುದು ಸುಲಭದ ಕೆಲಸವೇನಲ್ಲ. ಇದಕ್ಕೆ ಹಲವಾರು ಅಡೆತಡೆಗಳಿವೆ:

– ಚರಿತ್ರೆಯ ವಿಧಿಯಲ್ಲಿ ಸಿಲುಕಿರುವ ಭಾರತೀಯ ಕೈಗಾರಿಕೋದ್ಯಮವು ಸೂರ್ಯಕಾಂತಿಯಂತೆ ತನ್ನ ಮನಸ್ಸನ್ನು ಇನ್ನೂ ತೆರೆದಿಲ್ಲವಾದ್ದರಿಂದ ದಲಿತ/ಆದಿವಾಸಿಗಳನ್ನು ಒಳ ಗೊಳ್ಳಲಾಗುತ್ತಿಲ್ಲ. ಆದ್ದರಿಂದ ಸಕಾರಾತ್ಮಕ ಕ್ರಿಯೆ/ವೈವಿಧ್ಯತೆಯ ನೀತಿಯ ಪರವಾಗಿರುವ ಖಾಸಗಿ ವಲಯದಲ್ಲಿರುವ ಶಕ್ತಿಗಳು ಇನ್ನೂ ಬಲಶಾಲಿಯಾಗಿಲ್ಲ. ದಲಿತ/ಆದಿವಾಸಿಗಳನ್ನು ಒಳ ಗೊಳ್ಳುವುದರಿಂದ ಖಾಸಗಿ ವಲಯವೇ ಮೊದಲ ಫಲಾನುಭವಿ ಕಾರಣ ದಲಿತ/ಆದಿವಾಸಿಗಳು ತಾವು ಗಳಿಸಿದ್ದನ್ನು ನೇರವಾಗಿ ಮಾರುಕಟ್ಟೆಯಲ್ಲಿ ವ್ಯಯಿಸುತ್ತಾರೆ ಎನ್ನುವ ಪಾಠವನ್ನು ಇರಾನಿಯಂಥ ಹಿರಿಯರು ಖಾಸಗಿ ವಲಯಕ್ಕೆ ಹೇಳಿಕೊಡಬೇಕಾಗುತ್ತದೆ. ದಲಿತರು/ಆದಿವಾಸಿಗಳು ಎಂದೂ ಹಣ ಮುಕ್ತ ಚಲನೆಯನ್ನು ತಡೆಯುವವರಲ್ಲ.

– ಪ್ರಭುತ್ವ/ಸರ್ಕಾರವು ಸಕಾರಾತ್ಮಕ ಕ್ರಿಯೆ ವಾಸ್ತವವಾಗುವುದನ್ನು ವಿವಾದ ಮತ್ತು ಭಿನ್ನ ಮತೀಯ ನಿಲುವನ್ನು ಪ್ರಚೋದಿಸುವುದರ ಮೂಲಕ ತಡೆಯುತ್ತದೆ. ಸರ್ಕಾರದ ವಿರುದ್ಧ ಬೀದಿ ಹೋರಾಟವಿಲ್ಲದೆ ನಾವು ಅನುಕಂಪವನ್ನು ಗಳಿಸಲಾಗದು. ಭಾರತೀಯ ಪ್ರಜಾಪ್ರಭುತ್ವದ ಈ ಮಿತಿಯನ್ನು ನಾವು ಅರಿತುಕೊಳ್ಳಬೇಕಾಗಿದೆ.

– ದಲಿತ ರಾಜಕಾರಣಿಗಳು ಎಲ್ಲರ ಬೆಂಬಲವನ್ನು ಬಯಸುವುದರಿಂದ ಆದಷ್ಟು ಈ ವಿಷಯವನ್ನು ಮುಂದೂಡುತ್ತಾ ನಾಟಕವಾಡುತ್ತಿರುತ್ತಾರೆ.

– ಒಬಿಸಿ ಕೂಟವು ತನ್ನನ್ನೂ ಒಳಗೊಳ್ಳಬೇಕೆಂಬ ಸಬೂಬನ್ನು ಒಡ್ಡುವ ಮೂಲಕ ದಲಿತರ ಕೇಸನ್ನು ಕೆಡಿಸುತ್ತದೆ.

– ದಲಿತರು/ಆದಿವಾಸಿಗಳು ಶೋಷಿತರಾಗಿದ್ದಾರೆನ್ನುವುದನ್ನು ಗುರುತಿಸದ ಮುಸ್ಲಿಂ ಕೂಟವೂ ಸಹ ಅಂಥದ್ದೇ ತಂತ್ರಗಳ ಮೂಲಕ ದಲಿತ/ಆದಿವಾಸಿಗಳಿಗಿರುವ ಸಂಪನ್ಮೂಲ ಹಕ್ಕುಗಳನ್ನು ತಡೆಯುತ್ತದೆ.

– ಈ ಸಕಾರಾತ್ಮಕ ಕ್ರಿಯೆಯು ಅಮೇರಿಕಾದ ಮಾದರಿಯಲ್ಲಿರುವುದರಿಂದ ಅಮೆರಿಕಾ ವಿರೋಧಿ ಕೂಟವೂ ಸಹ ಅದನ್ನು ಅಪಹರಿ ಸುತ್ತದೆ. ಮಹಾತ್ಮ ಫೂಲೆಯವರು ಹಾಗೂ ಡಾ|| ಅಂಬೇಡ್ಕರವರು ಅಮೇರಿಕಾವನ್ನು ಮೆಚ್ಚಿ ಕೊಂಡಿದ್ದರು. ಆದರೆ ಸಕಾರಾತ್ಮಕ ಕ್ರಿಯೆ ಯಶಸ್ವಿಯಾಗುವುದರಿಂದ ಅಮೇರಿಕಾಕ್ಕೆ ಬೆಂಬಲದೊರೆಯುತ್ತದೆ ಅನ್ನುವ ಕಾರಣಕ್ಕೆ ಈ ಅಮೆರಿಕಾ-ವಿರೋಧಿ ಕೂಟವು ತನ್ನೆಲ್ಲಾ ತಂತ್ರವನ್ನು ಬಳಸಿ ಅದಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ.

– ಬಂಡವಾಳಶಾಹಿ ವಿರೋಧಿ ಕೂಟವೂ ಸಹ ದಲಿತರು ಮತ್ತು ಭಾರತೀಯ ಉದ್ಯಮವು ಒಂದುಗೂಡುವುದನ್ನು ತಡೆಯುತ್ತದೆ. ಕಾರಣ ಅವರ ರ್‍ಯಾಲಿಗಳಿಗೆ ಭಾಗವಹಿಸುವ ಘೋಷಣೆಗಳನ್ನು ಕೂಗಲು ದಲಿತ/ಆದಿವಾಸಿಗಳು ಬೇಕಾಗುತ್ತಾರೆ.

– ದಲಿತರೊಳಗೇ ಇರುವ ಲೋಹಿಯವಾದಿಗಳು ಮತ್ತು ಪೆರಿಯಾರ್‌ವಾದಿಗಳು ಅಂಬೇಡ್ಕರಿಸಂನಿಂದ ದೂರಸರಿದವರಾಗಿ ದಲಿತ-ಒಬಿಸಿ-ಅಲ್ಪಸಂಖ್ಯಾತ ಕೂಟವನ್ನು ಕಟ್ಟುವ ಸಲುವಾಗಿ, ಸಕಾರಾತ್ಮಕ ಕ್ರಿಯೆ ಜಾರಿಯಾಗುವುದು ಒಳಿತಲ್ಲವೆಂದು ವಾದಿಸುತ್ತಾರೆ.

ದಲಿತ/ಆದಿವಾಸಿಗಳು ಎಚ್ಚರಿಕೆಯಿಂದ ಇದ್ದಲ್ಲಿ ೨೦೦೭ ನಿಜವಾಗಿಯೂ ಶುಭ ವರ್ಷವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಯಾರೂ ಸಹ ದಲಿತರ ಸಂಕಟಗಳನ್ನು ಅನುಭವಿಸಲು ಸಿದ್ಧರಿಲ್ಲ. ಆದರೂ ಬಡ ಬ್ರಾಹ್ಮಣರೂ ಸೇರಿದಂತೆ ಎಲ್ಲರಿಗೂ ಸಕಾರಾತ್ಮಕ ಕ್ರಿಯೆ ಬೇಕಾಗಿದೆ. □



ಚಂದ್ರಭಾನ್ ಪ್ರಸಾದ್ ಕಲ್ಪನೆಯ ದಲಿತ ದೇವತೆ 'ಇಂಗ್ಲಿಷ್ ಮಾತೆ'!

ಜಾತಿಯನ್ನು ಧಮನಿಸಿದ ಮಾತಂಗನ ಮಹಾ ಕಥೆ

ಸಿ. ಎಚ್. ರಾಜಶೇಖರ್

ಗೌತಮ ಬುದ್ಧರು ಜೇತನ ವನದಲ್ಲಿ ತಂಗಿದ್ದಾಗ ತಮ್ಮ ಭಿಕ್ಷುಗಳನ್ನು ಉದ್ದೇಶಿಸುತ್ತಾ, ಜಾತಿಯ ಬಗ್ಗೆ ಲೋಕದಲ್ಲಿ ರೂಢಿಯಲ್ಲಿರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವ ಸಲುವಾಗಿ ಜಾತಿಯಿಂದಲೇ ಬ್ರಾಹ್ಮಣರು ಶ್ರೇಷ್ಠರಲ್ಲ. ಚಂಡಾಲರು ಅಧಮರಲ್ಲ. ನೀತಿಯೇ ಜಾತಿಯ ಮಾನದಂಡವೆಂದು ತಿಳಿಸುತ್ತಾ, ಚಂಡಾಲನೊಬ್ಬ ಜಾತಿಯನ್ನು ಮೆಟ್ಟಿನಿಂತ ಮಹಾಕಥೆಯನ್ನು ಹೇಳುತ್ತಾರೆ. ಅದು ಹೀಗಿದೆ.

ಅಂದಿನ ದಿನಗಳಲ್ಲಿ ವಾರಣಾಸಿ ನಗರದಲ್ಲಿ ಮಾತಂಗನೆಂಬ ಚಂಡಾಲ ಕುಲದ ಯುವಕನೊಬ್ಬ ಇದ್ದ. ಆತನು ಒಂದು ದಿನ ಅದೇ ನಗರದ ಶ್ರೇಷ್ಠಿಯೊಬ್ಬನ ಉದ್ಯಾನದಲ್ಲಿ ಸಂಚರಿಸಲು ಆತನ ಏಕೈಕ ಮಂತ್ರಿಯಾದ ದಿಟ್ಟಮಂಗಳಿಕಳು ತನ್ನ ಸಖಿಯರೊಂದಿಗೆ ಆಟವಾಡುತ್ತಿರುತ್ತಾಳೆ. ಆಕೆಯ ಅಪೂರ್ವ ರೂಪವನ್ನು ಕಂಡ ಮಾತಂಗನು ಆಕೆಯಲ್ಲಿ ಅನುರಕ್ತನಾಗುತ್ತಾನೆ. ಮರುದಿನ ಆಕೆಯ ಮನೆಗೆ ಹೋಗಿ:

'ಆರ್ಯೆ, ನಾನು ನಿನ್ನಲ್ಲಿ ಮೋಹಿತನಾಗಿರುವೆ!' ಎನ್ನಲು ಆಕೆಯು 'ನೀನು ಯಾರು?'

'ನಾನು ಕುಲದಲ್ಲಿ ಚಂಡಾಲ. ಹೆಸರು ಮಾತಂಗ. ವೃತ್ತಿಯಲ್ಲಿ ಗುಲಾಮ...!' ಎನ್ನಲು ಮೈಮೇಲೆ ಎಂಜಲು ಚೆಲ್ಲಿದಂತಾಗಿ ತನ್ನ ಸಖಿಯರನ್ನು ಉದ್ದೇಶಿಸಿ,

'ಎಲೈ ಸಖಿಯರೇ, ಸುಗಂಧ ಜಲವನ್ನು ತನ್ನಿ...!' ಎಂದು ಚೀರಿದಳು. ಅವರು ಹಾಗೆ ಮಾಡಲು ಆಕೆ ತನ್ನ ಕಣ್ಣುಗಳನ್ನು ಮತ್ತು ಬಾಯನ್ನು ತೊಳೆದುಕೊಂಡು ಮತ್ತೆ ತನ್ನ ಸೇವಕರಿಗಾಗಿ:

'ಎಲೈ ಗುಲಾಮರೇ, ಈ ದುಷ್ಟ ಚಂಡಾಲನನ್ನು ಹೊಡೆದು ಓಡಿಸಿರಿ...! ಎಲ್ಲಿ ತೊಲಗಿರುವಿರಿ ಬೇಗ ಬನ್ನಿ ಇಲ್ಲವೆಂದರೆ ಬಹಿ ಷ್ಕರಿಸುವೆ!' ಎಂದು ಕೂಗಲು ಅವರುಗಳು ಬಂದು ಮಾತಂಗನ ಮೇಲೆ ಎರಗಿ,

'ದುಷ್ಟ ಚಂಡಾಲನೇ, ಎಲ್ಲಿಂದ ಬಂದೆ.?' ಹೇಗೆ ಬಂದೆ? ನಿನ್ನಿಂದಾಗಿ ನಮಗೆ ಸಿಗುತ್ತಿದ್ದ ಹೆಂಡ ಮತ್ತು ಮಾಂಸ ನಷ್ಟವಾ ಯಿತು! 'ಎನ್ನುತ್ತಾ ಆತನನ್ನು ಚಚ್ಚತೊಡಗಿದರು. ಆತನ ಮೂಗು ಬಾಯಿಯಿಂದ ರಕ್ತ ಚಿಮ್ಮಿತು. ದೇಹವೆಲ್ಲ ರಕ್ತಮಯವಾಗಲು ಆತ ಮೂರ್ಛೆ ಹೋದ. ಆತನನ್ನು ಎತ್ತಿ ಬೀದಿಗೆ ಬಿಸಾಕಿದರು. ಯಾರೋ ದಾರಿಹೋಕರು ಆತನಿಗೆ ನೀರು ಚಿಮುಕಿಸಿ ಬಾಯಿಗೆ ನೀರು ಗುಟುಕಿಸಿ, ಗಾಳಿ ಬೀಸಲು ಆತ ನಿಧಾನವಾಗಿ ಎದ್ದು ಕುಳಿತ. ಆದರೂ ಆತನಿಗೆ ಶ್ರೇಷ್ಠಿಯ ಮಗಳ ಮೇಲೆ ಮೋಹ ಹೋಗಲಿಲ್ಲ. ಮತ್ತೆ ಅವಳ ಮನೆಯ ಬಳಿ ಬರಲು ಆಕೆಯ ತಂದೆ, ನಿನಗೇನು ಬೇಕೆಂದ?'

'ನನಗೆ ನಿನ್ನ ಮಗಳು ಬೇಕು...! ಆಕೆಯನ್ನು ನನಗೆ ಕೊಟ್ಟು ಮದುವೆ ಮಾಡುವ ತನಕ ನಾನು ಇಲ್ಲಿಂದ ಜಾಗವನ್ನು ಕದಲುವುದಿಲ್ಲ' ಎಂದು ಹಠ ಹಿಡಿದು ಕುಳಿತ. ಎರಡು ದಿನ ಕಳೆಯಿತು, ನಾಲ್ಕು ದಿನ ಕಳೆಯಿತು, ಆತನು ಉಪವಾಸದ ಜೊತೆಗೆ ಕೃಶನಾಗತೊಡಗಿದ. ಏಳನೇಯ ದಿನ ಆತನು ನನ್ನ ಮನೆಯ ಎದುರು ಅಸು ನೀಗಿದರೆ ನನಗೆ ನರಕ ತಪ್ಪಿದಲ್ಲ ಎಂಬ ಪಾಪ ಭಯದಿಂದ ಮಗ ಳನ್ನು ಆತನಿಗೆ ಧಾರೆ ಎರೆದು ಕೊಟ್ಟ. ಆಕೆಯು' ಎಲೈ ಸ್ವಾಮಿ ನನ್ನನ್ನು ಕ್ಷಮಿಸಿ... ಕೊನೆಗೆ ನಿಮ್ಮ ಪ್ರೀತಿಯೇ ಗೆದಿಯಿತು. ಇನ್ನು ನೀವು ಎಲ್ಲಿ ಇರುವಿರೋ ನಾನು ಅಲ್ಲಿ ಇರುವುದು ಪತ್ನಿ ಧರ್ಮ ನೆಡೆಯಿರಿ. ನಾನು ನಿಮ್ಮ ಮನೆಗೆ ಬರುತ್ತೇನೆ!' ಎಂದಳು. ಆತನ ಸಂತೋಷಕ್ಕೆ ಮಿತಿಯೇ ಇಲ್ಲ. ಆದರೆ ಮೇಲೆ ಏಳಲು ಸಾಧ್ಯವಿಲ್ಲ ಅನ್ನಿಸಿದಾಗ

'ಭದ್ರೆ ನಿನ್ನ ಜನಗಳು ನನ್ನನ್ನು ಚನ್ನಾಗಿ ಥಳಿಸಿದ್ದಾರೆ. ನಾನು ಮೇಲೆದ್ದು ನೆಡೆಯಲಾರೆ' ಎನ್ನಲು:

'ಹಾಗದರೆ ನನ್ನ ಬೆನ್ನ ಮೇಲೆ ಕೂರಿ... ನಾನು ನಿಮ್ಮನ್ನು ಒತ್ಯೊಯುತ್ತೇನೆ!' ಎಂದು ಆತನನ್ನು ತನ್ನ ಬೆನ್ನಿನ ಮೇಲೆ ಕೂರಿಸಿ ಕೊಂಡು ಊರ ಹೊರಗಿನ ಆತನ ಗುಡಿಸಲ ಎದುರು ನಿಂತಳು. ಬಂಧು ಭಾಂದವರು ಈ ಸೋಜಿಗವ ಕಂಡು ಬೆಚ್ಚಿ ದೂರ ಸರಿದು ನಿಂತರು.

ದಿಟ್ಟಮಂಗಳಕಳು ಪಾಲಿಗೆ ಬಂದದ್ದೆ ಪಂಚಾಮೃತವೆಂದು ಬಗೆದು ಮಾತಂಗನ ಜೊತೆ ಆ ಗುಡಿಸಲಿನಲ್ಲಿ ವಾಸಿಸಲು ಪ್ರಯತ್ನಿಸಿದಳು. ಆತನು ದಿನವೂ ಕಾಡಿಗೆ ಹೋಗಿ ಬೇಟೆಯಾಡಿ ಮಾಂಸವನ್ನು ಮಾರಿ ಪತ್ನಿಯೊಂದಿಗೆ ಪ್ರೇಮದಿಂದ ಕಾಲಕಳೆಯಲು ಪ್ರಯತ್ನಿಸಿದ. ಆದರೆ ಆಕೆಯ ಆ ಬಡತನ ಮತ್ತು ಕೊಳಕಿಗೆ ಒಳಗೊಳಗೇ ಜಿಗುಪ್ಸೆಗೊಂಡು ಕ್ಷೀಣಿಸತೊಡಗಿದಳು. ಆಕೆಯನ್ನು ಮಾತಂಗ ಪ್ರಶ್ನಿಸಿದ:

'ಭದ್ರೆ, ಹೀಗೇಕೆ ಕೃಶಳಾದೆ...?'

'ಸ್ವಾಮಿ, ನಿಮ್ಮ ಹುಟ್ಟಿನೊಂದಿಗೆ ಅಂಟಿ ಬಂದಿರುವ ಜಾತಿಯ ಶಾಪದಿಂದ ಮುಕ್ತಿ ಹೊಂದಲು ಸಾಧ್ಯವಿಲ್ಲವೆ?'

'ಅದು ಹೇಗೆ ಸಾಧ್ಯ...?'

'ವಿದ್ಯೆಯಿಂದ ಸಕಲವೂ ಸಾಧ್ಯ?'

'ಹಾಗಾದರೆ ನಾನು ಇಂದೇ ತಕ್ಷಶಿಲೆಗೆ ಹೋಗಿ ಗುರುಗಳ ಅನ್ವೇಷಣೆಯಲ್ಲಿ ತೊಡಗುತ್ತೇನೆ' ಎಂದ ಮಾತಂಗ ಹೆಂಡತಿಯಿಂದ ಬೀಳ್ಕೊಂಡು ತಕ್ಷಶಿಲೆಗೆ ತಲುಪಿದ. ಅಲ್ಲಿ ದಯಾಪರನಾದ ಒಬ್ಬ ಗುರುವಿನ ಬಳಿ ಎಂಟು ವರ್ಷಗಳು ವಿದ್ಯೆ ಕಲಿತು ತನ್ನ ಗ್ರಾಮಕ್ಕೆ ಬಂದ. ದಿವ್ಯ ತೇಜಸ್ವಿಯಾಗಿದ್ದ ಮಾತಂಗನನ್ನು ಕಂಡು ಪರುಜನರು ಈತ ನಿಜಕ್ಕೂ ಪಂಡಿತನೆಂದು ಆತನ ವಿದ್ವತ್ತಿಗೆ ತಲೆ ಬಾಗಿದರು. ಆತನ ಧರ್ಮೋಪದೇಶದಿಂದ ಪುಳಕಿತರಾದರು. ಆತನನ್ನು ಪಲ್ಲಕಿಯಲ್ಲಿ ಮೆರವಣಿಗೆ ಮಾಡಿದರು. ಕಾಣಿಕೆ ಅರ್ಪಿಸಿದರು. ಇಷ್ಟಕ್ಕೆಲ್ಲ ಮೂಲ ಕಾರಣ ದಿಟ್ಟಮಂಗಳಿಕಳೆ ಕಾರಣವೆಂದು ಆಕೆಗೆ 'ಗುರು ಪತ್ನಿ' ಎಂದು ನೆಮಿಸಿದರು.

ದಿನಗಳು ಉರುಳಲು, ಆಕೆಯು ಗರ್ಭವತಿಯಾದಳು. ಗಂಡು ಮಗುವಿನ ಜನನವಾಯಿತು. ಮಗುವು ಮಂಟಪದಲ್ಲಿ ಹುಟ್ಟಿದ ಕಾರಣಕ್ಕಾಗಿ ನೆರೆದ ಬ್ರಾಹ್ಮಣರು ಆ ಮಗುವಿಗೆ 'ಮಾಂಡವ್ಯಕುಮಾರ'ನೆಂದು ನಾಮಕರಣ ಮಾಡಿದರು. ದಿಟ್ಟಮಂಗಳಿಕಳಿಗೆ ತನ್ನ ಪತಿಯ ಬಗ್ಗೆ ಅತೀವ ಹೆಮ್ಮೆ ಎನ್ನಿಸಿ:

'ಸ್ವಾಮಿ, ನೀವುಗಳು ನಿಜಕ್ಕೂ ನಿಮ್ಮ ಹಣೆಯ ಬರಹವನ್ನೇ ಬದಲಾಯಿಸಿಕೊಂಡಿರಿ. ಆ ಮೂಲಕ ನಿಮ್ಮ ಶಾಪವನ್ನು ಮತ್ತು ನಮ್ಮಗಳ ಶಾಪವನ್ನು ವಿಮೋಚನೆಗೊಳಿಸಿದಿರಿ. ನೀವು ಮಹಾ ಸಾಧ ಕರೆ ಸರಿ...!' ಎಂದು ನಮಿಸಲು:

'ಭದ್ರೆ, ಸಾಧಿಸಬೇಕಾದದ್ದು ಮುಂದೆ ಬಹಳಷ್ಟಿದೆ...! ಇದು ಕೇವಲ ಆರಂಭವಷ್ಟೇ...!?'

'ಅಂದರೆ ನಿಮ್ಮ ಮಾತಿನ ಅರ್ಥ...!'

'ನಾನು ನಿನ್ನ ಋಣವನ್ನು ತೀರಿಸಿದೆ. ಗುರುಗಳ ಋಣ ಮತ್ತು ಜನಗಳ ಋಣವನ್ನು ತೀರಿಸುವ ಬಾಕಿ ಇದೆ...!?'

'ಅಂದರೆ ಸ್ವಾಮಿ, ನಿಮ್ಮ ಮಾತಿನ ಅರ್ಥವೇನು?'

'ಹೌದು ಭದ್ರೆ, ನಾನು ಭಿಕ್ಷುವಾಗಲು ನಿರ್ಧರಿಸಿ ರುವೆ...!' ಎಂದ ಮಾತಂಗ ಪಂಡಿತನು ಗುರುಗಳಿಂದ ದೀಕ್ಷೆ ಪಡೆದನು. ಕಲಿಯಬೇಕಾದ ವಿದ್ಯೆಯನ್ನು ಕಲಿತು ನೀಗಿಕೊಳ್ಳಬೇಕಾದ ಸಕಲ ಕ್ಲೇಷಗಳನ್ನೆಲ್ಲ ನೀಗಿಸಿಕೊಂಡು ಆರ್ಯಂತ ಪದವಿ ಪಡೆದ. ಬಳಿಕ ಧರ್ಮೋಪದೇಶಕ್ಕಾಗಿ ಊರೂರು ಅಲೆಯುತ್ತಾ ಮುನ್ನಡೆದು ಬಿಟ್ಟ.

ಇತ್ತ ಮಾತಂಗ ಪಂಡಿತನ ಹೆಂಡತಿ ಎಂಬ ಕೀರ್ತಿಯಿಂದ ದಿಟ್ಟಮಂಗಳಿಕ ನಗರದಲ್ಲಿ ಪ್ರಸಿದ್ಧಳಾದಳು. ಜನಗಳು ಆಕೆಯ ಬಳಿ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಿದ್ದರು. ಪರಿಹಾರ ಕಂಡುಕೊಳ್ಳುತ್ತಿದ್ದರು. ಆಕೆಯನ್ನು ಮಾತೆಯಂತೆ ಗೌರವಿಸುತ್ತಿದ್ದರು. ಗಂಧಮಾಲೆಯನ್ನು ತಂದು ಪೂಜಿಸುತ್ತಿದ್ದರು, ಆಕೆಗೆ ಕಾಣಿಕೆಯನ್ನು ಸಮರ್ಪಿಸುತ್ತಿದ್ದರು. ಹೀಗೆ ಪ್ರಜೆಗಳಿಂದ ಹರಿದು ಬಂದ ಕಾಣಿಕೆಯಿಂದ ಆಕೆಯು ಒಂದು ಭವ್ಯ ಅರಮನೆಯನ್ನು ಕಟ್ಟಿಸಿದಳು. ತನ್ನ ಮಗ ಮಾಂಡವ್ಯ ಕುಮಾರ ಬೆಳೆಯುತ್ತಿದ್ದಂತೆಯೇ, ಅನೇಕ ಬ್ರಾಹ್ಮಣಾಚಾರ್ಯರನ್ನು ಅರಮನೆಗೆ ಆಹ್ವಾನಿಸಿ ಮಗನಿಗೆ ಮೂರು ವೇದಗಳನ್ನು, ಆಗ ಮಗಳನ್ನು ಕಲಿಸಲು ಅನುವು ಮಾಡಿಕೊಟ್ಟಳು. ಹೀಗಾಗಿ ಮಾಂಡವ್ಯ ಕುಮಾರನಿಗೆ ಬ್ರಾಹ್ಮಣರ ಮೇಲೆ ಅತಿಯಾದ ಪ್ರೀತಿ, ನಿಷ್ಠೆ ಮತ್ತು ಶ್ರೇಷ್ಠತೆ ಬೆಳೆಯಿತು. ಅದೇ ಸಂದರ್ಭದಲ್ಲಿ ಇತರರ ಬಗ್ಗೆ ಕೀಳು ಭಾವನೆ ಆವರಿಸಿತು. ಆತ ವಿದ್ಯೆಯಿಂದ ವಿವೇಕ ಮತ್ತು

ವಿಮರ್ಶೆಯನ್ನು ಬೆಳೆಸಿಕೊ ಳ್ಳುವ ಬದಲು ಅಜ್ಞಾನಕ್ಕೆ ವಶನಾದ.

ಪ್ರತಿ ದಿನವೂ ಆತನ ಅರಮನೆಯಲ್ಲಿ ಸಾವಿರಾರು ಬ್ರಾಹ್ಮಣರಿಗೆ ಧಾನ್ಯದಾನ, ವಸ್ತ್ರದಾನ, ಮತ್ತು ಧನದಾನವು ನಿರಂತರವಾಗಿ ನಡೆಯುತ್ತಿತ್ತು. ಈ ವಿಷಯವು ಮಾತಂಗ ಪಂಡಿತನ ಕಿವಿಗೆ ಬೀಳಲು ಆತನು ವ್ಯಾಕುಲಗೊಂಡನು. ತನ್ನ ಮಗನ ಅವಿವೇಕ ಮತ್ತು ಅಜ್ಞಾನಕ್ಕೆ ಜ್ಞಾನ ಮೂಡಿಸಲು ನಿರ್ಧರಿಸಿದ. ತಾನೊಬ್ಬ ಅರ್ಹಂತ ಎಂಬುದನ್ನು ತೋರಗೊಡುವುದು ಉಚಿತವಲ್ಲವೆಂದು ತನ್ನ ಹಿಂದಿನ ಚಂಡಾಲ ವೇಷ ಧರಿಸಿ ಬ್ರಾಹ್ಮಣರಿಗೆ ಭಕ್ಷಭೋಜನವನ್ನು ಬಡಿಸುತ್ತಿದ್ದ ಭೋಜನ ಶಾಲೆಯಲ್ಲಿ ಮಾರುವೇಷದಲ್ಲಿ ಪ್ರವೇಶಿಸಿ ಮಾಂಡಲ್ಯಕುಮಾರನ ಎದುರು ನಿಂತು:

'ಎಲೈ ಕುಮಾರನೇ, ಇಷ್ಟೊಂದು ಜನ ಬ್ರಾಹ್ಮಣರಿಗೆ ಅನ್ನದಾನ ಮಾಡುತ್ತಿರುವೆ. ನನಗೆ ಬಹಳ ಹಸಿವಾಗಿದೆ, ನನಗೂ ಸ್ವಲ್ಪ ಅನ್ನದಾನ ಮಾಡು...!'

'ಎಲೈ ನೀನು ಯಾರು...?'

'ಕುಮಾರ, ನಾನು ಹುಟ್ಟಿನಿಂದ ಚಂಡಾಲ. ವೃತ್ತಿಯಲ್ಲಿ ಗುಲಾಮ, ಹೆಸರು ಮಾತಂಗ...!'

'ಎಲೈ ಚಂಡಾಲನೇ, ನಿನಗೆಷ್ಟು ಧೈರ್ಯ...!' ನನ್ನ ಅರಮನೆಯನ್ನು ಪ್ರವೇಶಿಸಿದ್ದು ಅಲ್ಲದೇ, ಭೋಜನಶಾಲೆಗೂ ಬಂದು ಅಪವಿತ್ರಗೊಳಿಸಿರುವೆ, ಅಲ್ಲದೇ ಭಿಕ್ಷೆಯನ್ನು ದಾನವಾಗಿ ಬೇಡುತ್ತಿರುವೆ. ಮೊದಲು ದೂರ ಸರಿದು ನಿಲ್ಲು ಇಲ್ಲಿ ಮಾಡಿರುವ ಅಡುಗೆ ನಿನ್ನಂಥಹ ಚಂಡಾಲರಿಗಲ್ಲ. ಶ್ರೇಷ್ಠ ಕುಲಜರಾದ ಬ್ರಾಹ್ಮಣರಿಗೆ ಮಾತ್ರ!'

'ದಾನಕ್ಕೆ ಜಾತಿ ಮುಖ್ಯವಲ್ಲ, ನೀತಿ ಮುಖ್ಯ. ನೀತಿವಂತನೇ ಉತ್ತಮ ಕ್ಷೇತ್ರ!' ಅಂತಹ ಉತ್ತಮ ಕ್ಷೇತ್ರವಾದ ನನ್ನಲ್ಲಿ ನಿನ್ನ ದಾನವೆಂಬ ಬೀಜವನ್ನು ಬಿತ್ತು. ಅದು ಮೊಳೆತು ನಿನಗೆ ಪುಣ್ಯದ ಫಸಲಾಗಿ ನಿನಗೆ ಇಹಪರಗಳಲ್ಲಿ ಕೀರ್ತಿ, ಸಂಪತ್ತು, ಅಧಿಕಾರ ಮತ್ತು ಶ್ರೇಯಸ್ಸು ಲಭಿಸುತ್ತದೆ...!'

'ಎಲೈ ಚಂಡಾಲನೇ ಬ್ರಾಹ್ಮಣರಂತಹ ದ್ವಿಜ ಶ್ರೇಷ್ಠರಿಂದ ವಿದ್ಯೆ ಪಡೆದು ಸಕಲ ವಿದ್ಯಾ ಪರಾರಂಗತನೆಂಬ ಬಿರುದು ಪಡೆದ ನನಗೇ ಬೋಧನೆ ಮಾಡಲು ಮುಂದಾಗುವೆಯಾ...? ಎಲೈ ಸೇವಕರೇ, ಯಾರಲ್ಲಿ...! ಈ ಚಂಡಾಲನಿಗೆ ಹೊಡೆದು ಹೊರದಬ್ಬಿ...! ಎನ್ನಲು ಅವರುಗಳು ಮಾತಂಗ ಪಂಡಿತನಿಗೆ ಮುತ್ತಿಕೊಂಡು ಮೂರ್ಛೆ ಬೀಳುವ ತನಕ ಹೊಡೆಯುತ್ತಾರೆ. ಆತನ ರಕ್ತ ಸಿಕ್ತ ದೇಹವನ್ನು ಅರಮನೆಯ ರಾಜಬೀದಿಗೆ ಬಿಸಾಕಿ ಬರುತ್ತಾರೆ.

ಪುರಜನರು ಮಾತಂಗ ಪಂಡಿತರನ್ನು ಗುರುತಿಸುತ್ತಾರೆ. ಅವರು ಮುಖಕ್ಕೆ ನೀರು ಚಿಮುಕಿಸುತ್ತಾರೆ. ಅವರ ಬಾಯಿಗೆ ನೀರಾಕಿ ಗುಟುಕಿಸುವಂತೆ ಪ್ರೇರೇಪಿಸುತ್ತಾರೆ. ಗಾಳಿ ಬೀಸಿ ಶುಶ್ರೂಷೆ ಮಾಡುತ್ತಾರೆ. ಬಳಿಕ ಅವರನ್ನು ಹೊತ್ತು ಕೊಂಡು ಹೋಗಿ ಊರ ಹೊರಗಿನ ಅವರ ಆಶ್ರಮಕ್ಕೆ ತಲುಪಿಸುತ್ತಾ. ಬಳಿಕ ಮಾಂಡವ್ಯ ಕುಮಾರನ ಅವರ ಮನೆಗೆ ನುಗ್ಗುತ್ತಾರೆ. ಆತನ ಭೋಜನಾಶಾಲೆಯಲ್ಲಿ ಬ್ರಾಹ್ಮಣರಿಗೆ ಭೋಜನ ಬಡಿಸುವ ಮೇಲ್ವಿಚಾರದಲ್ಲಿ ನಿರತನಾಗಿರುತ್ತಾನೆ. ಆತನಿಗೆ ಸರಿಯಾಗಿ ಹೊಡೆದದ್ದೆ ಅಲ್ಲದೆ, ಅವನ ಕುತ್ತಿಗೆಯನ್ನು ಹಿಂದಕ್ಕೆ ತಿರುಚುತ್ತಾರೆ. ಬಳಿಕ ಭೋಜನ ಮಾಡುತ್ತಿದ್ದ ಬ್ರಾಹ್ಮಣರಿಗೆಲ್ಲ ಮೂರ್ಛೆ ಬೀಳುವಂತೆ ಹೊಡೆದು ಮಲಗಿಸಿ ಮುಂದೆ ಸಾಗುತ್ತಾರೆ.

ಈ ವಿಷಯವು ದಿಟ್ಠಮಂಗಳಿಕಳಿಗೆ ತಿಳಿಯಲು ಆಕೆ ಬಂದು ತನ್ನ ಮಗನ ಮತ್ತು ಬ್ರಾಹ್ಮಣರ ಮರಣಾಂತಿಕ ಧಾರುಣ ಪರಿಸ್ಥಿತಿಯನ್ನು ಕಂಡು ಹೌಹಾರುತ್ತಾಳೆ. ಇಲ್ಲಿಗೆ ಬಂದವರು ತನ್ನ ಪತಿಯೇ ಎಂದು ತಿಳಿದು ನಂತರ ತನ್ನ ಮಗನ ಮತಿಹೀನತೆಗೆ ಮರುಗುತ್ತಾಳೆ. ತನ್ನ ಗಂಡನಿಂದ ಕ್ಷಮೆ ಕೇಳಿ ಅವರಿಂದ ದಿವ್ಯವಾದ ಔಷಧಿಯನ್ನು ಬೇಡಿ ತಂದು ತನ್ನ ಏಕೈಕ ಪುತ್ರನನ್ನು ಮತ್ತು ಸಾವಿರಾರು ಬ್ರಾಹ್ಮಣರ ಪ್ರಾಣವನ್ನು ರಕ್ಷಿಸಬೇಕೆಂದು ನಿರ್ಧರಿಸುತ್ತಾಳೆ. ಆಕೆಯು ಚಿನ್ನದ ಬಟ್ಟಲನ್ನು ತೆಗೆದುಕೊಂಡು ತನ್ನ ಸಾರಥಿಯೊಂದಿಗೆ ದಿವ್ಯವಾದ ರಥವೇರಿ ತನ್ನ ಪತಿಯ ಆಶ್ರಮವನ್ನು ತಲುಪುತ್ತಾಳೆ. ಮಾತಂಗ ಪಂಡಿತರು ಶಾಂತಚಿತ್ತದಿಂದ ಆಕೆಯನ್ನು ಬರಮಾಡಿಕೊಳ್ಳುತ್ತಾರೆ. ಅಪಾರ ಗೌರವಾದಾರಗಳಿಂದ ಪತಿಗೆ ವಂದಿಸಿದ ಆಕೆ:

'ಎಲೈ ಭಿಕ್ಷುವೇ, ನಾನು ಪುತ್ರ ಶೋಕದಿಂದ ನೊಂದು ನಿನಗೆ ಶರಣಾಗಿದ್ದೇನೆ. ಕೃಪೆ ತೋರು, ನನ್ನ ಮಗನನ್ನು, ಸಹಸ್ರಾರು ಬ್ರಾಹ್ಮಣರನ್ನು ಬದುಕಿಸಿ ಕೊಡು...!' ಎಂದು ಅಂಗಲಾಚುತ್ತಾಳೆ.

'ಎಲೈ ಮಹಾರಾಣಿಯೇ, ಆಗಲಾಗಲೀ ಈಗಲಾಗಲೀ ನನ್ನ ಮನಸ್ಸಿನಲ್ಲಿ ಕಿಂಚಿತ್ತೂ ದ್ವೇಷವಿಲ್ಲ. ನಿನ್ನ ಮಗನು ತಾನ್ಯಾರೆಂಬುದನ್ನೇ ಅರಿಯನು. ಯಾರು ತನ್ನ ಪೂರ್ವದ ಇತಿಹಾಸವನ್ನು ಸರಿಯಾಗಿ ಅರಿಯರೋ ಅಂತವರು ತನಗೂ ತನ್ನ ಪೂರ್ವಜರಿಗೂ ಮತ್ತು ಮನುಜಕುಲಕ್ಕೂ ಮುಳ್ಳಾಗುವರು. ವಿದ್ಯೆ ಎಂದರೆ ಕೇವಲ ಕಂಠಪಾಠವಷ್ಟೇ ಅಲ್ಲ. ವೇದ ಮಂತ್ರಗಳ ಜಪವೇ ಅಲ್ಲ. ಆತ ವೇದ ಮತದಲ್ಲಿ ಮತ್ತನಾಗಿದ್ದಾನೆ. ವೇದವನ್ನು ಆತ ಸರಿಯಾಗಿ ಅರಿತಿಲ್ಲ. ದಾನದ ಅರ್ಥವನ್ನೂ ಅರಿತಿಲ್ಲ. ಧರ್ಮದ ಸೂಕ್ಷ್ಮತೆಯನ್ನು ತನ್ನದಾಗಿಸಿಕೊಂಡಿಲ್ಲ. ಪ್ರತಿಷ್ಠೆಗಾಗಿ ತನ್ನ ಬದುಕನ್ನೆ ವ್ಯರ್ಥಗೊಳಿಸಿಕೊಂಡಿರುವ'

'ಪ್ರಭು, ಕ್ಷಣ ಮಾತ್ರದಲ್ಲಿ ಮನುಷ್ಯನ ಬುದ್ಧಿಯು ಮೋಹಗೊಳ್ಳುವುದುಂಟು. ಬಹು ಪ್ರಾಜ್ಞರಾದ ತಾವುಗಳು ಅವನ ದೋಷವನ್ನು ಮನ್ನಿಸಬೇಕು. ಕ್ರೋಧವು ಪಂಡಿತರ ಬಲವಲ್ಲ. ಆದ್ದರಿಂದ ಸ್ವಾಮಿ ಅಮೃತೌಷಧವನ್ನು ಕರುಣಿಸಿ' ಎನ್ನಲು ಮಾತಂಗ ಪಂಡಿತನು ಕುಳಿತಲ್ಲಿಂದ ಮೇಲೆದ್ದು ಒಂದು ಕುಂಬದಲ್ಲಿದ್ದ ಕೆಲವು ಅಮೂಲ್ಯ ಗಿಡ ಮೂಲಿಕೆಗಳನ್ನು ತನ್ನ ಬಾಯಿಗೆ ಹಾಕಿಕೊಂಡ ದವಡೆಯಿಂದ ಚನ್ನಾಗಿ ಜಿಯಗಿಲು ಆಕೆಯು ತನ್ನ ಚಿನ್ನದ ಬಟ್ಟಲನ್ನು ಆತನ ಬಾಯಿಯ ಬಳಿ ಒಡ್ಡುತ್ತಾಳೆ. ಆ ಚಿನ್ನದ ಬಟ್ಟಲಿಗೆ ಮಾತಂಗ ಪಂಡಿತನು ಜಗಿದ ಅಮೃತೌಷಧಿಯನ್ನು ಉಗಿದು:

'ಮಹಾರಾಣಿಯೇ, ತೆಗೆದುಕೋ ಈ ಔಷಧವನ್ನು ಗಂಜಿಯಲ್ಲಿ ಬೆರೆಸಿ ನಿನ್ನ ಮಗನಿಗೆ ಕುಡಿಸು. ಉಳಿದುದ್ದನ್ನು ನೀರು ಬೆರೆಸಿ ಬ್ರಾಹ್ಮಣರಿಗೆ ಕುಡಿಸು ಗುಣಮುಖರಾಗುತ್ತಾರೆ!' ಎನ್ನುತ್ತಾನೆ. ಆಕೆಯು ಅದೇ ರೀತಿ ಹಾರೈಕೆ ಮಾಡಲು ಅವರೆಲ್ಲ ಚೇತರಿಸಿಕೊಳ್ಳುತ್ತಾರೆ. ಬಳಿಕ ಆಕೆಯು ತನ್ನ ಮಗನಿಗೆ ಆ ಮಾರುವೇಷದಲ್ಲಿ ಬಂದು ಚಾಂಡಾಲ ಬೇರೆ ಯಾರೂ ಅಲ್ಲ, ನಿನ್ನ ತಂದೆ ಎಂಬ ಸತ್ಯವನ್ನು ಹೇಳುತ್ತಾಳೆ. ಅವರು ಹುಟ್ಟಿನಿಂದ ಚಾಂಡಾಲನಾಗಿದ್ದು ನನ್ನನ್ನು ಕಂಡು ಮೋಹಿಸಿ ಪಡೆದದ್ದು, ಜಾತಿಯನ್ನು ವಿದ್ಯೆಯಿಂದ ಗೆದ್ದದ್ದು, ಅರ್ಹಂತವಾದದ್ದು, ಮುಂದೆ ಮಹಾ ಗುರುವಾದ ಬಗ್ಗೆ ಸವಿರಾವಾಗಿ ಎಲ್ಲಾ ಸತ್ಯವನ್ನೂ ಮತ್ತು ಬಚ್ಚಿಟ್ಟ ರಹಸ್ಯವನ್ನು ಬಯಲು ಮಾಡುತ್ತಾಳೆ. ಆಗ ಮಾಂಡವ್ಯಕುಮಾರನಿಗೆ ತನ್ನ ತಪ್ಪಿನ ಅರಿವಾಗಿ ತಂದೆಯನ್ನು ಸಂಧಿಸಿ ಅವರಿಗೆ ವಂದಿಸಿ ತಪ್ಪಿಗಾಗಿ ಕ್ಷಮೆಯನ್ನು ಯಾಚಿಸುತ್ತಾ:

'ತಾವುಗಳು ಹುಟ್ಟಿನೊಂದಿಗೆ ಬಂದ ಜಾತಿಯನ್ನು ನೀತಿಯಿಂದ ದಮನ ಮಾಡಿಕೊಂಡು ಕಡೆಗೂ ಮಹಾತ್ಮರಾದಿರಿ...! ಆದರೆ ನಾನೋ ಅದೇ ಜಾತಿಯ ಮದದಿಂದ ಚಾಂಡಾಲನಾಗಿ ಬಿಟ್ಟೆ!! ತಾವು ಅಂದು ಬೋಧಿಸಿದಂತೆ ಮುಂದೆ: ಉತ್ತಮ ಕ್ಷೇತ್ರಕ್ಕೆ 'ವಿದ್ಯೆ' ಎಂಬ ಬೀಜವನ್ನು ನೆಡುತ್ತೇನೆ. ದಾನವೆಂಬ ನೀರೆರೆದು 'ಶೀಲ'ವೆಂಬ ಫಸಲನ್ನು ಪಡೆಯುತ್ತೇನೆ...!!' ಎನ್ನಲು ಮಾತಂಗ ಪಂಡಿತರು:

'ಮಗು, ಹುಟ್ಟೇ ಜಾತಿ ಮತ್ತು ನೀತಿಯಲ್ಲ. ವಿದ್ಯೆಯಿಂದ ಜಾತಿಯನ್ನು, ಶೀಲದಿಂದ ನೀತಿಯನ್ನು ಪಡೆಯಬೇಕು. ನಾವುಗಳು ಮೊದಲು ಅರಿಯಬೇಕಾದದ್ದು, ನಮ್ಮೊಳಗಿನ ತಪ್ಪುಗಳನ್ನು. ನಂತರ ಪ್ರಜ್ಞೆಯಿಂದ ಅಜ್ಞಾನವನ್ನು ನೀಗಿಸಿಕೊಳ್ಳಬೇಕು. ಇದರಿಂದ ಮಾತ್ರ ಮನುಕುಲದ ಮುನ್ನಡೆ ಸಾಧ್ಯ...!' ಎನ್ನಲು ಮಾಂಡವ್ಯ ಕುಮಾರನು ತನ್ನ ತಂದೆಗೆ ಅಂತಿಮವಾಗಿ ತಲೆ ಬಾಗಿ ಹೀಗೆ ನುಡಿದ:

'ಹೌದು ತಂದೇ, ನೀನು ನಿಜಕ್ಕೂ ಬ್ರಾಹ್ಮಣ್ಯಕ್ಕೆ ಭಾಷ್ಯ ಬರೆದ ಮಹಾ ಗುರುವೇ ಸರಿ...!!!' □

'SAMVADA' Kannada Monthly, Feb 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯಾ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ

* ಯಾವುದೇ ಜ್ವರ ಮಲೇರಿಯಾ ಇರಬಹುದು. ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ ಗುಳಿಗೆಗಳನ್ನು ತೆಗೆದುಕೊಳ್ಳಿ.
* ಮಲೇರಿಯಾ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
* ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
* ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ. ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
* ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
* ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
* ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
* ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
* ಸಂಜೆ ವೇಳೆ ಬೇವಿನ ಹೊಗೆ ಹಾಕುವುದು. ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿ ವೇಳೆ ಇತರೆ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
* ಹರಿಯದೇ ನಿಂತ ನೀರು–ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ–ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ

ಕರ್ನಾಟಕ ವಾರ್ತೆ
Karnataka Information